ಕಲ್ಯಾಣಿ

ಪದ್ಮಾ ಶ್ರೀಧರ್



ಕಲ್ಯಾಣಿ

ಪದ್ಮ ಶ್ರೀಧರ್

ಹಂಸ ಎಂಟರ್‌ಪ್ರೈಸಸ್

ನಂ.111, ಶಂಕರ ಮಠ ರೋಡ್,

ಶಂಕರಪುರಂ, ಬಸವನಗುಡಿ,

ಬೆಂಗಳೂರು-560 004.

'KALAYANI' : A Social Novel by Padama Sridhar
Published by : **Hamsa Enterprises,** No.111 Shanakar Mutt Road, Shankarpuram, Basavanagudi, Bangalore-560 004.

ಪುಟಗಳು : 228

ಪ್ರಥಮ ಮುದ್ರಣ : 2004

ಬೆಲೆ : ರೂ.110/-

ಮುಖಪುಟ ವಿನ್ಯಾಸ : ಮೋನಪ್ಪ

ಅಕ್ಷರ ಜೋಡಣೆ :
ಶ್ರೀ ಭಾವನಾ ಪ್ರೆಸ್, ಬೆಂಗಳೂರು-53.

ಮುದ್ರಣ :
ಅಶ್ವಿನಿ ಪ್ರಿಂಟರ್ಸ್, ಬೆಂಗಳೂರು-53.

ಅರ್ಪಣೆ

(ಸೊಸೈಟಿ ಫಾರ್ ದಿ ಡೆವಲಪ್‌ಮೆಂಟ್ ಆಫ್‌ವಿಮೆನ್ ಅಂಡ್ ಚಿಲ್ಡ್ರನ್) ಎಂಬ ಸಂಸ್ಥೆಯನ್ನು ಸ್ಥಾಪಿಸಿ ಗ್ರಾಮಾಂತರ ಪ್ರದೇಶಗಳ ಮಹಿಳೆಯರು ಹಾಗೂ ಮಕ್ಕಳ ಕಲ್ಯಾಣಕ್ಕಾಗಿ ಶ್ರಮಿಸಿದ ನಿಷ್ಠಾವಂತ ಮಹಿಳೆ, ದಿ॥ ಡಾ॥ ಭವಾನಿ ಬೆಳವಾಡಿಯವರಿಗೆ ಈ ಕಾದಂಬರಿಯನ್ನು ಶ್ರದ್ಧಾಪೂರ್ವಕವಾಗಿ ಅರ್ಪಿಸುತ್ತೇನೆ.

-ಪದ್ಮ ಶ್ರೀಧರ್
ಬೆಂಗಳೂರು

ಮುನ್ನುಡಿ

''ಕಲ್ಯಾಣಿ''ಯಲ್ಲಿ ಮಿಂದು, ಪಾಪಗಳನ್ನು ತೊಳೆದುಕೊಂಡ ಜನರು ತಾವು ಪಾವನರಾದೆವೆಂದು ಭಾವಿಸುತ್ತಾರೆ. ಆದರೆ, ಅದೇ 'ಕಲ್ಯಾಣಿ'ಯ ಬಗ್ಗೆ ಯಾರೂ ಚಿಂತಿಸುವುದಿಲ್ಲ. ಅವರಿವರು ಎಸೆಗಿದ ಪಾಪಗಳನ್ನು ಉದ್ಧಾರಕ್ಕಾಗಿ ತುಂಬಿ ಹರಿಯುತ್ತಾಳೆ'' ಎಂದು ನಮ್ಮ ಸಮೀಪದ ಬಂಧುವೊಬ್ಬರು ತೀರ್ಥಯಾತ್ರೆಗೆ ಹೋಗಿ ಬಂದ ಸಂದರ್ಭದಲ್ಲಿ ನುಡಿದ ನುಡಿಗಳು ಈ ಕಾದಂಬರಿಯ ರಚನೆಗೆ ಪ್ರೇರಣೆ.

ಅನೇಕ ವರ್ಷಗಳ ಹಿಂದೆ, ನಮ್ಮ ಹಳ್ಳಿಯಲ್ಲಿ ವಾಸವಾಗಿದ್ದ ಬಡಕುಟುಂಬದವರ ಮಗಳೊಬ್ಬಳನ್ನು, ಶ್ರೀಮಂತ ಬಂಧುಗಳೊಬ್ಬರ ಮನೆಯಲ್ಲಿ ಬೆಳೆಯಲು ಬಿಟ್ಟಿದ್ದರು. ಆ ಶ್ರೀಮಂತರ ಮನೆಯಲ್ಲಿ ಆ ಹುಡುಗಿ ಅನೇಕ ರೀತಿ ದೌರ್ಜನ್ಯಕೊಳಗಾಗಿದ್ದಳು. ಹೆತ್ತವರ ಬೆಂಬಲವಿಲ್ಲದೇ ಆ ಹುಡುಗಿ ಎಲ್ಲಾ ಕಷ್ಟಗಳನ್ನು ಸಹಿಸಿಕೊಂಡಿದ್ದಳು. ಅವರ ಮನೆಯ ಅನ್ನದ ಋಣವನ್ನು ತೀರಿಸಲು ಅವಳು ಬಹಳ ಶ್ರಮ ಪಡಬೇಕಾಗಿತ್ತು. ದುರಾದೃಷ್ಟವಶಾತ್ ಅವಳ ಹೆಸರು ಕಲ್ಯಾಣಿ ಎಂದೇ ಆಗಿದ್ದಿತು. ಪತಿಕೆಯಾಗಿದ್ದ ಕಲ್ಯಾಣಿಯನ್ನು ಪಾವನ ಕಲ್ಯಾಣಿಯನ್ನಾಗಿ ಆಲೋಚಿಸಿಕೊಳ್ಳುವಾಗ ''ಕಲ್ಯಾಣಿ'' ಈ ರೀತಿಯಾಗಿ ಪಾತ್ರದಲ್ಲಿ ತುಂಬಿ ಬಂದಳು.

'ಕಲ್ಯಾಣಿ'ಯ ಕಾದಂಬರಿಯ ರಚನೆಗಾಗಿ, ಕಲ್ಯಾಣಿಯ ಜೊತೆಗೆ ಕೆಲವು ಪಾತ್ರಗಳನ್ನು ಸೃಷ್ಟಸಬೇಕಾಯಿತು. ಪೂರಕವಾಗಿ ಬರುವ ಈ ಪಾತ್ರಗಳು ಕಾದಂಬರಿಗೆ ಪುಷ್ಟಿಯನ್ನು ಕೊಟ್ಟಿದೆ. ಓದುಗರಿಗೆ ಈ ಕಾದಂಬರಿ ಮೆಚ್ಚುಗೆಯಾಗುವುದೆಂದು ಭಾವಿಸಿದ್ದೇನೆ.

ಈ ಕಾದಂಬರಿಯನ್ನು ಪುಸ್ತಕದ ರೂಪದಲ್ಲಿ ಸುಂದರವಾಗಿ ಮುದ್ರಿಸಿ ಹೊರತಂದ "ಹಂಸ ಎಂಟರ್‌ಪ್ರೈಸಸ್" ರವರಿಗೆ ಹೃತ್ಪೂರ್ವಕ ವಂದನೆಗಳು. ಹಾಗೂ ಸುಂದರ ಮುಖಪುಟವನ್ನು ರಚಿಸಿಕೊಟ್ಟ ಕಲಾವಿದ ಮೋನಪ್ಪರವರಿಗೆ ನನ್ನ ಕೃತಜ್ಞತೆಗಳು.

ಮೆಚ್ಚುಗೆಯ ಓದುಗರೆಲ್ಲರಿಗೂ ನನ್ನ ವಂದನೆಗಳು.

ಬೆಂಗಳೂರು

ಇತಿ ತಮ್ಮ ವಿಶ್ವಾಸಿ
ಪದ್ಮಶ್ರೀಧರ್

ಕಲ್ಯಾಣಿ

ರಸ್ತೆಯ ಎರಡೂ ಬದಿಗಳಲ್ಲೂ ಅಕ್ಕ ಪಕ್ಕ ನೋಡುತ್ತಾ ಆಟೋ ರಿಕ್ಷಾ ಓಡಿಸುತ್ತಿದ್ದ ವಾಸು, ಆಟೋ.... ಆಟೋ... ಎಂದು ಕೂಗಿ, ಚಪ್ಪಾಳೆ ತಟ್ಟಿದ ಸದ್ದನ್ನು ಕೇಳಿ ಆಟೋ ನಿಲ್ಲಿಸಿದ. ಆಟೋ ಕರೆದ ವ್ಯಕ್ತಿ ಸರಸರನೆ ಬಳಿಗೆ ಬಂದು, ಆಟೋ ಹತ್ತಿದ.

''ಎಲ್ಲಿಗೆ?'' ವಾಸು ಪ್ರಶ್ನಿಸಿದ

''ಒಳ್ಳೆ ಅಪಶಕುನ'' ಎಂದು ತನ್ನಲ್ಲೇ ಬೈದುಕೊಂಡ ಆ ವ್ಯಕ್ತಿ ಗುಡುಗಿದ. ''ನೀನು ಓಡಿಸಯ್ಯೊ, ನಾನು ಹೇಳ್ತೀನಿ...''

''ಎಲ್ಲಿಗೆ ಅಂತ ಹೇಳಿದ್ರೆ ತಾನೇ ನಾನು ಅಲ್ಲಿಗೆ ಓಡಿಸೋದು....?''

''ಒಳ್ಳೆ ತಲೆಹರಟೆ ಕಣಯ್ಯಾ ನೀನು... ಎಲ್ಲಿಗೆ ಎಲ್ಲಿಗೆ ಅಂತ ಅದೆಷ್ಟು ಸಾರಿ ಕೇಳ್ತೀಯ...'' ಅವನು ಮತ್ತೆ ಸಿಡುಕಿದಾಗ, ವಾಸು ಸುಮ್ಮನಾದ.

''ಇದೆಂತಹ ಗಿರಾಕಿ...? ಎಲ್ಲಿಗೆ ಅಂತ ಕೇಳೋದೂ ತಪ್ಪೇ? ಅಂತ ಅಂದುಕೊಳ್ಳುತ್ತಿರುವಷ್ಟರಲ್ಲಿ, ಮತ್ತೊಬ್ಬ ವ್ಯಕ್ತಿ ಒಂದು ಆಟೋಹತ್ತಿ, ತಾವು ಹೋಗಬೇಕಾಗಿರುವ ಸ್ಥಳದ ಹೆಸರನ್ನು ಹೇಳಿದ...'' ಹಾಗೆ ಮತ್ತೆ ಹೇಳಿದ.

''ಪೆಟ್ರೋಲ್ ಚೆನ್ನಾಗಿ ತುಂಬಿಸ್ಕೋ... ಅಲ್ಲಿಂದ ಮತ್ತೆ ಇನ್ನೂ ಒಂದು ಕಡೆಗೆ ಹೋಗ್ಬೇಕು...'' ಅವನ ಗಡುಸಾದ ಧ್ವನಿ ವಾಸುಗೆ ಹಿಡಿಸಲಿಲ್ಲ. ಆದರೂ ವಿಧಿ ಇಲ್ಲ. ಇವನು ಆಟೋರಿಕ್ಷಾ ಓಡಿಸುವುದೇ ಪ್ರಯಾಣಿಕರಿಗಾಗಿ.

ಡಿಗ್ರಿ ಮುಗಿಸಲಾಗದೇ, ಕೆಲಸವೂ ಇಲ್ಲದೇ ನಿರುದ್ಯೋಗಿಯಾಗಿ ಅಲೆಯುತ್ತಿದ್ದ ವಾಸು ಆಪ್ತರೊಬ್ಬರ ಸಲಹೆಯಂತೆ, ಬ್ಯಾಂಕಿನಿಂದ ಸಾಲ ಪಡೆದು

ಆಟೋ ಓಡಿಸಲು ಪ್ರಾರಂಭಿಸಿದ್ದ; ಅಕ್ಕನ ಮನೆಯಲ್ಲಿ ವಾಸವಾಗಿದ್ದ. ಭಾವನ ಗುಣ ಇವನಿಗೆ ಹಿಡಿಸುತ್ತಿರಲಿಲ್ಲ. ಅಕ್ಕನಿಗಾಗಿ ಸಹಿಸಿಕೊಂಡಿದ್ದ. ತಾನೂ ಚೆನ್ನಾಗಿ ಸಂಪಾದಿಸಬೇಕು. ವಯಸ್ಸಾದ ತಂದೆ ತಾಯಿಯರನ್ನು ತನ್ನೊಡನೆ ಕರೆದು ತಂದಿಟ್ಟುಕೊಳ್ಳಬೇಕು ಎಂಬ ಆಸೆ ನೆರವೇರುವುದು ಎಂದಿಗೋ ಎಂದು ಚಿಂತಿಸುತ್ತಿದ್ದ. ಹಿಂದೆ ಕೂತವರು, ಅಲ್ಲಿ ಇಲ್ಲಿ ಎಂದು ಸುತ್ತಾಟ, ಕಡೆಗೆ ಒಂದು ಹಳೆಯ ಗುಡಿಸಲಿನಂತಿದ್ದ ಒಂದು ಮನೆಯ ಮುಂದೆ ಆಟೋ ನಿಲ್ಲಿಸುವಂತೆ ಹೇಳಿದರು. ಇವನು ಅತ್ತಿತ್ತ ನೋಡಿದ; ಅದು ಯಾವ ಜಾಗವೆಂದು ತಿಳಿಯಲಿಲ್ಲ.

ಇಬ್ಬರೂ ಇಳಿಯುತ್ತಿದ್ದಂತೆಯೇ, ಆ ಮನೆಯೊಳಗಿನಿಂದ ಮತ್ತೊಬ್ಬ ಗಂಡಸು, ಒಬ್ಬ ಹೆಂಗಸನ್ನು ಎತ್ತಿಕೊಂಡು ಬಂದು ಆಟೋದಲ್ಲಿ ಕೂರಿಸಿದ. ಆ ಹೆಂಗಸು, ಯುವತಿಯೋ, ಮುದುಕಿಯೋ, ಇವನಿಗೆ ತಿಳಿಯಲಿಲ್ಲ ಪಾಪ, ಏನೋ ಖಾಯಿಲೆ ಇರಬೇಕು, ಆಸ್ಪತ್ರೆಗೆ ಸೇರಿಸುತ್ತಾರೇನೋ ಅಂತಂದುಕೊಂಡ. ಆದರೂ ಆ ಕ್ಷಣದಲ್ಲಿ, ಎಂಥಾ ಖಾಯಿಲೆಯೋ ಏನೋ, ನನ್ನ ಆಟೋದಲ್ಲೇ ಗೊಟಕ್ ಅಂದುಬಿಟ್ಟರೇ ಅಂತ ಸಹ ಅನ್ನಿಸಿತ್ತು. ಸ್ವಲ್ಪ ಭಯವೂ ಉಂಟಾಯಿತು.

ಮೂರು ಜನ ಕುಳಿತುಕೊಳ್ಳುವ ಸ್ಥಳದಲ್ಲಿ ನಾಲ್ಕು ಜನರು ಕುಳಿತರು. ಆ ಹೆಂಗಸನ್ನು ಒಬ್ಬ ತಬ್ಬಿ ಹಿಡಿದಿದ್ದ. ಅವಳ ಕತ್ತು ಅವನ ಭುಜದ ಮೇಲೆ ವಾಲಿತ್ತು. ಮತ್ತೆ ಆಟೋ ಚಲಿಸಿತು. ಅವರು ಹೇಳಿದ ಮಾರ್ಗದಲ್ಲೇ ಓಡಿಸಿದ. ಎಷ್ಟೋ ದೂರ ದಾರಿ ಸವೆದ ಮೇಲೆ, ಒಂದು ನಿರ್ಜನವಾದ ಪ್ರದೇಶವನ್ನು ತಲುಪಿದರು. ಆಗಲೇ ಸಾಯಂಕಾಲ ಸಮೀಪಿಸಿತ್ತು. ಅಲ್ಲಿಂದ ಸ್ವಲ್ಪ ಹತ್ತಿರದಲ್ಲಿದ್ದ ಒಂದು ದೊಡ್ಡ ಗೇಟಿನ ಬಳಿ ಆಟೋ ನಿಲ್ಲಿಸಿದರು. ಯಾವುದೋ ಪಾಳು ಬಿದ್ದ ಜಾಗ. ಇಲ್ಲಿ ಯಾರಾದರೂ ಜನರು ವಾಸವಾಗಿದ್ದಾರೋ ಇಲ್ಲವೋ ಎನ್ನುವಷ್ಟು ನಿಶ್ಶಬ್ಧವಾಗಿತ್ತು ಸ್ಥಳ. ವಾಸು ಹೆದರಿದ.

ನೀನು ಇಲ್ಲೇ ಇರು... ನಾವು ಈಗ ಬಂದು ಬಿಡ್ತೀವಿ... ಎಂದು ಹೇಳಿ ಆ ಮೂವರೂ ಇಳಿದರು. ಆ ಹೆಂಗಸನ್ನು ಒಬ್ಬ ಎತ್ತಿಕೊಂಡ. ಗೇಟನ್ನು ತೆಗೆದಾಗ ಭಾರಿ ಶಬ್ಧವಾದರೂ, ಯಾರೂ ಬರಲಿಲ್ಲ. ಅಥವಾ ಯಾವ ನಾಯಿಯಾಗಲೀ

ಬೊಗಳಿದ ಸದ್ದು ಕೇಳಿಸಲಿಲ್ಲ. ಇದು ಇವರ ವಾಸಸ್ಥಳವಿರಬೇಕು ಅಂತ ಅಂದುಕೊಂಡರೂ, ಏನೋ ಸಂದೇಹ ಕಾಡುತ್ತಿತ್ತು. ಅನಾರೋಗ್ಯದಿಂದ ನರಳುತ್ತಿರುವ ಹೆಂಗಸಿಗೆ ಇಲ್ಲಿ ಯಾರ ನೆರವು ಸಿಗುತ್ತದೆ? ಯಾವ ಶುಶ್ರೂಷೆ ಸಿಗಬಹುದು? ನೋಡಿದರೆ ಇಲ್ಲಿ ಯಾವ ಆಸ್ಪತ್ರೆಯೂ ಕಾಣುವುದಿಲ್ಲ ಎಂದುಕೊಂಡು ಕುತೂಹಲದಿಂದ ತಾನೂ ಇಳಿದ. ಅವರ ಹಿಂದೆ ಹಿಂದೆ ನಡೆದ. ಅವರಲ್ಲಿ ಒಬ್ಬ ಇವನು ಹಿಂಬಾಲಿಸುತ್ತಿರುವುದನ್ನು ನೋಡಿಯೂ, ಬರಬೇಡ ಎಂದು ಹೇಳಲಿಲ್ಲ. ಸ್ವಲ್ಪ ದೂರ ನಡೆದು, ಕಡೆಗೆ ಒಂದು ಹಾಳು ಬಾವಿಯ ಸಮೀಪ, ಎಲ್ಲರೂ ನಿಂತರು. ಇವನು ನೋಡುತ್ತಿದ್ದಂತೆಯೇ, ಆ ಹೆಂಗಸಿಗೆ ಉಡಿಸಿದ್ದ ಸೀರೆಯನ್ನು ಬಿಚ್ಚಿ ಕೆಳಗೆ ಹಾಕಿ, ಅವಳನ್ನು ಎತ್ತಿ ಅನಾಮತ್ತು ಆ ಬಾವಿಯೊಳಕ್ಕೆ ಎಸೆದುಬಿಟ್ಟರು. ವಾಸು ಭಯದಿಂದ ಕಿರುಚಿ, ಹಿಂದಕ್ಕೆ ಓಡಲಾರಂಭಿಸಿದ. ಆದರೆ ಆ ದಾಂಡಿಗರು ಅವನ ಹಿಂದೆಯೇ ಓಡಿಬಂದು ಅವನನ್ನು ಹಿಡಿದು, ಚೆನ್ನಾಗಿ ಥಳಿಸಿ ನೆಲಕ್ಕೆ ಕೆಡವಿದರು. ನಂತರ ಅವನನ್ನು ಅಲ್ಲಿದ್ದ ಒಂದು ಕಂಭಕ್ಕೆ ಬಿಗಿದು ಬಾಯಿಗೆ ಬಟ್ಟೆ ತುರುಕಿ, ಅಲ್ಲಿಂದ ಓಡಿದರು.

ಗಾಭರಿಯಿಂದ ದಿಙ್ಮೂಡನಾಗಿದ್ದ ವಾಸು, ಅವರ ಹೊಡೆತ ತಾಳಲಾರದೇ ಜ್ಞಾನ ತಪ್ಪಿ ಬಿದ್ದಿದ್ದ. ಎಷ್ಟೋ ಹೊತ್ತಿನ ನಂತರ ಅವನಿಗೆ ಎಚ್ಚರವಾದಾಗ, ತಾನು ಎಲ್ಲಿದ್ದೇನೆ ಎಂಬ ಅರಿವು ಮೂಡಲು ಸಾಕಷ್ಟು ಸಮಯ ಹಿಡಿಯಿತು. ಸುತ್ತಲೂ ಮೂಡಿದ್ದ ಅಂಧಕಾರದಲ್ಲಿ ತಾನು ಎಲ್ಲಿದ್ದೇನೆ, ಇದು ಯಾವ ಸ್ಥಳ ಎಂದೂ ಸಹ ತಿಳಿಯುವಂತಿರಲಿಲ್ಲ. ಕೆಲವೇ ಗಂಟೆಗಳ ಹಿಂದೆ ನಡೆದ ಘಟನೆ ಒಂದೊಂದೇ ನೆನಪಿಗೆ ಬಂತು. ಭಯದಿಂದ ಅರಚುವಂತೆಯೂ ಇಲ್ಲ. ಬಾಯಿ ತುಂಬಾ ಬಟ್ಟೆ ತುರುಕಿದ್ದಾರೆ. ಕೈ ಕಾಲುಗಳನ್ನೂ ಅಲ್ಲಾಡಿಸುವಂತಿಲ್ಲ. ಚೆನ್ನಾಗಿ ಸೇರಿಸಿ ಬಿಗಿದು ಕಟ್ಟಿ ಹಾಕಿದ್ದಾರೆ. ಇನ್ನೂ ತನ್ನ ಗತಿ ಮುಗಿಯಿತು. ಈ ನಿರ್ಜನವಾದ ಸ್ಥಳದಲ್ಲಿ ತನ್ನನ್ನು ರಕ್ಷಿಸಲು ಯಾರು ಬರುತ್ತಾರೆ ಅಂತ ಅಂದುಕೊಂಡಾಗ ಸಮ್ಮಿಶ್ರ ಭಾವನೆಗಳು ಧುಮುಕಿ, ಕಣ್ಣಲ್ಲಿ ನೀರು ತುಂಬಿಕೊಂಡಿತು. ''ಯಾರೋ ಪಾಪಿಗಳು, ಎಂಥಾ ಅನ್ಯಾಯ ಮಾಡಿ ಬಿಟ್ಟರಲ್ಲಾ..'' ಎಂದು ಮೂಕವಾಗಿ ರೋಧಿಸತೊಡಗಿದ.

ಅಷ್ಟರಲ್ಲಿ ಒಣಗಿದ ಎಲೆಗಳ ಪರಪರ ಸದ್ದು ಕೇಳಿ ಬಂತು. ಮೈಯೆಲ್ಲಾ

ಕಣ್ಣಾಗಿ, ಸದ್ದು ಬಂದ ಕಡೆ ನೋಡತೊಡಗಿದ. ಯಾವುದೋ ಕಾಡು ಪ್ರಾಣಿ ಮನುಷ್ಯನ ವಾಸನೆ ಕಂಡು ಹಿಡಿದು ತನ್ನ ಬಳಿಗೆ ಬರುತ್ತಿದೆ. ಅಯ್ಯೋ ಭಗವಂತಾ, ಓಡುವಂತಿಲ್ಲ... ಕೂಗುವಂತಿಲ್ಲ... ಎಂದು ಚಡಪಡಿಸಿದ. ಯಾವುದೋ ಬೆಳಕು ಈ ದಿಕ್ಕಿಗೇ ಬರುತ್ತಿದೆ... ಅದು ಯಾವ ಪ್ರಾಣಿಯ ಕಣ್ಣಿನ ಹೊಳಪು ಇರಬಹುದು... ಹುಲಿಯೇ... ಸಿಂಹವೇ... ತೋಳವೇ... ಕಿರುಬವೇ... ಬಿಟ್ಟ ಕಣ್ಣು ಬಿಟ್ಟಂತೆಯೇ ನೋಡುತ್ತಿದ್ದ. ಬೆಳಕು ಹತ್ತಿರವಾಗುತ್ತಿದ್ದಂತೆಯೇ, ಅದು ಒಂದು ವ್ಯಕ್ತಿಯ ಆಕಾರವಾಗಿ ಗೋಚರಿಸಿದಾಗ, ಅವನಿಗೆ ಪ್ರಾಣ ಬಂದಂತಾಯಿತು. ಆದರೆ... ಧ್ವನಿ ಹೊರಡಿಸುವಂತಿಲ್ಲ.

ಒಂದು ಹೆಂಗಸು, ಟಾರ್ಚನ್ನು ಹಿಡಿದು, ಆ ಬೆಳಕಿನಲ್ಲಿ ಏನನ್ನೋ ಹುಡುಕುತ್ತಿರುವಂತೆ ಮುಂದೆ ಮುಂದೆ ಬರುತ್ತಿರುವುದನ್ನು ಕಂಡು ಅವನ ಎದೆ ನಡುಗಿತು... ಇದೇನು ಭ್ರಮೆಯೋ ನಿಜವೋ... ಯಾರು ಈ ಹೆಂಗಸು? ದೆವ್ವ, ಭೂತ... ಹುಚ್ಚಿ... ಯಾರಿರಬಹುದು...? ಉಸಿರನ್ನು ಬಿಗಿ ಹಿಡಿದು ಹಾಗೇ ನಿಂತ. ಆ ಹೆಂಗಸು ಇವನ ಸಮೀಪದಿಂದ ಹಾದು ಹೋಗುವಾಗ, ಟಾರ್ಚಿನ ಬೆಳಕು ಅವನ ಮೇಲೆ ಹರಿದಾಗ ಕೃಷ್ಣಾ... ಕೃಷ್ಣಾ... ಎನ್ನುತ್ತಾ ಅವನ ಸಮೀಪಕ್ಕೆ ಓಡಿ ಬಂದಳು. ಗಂಟಲು ಬಾಯಿ ಒಣಗಿದಂತಾಗಿ, ಅವನು ಮತ್ತೊಮ್ಮೆ ಮೂರ್ಛೆ ಹೋದ.

ಅವಳು ಅವಸರವಸರವಾಗಿ, ಕಟ್ಟಿದ್ದ ಕಟ್ಟುಗಳನ್ನು ಬಿಚ್ಚಿ, ಅವನ ಬಾಯಿಗೆ ತುರುಕಿದ್ದ ಬಟ್ಟೆಯನ್ನು ತೆಗೆದು, ಅವನನ್ನು ಕೆಳಕ್ಕೆ ಕೂರಿಸಿದಳು. ಅವನನ್ನು ಅಲುಗಾಡಿಸಿದಳು. ಅವನಿಗೆ ತಕ್ಷಣಕ್ಕೆ ಎಚ್ಚರವಾಗಲಿಲ್ಲ. ಈಗ ಏನು ಮಾಡುವುದು? ಅವನನ್ನು ಇಲ್ಲಿಯೂ ಬಿಟ್ಟು ಹೋಗುವಂತಿಲ್ಲ ಎಂದುಕೊಂಡು ಅವಳೂ ಅಲ್ಲೇ ಕುಳಿತಳು.

ತಂಗಾಳಿ ಬೀಸಿದಾಗ, ಅವನು ಎಚ್ಚರಗೊಂಡು, ತನ್ನ ಬಳಿ ಕುಳಿತಿದ್ದ ಹೆಂಗಸನ್ನು ಕಂಡು... ಭಯದಿಂದ ಯಾರು?... ''ಯಾರು... ಯಾರು ನೀನು?'' ಎಂದು ಒದರಿದ.

''ನಾನು... ಕಲ್ಯಾಣಿ... ಸಿಕ್ಕಾಬಟ್ಟೆ ಕುಡಿದು ಬಿಡ್ತೀಯ; ಅಲ್ಲಿ ಇಲ್ಲಿ ಬಂದು ಬಿದ್ದು ಬಿಡ್ತೀಯ... ಅದ್ಸರಿ... ಯಾರ ಜೊತೆ ಮತ್ತೆ ಜಗಳ ಆಡಿದೆ?

ಚೆನ್ನಾಗಿ ಹೊಡೆದು ಕಂಭಕ್ಕೆ ಕಟ್ಟಿ ಹಾಕಿದ್ರಲ್ಲ... ನಾನು ಬರದೇ ಇದ್ದಿದ್ರೆ... ಬೆಳಗಿನ ಹೊತ್ತಿಗೆ ನೀನು ಕಂಭವಾಗಿ ಬಿಡ್ತಿದ್ದೆ... ಏಳು ನಡೀ ಮನೆಗೆ ಹೋಗೋಣ...'' ಎಚ್ಚರಿಸಿದಳು.

''ನಾನು ಕೃಷ್ಣ ಅಲ್ಲ... ವಾಸು ಅಂತ... ನೀವ್ಯಾರೋ ನಂಗೆ ಗೊತ್ತಿಲ್ಲ.''

''ಇದು ಹೊಸಾ ನಾಜಕ ಅಲ್ಲ. ತಾನೇ...? ನಡೀ ಸುಮ್ಮನೇ... ನೆನ್ನೆ ಎಷ್ಟೊಂದು ಇಳಿಸಿದೀಯ ಹೊಟ್ಟೆಗೆ... ಅದು ಹೀಗೆ ಆಡಿಸ್ತಿದೆ. ನಿನ್ನನ್ನ ನೀನೇ ಮರೆತು ಬಿಟ್ಟಿದೀಯ...''

''ಇಲ್ಲಾ ನಾನು ನಿಜ ಹೇಳ್ತಿದೀನಿ... ನಾನು ವಾಸು ಅಂತ... ಒಬ್ಬ ಆಟೋ ರಿಕ್ಷಾ ಡ್ರೈವರ್... ಯಾರೋ ಕೇಡಿಗರು ನನ್ನನ್ನೂ ಇಲ್ಲಿ ಕಟ್ಟಿ ಹಾಕಿದ್ರು... ನೀವು ಬಂದು ಬಿಡಿಸಿದ್ರಿ.... ಇದು ಯಾವ ಸ್ಥಳ? ಇಲ್ಲಿಂದ ಹೇಗೆ ಹೊರಕ್ಕೆ ಹೋಗಬೇಕು ಅಂತ ತಿಳಿಸಿದ್ರೆ... ಅದ್ಸರಿ ನೀವ್ಯಾರು...? ಇಷ್ಟು ಹೊತ್ನಲ್ಲಿ ಇಲ್ಲೇನು ಮಾಡ್ತಿದ್ರಿ? ಯಾರನ್ನು ಹುಡುಕ್ತಿದ್ರಿ?...'' ಅರ್ಧಂಬರ್ಧ ಧೈರ್ಯ ತಂದುಕೊಂಡು ಕೇಳಿದ.

''ಸಾಕಾಯ್ತು ನಿನ್ನ ಗೋಳು'' ಎನ್ನುತ್ತಾ ಅವಳು ಅವನ ಮುಖದ ಮೇಲೆ ಬೆಳಕನ್ನು ಚೆಲ್ಲಿ... ಗಾಭರಿಯಿಂದ ಹಿಂದೆ ಸರಿದಳು.

''ಯಾರು... ಯಾರು ನೀನು? ಇಲ್ಲಿಗೆ ಹೇಗೆ ಬಂದೆ?...''

''ಅದನ್ನೇ ಅಷ್ಟು ಹೊತ್ತಿಂದ ಹೇಳ್ತಿದೇನಿ... ಎಲ್ಲಿಂದ ಹೊರಕ್ಕೆ ಹೇಗೆ ಹೋಗ್ಬೇಕು ಅಂತ ತಿಳಿಸಿ... ಅಲ್ಲಿ ನನ್ನ ಆಟೋ ರಿಕ್ಷಾ ಇದೆ... ನಾನು ಆದಷ್ಟು ಬೇಗ ಪೋಲೀಸರಿಗೆ ಕಂಪ್ಲೇಂಟ್ ಕೊಡಬೇಕು...''

''ಅವರು ಯಾರು? ನಿನ್ನ ಶತ್ರುಗಳಾ? ಅವರಿಗೇಕೆ ನಿನ್ನ ಮೇಲೆ ದ್ವೇಷ? ನೀನೇನು ಮಾಡಿದೆ?'' ಮತ್ತೊಮ್ಮೆ ಅವನ ಮುಖದ ಮೇಲೆ ಬೆಳಕು ಬಿಟ್ಟಳು.

ನಾನೇನು ಮಾಡಿಲ್ಲ... ಎನ್ನುತ್ತಾ ನಡೆದ ವಿಷಯವನ್ನೂ ಸಂಕ್ಷಿಪ್ತವಾಗಿ ತಿಳಿಸಿ... ನನ್ನ ಕಣ್ಣೆದುರಿಗೇ ಹತ್ತಿರದ ಬಾವಿಯೊಂದಕ್ಕೆ ಆ ಹೆಂಗಸನ್ನು ಹಾಕಿದಾರೆ... ಅವರು ಕೊಲೆಗಡುಕರು... ಪ್ಲೀಸ್... ನಾನು ಹೋಗಬೇಕು ಎನ್ನುತ್ತಾ ಎದ್ದು ನಿಲ್ಲಲು ನೋಡಿದ. ಮೈ ಕೈ ನೋವಿನಿಂದ ತತ್ತರಿಸಿ

ಬೀಳುವಂತಾಯ್ತು... ಬೀಳಲಿದ್ದವನನ್ನು ಹಿಡಿದು ನಿಲ್ಲಿಸಿದಳು.

''ನಿನ್ನ ಮಾತನ್ನು ನಾನು ಹೇಗೆ ನಂಬಲಿ? ನೀನು ಇಲ್ಲೇ ಕೂತಿರು. ಆ ಕೃಷ್ಣ ಸಹ ಇಲ್ಲೇ ಎಲ್ಲೋ ಬಿದ್ದಿರ್ತಾನೆ. ನಾನು ನೋಡಿಕೊಂಡು ಬರ್ತೀನಿ. ಅವನಿಗೆ ನನ್ನ ಮೇಲೆ ಅನುಮಾನ ಬಂದರೆ ನನ್ನನ್ನೂ ಮುಗಿಸೇ ಬಿಡ್ತಾನೆ'' ಎನ್ನುತ್ತಾ ಎದ್ದಳು. ಕೆಲವೇ ನಿಮಿಷಗಳಲ್ಲಿ ಹೆದರುತ್ತಾ ಓಡಿ ಬಂದಳು. ಪಿಸುದನಿಯಲ್ಲಿ ನುಡಿದಳು.

''ಕೃಷ್ಣ... ಅಲ್ಲಿ ಬಿದ್ದಿದಾನೆ... ನೋಡಿದ್ರೆ ಬದುಕಿಲ್ಲ ಅಂತ ಅನ್ನಿಸುತ್ತೆ.. ಎಷ್ಟು ಅಲ್ಲಾಡಿಸಿದ್ರೂ ಮಾತಾಡ್ಲಿಲ್ಲ... ಮುಖವೆಲ್ಲಾ ರಕ್ತ ಆಗಿ ಹೋಗಿದೆ...''

''ಏನು ಹೇಳ್ತಿದೀರ... ಅವರನ್ನು ಯಾರೋ ಕೊಂದು ಹಾಕಿದಾರೆ ಅಂತೀರಾ?''

''ನಂಗೊತ್ತಿಲ್ಲ.... ಇದ್ದರೂ ಇರಬಹುದು.''

''ನೀವೇ ಯಾಕೆ ಕೊಂದಿರಬಾರದು? ನನ್ನನ್ನೂ ಕಂಡು... ಹುಡುಕೋ ನಾಟಕ ಆಡ್ತಿದ್ರಿ ಅಂತ ಅನ್ನಿಸುತ್ತೆ. ನೀವೂ ಆ ಕೊಲೆಗಡುಕರ ಜತೆ ಶಾಮೀಲಾಗಿರಬಹುದು... ನಿಮ್ಮನ್ನು ನಾನು ನಂಬಲ್ಲ.''

''ಇಲ್ಲ ವಾಸು... ನಾನು ಅವನನ್ನು ಕೊಂದಿಲ್ಲ... ಕೃಷ್ಣ ನನ್ನ ಸ್ನೇಹಿತ. ಅವನು ಎಷ್ಟೇ ಕೆಟ್ಟವನಾದರೂ ನಾನು ಅವನನ್ನು ಕೊಲ್ಲುವಷ್ಟು ನೀಚತನ ನನ್ನಲ್ಲಿಲ್ಲ.'' ಅವಳು ಅಳತೊಡಗಿದಾಗ, ಅವನು ಕನವಿಸಗೊಂಡ.

''ಸರಿ... ನಡೀರಿ... ಈಗಲೇ ಸಮೀಪದ ಪೊಲೀಸ್ ಸ್ಟೇಷನ್‌ಗೆ ಹೋಗಿ ಕಂಪ್ಲೆಂಟ್ ಕೊಡೋಣ...''

''ಬೇಡ ವಾಸು... ಬೇಡ... ಪೊಲೀಸರ ಸಹವಾಸ ಬಹಳ ಕಷ್ಟ. ಅವರು ನಮ್ಮ ಮಾತನ್ನು ಸುಲಭವಾಗಿ ನಂಬುವುದಿಲ್ಲ. ಆಮೇಲೆ ನಾವೇ ಅಪರಾಧಿಗಳಾಗಿ ಬಿಡ್ತೇವೆ ಅವರ ಕಣ್ಣಿಗೆ...''

''ನಾವೇಕೆ ಅಪರಾಧಿಗಳಾಗ್ತೇವೆ...? ನಾವು ಏನೂ ತಪ್ಪು ಮಾಡಿಲ್ಲವಲ್ಲ... ನಿಮಗೇಕೆ ಹೆದರಿಕೆ?''

''ಹೆದರಿಕೆ ಏನಿಲ್ಲ... ಆದರೆ ನಮ್ಮ ಮಾತನ್ನು ಪೊಲೀಸರು ನಂಬ್ತಾರೆ

ಅನ್ನೋ ನಂಬಿಕೆ ನನಗಿಲ್ಲ... ಯಾಕೇಂದ್ರೆ.''

''ನನಗೆ ನಿಮ್ಮ ಮೇಲೆ ಅನುಮಾನ ಬರ್ತಿದೆ.''

''ಹಾಗೇ ನಾನೂ ನಿಮ್ಮ ಮೇಲೆ ಅನುಮಾನ ಪಡಬಹುದು ಅಲ್ವಾ? ನೀವು ಹೇಳಿದ್ದೆಲ್ಲಾ ನಿಜ ಅಂತ ಹೇಗೆ ನಂಬಲಿ?''

''ಯಾರಾದ್ರೂ ಅವರೇ ಕೈ ಕಾಲು ಕಟ್ಟಿಕೊಂಡು ಬಾಯಿಗೆ ಬಟ್ಟೆ ತುರುಕಿಕೊಂಡು ನಿಲ್ಲಕ್ಕೆ ಆಗುತ್ತಾ?... ಚೆನ್ನಾಗಿದೆ ನಿಮ್ಮ ಮಾತು! ಬಿಡಿ ನನಗೆ, ಆಟೋ ತನಕ ಹೋಗೋಕೆ ಸಹಾಯ ಮಾಡಿ... ಅಷ್ಟು ಸಾಕು.''

''ಸರಿ ನಾನು ಸಹಾಯ ಮಾಡ್ತೀನಿ. ಆದರೆ ನಾನು ಹೇಳಿದ ಹಾಗೆ ಕೇಳಬೇಕು ನೀವು. ಅವನು, ಕೃಷ್ಣಾ... ನನ್ನ ಸ್ನೇಹಿತ ಪ್ರಜ್ಞೆ ಇಲ್ಲದೇ ಬಿದ್ದಿದಾನೆ... ಅವನನ್ನು ಆಸ್ಪತ್ರೆಗೆ ಕರೆದುಕೊಂಡು ಹೋಗಬೇಕು...'' ಎನ್ನುತ್ತಾ ಅವನನ್ನು ಎಬ್ಬಿಸಿದಳು. ಇಬ್ಬರೂ ಕೃಷ್ಣ ಬಿದ್ದೆಡೆಗೆ ಬಂದರು. ಅವನು ಬಿದ್ದ ಕಡೆ ರಕ್ತ ಒಸರಿ ಹೆಪ್ಪುಗಟ್ಟಿತ್ತು. ಟಾರ್ಚಿನ ಬೆಳಕಿನಲ್ಲಿ ವಿಕಾರವಾಗಿ ಕಾಣುತ್ತಿದ್ದ ಕೃಷ್ಣನ ಮುಖವನ್ನೂ ನೋಡಲಾರದೇ ವಾಸು ಪಕ್ಕಕ್ಕೆ ಮುಖ ತಿರುಗಿಸಿದ. ಕೃಷ್ಣನ ಮುಖವನ್ನೇ ನೋಡುತ್ತಿದ್ದ ಕಲ್ಯಾಣಿ, ಇದ್ದಕ್ಕಿದ್ದಂತೆ ಟಾರ್ಚಿನ ಬೆಳಕನ್ನು ವಾಸು ಮುಖದ ಮೇಲೆ ಚೆಲ್ಲಿದಳು... ವಾಸು ಕಣ್ಣುಗಳನ್ನು ಕಿರುದುಗೊಳಿದ. ಕೃಷ್ಣ ಸತ್ತು ಹೋಗಿದ್ದಾನೆನ್ನುವುದು ಖಚಿತವಾಗಿತ್ತು. ಅಂತೂ ಇಷ್ಟು ವರ್ಷಗಳ ನಂತರ, ಅವನ ಕಾಟ ತಪ್ಪಿತೆಂದು ಅನ್ನಿಸಿದರೂ, ಏನೋ ಅವ್ಯಕ್ತ ಭಯ, ಪರಿತಾಪ ಅವಳನ್ನು ಹಿಂಸಿಸತೊಡಗಿತು.

ಅವನು ಸಿಕ್ಕಾಪಟ್ಟೆ ಕುಡಿದಿದಾನೆ ಅಂತ ತಿಳಿದೂ ತಾನು ಅವನನ್ನು ಹೊರಗೆ ಹೋಗಲು ಬಿಡಬಾರದಾಗಿತ್ತು. ಆದರೆ ಎಂಥಾ ನೀಚ ಮನುಷ್ಯ? ಸಿಕ್ಕಾ ಬಟ್ಟೆ ಜಗಳ ಆಡಿದ್ದೂ ಅಲ್ಲದೇ, ತನ್ನ ತಂಗಿಯ ಬಗ್ಗೆ ಎಂತೆಂತಹ ಅಶ್ಲೀಲ ಮಾತುಗಳನ್ನಾಡಿದ! ನನ್ನ ಬಾಳಂತೂ ಹಾಳಾಗಿ ಹೋಯ್ತು... ನನಗಿರುವವಳು ತಂಗಿ ಒಬ್ಬಳೇ, ಅವಳ ಬಾಳನ್ನೂ ಬಾಳು ಮಾಡ್ತೀನಿ ಅಂತ ಹೆದರಿಸಿದ... ಆ ಸಮಯದಲ್ಲಿ ಕೊಂದು ಹಾಕಿ ಬಿಡಬೇಕು ಎನ್ನುವಷ್ಟು ಕೋಪ ಬಂದಿದ್ದು ನಿಜ... ಆದರೆ ಕೊಲ್ಲುವ ಧೈರ್ಯವಂತೂ ಇರಲಿಲ್ಲ. ಆದರೆ ಈಗ? ವಿಪರೀತ ಕುಡಿತದ ಕಾರಣದಿಂದ ಕೃಷ್ಣ ಸತ್ತು ಬಿದ್ದಿದಾನೆ. ತಾನೀಗ ಇನ್ನು ಮುಂದೆ ಅವನಿಗೆ

ಹೆದರಬೇಕಾಗಿಲ್ಲ. ಆದರೆ ಅವನು ಹೀಗೆ ಸತ್ತ ಅಂತ ತಿಳಿದರೆ ಅನುಮಾನ ಬರುವುದು ತನ್ನ ಮೇಲೆಯೇ... ತನಗಂತೂ ವಿಪರೀತ ಅನ್ಯಾಯವಾಗಿ ಹೋಯಿತು... ಆದರೆ ಆ ಹುಡುಗಿ... ವೃಂದಾ... ಅವಳ ಗತಿಯೇನು? ಕೃಷ್ಣ ಮದುವೆಯಾಗಿ, ಅವಳೊಡನೆ ಒಂದು ದಿನವೂ ಪತಿಯಂತೆ ವರ್ತಿಸಲಿಲ್ಲ. ಆದರೆ ಅವಳ ತಪ್ಪೇನು? ಈಗ ಅವನ ವಿಧವೆಯಂತೆ ಬಾಳಬೇಕೆ?

ಇದ್ದಕ್ಕಿದ್ದಂತೆ ಅವಳ ಮನದಲ್ಲಿ ಒಂದು ಆಲೋಚನೆ ಹೊಳೆಯಿತು. ವಾಸುವಿನ ಮುಖದ ಮೇಲೆ ಬೆಳಕನ್ನು ಬಿಟ್ಟು ಮತ್ತೆ ಮತ್ತೆ ಅವನನ್ನು ನೋಡಿದಳು. ವಾಸು ಹೆದರಿದ. ಇವಳೇನಾದರೂ ತನ್ನನ್ನು ಅಪರಾಧಿಯನ್ನಾಗಿ ಮಾಡಲು ಹವಣಿಸುತ್ತಿರಬಹುದೇ ಅಂತೆನಿಸಿತು.

''ವಾಸು, ನನಗೀಗ ನೀವು ಸಹಾಯ ಮಾಡಬೇಕು...''

''ನಾನು ಹೋಗಿ ಆಟೋ ತರ್ತಿವಿ... ಇವರನ್ನು ಆದಷ್ಟು ಬೇಗ ಹತ್ತಿರದ ಆಸ್ಪತ್ರೆಗೆ ಸೇರಿಸೋಣ...''

''ಉಪಯೋಗವಿಲ್ಲ ವಾಸು. ಕೃಷ್ಣ ಬದುಕಿಲ್ಲ... ಯಾವ ಆಸ್ಪತ್ರೆಯೂ ಇವನನ್ನು ಮತ್ತೆ ಜೀವಂತನನ್ನಾಗಿ ಮಾಡಲು ಸಾಧ್ಯವಿಲ್ಲ.''

''ಹಾಗಾದರೆ ಈಗ ಏನು ಮಾಡೋಣ?''

''ನೀವು ಇದೇ ರಸ್ತೆಯಲ್ಲಿ ಸೀದಾ ಹೋಗಿ, ಬಲಕ್ಕೆ ತಿರುಗಿಕೊಳ್ಳಿ... ಆ ದೊಡ್ಡ ಗೇಟು ಸಿಗುತ್ತೆ... ಇಲ್ಲಿಗೇ ಇಟೋ ತಗೊಂಡು ಬನ್ನಿ...'' ಅವಳು ಇದ್ದಕ್ಕಿದ್ದಂತೆ ಬಹುವಚನದಲ್ಲಿ ಮಾತನಾಡಿದಾಗ ಅವನು ಅಚ್ಚರಿಗೊಂಡ.

ಅವನು ಆ ಕಡೆ ತಿರುಗಿದ ಕೂಡಲೇ ಕಲ್ಯಾಣಿ, ಕತ್ತಲೆಯಲ್ಲೇ ಕೃಷ್ಣನ ಷರಟು ಪ್ಯಾಂಟನ್ನು ಬಿಚ್ಚಿ ತೆಗೆದಿಟ್ಟುಕೊಂಡಳು. ಕೃಷ್ಣನ ಶರೀರವನ್ನು ಎಳೆದುಕೊಂಡು ಬಂದು, ಕಷ್ಟಪಟ್ಟು ಎತ್ತಿ ಅದೇ ಬಾವಿಯೊಳಕ್ಕೆ ಎಸೆದಳು. ಏದುಸಿರು ಬಿಡುತ್ತಾ ಇತ್ತ ತಿರುಗಿದಳು. ಯಾರೋ ನಡೆದುಬರುತ್ತಿರುವ ಸದ್ದು ಕೇಳಿ ಹೆದರಿ ಮರೆಯಲ್ಲಿ ನಿಂತಳು. ವಾಸು ನಡೆದುಬರುತ್ತಿದ್ದ... ಕೃಷ್ಣನ ಶರೀರ ಇದ್ದ ಜಾಗದಲ್ಲಿ ಒಂದು ನಿಂತ. ಕಲ್ಯಾಣಿ ಬಾವಿಯ ಬದಿಯಿಂದ ಈಚೆಗೆ ಬಂದಳು... ಅಲ್ಲಿ ನನ್ನ ಆಟೋ ರಿಕ್ಷಾ ಇಲ್ಲ...'' ಅವಳ ಕಡೆ ನೋಡುತ್ತಾ ನುಡಿದ.

''ನನಗೆ ಗೊತ್ತಿತ್ತು... ಅವರು ನಿಮ್ಮನ್ನು ಕಟ್ಟಿ ಹಾಕಿ ನಿಮ್ಮ ಆಟೋದಲ್ಲೇ ಹೋಗಿರ್ತಾರೆ... ಅಂತ.''

''ಮತ್ತೆ ನಾನು ಈಗ ಹೇಗೆ ಸಿಟಿಗೆ ಹೋಗಲಿ? ಇಲ್ಲಿಂದ ಬಸ್ಸು ಇದೆಯೊ?''

''ಬಸ್ಸು ಸಿಗುವುದು ಬೆಳಗ್ಗೆ ಏಳು ಗಂಟೆಯ ನಂತರವೇ. ಈಗ ಮೊದಲು ನಮ್ಮ ಮನೆಗೆ ಹೋಗೋಣ ಬನ್ನಿ... ಬೆಳಿಗ್ಗೆಯಾದ ಮೇಲೆ ನಾನೇ ನಿಮ್ಮನ್ನು ಬಸ್ಸು ಹತ್ತಿಸ್ತೀನಿ.''

''ಸರಿ ಈಗ ಈ ಬಾಡಿ....''

''ಈಗ ಇಲ್ಲಿಯೇ ಇರಲಿ ಬಿಡಿ'' ನಾನು ಅವರ ಮನೆಯವರಿಗೆ ತಿಳಿಸ್ತೀನಿ. ಅವರು ಬಂದು ನೋಡಿಕೊಳ್ತಾರೆ...

''ಅಂದರೇ....''

''ನೀವು ತಿಳಿದುಕೊಳ್ಳುವ ವಿಷಯ ಬಹಳ ಇದೆ. ಮೊದಲು ನಮ್ಮ ಮನೆಗೆ ಹೋಗೋಣ ಬನ್ನಿ'' ಎನ್ನುತ್ತಾ ಅವನ ತೋಳನ್ನು ಹಿಡಿದುಕೊಂಡಳು. ಸಮೀಪದಲ್ಲಿದ್ದ ಮನೆಯೊಳಕ್ಕೆ ಇಬ್ಬರೂ ಬಂದರು. ಹಾಲನ್ನು ಬಿಸಿ ಮಾಡಿ, ಎರಡು ಮಾತ್ರೆಗಳನ್ನು ತೆಗೆದಿಟ್ಟುಕೊಂಡು, ಅವನು ಇದ್ದ ಕಡೆಗೆ ಬಂದಳು. ಅವನ ಕೈಗೆ ಮಾತ್ರೆಗಳನ್ನು ತುರುಕಿದಳು.

ಈಗ ಮೊದಲು ಈ ಮಾತ್ರೆಗಳನ್ನು ನುಂಗಿ, ಹಾಲನ್ನು ಕುಡಿದು ಮಲಗಿ. ನಾನು ಬೆಳಗ್ಗೆ ಎಬ್ಬಿಸ್ತೀನಿ. ಮೈಕೈ ನೋವಿನಿಂದ ಜರ್ಝರಿತನಾಗಿದ್ದ ವಾಸು ಕೆಲವೇ ನಿಮಿಷಗಳಲ್ಲಿ ನಿದ್ದೆಯ ಆಳಕ್ಕೆ ಇಳಿದು ಹೋದ. ಕಲ್ಯಾಣಿ ಅವನ ಷರಟು ಪ್ಯಾಂಟುಗಳನ್ನು ಬಿಚ್ಚಿ ಅವನ ಕೈ ಗಡಿಯಾರ, ಡ್ರೈವಿಂಗ್ ಲೈಸೆನ್ಸ್ ಎಲ್ಲವನ್ನು ತೆಗೆದಿಟ್ಟುಕೊಂಡು ಮತ್ತೆ ಎಸ್ಟೇಟಿನ ಬಾವಿಯ ಸಮೀಪಕ್ಕೆ ಬಂದಳು.

ಬೆಳಿಗ್ಗೆ ಎಚ್ಚರವಾದಾಗ, ವಾಸು ಜ್ವರದಿಂದ ನರಳುತ್ತಿದ್ದ. ಕಲ್ಯಾಣಿ ಅವನಿಗೆ ಹಾಲು ಕುಡಿಸಿ, ಬ್ರೆಡ್ಡು ತಿನ್ನಿಸಿ, ಜ್ವರದ ಶಮನಕ್ಕಾಗಿ ಮಾತ್ರೆಗಳನ್ನು ನುಂಗಿಸಿ ಮಲಗುವಂತೆ ಹೇಳಿದಾಗ, ಅವನು ಕೃತಜ್ಞತೆಯಿಂದ ಅವಳನ್ನೇ ನೋಡಿದ.

ಎರಡು ದಿನಗಳು ಕಳೆದಿದ್ದವು. ಈಗ ವಾಸು ಎಷ್ಟೋ ಚೇತರಿಸಿಕೊಂಡಿದ್ದ. ಕಲ್ಯಾಣಿ ಅವನನ್ನು ತನ್ನ ಸ್ವಂತ ತಮ್ಮನೆನ್ನುವಂತೆ ಆದರಿಸಿ ಉಪಚರಿಸಿದ್ದಳು. ಎರಡು ದಿನಗಳು ಜ್ವರದಿಂದ ನರಳಿ, ನಿತ್ರಾಣವಾಗಿದ್ದರೂ, ಎಚ್ಚರವಾದಾಗಲೆಲ್ಲಾ ನಡೆದ ಘಟನೆಯ ಬಗ್ಗೆಯೇ ಚಿಂತಿಸುತ್ತಿದ್ದ.

ಈಗ ತನ್ನ ಹತ್ತಿರ ಆಟೋ ಇಲ್ಲ... ಇದ್ದಕ್ಕಿದ್ದಂತೆ, ಏನೋ ಅನುಮಾನ ಬಂದಂತಾಗಿ, ಷರಟಿನ ಜೇಬಿಗೆ ಕೈ ಹಾಕಿದ ಖಾಲಿಯಾಗಿತ್ತು. ಪ್ಯಾಂಟಿನ ಜೇಬು ಸಹ ಖಾಲಿ... ತನ್ನ ಡ್ರೈವಿಂಗ್ ಲೈಸೆನ್ಸ್‌ನ್ನು ಯಾರೋ ತೆಗೆದಿದ್ದಾರೆ. ಈ ಕಲ್ಯಾಣಿಯೇ ಇರಬಹುದು... ಎಂದುಕೊಂಡು ಅವಳು ಬರುವುದನ್ನೇ ಕಾದಿದ್ದು ಕೇಳಿದ.

''ನಾನೀಗ ಹುಶಾರಾಗಿದೀನಿ... ನಾನು ಇಲ್ಲಿಂದ ಹೊರಡ್ತೀನಿ.... ನನ್ನ ಷರಟಿನ ಜೇಬ್ನಲ್ಲಿ ಸ್ವಲ್ಪ ಹಣ ಇತ್ತು, ಹಾಗೇ ನನ್ನ ಡ್ರೈವಿಂಗ್ ಲೈಸೆನ್ಸ್ ಸಹ ಇತ್ತು...''

''ಹೌದು ನಾನು ಎಲ್ಲಾ ತೆಗೆದೆ. ನಿಮ್ಮ ಬಟ್ಟೆ ಎಲ್ಲಾ ಕೊಳೆಯಾಗಿತ್ತು. ನಾನೇ ಬದಲಾಯಿಸಿದೆ...''

''ಹೌದಾ!'' ಎನ್ನುತ್ತಾ ತಾನು ಧರಿಸಿದ್ದ ಷರಟು ಪ್ಯಾಂಟುಗಳನ್ನೇ ನೋಡಿಕೊಂಡ. ಸಂಕೋಚದಿಂದ ಮುಖ ಕೆಂಪಾಯಿತು. ಅವಳ ಕಡೆ ನೋಡುವ ಧೈರ್ಯ ಬರಲಿಲ್ಲ.

''ನೀವು ಇನ್ನೊಂದೆರಡು ದಿನ ಬಿಟ್ಟು ಇಲ್ಲಿಂದ ಹೋಗುವುದೇ ಒಳ್ಳೆಯದು. ನಿಮಗೆ ಗೊತ್ತಾ? ಎಸ್ಟೇಟ್‌ಗೆ ಪೋಲಿಸ್ನೋರು ಬಂದಿದ್ರು... ಆ ಹುಡುಗಿಯ ಶವವನ್ನು ತೆಗೆದು, ಪೋಸ್ಟ್ ಮಾರ್ಟಂಗೆ ಅಂತ ತಗೊಂಡು ಹೋಗಿದ್ದಾರೆ... ಹಾಗೇ ಕೃಷ್ಣನ ಬಾಡೀನ್ನೂ ತೆಗೆದು ಕೊಂಡು ಹೋಗಿದಾರೆ...'' ವಾಸು ಓರೆಗಣ್ಣಿನಿಂದ ಅವಳನ್ನೇ ನೋಡಿದ. ಅವಳ ಮುಖದಲ್ಲಿ ಯಾವ ಭಾವವನ್ನು ಗುರುತಿಸಲಾಗಲಿಲ್ಲ.

''ಪೋಲಿಸ್ನೋರು ಬಂದಾಗ ನನ್ನನ್ನು ಎಬ್ಬಿಸಿದ್ದರೆ ಚೆನ್ನಾಗಿತ್ತು. ಏನು ನಡೀತು ಅಂತ ನಾನು ಎಲ್ಲಾ ಹೇಳ್ತಿದ್ದೆ... ಹಾಗೇ ನನ್ನ ಆಟೋ ಕಳುವಾದ ಬಗ್ಗೆ ಕಂಪ್ಲೆಂಟ್ ಕೊಡ್ತಿದ್ದೆ. ಯಾಕೆ ಎಬ್ಬಿಸಲಿಲ್ಲ?''

''ನಾನೂ, ನೀವು ಇಷ್ಟು ಹೊತ್ತಿಗೆ ಪೊಲೀಸ್ ಕಸ್ಟಡಿಯಲ್ಲಿರುತ್ತಿದ್ದೆವು.''

''ಆದರೆ ನಿಜ ಏನೂಂತ ಪೊಲೀಸ್ನೋರಿಗೆ ತಿಳಿಯುತ್ತಿತ್ತು...''

''ನಿಜ, ನಿಜಾಂತ ದೃಢವಾಗಬೇಕಾದರೂ, ಬಲವಾದ ಸಾಕ್ಷಿಗಳು ಬೇಕಾಗುತ್ತಿತ್ತು... ಅಂತಹ ಸಾಕ್ಷಿಗಳು ನಮ್ಮ ಕಡೆಗೆ ಯಾರಿದಾರೆ ಹೇಳಿ?''

''ನಿಜ ಹೇಳಲು ಸಾಕ್ಷಿ ಯಾಕೆ?''

''ಅದಕ್ಕೇ ನಿಮಗೆ ತಿಳುವಳಿಕೆ ಸಾಲದು ಅಂತ ನಾನು ಹೇಳೋದು. ಸುಳ್ಳನ್ನು ನಂಬೋರೇ ಜಾಸ್ತಿ. ನಿಜಾನ ಯಾರು ನಂಬಲ್ಲ. ಅದನ್ನು ಸಾಬೀತು ಮಾಡಬೇಕಾಗುತ್ತದೆ...''

''ಹಾಗಾದ್ರೆ, ನೀವು ಹೇಗೆ ನಂಬಿದ್ರಿ ನನ್ನನ್ನು?''

''ನಾನೂ ಮೊದಲಿಗೆ ನಂಬಿಲಿಲ್ಲ. ಆದರೆ ಒಂದು ಮಾತು ನಿಜ. ನೀವೇ ಯಾಕೆ, ನಿಮ್ಮ ಕೈ ಕಾಲುಗಳನ್ನು ಕಂಭಕ್ಕೆ ಕಟ್ಟಿಕೊಂಡು, ಬಾಯಿಗೆ ಬಟ್ಟೆ ತುರುಕಿಕೊಂಡು, ನಾಟಕ ಆಡ್ತಿದ್ರಿ ಬದಲಿಗೆ ಅಲ್ಲಿಂದ ಪರಾರಿಯಾಗ್ತಿದ್ರಿ... ಹೌದೋ ಅಲ್ಲವೋ...?''

''ಹಾಗಾದ್ರೆ ನೀವೇ ನನ್ನ ಪರವಾಗಿ ಸಾಕ್ಷಿ ಹೇಳಬಹುದಲ್ಲ... ನಾನು ನಿರಪರಾಧಿ ಅಂತ.''

''ಹೇಳಬಹುದಾಗಿತ್ತು... ಆದರೆ ನಾನು ಒಂದು ವಿಪತ್ತಿನಲ್ಲಿ ಸಿಕ್ಕಿ ಹಾಕಿಕೊಂಡು ಬಿಟ್ಟಿದೀನಿ. ಅದರಿಂದ ನಾನು ಹೊರಗೆ ಬರಬೇಕಾದರೆ ನನಗೆ ನಿಮ್ಮ ಸಹಾಯ''ಬೇಕು...

''ನೀವು ನಿರಪರಾಧಿ ಅಂತ ನಾನು ಸಾಕ್ಷಿ ಹೇಳ್ತೀನಿ.''

''ನೀವೇನೋ ಸಾಕ್ಷಿ ಹೇಳ್ತೀರಿ... ಆದರೆ, ನನಗೂ ನಿಮಗೂ ಹೇಗೆ ಪರಿಚಯ? ನೀವ್ಯಾಕೆ ಇಲ್ಲಿಗೆ ಬಂದಿದ್ರಿ...? ನಾನು ಯಾಕೆ ಅಲ್ಲಿಗೆ ಬಂದಿದ್ದೆ ಅನ್ನೋ ನೂರೆಂಟು ಪ್ರಶ್ನೆಗಳು ಏಳುತ್ತವೆ. ನಿಜವಾದ ಅಪರಾಧಿಗಳನ್ನು ಹುಡುಕಿ, ಅವರಿಗೆ ಶಿಕ್ಷೆ ಕೊಡಿಸುವುದಕ್ಕೆ ಬಹಳ ಸಮಯ ಹಿಡಿಯುತ್ತದೆ. ಆದರೆ ಅಷ್ಟರಲ್ಲಿ ನಾವು ನಮ್ಮವರ ನಡುವೆ ಅಪರಾಧಿಗಳಾಗಿ ಬಿಟ್ಟಿರುತ್ತೇವೆ. ತಪ್ಪು ಮಾಡಿದವರ್ಯಾರೋ, ಅನುಭವಿಸುವವರ್ಯಾರೋ, ಅನ್ನೋ ತರಹ ಆಗಿಬಿಡುತ್ತೆ

ಅಲ್ವಾ?''

''ಆದರೂ... ನಾವು ಅನ್ಯಾಯಾನ ಸಪೋರ್ಟ್ ಮಾಡಿದ ಹಾಗಾಗುತ್ತೆ ಅಲ್ವಾ?''

''ಹೌದು... ನಿಜ... ಆದರೆ ಯಾವ ಅನ್ಯಾಯವನ್ನು ಮಾಡದ ಮಾಡಿರದ ಒಂದು ಜೀವ ಇದೆ. ನಾವಿಬ್ಬರೂ ಸೇರಿ ಆ ಜೀವಕ್ಕೆ ಇನ್ನು ಮುಂದಾದರೂ ನೆಮ್ಮದಿ ಸಿಗುವಂತೆ ಮಾಡಬೇಕು. ಆಗ ನಾವು ಮಾಡಿದ್ದು ಅನ್ಯಾಯ ಅಂತ ಅನ್ನಿಸುವುದಿಲ್ಲ.''

''ನೀವು ಯಾರ ವಿಷಯ ಹೇಳ್ತಿದೀರೋ ನನಗೆ ತಿಳೀತಿಲ್ಲ...''

''ನಾನು ಹೇಳ್ತಾ ಇರೋದು ಕೃಷ್ಣನ ಹೆಂಡತಿಯ ವಿಷಯ. ಬೃಂದಳಿಗೆ, ಕೃಷ್ಣ ಸತ್ತು ಹೋದ ಅಂತ ತಿಳಿಸುವುದಾದರೂ ಹೇಗೆ?''

''ಆದರೆ... ಒಂದಲ್ಲ ಒಂದು ದಿನ ತಿಳಿಸಲೇಬೇಕಲ್ಲವೇ?''

''ತಿಳಿದರೆ, ಅನಾಹುತವಾಗುತ್ತದೆ ವಾಸು... ಒಬ್ಬ ಸಾಧ್ವಿಯ ಕೊಲೆಯನ್ನು ಮಾಡಿದಂತಾಗುತ್ತದೆ. ಅದು ಈ ಅನ್ಯಾಯಕ್ಕಿಂತ, ಘೋರ ಅನ್ಯಾಯವಾಗುತ್ತದೆ...''

''ಆದರೂ....''

''ಆದರೂ ಗೀದರೂ ಏನೂ ಇಲ್ಲ. ಕೃಷ್ಣ ನನ್ನ ಸ್ನೇಹಿತ... ಅವನು ಸತ್ತಿರುವುದರಿಂದ ನನಗೆ ಏನೂ ದುಃಖವಾಗುತ್ತಿಲ್ಲ ಗೊತ್ತೆ! ಅದಕ್ಕೆ ಒಂದು ದೊಡ್ಡ ಕತೆಯೇ ಇದೆ. ಹಾಗೇ ಆ ಹುಡುಗಿ, ಹೆಣವಾಗಿ ಬಾವಿಗೆ ಬಿದ್ದವಳು, ಅವಳಿಗೂ ನಿಮುಗೂ ಏನು ಸಂಬಂಧ? ಆ ಕೊಲೆಗಡುಕರು ನಿಮ್ಮನ್ನೇ ಅಪರಾಧಿಯನ್ನಾಗಿ ಮಾಡಿರ್ತಾರೆ... ನಿಮ್ಮ ಬಳಿ ಯಾವ ಸಾಕ್ಷ್ಯಾಧಾರಗಳಿಲ್ಲ, ನಿಮ್ಮನ್ನು ನೀವು ಹೇಗೆ ನಿರಪರಾಧಿ ಅಂತ ಸಾಬೀತು ಗೊಳಿಸ್ತೀರಿ?''

''ನಿಮಗೆ ಗೊತ್ತು, ನಾನು ಅಪರಾಧಿ ಅಲ್ಲ ಅಂತ.''

''ನನ್ನ ಮಾತನ್ನು ಯಾರು ನಂಬ್ತಾರೆ? ನಮ್ಮ ಪಕ್ಕದ ಎಸ್ಟೇಟ್‌ನಲ್ಲಿ ಹೆಣಗಳು ಸಿಕ್ಕಿವೆ. ನನ್ನ ಆಶ್ರಯದಲ್ಲಿ ನೀವು ಇದೀರಿ. ಈಗ ನಾವು ಹೋಗಿ ಅವರ ಕೈಗೆ ಸಿಕ್ಕಿ ಬಿದ್ದರೆ ಆಯ್ತು ನಮ್ಮ ಗತಿ... ಇನ್ನೆರಡು ದಿನ ತಡೀರಿ.

ಪೇಪರ್‌ನಲ್ಲಿ ಈ ವಿಷಯಗಳು ಬರುತ್ತವೆ. ನಂತರ ಕೆಲವಾರು ತಿಂಗಳು ಕಳೆದರೆ ಎಲ್ಲಾ ತಾನಾಗಿಯೇ ಮರೆಯಾಗುತ್ತವೆ.''

''ಇದು ತಪ್ಪು... ಅಲ್ವಾ....?''

''ತಪ್ಪು ಅಂತ ನಿಮಗನ್ನಿಸುತ್ತಿದೆ. ಸರಿ ಅಂತ ನನಗನ್ನಿಸ್ತಿದೆ.''

''ನೀವು ಯಾಕೆ ಹೀಗೆ ಮಾತನಾಡ್ತಿದೀರೋ ನನಗೆ ಗೊತ್ತಾಗ್ತ ಇಲ್ಲ.''

''ಎರಡು ದಿನ ಕಳೀಲಿ. ನಿಮಗೆ ತಾನಾಗಿಯೇ ಗೊತ್ತಾಗುತ್ತೆ... ಆಗ ನಿಮಗೂ ನೀವು ಮಾಡಿದ್ದು ತಪ್ಪು ಅಂತ ಖಂಡಿತಾ ಅನ್ನಿಸುಲ್ಲ'' ಎಂದು ನುಡಿದು ಕಲ್ಯಾಣಿ ಅಲ್ಲಿಂದ ಮರೆಯಾದರೂ, ಇವನ ದುಗುಡ ಕಡಿಮೆಯಾಗಲಿಲ್ಲ.

''ಅನ್ಯಾಯವಾಗಿರುವುದು ನನಗೆ; ಆಟೋ ರಿಕ್ಷಾ ಕಳುವಾಗಿದೆ. ಯಾರೋ ಕೇಡಿಗಳು ಚೆನ್ನಾಗಿ ಹೊಡೆದು ಘಾಸಿಗೊಳಿಸಿದ್ದಾರೆ.... ಹೀಗೇ ಸುಮ್ಮನಿರಲು ಸಾಧ್ಯವೆ? ಕಾನೂನಿಗೆ ತಿಳಿಸುವುದು ಸಮ್ಮತವಲ್ಲವೇ? ಆದರೆ ಇವಳೇಕೆ ಹೀಗೆ ಹೇಳ್ತಿದಾಳೆ? ಇವಳ್ಯಾರು? ಇಲ್ಲಿ ಇವಳೊಬ್ಬಳೇ ಇರುವಂತಿದೆ. ನೋಡಿದರೆ ಹೆಚ್ಚು ವಯಸ್ಸಾಗಿರುವಂತೆ ಅನ್ನಿಸುವುದಿಲ್ಲ... ಈ ಎಸ್ಟೇಟ್ ಇವಳದೇ ಇರಬಹುದೇ? ಇವಳಿಗೆ ಎಲ್ಲಾ ತಿಳಿದು ಸುಮ್ಮನಿದ್ದಾಳೆ ಎಂದ ಮೇಲೆ ಏನೋ ಬಲವಾದ ಕಾರಣವಿರಲೇಬೇಕು. ಪೋಲಿಸ್ನೋರು ಬಂದು ತನಿಖೆ ನಡೆಸಿದಾರೆ. ಅಂತ ಅಂದಳು. ಅವರು ಏನು ಕೇಳಿದರೋ ಇವಳು ಏನು ಹೇಳಿದಳೋ... ಎರಡೂ ದೇಹಗಳನ್ನು ಪೋಸ್ಟ್ ಮಾರ್ಟಂಗೆ ತೆಗೆದುಕೊಂಡು ಹೋದರು ಅಂತ ಹೇಳಿದಳಲ್ಲ.... ಹುಡುಗಿ ಯಾರೋ... ಛೆ! ಎಂಥಾ ಸ್ಥಿತಿ ಬಂತಲ್ಲಪ್ಪಾ... ನನ್ನ ಪಾಡಿಗೆ ನಾನು ಹಾಯಾಗಿದ್ದೆ. ಈಗ ರಿಕ್ಷವೂ ಇಲ್ಲ. ಸಂಪಾದನೆಯೂ ಇಲ್ಲ. ಈ ಯಾವುದೋ ಹೆಂಗಸಿನ ಕೈಗೆ ಸಿಕ್ಕಿಬಿದ್ದಂತಾಯಿತಲ್ಲ... ಇಲ್ಲಿಂದ ಹೇಗಾದರೂ ಸರಿ ಓಡಿ ಹೋಗಿಬಿಡಬೇಕು. ಮೊದಲು ನನ್ನ ಡ್ರೈವಿಂಗ್ ಲೈಸೆನ್ಸ್ ಎಲ್ಲಿದೆ ಅಂತ ಹುಡುಕಿ ತೆಗೆದಿಟ್ಟುಕೊಳ್ಳಬೇಕು... ಎಂದುಕೊಂಡು ಮೆಲ್ಲನೆ ಎದ್ದು ಬಾಗಿಲ ಬಳಿಗೆ ಬಂದ. ಹೊರಗೆ ಯಾರೋ ಒಂದಿಬ್ಬರು ಮಾತನಾಡುತ್ತಿರುವಂತೆ ಅನ್ನಿಸಿ, ಹಾಗೇ ಆಲಿಸುತ್ತಾ ನಿಂತ. ಒಂದು ಕಲ್ಯಾಣಿಯ ಧ್ವನಿ ಇನ್ನೊಂದು ಯಾರೋ ಮತ್ತೊಬ್ಬ ಯುವತಿಯ ಧ್ವನಿ.

‘‘ಅಕ್ಕಾ... ಇದೆಲ್ಲಾ ಬೇಡ, ಎಲ್ಲಾ ಬಿಟ್ಟು ಸಿಟಿಗೇ ಹೊರಟು ಹೋಗೋಣ ಅಂತ ನಾನು ಎಷ್ಟು ಸಲ ಹೇಳಿದೀನಿ. ನೀನು ನನ್ನ ಮಾತನ್ನು ಒಪ್ಪೋದೇ ಇಲ್ಲವಲ್ಲ...’’

‘‘ನಿನ್ನ ಮದುವೆಯಾಗಿ, ನೀನೂ ನಿನ್ನ ಗಂಡನ ಮನೆಗೆ ಹೊರಟು ಹೋದರೆ, ಅಲ್ಲಿ ನಾನು ಒಂಟಿಯಾಗಿ ಬಿಡ್ತೀನಿ. ಇಲ್ಲಾದರೆ ಎಲ್ಲಾ ಅಭ್ಯಾಸವಾಗಿ ಹೋಗಿದೆ. ಕೈ ತುಂಬಾ ಕೆಲಸವಿದೆ. ನಾನು ಹಾಯಾಗಿದೀನಿ.’’

‘‘ನೀನು ಹಾಯಾಗಿದೀಯ? ಕೃಷ್ಣ ನಿನ್ನನ್ನ ಹಾಯಾಗಿರುಕ್ಕೆಲ್ಲಿ ಬಿಟ್ಟಿದಾನೆ? ನಾನೇ ನಿನ್ನ ಜಾಗದಲ್ಲಿದ್ದಿದ್ದರೆ, ಅವನನ್ನು ಕೊಂದು ಎಲ್ಲಿಂದ ಓಡಿಹೋಗ್ತಿದ್ದೆ.’’

‘‘ನನ್ನ ಮನಸ್ನಲ್ಲೂ ಎಷ್ಟೋ ಬಾರಿ ಹಾಗೆ ಅನ್ನಿಸಿತ್ತು ಕಣೇ ಕೋಮಲ... ಆದರೆ ನಿನ್ನ ಬಾಳು ಹಾಳಾಗಬಾರದು ಅಂತ ನಾನು ಹಾಗೆ ಮಾಡಲಿಲ್ಲ... ಅಲ್ಲದೇ ನನ್ನ ಈ ಒಂದು ಕ್ರೂರ ಕೆಲಸದಿಂದ ಬೃಂದಾಳ ಜೀವನವೇ ಹಾಳಾಗಿ ಹೋಗುತ್ತಿತ್ತು ಅಲ್ವಾ?’’

‘‘ಬೃಂದಾಳಿಗೋಸ್ಕರ ನೀನ್ಯಾಕೆ ತಲೆ ಕೆಡಿಸ್ಕೋಬೇಕು?’’

‘‘ಹಾಗೆನ್ನ ಬೇಡ ಕೋಮಲ... ಹಾಗೆನ್ನಬೇಡ. ಅವಳೂ ನಮ್ಮ ಹಾಗೇ ಹೆಣ್ಣು... ನನಗೆ ತಂಗಿ ಸಮಾನ.’’

‘‘ಚೆನ್ನಾಗಿದೆ ನಿನ್ನ ತರ್ಕ. ಕೃಷ್ಣನ ಹೆಂಡತಿಗಾಗಿ ನೀನ್ಯಾಕೆ ಪರಿತಪಿಸಬೇಕೋ...? ಅವನು ನಿನ್ನ ಬಾಳನ್ನೇ ಹಾಳು ಮಾಡಿಲಿಲ್ವಾ!’’

‘‘ಹಾಗೆ ನೋಡಿದರೆ, ನನ್ನಿಂದ ಆ ಹುಡುಗಿಯ ಬಾಳು ಹಾಳಾಯಿತು ಅಂತ ಅನ್ನಿಸುತ್ತೆ ನನಗೆ... ನಾನು ಅದನ್ನು ಸರಿಪಡಿಸಲೇಬೇಕು.’’

‘‘ಬಿಡೇ ಅಕ್ಕ... ಅದೆಲ್ಲ ಆಗದ ಕೆಲಸ. ನಾಯಿ ಬಾಲ ಡೊಂಕು ಅನ್ನೋ ಹಾಗೆ ಕೃಷ್ಣ ಈ ಜನ್ಮದಲ್ಲಿ ಸರಿ ಹೋಗುಲ್ಲ. ವೃಂದಾಳ ಜೀವನವೂ ಸರಿ ಹೋಗುಲ್ಲ...’’

ಅವರಿಬ್ಬರ ಮಾತುಗಳನ್ನೂ ಕೇಳಿಸಿಕೊಂಡ ವಾಸು ಗಂಭೀರನಾದ. ತಂಗಿ ಇಲ್ಲಿ ಇವಳ ಜೊತೆ ವಾಸವಾಗಿಲ್ಲ... ಆದ್ದರಿಂದ ಅವಳಿಗೆ ಕೃಷ್ಣ ಸತ್ತಿರುವ ವಿಷಯ

ಸಹ ತಿಳಿಯದು... ಇವಳು ಅದನ್ನೇಕೆ ಮುಚ್ಚಿಟ್ಟಿದ್ದಾಳೋ...? ತಂಗಿ, ಇವಳೇ ಕೊಲೆ ಮಾಡಿರಬಹುದು ಅಂತ ಅನುಮಾನ ಪಟ್ಟರೇ... ಅನ್ನೋ ಅಧೈರ್ಯವಿರಬಹುದು... ನಾನು ಈಗಲೇ ಹೊರಗೆ ಹೋಗಿ ನಿಜ ಏನೂಂತ ಹೇಳಿದರೇ... ಬೇಡ ಬೇಡ... ಇನ್ನೆರಡು ದಿನಗಳಲ್ಲಿ ನಿಜ ಏನೂಂತ ತಾನಾಗಿಯೇ ತಿಳಿಯುತ್ತೆ. ನನಗ್ಯಾಕೆ ಈ ಕಿತಾಪತಿ! ಇಲ್ಲಿಂದ ಹೇಗೂ ಆದಷ್ಟು ಬೇಗ ಹೊರಟು ಹೋಗುವವನು ನಾನು ಎಂದುಕೊಂಡು, ಮತ್ತೆ ಬಂದು ಮಂಚದ ಮೇಲೆ ಉರುಳಿಕೊಂಡ.

ಸ್ವಲ್ಪ ಸಮಯದ ನಂತರ ಕಲ್ಯಾಣಿ ರೂಮಿನೊಳಕ್ಕೆ ಬಂದಳು. ಕೈಯಲ್ಲಿ ಊಟದ ತಟ್ಟೆ ಬಟ್ಟಲುಗಳಿದ್ದವು.

''ಏಳಿ, ಊಟ ಮಾಡಿ...'' ಅಜ್ಞೆಯಂತಿದ್ದ ಅವಳ ಧ್ವನಿಯನ್ನು ಕೇಳಿ ಕಣ್ತೆರೆದ.

''ಯಾರೋ ಬಂದ ಹಾಗಿತ್ತು...'' ಅನುಮಾನದಿಂದ ಪ್ರಶ್ನಿಸಿದ.

''ಹೂಂ. ನನ್ನ ತಂಗಿ ಕೋಮಲ... ಸಿಟಿಯ ಲೇಡೀಸ್ ಹಾಸ್ಟೆಲ್ ಒಂದರಲ್ಲಿ ವಾಸವಾಗಿದಾಳೆ. ಅಲ್ಲಿಗೆ ಹತ್ತಿರದ ಕಾಲೇಜಿಗೆ ಹೋಗುತ್ತಾಳೆ.''

''ಓ... ಹಾಗಾದ್ರೆ ನೀವು ಇಲ್ಲಿ ಒಬ್ಬರೇ ಇದೀರಾ? ಇನ್ನಾರೂ ಕಾಣುತ್ತಿಲ್ಲವಲ್ಲ.''

''ಹುಂ. ಕೃಷ್ಣ ಆಗಾಗ್ಗೆ ಇಲ್ಲಿಗೆ ಬರುತ್ತಿದ್ದ... ಎಸ್ಟೇಟಿನ ಕೆಲಸದ ಆಳು ಕಾಳುಗಳಿದಾರೆ. ಕರೆದರೆ ಸಹಾಯಕ್ಕೆ ಬರ್ತಾರೆ...''

''ಹಾಗಾದ್ರೆ. ಆ ಕೃಷ್ಣ ಅನ್ನೋರು ನಿಮಗೆ ತೊಂದರೆ ಕೊಡುತ್ತಿದ್ದರೂ ಆಳುಗಳು ನಿಮಗೇಕೆ ಸಹಾಯ ಮಾಡಲಿಲ್ಲ?''

''ಈ ಎಸ್ಟೇಟ್ ಕೃಷ್ಣನದು. ಅಲ್ಲದೇ ಅವನಿಂದ ನನಗೆ ತೊಂದರೆಯಾಗುತ್ತಿದೆ ಅಂತ ನಾನು ಯಾರಿಗೂ ಹೇಳಿರಲೇ ಇಲ್ಲವಲ್ಲ''

''ಈಗ ಆ ಕೃಷ್ಣ ಅನ್ನೋರು ಇಲ್ಲ ಅಂತ ಇವರುಗಳಿಗೆ ತಿಳಿದರೆ...? ತಿಳಿಯದೇ ಇರುತ್ತಾ?''

''ತಿಳಿದರೆ ನನಗೆ ತೊಂದರೆಯೇ ಹೆಚ್ಚು ವಾಸಿ. ಅವರುಗಳು ಕೃಷ್ಣನಿಗೆ

ಹೆದರುತ್ತಿದ್ದರು. ಈಗ ಅವನು ಬದುಕಿಲ್ಲ ಅಂತ ಗೊತ್ತಾದರೆ, ಈ ಎಸ್ಟೇಟಿನ ಕೆಲಸ ಕಾರ್ಯಗಳಲ್ಲಿ ಏನೇನು ಅಡಚಣೆಗಳು ಬರುತ್ತವೋ ಅವರೆಲ್ಲ ಸುಲಭದಲ್ಲಿ ನನಗೆ ಮೋಸ ಮಾಡಬಲ್ಲರು.''

''ಮೋಸ ಆಗುತ್ತೆ ಅಂತ ನಿಜಾನ ಮುಚ್ಚಿಡುಕ್ಕೆ ಆಗುತ್ತಾ ಮೇಡಂ?'' ವ್ಯಂಗ್ಯವಾಗಿ ಅವನು ಕೇಳಿದಾಗ ಅವಳು ಉತ್ತರಿಸಿದಳು.

''ಹೌದು ವಾಸು... ನಿಜಾನ ಮುಚ್ಚಿಡೋಕೆ ಆಗುಲ್ಲ. ಹಾಗೇ ಸುಳ್ಳನ್ನು ಮುಚ್ಚಿಡೋಕೆ ಆಗುಲ್ಲ. ಆದರೆ ಸುಳ್ಳು ಯಾವುದು, ನಿಜ ಯಾವುದು ಅಂತ ಪರೀಕ್ಷಿಸಿ ನೋಡೋಕೆ ಎಷ್ಟು ಜನರಿಗೆ ಸಮಯವಿರುತ್ತೆ? ಆಸಕ್ತಿ ಇರುತ್ತೆ? ಹಾಗೇನಾದರೂ ಅಂತಹ ಸಮಯ ಬಂದರೆ, ಸುಳ್ಳು ನಿಜ ಎರಡನ್ನೂ ಸುಳ್ಳಿನಿಂದ ಮುಚ್ಚಿಡಬಹುದು.''

ಅವಳಾಡುವ ಮಾತುಗಳು ಅವನಿಗೆ ವಿಚಿತ್ರವಾಗಿ ತೋರಿದವು. ಇವಳು ಏನನ್ನೋ ಮುಚ್ಚಿಡಲು ಹೀಗೆ ಮಾತನಾಡುತ್ತಿರಬಹುದು ಎಂಬ ಸಂದೇಹ ಮೂಡಿತು. ಅದಷ್ಟು ಬೇಗ ಈ ಜಾಗದಿಂದ ಹೊರಟು ಹೋಗಬೇಕು ಎಂಬ ಚಿಂತೆ ಕಾಡತೊಡಗಿತು. ಆ ರಾತ್ರಿ ಅವನಿಗೆ ಸರಿಯಾಗಿ ನಿದ್ದೆ ಬರಲಿಲ್ಲ. ಕಲ್ಯಾಣಿ ಏಕೆ ನನ್ನ ಬಟ್ಟೆಗಳನ್ನು ಬಿಚ್ಚಿ ಬೇರೆ ಬಟ್ಟೆ ಉಡಿಸಿದಳು? ಲೈಸೆನ್ಸ್, ವಾಚುಗಳನ್ನು ಏಕೆ ತೆಗೆದಿಟ್ಟಿದಾಳೆ... ತಂಗಿಯ ಹತ್ತಿರ ಯಾಕೆ ಸುಳ್ಳು ಹೇಳಿದಳು?... ಒಂಟಿಯಾಗಿ ಈ ಮನೆಯಲ್ಲಿ ವಾಸ ಮಾಡಲು ಇವಳಿಗೆ ಭಯವೆನಿಸುವುದಿಲ್ಲವೆ?... ಈಗ ಕೃಷ್ಣನೂ ಇಲ್ಲ... ಅದಕ್ಕೆ ತನ್ನನ್ನೂ ಇಲ್ಲಿ ಬಂಧಿಸಿಟ್ಟಿರಬಹುದೇ? ಕೃಷ್ಣನ ಬದಲಿಗೆ ತಾನು! ಅವನಿಗೂ ಇವಳಿಗೂ ಎಂತಹ ಸ್ನೇಹವಿರಬಹುದು? ಅದೇ ಸ್ನೇಹವನ್ನು ನನ್ನಿಂದ ಬಯಸಿದರೇ...? ಮೈಯೆಲ್ಲಾ ಬೆವತಂತಾಗಿ, ಏನೋ ಅಧೀರತೆ ಉಂಟಾಯಿತು.... ಅವಳ ನಡೆ ನುಡಿಯಲ್ಲಿ ವಿಚಿತ್ರತೆ ಇದ್ದು, ತಾನು ಈ ವೃತ್ತದಲ್ಲೇ ಉಳಿಯುವಂತಾಗಿ ಬಿಟ್ಟರೇ... ಹಾಗಾಗಕೊಡದು., ಹಾಗಾಗಕೂಡದು... ಎಂದು ಹೊರಳಾಡುತ್ತಾ ಬೆಳಕಾಗುವುದನ್ನೇ ಕಾದ...

ಕಲ್ಯಾಣಿ, ಅವನ ರೂಮಿಗೆ ಬಂದು, ಅಂದಿನ ದಿನ ಪತ್ರಿಕೆಯನ್ನು ಅವನ ಮುಂದೆ ಹಿಡಿದಳು. ಎದ್ದು ಕೂತು, ಕೈಯಲ್ಲಿ ಹಿಡಿದ ದಿನ ಪತ್ರಿಕೆಯ ಪುಟಗಳನ್ನು

ತಿರುವಿದ. ''ಈ ಕಾಲಂನ ನೋಡಿ'' ಎಂದಳು ಬೆಟ್ಟು ಮಾಡಿ... ಅವನು ಓದಿದ.

''ನಗರದ ಹೊರವಲಯದಲ್ಲಿರುವ ಚಂದನ ಎಸ್ಟೇಟ್‌ನ ಹಾಳು ಬಾವಿಯಲ್ಲಿ ಎರಡು ಶವಗಳು ದೊರೆತಿದ್ದು.... ಒಂದು ಯುವತಿಯ ದೇಹ... ಇನ್ನೊಂದು ಯುವಕನ ದೇಹ... ಯುವಕ ಆಟೋ ರಿಕ್ಷಾ ಓಡಿಸುವ ವಾಸುಕಿ ಎನ್ನುವವನೆಂದು ಗುರುತಿಸಲಾಗಿದೆ...'' ಇತ್ಯಾದಿ ಇತ್ಯಾದಿ ವಾಸು ಸಿಟ್ಟಿನಿಂದ ರಪ್ಪೆಂದು ಪತ್ರಿಕೆಯನ್ನು ಬಿಸಾಡಿದ.

''ಅದನ್ನು ನಾನು ಅಂತ ಹೇಗೆ ಗುರುತಿಸಿದರು! ನಾನು ಇಲ್ಲೇ ಬದುಕಿದೀನಲ್ಲ... ನಾನು ಹೋಗಿ ಪೊಲೀಸರಿಗೆ ನಿಜ ಏನೂಂತ ತಿಳಿಸಲೇಬೇಕು.''

''ನಿಜ... ನಿಜ... ನಿಜ ಹೇಳೋಕೆ ಹೋಗಿ ನೀವು ಸಿಕ್ಕಿ ಬೀಳುವುದು ನಿಜ ವಾಸು... ನೀವೇ ಆ ಎರಡೂ ಕೊಲೆಗಳನ್ನು ಮಾಡಿ ಬಾವಿಗೆ ದೇಹವನ್ನೂ ಬಿಸಾಡಿದೀರಿ ಅಂತ ಹೊಸ ಆಯಾಮ ಸಿಕ್ಕಂತಾಗುತ್ತದೆ. ಅಷ್ಟೇ.''

''ಹಾಗೇನೂ ಆಗುಲ್ಲ. ಪ್ಲೀಸ್... ನೀವು ನನ್ನ ಜೊತೆಗೆ ಬಂದು ನಿಜ ಏನೂಂತ ಹೇಳಿದರೆ ಎಲ್ಲಾ ಸರಿ ಹೋಗುತ್ತೆ....''

''ಇಲ್ಲ ಖಂಡಿತಾ ಸರಿ ಹೋಗುಲ್ಲ... ಪೋಲಿಸು, ಕಾನೂನು... ಕಡೆಗೆ ನಿಮಗೆ ಈ ದೆಸೆ ತಂದ ಆ ದುಷ್ಕರ್ಮಿಗಳು ಯಾರೂ ನಿಮ್ಮ ಸಹಾಯಕ್ಕೆ ಬರುವುದಿಲ್ಲ. ನಿಮ್ಮ ಆಟೋ ಅಪಹರಿಸಿದ ಅವರುಗಳು ನಿಮ್ಮನ್ನು ಸುಮ್ಮನೇ ಬಿಟ್ಟು ಬಿಡ್ತಾರಾ? ಖಂಡಿತಾ ಇಲ್ಲ.''

''ನಾನು ಆಟೋರಿಕ್ಷಾಗೆ, ಇನ್ಶೂರ್ ಮಾಡಿಸಿದ್ದೆ. ಆ ಹಣ ಸಿಗಬಹುದು. ಅದರಿಂದ ಸಾಲ ತೀರಿಸಬಹುದು.''

''ಅದನ್ನೆಲ್ಲ ಮರೆತು ಬಿಡಿ ವಾಸು. ಆ ರಿಕ್ಷಾ ಪತ್ತೆಯಾದ ನಂತರ, ನಿಮಗೆ ಇನ್ಶೂರೆನ್ಸ್ ಹಣ ಸಿಗುವುದೆಂದಿಗೋ? ಈಗಾಗಲೇ ನೀವು ಸತ್ತು ಹೋಗಿದೀರೆಂದು ಪೇಪರ್ನಲ್ಲೆಲ್ಲಾ ಬಂದಿರೋದ್ರಿಂದ ಎಲ್ಲಾ ಅದನ್ನೇ ನಂಬಿರ್ತಾರೆ... ಈಗ ನೀವೇ ಹೋಗಿ ನಿಮ್ಮ ಮನೆಯವರ ಎದುರಿಗೆ ನಿಂತರೂ ಅವರ್ಯಾರೂ ನಿಮ್ಮನ್ನು ಗುರುತಿಸುವುದಿಲ್ಲ. ಭೂತ ಅಂತ ಅಂದ್ಕೋತಾರೆ...''

''ಡ್ರೈವಿಂಗ್ ಲೈಸೆನ್ಸ್, ವಾಚು, ನನ್ನ ಯೂನಿಫಾರಂ ಷರ್ಟು ಎಲ್ಲಾ,

ನಾನೇ ಅಂತ ಗುರುತಿಸಲು ಸಹಾಯಕವಾಗುತ್ತವೆ. ಎಲ್ಲಿದೆ ಅವೆಲ್ಲಾ?'' ಅವನು ಎತ್ತರದ ಧ್ವನಿಯಲ್ಲಿ ಪ್ರಶ್ನಿಸಿದಾಗ, ಅವಳು ಕೆಳಗಿನ ಧ್ವನಿಯಲ್ಲಿ ಉತ್ತರಿಸಿದಳು.

''ನಾನು ಅವನ್ನೆಲ್ಲಾ ಬಾವಿಗೇ ಎಸೆದು ಬಿಟ್ಟೆ...''

''ಯಾಕೆ ಹಾಗೆ ಮಾಡಿದ್ರಿ! ಯಾಕೆ ಹಾಗೆ ಮಾಡಿದ್ರಿ!'' ಅವಳನ್ನೂ ಹಿಡಿದು ಅಲುಗಾಡಿಸಿ ಕೇಳಿದಾಗ ಅವಳು ಅವನನ್ನು ಮಂಚದ ಮೇಲೆ ತಳ್ಳಿ ನುಡಿದಳು:

''ನಿಮ್ಮನ್ನು ಉಳಿಸೋಕೆ... ನಿಮ್ಮನ್ನು ಉಳಿಸೋಕೆ...''

''ಇದರಿಂದ ನಿಮಗೇನು ಲಾಭ?

''ಲಾಭ ಇದೆ... ಆದರೆ ಅದು ನನ್ನ ಸ್ವಾರ್ಥಕ್ಕಂತೂ ಖಂಡಿತಾ ಅಲ್ಲ. ನಿಮಗೆ ಈಗ ನನ್ನ ಬಗ್ಗೆ ಏನನ್ನಿಸುತ್ತಿದೆಯೋ ನನಗೆ ಗೊತ್ತಿಲ್ಲ. ನಿಮಗೆ, ನನಗೆ ಸಹಾಯ ಮಾಡುವ ಉದಾರತೆ ಇದ್ದರೆ, ನಾನು ಹೇಳಿದಂತೆ ಕೇಳಿ. ಇಲ್ಲವಾದರೆ, ನಿಮಗೆ ತೋಚಿದಂತೆ ಮಾಡಿ...''

''ನಾನು ಈಗಲೇ ಇಲ್ಲಿಂದ ಹೋಗ್ತಿದೀನಿ. ನನಗೆ ಸ್ವಲ್ಪ ಹಣ ಬೇಕು. ಸಾಲ ಅಂತ ಕೊಟ್ಟರಿ. ಆಮೇಲೆ ತೀರಿಸ್ತೀನಿ.''

''ಸರಿ ಎಷ್ಟು ಬೇಕು?'' ಎನ್ನುತ್ತಾ ತನ್ನ ಹ್ಯಾಂಡ್ ಬ್ಯಾಗನ್ನೂ ತೆಗೆದು ಹಣವನ್ನು ಎಣಿಸಿಕೊಟ್ಟಳು. ಹಾಗೆ ಒಂದು ಕಾಗದದ ಮೇಲೆ ತನ್ನ ಅಡ್ರೆಸ್ಸನ್ನು ಬರೆದುಕೊಟ್ಟಳು. ಕೆಲವೇ ಗಂಟೆಗಳಲ್ಲಿ ಸಿದ್ಧನಾಗಿ ವಾಸು ಹೊರಟ. ಕಲ್ಯಾಣಿ ಅವನನ್ನು ಹೆದ್ದಾರಿಯ ತನಕ ಕರೆತಂದು ಬಿಟ್ಟಳು.

ಇಲ್ಲಿ, ಸಿಟಿಗೆ ಹೋಗುವ ಬಸ್ಸು ಬರುತ್ತದೆ. ನೀವು ಹೋಗಿ... ಬನ್ನಿ, ಎಲ್ಲಾ ಒಳ್ಳೇದಾಗಲಿ. ಯಾವುದಕ್ಕೂ ದುಡುಕಬೇಡಿ... ನಾನು ಹೇಳಿರುವ ಮಾತುಗಳನ್ನು ನೆನಪಿನಲ್ಲಿಟ್ಟುಕೊಳ್ಳಿ... ನಿಮ್ಮ ಅಕ್ಕನ ಸಲಹೆ ಅಂತ ತಿಳಿಯಿರಿ... ''ವಾಸು ಮಾತನಾಡಲಿಲ್ಲ. ಅವಳ ಕಡೆ ನೋಡಲಿಲ್ಲ. ನಿಮಗೆ ಯಾವಾಗ ನನ್ನ ಸಹಾಯಬೇಕಾದರೂ, ಸಂಕೋಚ ಪಡದೇ ನನ್ನನ್ನು ಕೇಳಿ... ನನ್ನ ಬಳಿಗೆ ಬನ್ನಿ'' ಎನ್ನುತ್ತಾ ತಾನೇ ಅವನ ಎರಡು ಕೈಗಳನ್ನು ತನ್ನ ಕೈಯೊಳಗೆ ತೆಗೆದುಕೊಂಡು ವಿಶ್ವಾಸದಿಂದ ಒತ್ತಿದಾಗ ಅವನು ಅವಳ ಕಡೆ ನೋಡದೇ ಕೈಗಳನ್ನು ಬಿಡಿಸಿಕೊಂಡು ಬಸ್‌ಸ್ಟಾಪ್ ಕಡೆಗೆ ನಡೆದ. ಕಲ್ಯಾಣಿ ಮುಂದೇನು

ಜರುಗಲಿದೆಯೋ ಎಂದು ಪರಿತಪಿಸುತ್ತಾ ಎಷ್ಟೇಟಿಗೆ ಹಿಂತಿರುಗಿದಳು.

ಮತ್ತೆ ಪೋಲಿಸಿನವರು ಬಂದು ಹಲವಾರು ಪ್ರಶ್ನೆಗಳನ್ನು ಕೇಳಿದ್ದರು. ಕೃಷ್ಣನೊಡನೆ ಮಾತನಾಡಬೇಕು, ಮತ್ತೆ ಬಂದಾಗ, ಅವರನ್ನು ಪೋಲೀಸ್ ಸ್ಟೇಷನ್‌ಗೆ ಕಳಿಸಬೇಕೆಂದು ಹೇಳಿ ಹೋಗಿದಿದ್ದರು. ತಾನು, ವಾಸು ಹೋಗಲು ಒಪ್ಪಬಾರದಾಗಿತ್ತು... ಎಂದು ಮತ್ತೆ ಮತ್ತೆ ತನಗೆ ತಾನೇ ಹೇಳಿಕೊಂಡಳು. ತನ್ನ ಮನಸ್ಸಿನಲ್ಲಿದುದನ್ನು ಅವನಿಗೆ ಹೇಳಿಬಿಡಬೇಕಾಗಿತ್ತು... ಆಗ ಅವನೂ ತನ್ನ ಮಾತನ್ನು ಒಪ್ಪುತ್ತಿದ್ದನೋ ಏನೋ... ಈಗ ತಾನು ವಾಸುವನ್ನೂ ಸಂಧಿಸುವುದಾದರೂ ಹೇಗೆ! ಅವನನ್ನು ಹುಡುಕುವುದಾದರೂ ಎಲ್ಲಿ? ಆಲೋಚನೆಗಳ ಗುಂಗಿನಲ್ಲಿ ಎರಡು ದಿನಗಳು ಕಳೆದು ಹೋದವು.

ಮುಂದಿನ ಕೈ ತೋಟದಲ್ಲಿನ ಗಿಡಗಳಿಗೆ ನೀರನ್ನೆರೆಯುತ್ತಿದ್ದ ಕಲ್ಯಾಣಿ, ಯಾರೋ ಸಮೀಪ ಬಂದು ನಿಂತಂತಾಗಲು ಬೆಚ್ಚಿ ಬಿದ್ದು ತಿರುಗಿದಳು. ಎದುರಿಗೆ ವಾಸು ನಿಂತಿದ್ದ. ಅವನೇಕೆ ಹಿಂತಿರುಗಿ ಬಂದಿದಾನೋ ಅಂತ ಬಂದು ಗಳಿಗೆ ಗಾಭರಿಯಾದರೂ, ಅವನ ಜೊತೆಯಲ್ಲಿ ಯಾರೂ ಇಲ್ಲದುದನ್ನು ಗಮನಿಸಿ, ಧೈರ್ಯ ತಂದುಕೊಂಡಳು. ಮುಗುಳ್ನಗುತ್ತಾ, ''ನಂಗೊತ್ತಿತ್ತು, ನೀವು ಮತ್ತೆ ವಾಪಸ್ಸು ಬಂದೇಬರ್ತೀರಿ ಅಂತ'' ನುಡಿದು ಕೈ ಹಿಡಿದು ಅವನನ್ನು ಒಳಕ್ಕೆ ಕರೆದೊಯ್ದಳು. ಕುಡಿಯಲು ಕಾಫಿ ತಂದಿತ್ತು, ''ನೀವು ಹಸಿದು ಬಂದಿದೀರ ಅಂತನ್ನಿಸ್ತಿದೆ... ನಾನು ಬೇಗ ಬೇಗ ಬಿಸಿ ಅಡಿಗೆ ಮಾಡಿ ಬಿಡ್ತೀನಿ... ಊಟವಾದ ನಂತರ ಮಾತನಾಡೋಣ'' ಎಂದು ಅವಳು ಅಡಿಗೆ ಮನೆ ಕಡೆಗೆ ತಿರುಗಿದಳು. ಇವನು ಕಾಫಿಯ ಬಟ್ಟಲನ್ನು ಕೈಗೆತ್ತಿಕೊಂಡ. ಒಂದು ಗುಟುಕು ಕಾಫಿ ಗಂಟಲಿಗೆ ಬಿದ್ದೊಡನೆ ಹಾಯೆನಿಸಿತ್ತು. ನಿಧಾನವಾಗಿ ಕಾಫಿಯನ್ನು ಕುಡಿದು ಮುಗಿಸಿದ. ಮೈ ಮನಗಳಿಗೆ ಚೇತನ ತುಂಬಿದಂತಾಗಿ, ಲವಲವಿಕೆ ಉಂಟಾಯಿತು. ಹಾಗೆ ಚಿಂತಿಸುತ್ತಾ ಕುಳಿತ.

ಈ ಕಲ್ಯಾಣಿ ನನ್ನ ಒಡ ಹುಟ್ಟಿದವಳಲ್ಲ. ಆದರೆ ಅದಕ್ಕಿಂತ ಹೆಚ್ಚಾಗಿ ಆದರಿಸುತ್ತಿದ್ದಾಳೆ. ಆದರೆ ನನ್ನ ಸ್ವಂತ ಅಕ್ಕ... ತನ್ನನ್ನು ಕಂಡೊಡನೆ ಸಣ್ಣಗೆ ಚೀರಿ, ಬಾಯಿಗೆ ಕೈ ಇಟ್ಟು ಭೂತವನ್ನು ಕಂಡವಳಂತೆ ನಿಂತುಬಿಟ್ಟಳಲ್ಲ! ಇವನೇ ಹತ್ತಿರ ಹೋಗಿ ಮಾತನಾಡಿಸಲು ನೋಡಿದಾಗ ಹಾಗೆ ಹಿಂದೆ ಹಿಂದೆ ಸರಿದು

ಒಳಕ್ಕೆ ನಡೆದುಬಿಟ್ಟಳು. ಇವನಿಗೆ ಪೆಚ್ಚಾಗಿತ್ತು. ಆದರೂ ಮತ್ತೆ ಒಳಗೆ ನಡೆದು, ಅಕ್ಕನ ಮುಂದೆ ನಿಂತು ನುಡಿದ ''ಯಾಕೇ, ಅಕ್ಕ, ನನ್ನ ಗುರುತು ಸಿಗಲಿಲ್ವಾ! ನಾನು ವಾಸು'' ಎಂದಿದ್ದ. ಅವಳು ಮುಸಿ ಮುಸಿ ಅಳುತ್ತಿದ್ದಳು.

''ನಾನು ಸತ್ತಿಲ್ಲ ಕಣೇ, ಬದುಕಿದೀನಿ...''

''ಮತ್ತೆ... ಮತ್ತೆ... ಅವಳು ಮುಂದೆ ಆಡಲಾಗದೇ ಅವನನ್ನೇ ಸಂಶಯದಿಂದ ನುಡಿದಳು... ಅವನು ನಡೆದುದನ್ನು ಸಾವಕಾಶವಾಗಿ ನುಡಿದ. ಆದರೆ ಕೇಳಿಸಿಕೊಳ್ಳುವ ಸಹನೆ ಅವಳಿಗಿರಲಿಲ್ಲ.

''ನಿನ್ನ ಭಾವನೇ ಹೋಗಿ, ಅದು ನೀನೇ ಅಂತ ಗುರುತಿಸಿ ಬಂದರಲ್ಲೋ... ಎಲ್ಲಾ ಮುಗಿದುಹೋಯಿತು. ಈಗ ನೀನು ಬದುಕಿ ಬಂದಿದೀನಿ ಅಂತ ಹೇಳಿದ್ರೆ ಯಾರು ನಂಬ್ತಾರೋ...?''

''ಯಾಕಕ್ಕಾ ನಿನಗೆ ನಂಬಿಕೆ ಬಿರಲಿಲ್ವಾ!''

''ನಾನು ನಂಬಿದರೆಷ್ಟು ಬಿಟ್ಟರೆಷ್ಟು? ನನ್ನ ಮಾತಿಗೆ ಏನು ಬೆಲೆ ಇದೆ? ನಿನ್ನ ಭಾವನ ಸ್ವಭಾವ ನಿನಗೆ ಗೊತ್ತೇ ಇದೆ.''

''ಭಾವ ನನ್ನ ಜೊತೆಗೆ ಬಂದು... ಆ ಆಟೋ ರಿಕ್ಷಾ ದವನು ನಾನೇ ಅಂತ ಒಂದು ಮಾತು ಪೊಲೀಸರಿಗೆ ಹೇಳಿದರೆ ಸಾಕು...''

''ಇಲ್ಲ... ನಿನ್ನ ಭಾವ ಆ ಕೆಲಸ ಖಂಡಿತಾ ಮಾಡುಲ್ಲ... ಅಲ್ಲದೇ ಸತ್ತವನು ಎದ್ದು ಬಂದರೆ ಯಾರು ನಂಬ್ತಾರೆ... ಸುಮ್ಮನೇ ಮತ್ತೆ ಇನ್ನೊಂದು ಹಗರಣವಾಗುತ್ತದೆ. ಈಗಾಗಲೇ ಪೋಲಿಸರ ಪ್ರಶ್ನೆಗೆ ಉತ್ತರ ಹೇಳಿ ಹೇಳಿ ಸಾಕಾಗಿದೆ. ನೀನು ಮಾಡಿಸಿರುವ ಇನ್ಷೂರೆನ್ಸ್ ಹಣ ಅಮ್ಮನಿಗೆ ಸಿಗುತ್ತದೆಯಂತೆ. ಅದರ ವಿಚಾರ ಮಾತನಾಡಲು ನಿನ್ನ ಭಾವ ಹೋಗಿದಾರೆ... ಅವರು ಬರುವುದರೊಳಗೆ ನೀನು ವಾಪಸ್ಸು ಹೊರಟು ಹೋಗು... ನಾನಾದರೂ ಬದುಕಿರಲಿ ಎನ್ನೋ ಆಸೆ ನಿನಗಿದೆಯೋ ಇಲ್ಲವೋ...?''

''ಇದೇನಕ್ಕಾ ಹೀಗೆ ಮಾತನಾಡ್ತಿದಿಯಾ? ನಾನು ಬದುಕಿ ಬಂದುದು ನಿನಗೆ ಸಂತೋಷ ಆಗ್ತಿಲ್ವಾ?''

''ಯಾವ ಅಕ್ಕ ತಾನೇ ತನ್ನ ತಮ್ಮ ಸಾಯಲಿ ಅಂತ ಬಯಸುತ್ತಾಳೆ! ಆದರೆ

ನಾನು ನಿನಗೆ ಯಾವ ಸಹಾಯವನ್ನು ಮಾಡಲಾರೆ... ನೀನು ಗಂಡಸು, ಎಲ್ಲಿಯಾದರೂ ಬದುಕಿರು... ಆದರೆ ಮತ್ತೆಂದು ಇಲ್ಲಿಗೆ ಬರಬೇಡ'' ಅವಳು ನಿಷ್ಠುರವಾಗಿ ನುಡಿದಳು.

ಅಕ್ಕ ಆಡಿದ ಮಾತು ಕೆನ್ನೆಗೆ ಬಾರಿಸಿದಂತಾಗಿತ್ತು. ನನ್ನಿಂದ ಈ ಅಕ್ಕನಿಗೆ ತೊಂದರೆ ಉಂಟಾಗುತ್ತದೆಯೆ? ಅವನು ಅಳಲೂ ಆಗಿದಂತೆ ನಿಂತಿದ್ದ. ''ಪ್ಲೀಸ್ ಹೊರಟು ಹೋಗು'' ಎನ್ನುವಂತೆ ಕೈ ಮುಗಿದು ಅವನ ಕಡೆ ನೋಡಿದಾಗ, ಅವನಿಗೆ ಅಲ್ಲಿ ನಿಲ್ಲಬೇಕೆನಿಸಲಿಲ್ಲ.

ನನ್ನ ರಕ್ತವನ್ನೂ, ಅನಿಸಿಕೆಗಳನ್ನು ಹಂಚಿಕೊಂಡು, ಒಟ್ಟೊಟ್ಟಿಗೇ ಬೆಳೆದ ಅಕ್ಕನಿಗೇ ಹೀಗೆನ್ನಿಸಬೇಕಾದರೆ... ಆದರೆ ಅಮ್ಮನ ಸ್ಥಿತಿ ಹೇಗೆದೆಯೋ? ಅಪ್ಪನೂ ಭಾವನ ಹಾಗೆ ಒರಟರೇ... ಅದೇ ಕಾರಣದಿಂದ, ನಿರುದ್ಯೋಗಿಯಾಗಿದ್ದ ತಾನು ಆ ಹಳ್ಳಿ ಬಿಟ್ಟು ಬಂದು, ಆಟೋ ರಿಕ್ಷಾ ಓಡಿಸಲು ಪ್ರಾರಂಭಿಸಿದ್ದು...

ನನಗಾಗಿ ಹೆತ್ತ ತಾಯಿ ಖಂಡಿತಾ ದುಃಖಿಸದೇ ಇರುವುದಿಲ್ಲ... ಅವಳ ಸ್ಥಿತಿ ಹೇಗಿದೆಯೋ... ಆದರೆ ಈಗಾಗಲೇ ಎಲ್ಲರಿಗೂ ಈ ಅಪಘಾತದ ವಿಷಯ ತಿಳಿದಿದ್ದು, ಬಾಯಿಗೆ ಬಂದಂತೆ ಮಾತನಾಡುವುದಿಲ್ಲವೆ? ನನ್ನ ಅಕ್ಕನೇ ಹೀಗಾಡುತ್ತಿರುವಾಗ, ನಮ್ಮ ಹಳ್ಳಿಯವರು ನನ್ನನ್ನು ಹೇಗೆ ಸ್ವಾಗತಿಸಬಹುದು ಎಂದು ಊಹಿಸಲೂ ಮನ ಹಿಂಜರಿಯಿತು. ತಾಯಿಯನ್ನು ನೋಡಿ ಸಾಂತ್ವನ ಹೇಳಬೇಕೆಂದು ಬಾರಿ ಬಾರಿಗೆ ಅನಿಸಿದರೂ ತಡೆದುಕೊಂಡ. ಈ ವಿಷಯಗಳೆಲ್ಲ ಸ್ವಲ್ಪ ಹಳೆಯದಾಗಲಿ, ತಾನೇ ಹೋಗಿ ತಾಯಿಯನ್ನೂ ನೋಡಿ ಬರುವ ತೀರ್ಮಾನ ಮಾಡಿದ.

''ಆಯ್ತು... ನಾನು ಮತ್ತೆ ಬಂದೂ ಬಂದೂ ಖಂಡಿತಾ ತೊಂದರೆ ಕೊಡುವುದಿಲ್ಲ. ನಿಮಗೆಲ್ಲಾ ಹೇಗೆ ಸರಿ ಅನ್ನಿಸುತ್ತೋ ಹಾಗೆ ಮಾಡಿ. ಅಮ್ಮ ಹೇಗಿದಾಳೆ ಅಂತ ಕೇಳುವ ಧೈರ್ಯ ನನಗಿಲ್ಲ. ಅವಳು ನಾನು ಬದುಕಿದೀನಿ ಅಂತ ತಿಳಿದ್ರೆ ಖಂಡಿತಾ ಸಂತೋಷ ಪಡ್ತಾಳೆ. ನಿನಗೆ ತಿಳಿಸಲು ಸಾಧ್ಯ ಅಂತ ಅನ್ನಿಸಿದಾಗ ತಿಳಿಸು. ಹಾಗೆ ಅವಳ ಯೋಗ ಕ್ಷೇಮವನ್ನು ನೋಡ್ಕೋ'' ಎಂದು ಹೇಳಿ ಅವಳ ಕಡೆ ತಿರುಗಿ ನೋಡದೇ ಅಲ್ಲಿಂದ ಹೊರಬಿದ್ದ. 'ಕೂತ್ಕೋಬಾ... ನೀರು

ಕೊಡ್ಲಾ? ಕಾಫಿ ಕುಡಿತೀಯಾ' ಅಂತ ಸಹ ಉಪಚರಿಸದೇ ತಾನು ಅಲ್ಲಿಂದ ಮರೆಯಾದರೆ ಸಾಕು ಎಂದು ಚಡಪಡಿಸುತ್ತಿದ್ದ ಅಕ್ಕನ ಅಸಹನೆ, ಅವನನ್ನು ಸೀದಾ ಅಲ್ಲಿಂದ ಇಲ್ಲಿ ಕಲ್ಯಾಣಿಯ ಮನೆಗೆ ಕರೆತಂದಿತ್ತು. ಇವಳ ವರ್ತನೆ ವಿಚಿತ್ರವೆನಿಸಿತ್ತು. ಆದರೆ ಅಕ್ಕನ ವರ್ತನೆ ಇದಕ್ಕಿಂತ ಅತಿರೇಕ! ಯಾರೋ ಗುರುತು ಪರಿಚಯವಿಲ್ಲದ ಈ ಹೆಂಗಸಿಗೆ ನಾನು ಬದುಕುವುದು ಬೇಕಾಗಿತ್ತು... ಆದರೆ ನನ್ನ ಸ್ವಂತ ಅಕ್ಕನಿಗೆ ನಾನು ಸತ್ತವನಂತೆ ಇರುವುದೇ ಸರಿ ಎನ್ನಿಸುವಷ್ಟರ ಮಟ್ಟಿನ ಬದಲಾವಣೆ! ಛೆ... ಇದೆಂತಹ ಪ್ರಪಂಚ? ಮನೆಯವರಿಗೆ ನಾನು ಬೇಡ... ಹೊರಗಿನರ್‍ಯಾರಿಗೋ ನಾನು ಬೇಕು ಇದೆಂತಹ ನ್ಯಾಯ?...

"ವಾಸು ಏಳಿ... ಊಟ ಮಾಡಿ..." ಅವಳು ವಿಶ್ವಾಸದಿಂದ ಮೈ ಮುಟ್ಟಿ ಎಬ್ಬಿಸಿದಾಗ, ಅವನಿಗೆ ದುಃಖವನ್ನು ತಡೆಯಲಾಗಲಿಲ್ಲ. ಅವಳ ಕೈ ಹಿಡಿದು ಗಳಗಳನೆ ಅತ್ತ.

"ಸಮಾಧಾನ ಮಾಡಿಕೊಳ್ಳಿ... ಮೊದಲು ಊಟ ಮಾಡೋಣ. ಆಮೇಲೆ ನಿಧಾನವಾಗಿ ಮಾತನಾಡೋಣ. "ಎನ್ನುತ್ತಾ ಕೈ ಹಿಡಿದು ಎಬ್ಬಿಸಿ ಅವನನ್ನು ಊಟದ ಮನೆಗೆ ಕರೆದೊಯ್ದಳು.

ಬಿಸಿ ಬಿಸಿ ಊಟ ಹೊಟ್ಟೆಗೆ ಬಿದ್ದೊಡನೆ, ಅವನ ಮನದ ತಾಪಶಮನವಾಗ ತೊಡಗಿತ್ತು. ಮೌನವಾಗಿ ಊಟ ಮಾಡಿ ಎದ್ದ. ಕಲ್ಯಾಣಿಯೂ ಊಟ ಮುಗಿಸಿ ಹೊರಗೆ ಬಂದಳು. ಅವಳೇ ಮಾತಿಗೆ ಪ್ರಾರಂಭಿಸಿದಳು. "ಅಲ್ಲಿ ಏನು ನಡೀತು ಅಂತ ಕೇಳಿ, ನಾನು ನಿಮ್ಮ ದುಗುಡವನ್ನು ಮತ್ತೆ ಕೆದಕುವುದಿಲ್ಲ. ನೀವು ಸೀದಾ ಇಲ್ಲಿಗೆ ಬಂದುದೇ ಒಳ್ಳೇದಾಯ್ತು... ಈಗ ನಿದ್ದೆ ಬರುತ್ತಿದೆಯಾದ್ರೆ ಮಲಗಿಕ್ಕೊಳ್ಳಿ..."

"ಇಲ್ಲ ನಾನೀಗ ಎಚ್ಚರವಾಗಿದೀನಿ. ನಿದ್ದೆ ಹಾರಿ ಹೋಗಿದೆ. ಅದೇನೋ ಮಾತನಾಡುವುದಿದೆ ಅಂದ್ರಲ್ಲ... ಆಡಿ ಬಿಡಿ.... ನಾನು ನಿದ್ದೆ ಮಾಡಿ ಎದ್ದರೆ ನನ್ನ ಮನಸ್ಸು ಇನ್ನು ಹೇಗೆ ತಿರುಗಿರುತ್ತೋ...?"

"ಹಾಗೇನೂ ಆಗುಲ್ಲ ಬಿಡಿ... ಮುಖ್ಯವಾದ ಕೆಲವು ವಿಷಯಗಳನ್ನು ನಿಮಗೆ ತಿಳಿಸಲೇಬೇಕು.. ಅದಕ್ಕೆ ಮೊದಲು, ನಾನ್ಯಾರು.. ನಾನೇಕೆ ಇಲ್ಲಿ ಒಂಟಿಯಾಗಿದೀನಿ ಅಂತ ತಿಳಿಸಬೇಕು... ನಿಮಗೂ ನನ್ನ ಬಗ್ಗೆ ಕುತೂಹಲ

ಏರಬಹುದಲ್ಲವೇ? ನನ್ನ ವಿಷಯವೇ ಒಂದು ದೊಡ್ಡ ಕಥೆ. ಅದನ್ನು ಮೊದಲಿನಿಂದಲೇ ಹೇಳಬೇಕು'' ಎನ್ನುತ್ತಾ ಪ್ರಾರಂಭಿಸಿದಳು.

ಈ ಚಂದನ, ಎಸ್ಟೇಟ್ ಕೃಷ್ಣನ, ತಂದೆಗೆ ಸೇರಿದ್ದು. ಅವನ ತಂದೆ ನಾರಾಯಣ ಮೂರ್ತಿಗೆ... ಪಿತ್ರಾರ್ಜಿತವಾಗಿ ಬಂದದ್ದು. ಅವನ ತಾತ ಮುತ್ತಾತರ ಕಾಲದಲ್ಲಿ ಇಲ್ಲಿ ಆಳ್ವಿಕೆಯನ್ನು ನಡೆಸುತ್ತಿದ್ದ ಪಾಳೆಯಗಾರರಿಂದ ಸಿಕ್ಕ ಸಣ್ಣ ಭೂಮಿಯ ಚೂರು. ಅದನ್ನು ನಾರಾಯಣಮೂರ್ತಿಯ ತಾತ ಕೃಷ್ಣಪ್ಪನವರು, ತಮ್ಮ ಪರಿಶ್ರಮದಿಂದ ಊರ್ಜಿತಗೊಳಿಸಿದ್ದರು. ಅವರ ಕಾಲದಲ್ಲಿ, ಊರಾಚೆಯ ತೋಟ ಎಂದು ಕರೆಸಿಕೊಳ್ಳುತ್ತಿದ್ದುದು, ಈಗ ''ಚಂದನ ಎಸ್ಟೇಟ್'' ಎಂಬ ನಾನ ಫಲಕವನ್ನು ಪಡೆದಿತ್ತು. ಊರಿನಿಂದ ಸಾಕಷ್ಟು ದೂರದಲ್ಲಿದ್ದ ಈ ತೋಟದಲ್ಲಿ ಒಂದು ಸುಂದರವಾದ ಮನೆಯನ್ನು ಕಟ್ಟಿಸಿದವರು ನಾರಾಯಣಮೂರ್ತಿಗಳ ತಂದೆ. ಆಗ ಈಗ ಇಲ್ಲಿ ಬಂದಿದ್ದು ನಾಲ್ಕಾರು ದಿನಗಳನ್ನು ಪ್ರಶಾಂತವಾದ ವಾತಾವರಣದಲ್ಲಿ ಕಾಲ ಕಳೆಯುವ ಆಲೋಚನೆಯಿಂದ ಕಟ್ಟಿಸಿದ್ದರು.

ನಾರಾಯಣಮೂರ್ತಿಯ ಅಣ್ಣ ರಾಮಚಂದ್ರ. ಅವನಿಗೆ ಮದುವೆಯಾಗಿ ಕೆಲವೇ ತಿಂಗಳುಗಳು ಕಳೆದಿದ್ದವು. ಹೆಂಡತಿಯೊಡನೆ ಸುಖವಾದ ಸಮಯಗಳನ್ನು ಕಳೆಯಲೆಂದು ತೋಟದ ಮನೆಗೆ ಬಂದು ಇರುವಾಗ, ಒಂದು ದುರ್ಘಟನೆ ನಡೆದುಹೋಯಿತು. ಗಿಡ ಮರಗಳ ನಡುವೆ ಕೈ ಕೈ ಹಿಡಿದು ಬರುವಾಗ ಎದುರಿನಿಂದ ಬಂದ ಒಂದು ಬೀದಿ ನಾಯಿ ಅವಳ ಮೇಲೆ ಎಗರಿತು. ಅದನ್ನು ಓಡಿಸುವ ಸನ್ನಾಹದಲ್ಲಿ ರಾಮಚಂದ್ರನಿದ್ದಾಗ, ಹೆದರಿಕೆಯಿಂದ ಓಡುತ್ತಿದ್ದ ಅವನ ಪತ್ನಿ ಆಯತಪ್ಪಿ, ಅಲ್ಲಿದ್ದ ನೆಲಬಾವಿಗೆ ಮಗುಚಿ ಬಿದ್ದು ಬಿಟ್ಟಳು. ಹೆಂಡತಿಯನ್ನು ಹುಡುಕುತ್ತಾ ಅಲ್ಲಿ ಇಲ್ಲಿ ತಿರುಗಾಡುತ್ತಾ, ಅವನು ನೆಲಬಾವಿಯ ಬಳಿಗೆ ಬಂದು ಬಗ್ಗಿ ನೋಡಿದ. ಏನೂ ಕಾಣಲಿಲ್ಲ. ಮನೆಗೆ ಹೋಗಿರಬಹುದೇನೋ ಅಂತ ಮನೆಗೆ ಬಂದು ನೋಡಿದ. ಅಲ್ಲಿಯೂ ಕಾಣದಿದ್ದಾಗ ಹುಚ್ಚನಂತೆ ಮತ್ತೆ ಬಾವಿಯ ಬಳಿಗೆ ಬಂದಿದ್ದ. ಅಲ್ಲಿದ್ದ ಕೂಲಿಯಾಳುಗಳನ್ನು ಕರೆಸಿ ಬಾವಿಗೆ ಇಳಿದು ನೋಡುವಂತೆ ಕೇಳಿದ್ದ. ಒಂದಿಬ್ಬರು ಇಳಿದು, ನೋಡಿ, ನಿಶ್ಚೇತವಾಗಿದ್ದ ಅವಳ ದೇಹವನ್ನು ಮೇಲಕ್ಕೆ ಎತ್ತಿ ತಂದು

ಇಳಿಸಿದಾಗ, ಎದೆ ಎದೆ ಬಡಿದುಕೊಂಡು ರೋಧಿಸಿದ್ದ. ನಂತರ ಮುಂದಿನ ಕ್ರಮಗಳು ತರುಗಿದವು. ಹೆಂಡತಿಯ ಅಕಾಲ ಮರಣದಿಂದ ಜರ್ಝರಿತನಾಗಿದ್ದ ರಾಮಚಂದ್ರ. ಆ ಅಪಘಾತವನ್ನೂ ಅವನಿಂದ ಮರೆಯಲಾಗಲಿಲ್ಲ. ಒಂದು ದಿನ ಯಾರಿಗೂ ಹೇಳದೇ ಆ ಊರನ್ನೇ ಬಿಟ್ಟು ದೇಶಾಂತರ ಹೊರಟು ಹೋದ.

ಈ ಅನಿರೀಕ್ಷಿತ ಘಟನೆಯಿಂದ ತೋಟದ ಮನೆಗೆ ಅವರುಗಳು ಬರುವುದನ್ನು ನಿಲ್ಲಿಸಿದರು. ಆ ನೆಲಬಾವಿಯನ್ನೂ ಮುಚ್ಚಿಸಿ, ಮತ್ತೊಂದು ಬಾವಿಯನ್ನು ತೋಡಿಸಿ, ಕಟ್ಟೆ ಕಟ್ಟಿಸಿ, ಪಂಪು ಸೆಟ್ಟುಗಳನ್ನು ಅಳವಡಿಸಿ ಅನುಕೂಲಗಳನ್ನು ಮಾಡಿಸಿದರು. ಈಗ ತೋಟದಲ್ಲೇ ಇದ್ದು ಕೆಲಸಗಳನ್ನು ನೋಡಿಕೊಳ್ಳಲು ಯಾರಾದರೂ ಸಹಾಯಕರು ಬೇಕಾಗಿದ್ದರು.

ಇಂಥ ಸಮಯದಲ್ಲಿ, ಕಲ್ಯಾಣಿಯ ತಂದೆ ನೆರವಾಗಿ ಬಂದರು. ದೂರದ ಸಂಬಂಧಿಯಾದ ಶಿವರಾಮಯ್ಯ, ಕೆಲಸವನ್ನು ಕಳೆದುಕೊಂಡು, ಸಂಸಾರ ನಡೆಸಲು ಬವಣೆ ಪಡುತ್ತಿರುವಾಗ, ನಾರಾಯಣ ಮೂರ್ತಿಯ ತಂದೆ, ಅವರಿಗೆ ಇಲ್ಲಿ ತೋಟದ ಮೇಲ್ವಿಚಾರಣೆಯ ಕೆಲಸ ವಹಿಸಿದರು. ತೋಟದ ಆಳು ಕಾಳೊಡನೆ ಸ್ನೇಹದಿಂದ ವರ್ತಿಸಿ, ಕೆಲಸ ಕಾರ್ಯಗಳ ಮೇಲ್ವಿಚಾರಣೆ ನೋಡಿಕೊಳ್ಳುತ್ತಿದ್ದ ಶಿವರಾಮಯ್ಯ ಎಲ್ಲರಿಗೂ ಬೇಕಾದವರಾದರು.

ದೇಶಾಂತರ ಹೊರಟು ಹೋಗಿದ ಮಗನ ನೆನಪು ಕೃಷ್ಣಪ್ಪನವರನ್ನು ಕಾಡುತ್ತಲೇ ಇತ್ತು. ಶಿವರಾಮಯ್ಯನನ್ನು ತಮ್ಮ ಮಗನಂತೆಯೇ ನೋಡಿಕೊಂಡರು. ಒಬ್ಬ ಒಳ್ಳೆಯ ಹುಡುಗಿಯನ್ನು ತಂದು ಮದುವೆಯನ್ನು ಮಾಡಿಸಿ, ಸಂಸಾರಸ್ಥನನ್ನಾಗಿ ಮಾಡಿದರು. ಅವರಿಬ್ಬರ ಮಗಳಾಗಿ ಮೊದಲು ಹುಟ್ಟಿದವಳು ಕಲ್ಯಾಣಿ. ಎಂಟು ವರ್ಷಗಳ ನಂತರ ಹುಟ್ಟಿದವಳು ಕೋಮಲ. ನಾರಾಯಣ ಮೂರ್ತಿ ಶಾರದೆಯ ಮಗನಾಗಿ ಹುಟ್ಟಿದವನು ಕೃಷ್ಣ. ಕಲ್ಯಾಣಿಗಿಂತ ಎರಡು ವರ್ಷಕ್ಕೆ ಚಿಕ್ಕವನು. ಈ ಮುಂಚೆಯೇ ಮನೆಯವರ ಪ್ರೀತಿಗೆ ಪಾತ್ರಳಾಗಿ ಎಲ್ಲರ ಕಣ್ಮಣಿಯಾಗಿದ್ದ ಕಲ್ಯಾಣಿ, ಕೃಷ್ಣನ ಕಣ್ಣನ್ನು ಚುಚ್ಚತೊಡಗಿದಳು. ಬೆಳೆಯುತ್ತಾ ಹೋದಂತೆ, ಕಲ್ಯಾಣಿಯ ಮೇಲಿನ ಈರ್ಷ್ಯೆ ಜಾಸ್ತಿಯಾಗತೊಡಗಿತು. ತಮ್ಮ ಮನೆಯವಳಲ್ಲದ, ಯಾವುದೋ, ಬೇರೆ ಮನೆಯ ಹುಡುಗಿ, ತನಗಿಂತ ಅಧಿಕ ಪ್ರೀತಿಯನ್ನು ಪಡೆಯುತ್ತಿರುವುದು ಅವನಿಗೆ ಸಹಿಸಲಿಲ್ಲ. ಕೃಷ್ಣನ ತಾಯಿ ಕಹಿ ಬೀಜವನ್ನು ಬಿತ್ತಿದ್ದಳು.

''ಕಲ್ಯಾಣಿ ನಿನಗಿಂತ ದೊಡ್ಡವಳು, ಅವಳನ್ನು ಅಕ್ಕ ಅಂತ ಕರಿ'' ಅಂತ ಹೇಳಿದರೆ, ಅಲ್ಲಿಂದ ತಕ್ಷಣವೇ ಹೊರಟುಹೋಗುತ್ತಿದ್ದ. ಸ್ಕೂಲಿಗೆ ಸೇರಿಸಿದಾಗ ಅವನಿಗೆ ಆರು ವರ್ಷ. ಕಲ್ಯಾಣಿಯ ಜತೆ ತಾನು ಸ್ಕೂಲಿಗೆ ಹೋಗುವುದಿಲ್ಲವೆಂದು ಹಠ ಮಾಡಿ, ಮನೆಯಿಂದ ಓಡಿ ಹೋಗುತ್ತಿದ್ದ. ಸುಮ್ಮನೇ ಕಾರಣವಿಲ್ಲದೇ ಕಲ್ಯಾಣಿಯನ್ನು ಬೈಯುವುದು, ಹೊಡೆಯುವುದು... ಅವಳನ್ನೂ ಹಿಂಸಿಸಿದಷ್ಟೂ ಇವನಿಗೆ ಏನೋ ಆನಂದ. ಕಲ್ಯಾಣಿಯ ಸಹನೆ ಅವನನ್ನು ಮತ್ತೆ ಕೆರಳಿಸಿತ್ತು. ಹೀಗೆ ಹತ್ತಾರು ವರ್ಷಗಳು ಕಳೆದವು. ಸ್ಕೂಲಿಗೆ ಹೋದರೆ ಹೋದ; ಇಲ್ಲದಿದ್ದರೆ ಇಲ್ಲ. ಹೀಗೆ ಸಾಗಿತು ಅವನ ವಿದ್ಯಾಭ್ಯಾಸ. ನಾರಾಯಣಮೂರ್ತಿಗೆ ಕೃಷ್ಣ ಒಬ್ಬನೇ ಮಗ. ಅವನ ಹೆಂಡತಿಗೆ ಮತ್ತೆ ಮಕ್ಕಳಾಗಲಿಲ್ಲ. ಹಾಗಾಗಿ, ಆ ನಂತರ ಹುಟ್ಟಿದ್ದ ಕೋಮಲ, ಎಲ್ಲರ ಕಣ್ಣಿನ ಬೊಂಬೆಯಂತೆ ಬೆಳೆಯತೊಡಗಿದಳು... ಇದು ಮತ್ತು ಕೋಪದ ವಿಷಯ. ಈ ಅಕ್ಕತಂಗಿಯರ ನಡುವೆ ಈ ಮನೆಯಲ್ಲಿ ತಾನೇ ಪರಕೀಯ ಎಂಬ ಭಾವನೆ ಅವನಲ್ಲಿ ಬೆಳೆಯತೊಡಗಿತು. ಮಾತು ಮಾತಿಗೆ, ''ಆ ಹೆಣ್ಣು ಹುಡುಗಿಯರನ್ನೂ ನೋಡಿ ನಾಚ್ಕೋ... ನಿನಗೇನು ಬಂದಿದೆ ಧಾಡಿ?'' ಎಂಬ ಚುಚ್ಚು ನುಡಿಗಳು ಅವನನ್ನು ಕೆರಳಿಸುತ್ತಿದ್ದವು. ಹೀಗಾಗಿ ಮನೆಯಿಂದ ಹೊರ ಹೊರಗೇ ಇರುತ್ತಿದ್ದ ಅವನಿಗೆ ಅವನಂತೆಯೇ ಇದ್ದ ನಾಲ್ಕಾರು ಗೆಳೆಯರ ಗೆಳೆತನ ಹಿತವೆನಿಸಿತು. ಅವರುಗಳನ್ನು ಮೆಚ್ಚಿಸಲೆಂದು ಅವರು ಹೇಳಿದಂತೆ ಕೇಳುತ್ತಿದ್ದ. ಅವರ ಆಸೆಗಳನ್ನು ಪೂರೈಸಲು, ಹಣವನ್ನು ಧಾರಾಳವಾಗಿ ಖರ್ಚು ಮಾಡುತ್ತಿದ್ದ. ತಾಯಿಯನ್ನು ಕಾಡಿ ಬೇಡಿ, ಪೀಡಿಸಿ ಹಣವನ್ನು ಪಡೆದು ಮೋಜು ಮಾಡುತ್ತಿದ್ದ ಶಾರದೆಯಿಂದ ವಿಚಾರ ತಿಳಿದ ನಾರಾಯಣಮೂರ್ತಿ ಮಗನನ್ನು ಚೆನ್ನಾಗಿ ಬೈದು ತಳಿಸಿದ ದಿನ, ಕೃಷ್ಣ ಮನೆ ಬಿಟ್ಟು ಹೋದ. ನಾಲ್ಕಾರು ದಿನಗಳ ನಂತರ ತಂದೆಗೆ ಕಾಣದಂತೆ ಹಿಂಬಾಗಿಲಿನಿಂದ ಒಳಗೆ ಬಂದು ಅಡಿಗೆ ಮನೆಯಲ್ಲಿದ್ದ ತಾಯಿಯೊಡನೆ ಜಗಳವಾಡಿ ಹಣ ವಸೂಲಿ ಮಾಡಿಕೊಂಡು ಹೋದ.

''ಅವನು ಬಂದ... ನನಗೆ ತಿಳಿಯದಂತೆ ಅವನಿಗೆ ಹಣ ಕೊಟ್ಯೋ ಇಲ್ವೋ... ನೀನು'' ನಾರಾಯಣ ಮೂರ್ತಿ ಹಂಗಿಸಿ ನುಡಿದಾಗ ಶಾರದೆ ಅತ್ತಳು.

''ನಾನೇನು ಮಾಡಲಿ ನೀವೇ ಹೇಳಿ... ಅವನು ನಮ್ಮ ಮಗನೇ ತಾನೇ... ಅವನಿಗೂ ಖರ್ಚು ಮಾಡುವ ಹಕ್ಕು ಇದೆ ಅಲ್ವೆ?''

''ಹಕ್ಕು ಇದೆ ಅಂತ... ಹಣ ಏನು ಮರದಿಂದ ಉದುರುತ್ತಾ! ವಿದ್ಯೆ ಇಲ್ಲ ಬುದ್ಧಿ ಇಲ್ಲ... ಸಂಪಾದಿಸುವ ಯೋಗ್ಯತೆ ಇಲ್ಲ. ತಾತನ ಆಸ್ತಿ ಅಂತ ಖರ್ಚು ಮಾಡಿದರೆ? ಏನು ತಿಂತಾನಂತೆ ನಾಳೆ?''

''ಅದೆಲ್ಲ ನನಗೆ ಗೊತ್ತಿಲ್ಲ. ಒಂದು ತುತ್ತು ಅನ್ನ ಹಾಕೋ ತಾಕತ್ತು ನಮಗೆ ಇಲ್ಲದೇ ಏನಿಲ್ಲ. ಹೇಗೋ ನಡೆಯುತ್ತೆ.''

''ನೀನೂ ಹೀಗೆ ಮಾತಾಡ್ತೀಯಲ್ಲ ಶಾರದಾ... ಭಿಕ್ಷೆ ಬೇಡಿದರೂ ಒಂದು ತುತ್ತು ಹೊಟ್ಟೆಗೆ ಸಿಕ್ಕೇ ಸಿಗುತ್ತೆ. ಅದಲ್ಲ ಮಾತು... ಅವನೂ ವಿದ್ಯಾವಂತನಾಗಿ, ಸಂಪಾದಿಸುವ ಯೋಗ್ಯತೆ ಪಡೆದರೆ ನಮಗೇ ಸಂತೋಷ. ಅದು ಬಿಟ್ಟು ಕಳ್ಳನಂತೆ ಬಂದು, ಕಾಡಿ ಬೇಡಿ, ಹಣ ಪಡೆದು ಮೋಜು ಮಾಡುವವನು, ಮುಂದೆ ನಮ್ಮ ಕೈಗೆ ದಕ್ಕುತಾನಾ? ವಿದ್ಯೆ ತಲೆಗೆ ಹತ್ತಲಿಲ್ಲ ಅಂತ ಪೋಲಿ ಅಲೆಯುಕ್ಕೆ ಆಗುತ್ತಾ! ಇದೆಲ್ಲಾ ಒಬ್ಬನೇ ಮಗು ಅಂತ ಸಿಕ್ಕಿದ ಮುದ್ದಿನ ಪ್ರಭಾವ...''

''ಯಾರು ಮುದ್ದು ಮಾಡಿದಾರೆ? ಯಾರು ಪ್ರೀತಿ ತೋರಿಸಿದಾರೆ! ಅದೆಲ್ಲಾ ಆ ಹೆಣ್ಣು ಮಕ್ಕಳ ಪಾಲು... ಮನೇಲಿ ಒಬ್ಬ ಗಂಡು ಮಗ ಹುಟ್ಟಿದಾನೆ ಅನ್ನೋದನ್ನೇ ಎಲ್ಲರೂ ಮರೆತಿರುವ ಹಾಗಿದೆ.''

''ಶಾರದಾ, ಏನೇನೋ ಮಾತನಾಡಬೇಡ... ಯಾರ್‍ಯಾರಿಗೆ ಎಷ್ಟೆಷ್ಟು ಪ್ರೀತಿ ಪ್ರೇಮ ಸಿಗಬೇಕೋ ಅಷ್ಟು ಸಿಕ್ಕಿದೆ. ನೀನು ಅವನ ತಲೆಗೆ ಏನೇನೋ ತುಂಬಬೇಡ... ಮೊದಲೇ ಅವನಿಗೆ ಆ ಹುಡುಗಿಯರ ತಲೆ ಕಂಡರೆ ಆಗುಲ್ಲ...''

''ಅವರೇನು ಸ್ವಂತ ಅಕ್ಕ ತಂಗಿಯರೇ...? ಎಷ್ಟಾಗಲೀ ಹೊರಗಿನವರು... ಇವನಿಗೆ ಎಲ್ಲಿಂದ ಬರುತ್ತೆ ಪ್ರೀತಿ?''

''ಶಾರದಾ... ಇದೆಲ್ಲಾ ನಿನ್ನದೇ ತಯಾರಿ... ಎಲ್ಲರ ಹಾಗೆ ಅವನೂ ಈ ಮನೇಲಿರಬೇಕು.. ಇಲ್ಲದಿದ್ದರೆ ಆಗೋದೇ ಹೀಗೆ. ತಾನೂ ಸುಖವಾಗಿರುಲ್ಲ. ಇನ್ನೊಬ್ಬರನ್ನೂ ಸುಖವಾಗಿರಲು ಬಿಡುಲ್ಲ...''

''ಅವನೂ ಈ ಮನೇಲಿ ಸುಖವಾಗಿದ್ದು, ನಮ್ಮನ್ನು ಸುಖವಾಗಿಡಬೇಕೂಂತಿದ್ದರೆ, ನನ್ನದೊಂದು ಮಾತು... ಶಿವರಾಮಯ್ಯನವರ ಸಂಸಾರವನ್ನು ಈ ಮನೆಯಿಂದ ಕಳಿಸಿ ಬಿಡಿ. ಆ ತೋಟದ ಮನೆಯಲ್ಲಿ ಬೇಕಾದರೆ ವಾಸವಾಗರಲಿ.''

''ಶಾರದಾ ನಿನಗ್ಯಾಕೆ ಇಂತಹ ಕೆಟ್ಟ ಬುದ್ಧಿ? ಅಪ್ಪ, ಅವರನ್ನು ತಮ್ಮ ಹಿರಿಯ ಮಗನಂತೆ ಅಂತ ಭಾವಿಸಿದ್ದಾರೆ...''

''ಸರಿ... ಸರಿ... ಭಾವಿಸಿದ ಮಾತ್ರಕ್ಕೆ ಹಿರಿ ಮಗನಾಗಿ ಬಿಡ್ತಾರೆ? ಸ್ವಂತ ಮಗ ಮನೆ ಬಿಟ್ಟು ದೇಶಾಂತರ ಹೋದರು... ಇವರು ಯಾರೋ ಪರದೇಶಿಗಳು ಇಲ್ಲಿ ಬಂದ ಸೇರಿಕೊಂಡು, ನನ್ನ ಮಗನೂ ದೇಶಾಂತರ ಹೋಗುವಂತೆ ಮಾಡ್ತಾರೆ ಅಷ್ಟೇ...''

ನಾರಾಯಣಮೂರ್ತಿ ಅವಳ ಕೆನ್ನೆಗೆ ಹೊಡೆದು ಬಾಯಿ ಮುಚ್ಚಿಸಿದ್ದ. ಆದರೆ, ತಂದೆಯೊಡನೆ ಮಾತನಾಡಿ, ಸಮಸ್ಯೆಯನ್ನು ಹೇಳಿ, ಶಿವರಾಮಯ್ಯನ ಸಂಸಾರ ತೋಟದ ಮನೆಗೆ ಹೋಗಿ ವಾಸ ಮಾಡುವಂತೆ ಮಾಡಿದ. ಕೃಷ್ಣಪ್ಪನವರ ಮಾತಿಗೆ ಒಪ್ಪಿ ಶಿವರಾಮಯ್ಯ ತೋಟದ ಮನೆಯಲ್ಲಿ ಇರತೊಡಗಿದ. ಆದರೆ ಇದರಿಂದ ಕೃಷ್ಣನ ಸಮಸ್ಯೆ ಏನೂ ಸರಿಹೋಗಲಿಲ್ಲ. ಈಚೆಗೆ ಅವನು ಮನೆಗೆ ಬರುವುದನ್ನೇ ಕಡಿಮೆ ಮಾಡಿದ್ದ. ಎಲ್ಲಿರುತ್ತಿದ್ದನೋ... ಹೇಗಿರುತ್ತಿದ್ದನೋ... ತಾಯಿ ಕೇಳಿದರೆ ರೇಗುತ್ತಿದ್ದ... ಹೊರಗೆ ನಾನು ನನ್ನ ಸ್ನೇಹಿತರ ಜೊತೆ ಹಾಯಾಗಿ ತಿರುಗಾಡಿಕೊಂಡಿರುವುದನ್ನು ಕಂಡರೂ ನಿನಗೆ ಹೊಟ್ಟೆ ಉರೀನಾ? ನನಗೀಗ ಈ ಜೀವನವೇ ಅಭ್ಯಾಸವಾಗಿ ಹೋಗಿದೆ... ನನಗಿಷ್ಟ ಬಂದಾಗ ಬರ್ತೀನಿ, ಇಷ್ಟ ಬಂದಾಗ ಹೋಗ್ತೀನಿ. ನನಗೆ ಹೇಗೆ ಬೇಕೋ ಹಾಗೆ ಇರುವ ಹಕ್ಕು ನನಗಿದೆ. ಕೇಳುವ ಹಕ್ಕು ನಿನಗಿಲ್ಲ... ತಿಳೀತೆ? ತಾಯಿಯ ಅಳುವಾಗಲೀ, ಬೈಗುಳವಾಗಲೀ ಅವನ ಮೇಲೆ ಪರಿಣಾಮ ಬೀರಲಿಲ್ಲ.

ಒಮ್ಮೆ ಕೇಳಿದಷ್ಟು ಹಣ ಕೊಡಲಾಗುವುದಿಲ್ಲವೆಂದು ಶಾರದಾ ನಿರಾಕರಿಸಿದಾಗ, ''ನೀನೇನು ನಿಮ್ಮ ಅಪ್ಪನ ಮನೆಯಿಂದ ಹಣ ತಂದು ಕೊಡುತ್ತಿಲ್ಲ. ಇದು ನನ್ನ ಹಣ... ನನ್ನ ತಾತನ ಹಣ... ಹೆಚ್ಚಿಗೆ ಮಾತನಾಡಬೇಡ'' ಎಂದು ಕಣ್ಣು ಕೆಂಪು ಮಾಡಿಕೊಂಡು ಹೇಳಿದಾಗ, ತಾಯಿ ನಡುಗಿದ್ದಳು ಛೆ ಇವನೆಂಥಾ ಮಗ? ಮೆಜಾರಿಟಿಗೆ ಬರುವ ಮೊದಲೇ ಈ ದೌಲತ್ತು ದರ್ಪ... ಇನ್ನು ದಿನಗಳು ಸರಿದಂತೆ ಏನೇನು ಮಾಡುತ್ತಾನೋ ಎಂಬ ದಿಗಿಲು ಅವಳನ್ನು ಕಾಡತೊಡಗಿತು.

''ಹೇಗಾದರೂ ಸರಿ, ಮಗ ಸರಿದಾರಿಗೆ ಬರಲೇಬೇಕು. ಕೈ ಮೀರಿ

ಹೋದ ಮೇಲೆ ಏನೂ ಮಾಡಲಾಗುವುದಿಲ್ಲ'' ಎಂದುಕೊಂಡು ಗಂಡನೊಡನೆ ನುಡಿದಳು.

''ನಮ್ಮ ಕೃಷ್ಣನ ಗ್ರಹಗತಿ ಏನೇನೂ ಸರಿ ಇಲ್ಲ. ಅದಕ್ಕೇ ಹೀಗಾಗಿದಾನೆ. ಈಗಲೂ ಕೈ ಮೀರಿಲ್ಲ. ನವಗ್ರಹ ಶಾಂತಿ, ಜಪ, ಹೋಮ ಹವನ ಅದೇನೇನು ಮಾಡಬೇಕೋ ಮಾಡಿಸೋಣ... ಇರೋನೊಬ್ಬ ಮಗ, ಅವನಿಗೋಸ್ಕರ ಎಷ್ಟು ಖರ್ಚಾದರೂ ಸರಿ... ಎಲ್ಲಾ ಮಾಡಿಸಲೇಬೇಕು.''

''ನಿನಗೆಲ್ಲೋ ಭ್ರಮೆ. ಮಂತ್ರಕ್ಕೆ ಮಾವಿನ ಕಾಯಿ ಉದುರುಲ್ಲ. ಬೆಳೆಯುವ ಪೈರು ಮೊಳಕೆಯಲ್ಲೇ ಅಂತ, ಅವನ ಯೋಗ್ಯತೆ ಏನೂಂತ ನಿನಗಿನ್ನು ಗೊತ್ತಾಗಿಲ್ವಾ?''

''ಹಾಗಲ್ಲ. ನಮ್ಮ ಕೈಲಾಗೋದನ್ನ ನಾವು ಮಾಡೋಣ. ಮುಂದಿನದು ದೈವೇಚ್ಛೆ... ಅವನಿಗೋಸ್ಕರ ನಾವು ಏನೂ ಮಾಡಲಿಲ್ಲ ಅಂತ ಮುಂದೆ ಪರಿತಪಸುವಂತಾಗಬಾರದು.''

''ಸರಿ ನಿನ್ನಿಷ್ಟ. ಆ ಮೇಲೆ ನೀನು ನನ್ನನ್ನು ಹಂಗಿಸಬಾರದು. ಅಪ್ಪ ಅಮ್ಮ ಎಷ್ಟು ವ್ರತ ಕಥೆ, ಪೂಜೆ ಪುನಸ್ಕಾರ ನಡೆಸುತ್ತಿದ್ದರು... ಆದರೆ ಯಾಕೆ ಹಾಗಾಯ್ತು? ರಾಮು ಏಕೆ ದೇಶಾಂತರ ಹೋದ?...''

''ಅಲ್ಲಾ... ನನಗೊಂದು ಅನುಮಾನ... ನಿಮ್ಮ ಅತ್ತಿಗೆಯ ದುರ್ಮರಣವೇನಾದರೂ ಹೀಗೆಲ್ಲಾ ಆಡಿಸ್ತಿದೆಯೆ? ಹೊಸದಾಗಿ ಮದುವೆಯಾದವರು, ಯಾವ ಆಸೆ ಆಕಾಂಕ್ಷೆಗಳನ್ನು ಪೂರೈಸಿಕೊಳ್ಳದೇ ಅಕಾಲ ಮರಣಕ್ಕೆ ತುತ್ತಾದರೆ... ದೆವ್ವ ಆಗ್ತಾರೆ ಅಂತಾರೆ... ಹಾಗೇನಾದರೂ ಇರಬಹುದಾ?''

''ಛಿ. ಬಿಡ್ತು ಅನ್ನು... ಹಾಗೆಲ್ಲಾ ನೀನ್ನು, ಕನಸ್ನಲ್ಲೂ ಯೋಚಿಸಬೇಡ. ಇಂಥಾ ಮಾತನ್ನು ಅಪ್ಪನ ಎದುರಿಗೆ ಆಡಬೇಡ. ಹೆಂಡತಿ, ಮಗ, ಸೊಸೆಯನ್ನು ಕಳೆದುಕೊಂಡ ಅಪ್ಪ ನೊಂದ್ಕೋತಾರೆ ಅಷ್ಟೇ.''

''ನನಗೇನು ಅಷ್ಟೂ ತಿಳಿಯುಲ್ವೆ? ಇದ್ದಕ್ಕಿದ್ದ ಹಾಗೆ ಇವತ್ತು ಆ ಅನುಮಾನ ಬಂತು, ಹೇಳಿದೆ. ದೆವ್ವ ಭೂತ ಎಲ್ಲಾ ಸುಳ್ಳು ಅಂತೀರಾ?''

''ಅಲ್ಲದೇ ಮತ್ತೆ? ಅದೆಲ್ಲ ಮನಸ್ಸಿನ ಭ್ರಮೆ... ಧೈರ್ಯವಿಲ್ಲದವರು ಅದನ್ನು ಕಲ್ಪಿಸಿಕೊಂಡು ಹೆದರ್ತಾರೆ.''

''ಆದರೂ...''

''ನಿನಗೆಲ್ಲೋ ಸಂಶಯದ ಭೂತ ಹೊಕ್ಕಿದೆ. ಪೂಜೆ, ಶಾಂತಿ ಅದೂ ಇದು ಅಂತ ಖರ್ಚಿಗೆ ದಾರಿ ನೋಡ್ತಿದೀಯ. ನಿನ್ನ ಮನಸ್ಸಮಾಧಾನಕ್ಕೆ ಹೇಳ್ತಿದೀನಿ. ನಿನಗೇನೇನು ಅನ್ನಿಸುತ್ತೋ ಅದನ್ನೆಲ್ಲಾ ಮಾಡಿಸು. ಆಮೇಲೂ ನಿನ್ನ ಮಗ ನಿನ್ನ ಬದಲಾಗದಿದ್ದರೆ, ನನಗೆ ಮಾತ್ರ ಹೇಳಬೇಡ ತಿಳೀತೇ?''

''ಯಾಕೆ ಹೀಗಾಡ್ತೀರಿ? ಅವನು ನಿಮ್ಮ ಮಗನೂ ಅಲ್ವಾ! ನೀವೇ ಅವನ ಕೈ ಬಿಟ್ಟರೆ ಅವನನ್ನು ಸರಿದಾರಿಗೆ ತರೋರು ಯಾರು?''

''ಈಗ ನನ್ನ ಮಗ ಅಂತ ಹೇಳ್ತಿದೀಯಲ್ಲ. ಎಂದಾದ್ರೂ ಅವನು ಬಂದು ನನ್ನನ್ನು ಹಣ ಕೇಳಿದಾನಾ? ಅವನಿಗೆ ಬುದ್ಧಿ ಮಾತು ಹೇಳುಕ್ಕೆ ಅವಕಾಶ ಕೊಡಲಿಲ್ಲ... ನೀನು ಮಗ ಅಂತ ಮುದ್ದು ಮಾಡಿ ಅವನನ್ನು ಹಾಳು ಮಾಡಿದವಳು ನೀನು... ಅನುಭವಿಸು.''

''ಹೀಗೆಂದ ಮಾತ್ರಕ್ಕೆ ಎಲ್ಲಾ ಮುಗಿದು ಹೋಗುತ್ತಾ! ನಾನು ಇವತ್ತೇ ಪಂಡಿತರ ಮನೆಗೆ ಹೋಗ್ತೀನಿ. ಅವನ ಜಾತಕ ತೋರಿಸಿ, ಅದೇನೇನು ದೋಷಗಳಿವೆಯೋ ಎಲ್ಲಾ ಪರಿಹಾರವಾಗುವಂತೆ, ಉಪಾಯ ಕೇಳ್ತೀನಿ. ಪೂಜೆ ಪುನಸ್ಕಾರ, ಜಪತಪ, ಹವನ ಹೋಮ, ಮಾಟ ಮಂತ್ರ ಯಾವುದೇ ಆದರೂ ಸರಿ. ನಾನು ಮಾಡಿಸ್ತೀನಿ. ದೈವ ಶಕ್ತಿಯ ಮುಂದೆ ಇನ್ಯಾವ ಆಟ ನಡೆಯುತ್ತೆ?''

ನಾರಾಯಣಮೂರ್ತಿ, ವಿಷಾದದಿಂದ ನಕ್ಕ. ''ಹೌದು ಶಾರದಾ ದೈವಶಕ್ತಿಯ ಮುಂದೆ ಬೇರೆ ಯಾವ ಆಟವೂ ನಡೆಯಲ್ಲ... ಇಲ್ಲದೇ ಇದ್ದಿದ್ದರೆ, ಅಪ್ಪ ಈ ವಯಸ್ನಲ್ಲಿ ಕೊರಗ್ತಿದ್ರಾ?''

''ಅದು ಅವರು ಮಾಡಿದ ಕರ್ಮ... ಅದರಿಂದ ಈಗ ನಾನೂ ಅನುಭವಿಸ್ತಿದೀನಲ್ಲ'' ಎಂದು ಗೊಣಗುತ್ತಾ ಅಲ್ಲಿಂದ ಎದ್ದು ಹೋದಳು.

''ಈ ಹೆಂಗಸಿಗೆ ತಿಳುವಳಿಕೆ ಸಾಲದು'' ಎಂದು ತನ್ನಲ್ಲೇ ನುಡಿದುಕೊಂಡು, ಎದ್ದು ತೋಟದ ಕಡೆ ಹೊರಟ. ತನ್ನ ಧ್ಯಾನದಲ್ಲೇ ತಾನು

ಇದ್ದ ಶಾದದ, ಅವನು ಹೊರಗೆ ಹೋದುದನ್ನು ಗಮನಿಸದೇ ಪಂಡಿತರ ಮನೆಗೆ ಹೊರಡಲು ಸಿದ್ಧಳಾದಳು.

ಪಂಡಿತರ ಕಾಲು ಮುಟ್ಟಿ ನಮಸ್ಕರಿಸಿ, ತನ್ನ ಕಷ್ಟವನ್ನು ತೋಡಿಕೊಂಡಳು. ''ಕೈಗೆ ಬಂದ ಮಗ, ಮನೆ ಸೇರದೇ ಅಪಾಪೋಲಿಯಾಗಿ ಅಲೆಯುತ್ತಿದ್ದಾನೆ. ಅವನು ಸರಿಯಾಗುವ ಮಾರ್ಗ ಯಾವುದು ಅಂತ ತಿಳಿಸಿ ಅದಕ್ಕೆ ಎಷ್ಟು ಖರ್ಚಾದರೂ ಪರವಾಗಿಲ್ಲ...''

ಪಂಡಿತರು ತೀಕ್ಷ್ಣವಾಗಿ ಅವಳ ಕಡೆ ನೋಡಿ, ಅವಳು ಕೊಟ್ಟ ಕೃಷ್ಣನ ಜಾತಕದ ಕಡೆ ಗಮನ ಹರಿಸಿದರು. ಅವರು ಏನು ಹೇಳಿಬಿಡುತ್ತಾರೋ ಎಂಬ ಉದ್ವೇಗದಿಂದ ಚಡಪಡಿಸುತ್ತಿದ್ದವಳನ್ನೇ ಪಂಡಿತರು ಗಮನಿಸಿದರು.

''ಜಾತಕವನ್ನು ನಿಧಾನವಾಗಿ ಪರಿಶೀಲಿಸಿ, ಗ್ರಹದೋಷ ಎಷ್ಟು? ಪರಿಹಾರ ಏನು ಅಂತ ಎಲ್ಲಾ ವಿವರವಾಗಿ ಹೇಳ್ತೀನಿ. ಉದ್ವೇಗಗೊಂಡರೆ ಏನೂ ಉಪಯೋಗವಿಲ್ಲ. ಅತಂಕ ಹೆಚ್ಚುತ್ತೆ ಅಷ್ಟೇ'' ಅವರು ಮುಗುಳ್ನಗುತ್ತಾ ನುಡಿದಾಗ ಅವಳು ಮಂಕಾದಳು.

''ಹಾಗಲ್ಲ ಪಂಡಿತರೇ, ಈಗಾಗಲೇ ಸಾಕಷ್ಟು ಸಮಯ ವ್ಯರ್ಥವಾಗಿದೆ. ಆದಷ್ಟೂ, ಬೇಗ ಬೇಗ ಎಲ್ಲಾ ಆದರೆ ಸಮಾಧಾನ.''

''ಹೌದೂ ತಾಯೀ, ನೀವು ಹೇಳೋದು ಸರಿ. ಆದರೆ ಎಲ್ಲಾದಕ್ಕೂ ಕಾಲ, ಯೋಗ ಕೂಡಿ ಬರಬೇಕಲ್ಲವೆ? ದುಡುಕಿದರೆ ಏನೂ ಪ್ರಯೋಜನವಿಲ್ಲ. ನಾಳೆ ಇಷ್ಟು ಹೊತ್ತಿಗೆ ಬನ್ನಿ... ನಾನು ಕೂಲಂಕಷವಾಗಿ ನೋಡಿ, ಗುರುತು ಮಾಡಿಟ್ಟಿರುತ್ತೀನಿ'' ಎನ್ನುತ್ತಾ ಅವಳ ಕೈಗೆ ಕುಂಕುಮದ ಪೊಟ್ಟಣವನ್ನು ಕೊಟ್ಟು ಆಶೀರ್ವಾದ ಮಾಡಿದರು. ಶಾರಾದಾಳಿಗೆ ಸಮಾಧಾನವಾಗಿರಲಿಲ್ಲ. ಆದರೆ ಏನೂ ಹೇಳುವಂತಿಲ್ಲ. ಭಕ್ತಿಯಿಂದ ಕುಂಕುಮವನ್ನು ಹಣೆಗಿಟ್ಟುಕೊಂಡು ಕೈ ಮುಗಿದು ಅಲ್ಲಿಂದ ಹೊರಬಿದ್ದಳು.

ಮರೆಯದೇ, ಮಾರನೇ ದಿನ ಸಮಯಕ್ಕೆ ಸರಿಯಾಗಿ ಪಂಡಿತರ ಮನೆಗೆ ಹೊರಟಳು. ಪಂಡಿತರು ಅವಳನ್ನು ನಗುಮೊಖದಿಂದ ಬರಮಾಡಿಕೊಂಡರು. ನಿಧಾನವಾಗಿ ಮಾತನ್ನು ಪ್ರಾರಂಭ ಮಾಡಿದರು.

''ಈ ಜಾತಕದಲ್ಲಿ ಸಾಕಷ್ಟು ಗ್ರಹ ದೋಷಗಳಿವೆ... ಗ್ರಹಗಳು ತಮ್ಮ

ತಮ್ಮ ಬಲಾಬಲವನ್ನು ಪ್ರದರ್ಶಿಸದೇ ಬಿಡುವುದಿಲ್ಲ. ಅದರ ಪ್ರಭಾವ ಈಗಾಗಲೇ ಸಾಕಷ್ಟು ಆಗಿ ಹೋಗಿದೆ. ಈಗ ಅದರ ಬಗ್ಗೆ ತಲೆ ಕೆಡಿಸಿಕೊಳ್ಳುವ ಪ್ರಮೇಯವಿಲ್ಲ...'' ಶಾರದಾ ಕೆಟ್ಟು ಮೋರೆ ಹಾಕಿಕೊಂಡುದುದನ್ನು ಕಂಡರು.

''ಈಗಲೂ ಸಮಯ ಮೀರಿಲ್ಲ. ನಾನು ಮಂತ್ರಿಸಿದ ಒಂದು ಯಂತ್ರ ಕೊಡ್ತೀನಿ. ಅದನ್ನು ನಿಮ್ಮ ಮಗನ ಕೈಗೆ ಕಟ್ಟಿ... ಒಂದು ಸ್ತೋತ್ರ ಬರೆದು ಕೊಡ್ತೀನಿ. ಅದನ್ನು ದಿನಕ್ಕೆ ಮೂರು ಬಾರಿ ನೀವು ಪಠಿಸಿದರೆ ಸಾಕು. ನೋಡ್ತಿರಿ. ಕೆಲವೇ ವಾರಗಳಲ್ಲಿ ನಿಮ್ಮ ಮಗನಲ್ಲಿ ಸಾಕಷ್ಟು ಬದಲಾವಣೆಗಳು ಕಂಡು ಬರುತ್ತದೆ. ಆ ನಂತರ ನಿಮ್ಮ ಮಗನಿಗೆ ಒಳ್ಳೆ ಸುಶೀಲ, ಸುಸಂಸ್ಕೃತಿಯ ಹೆಣ್ಣನ್ನು ನೋಡಿ ವಿವಾಹ ಮಾಡಿ... ನಿಮ್ಮ ಮಗ ಖಂಡಿತಾ ಸರಿ ಹೋಗ್ತಾನೆ...''

''ಅವನು ಮನೆಗೇ ಬರುಲ್ವಲ್ಲ ಪಂಡಿತರೇ... ಅವನ ಕೈಗೆ ನಾನು ಹೇಗೆ ಈ ಯಂತ್ರವನ್ನು ಕಟ್ಟಲಿ! ಆಮೇಲೆ... ವಿದ್ಯೆ ಬುದ್ಧಿ ಇಲ್ಲದ, ಮನೆಯನ್ನೇ ಸೇರದ ಇವನಿಗೆ ಯಾರು ಹೆಣ್ಣು ಕೊಡ್ತಾರೆ ನೀವೇ ಹೇಳಿ...''

''ಹಾಗೆ ಹೇಳಬೇಡಿ ತಾಯಿ. ನಿಮ್ಮ ಮಗನಿಗೆ ವಿವಾಹದ ಯೋಗವಿದೆ. ಖಂಡಿತಾ ಮದುವೆಯಾಗುತ್ತದೆ. ಮನೆಗೆ ಬರುವ ಹುಡುಗಿಯ ಕಾಲ್ಗುಣದಿಂದ ಎಲ್ಲಾ ಸರಿ ಹೋಗುತ್ತದೆ. ಆದರೆ ಸ್ವಲ್ಪ ಕಾಲಾವಕಾಶ ಬೇಕು. ಅದಕ್ಕೇ ಹೇಳಿದ್ದು, ಪೂಜೆ ಪುನಸ್ಕಾರ, ಆಚಾರ ವಿಚಾರ, ಧರ್ಮ ಕರ್ಮ ತಿಳಿದಿರುವಂಥೋರ ಮನೆಯ ಹೆಣ್ಣನ್ನು ತಂದುಕೊಳ್ಳಿ. ಹೆಣ್ಣು ಶಕ್ತಿ ಸ್ವರೂಪಳು. ಅವಳು ನಿಮ್ಮ ಮಗನನ್ನು ಉದ್ಧಾರ ಮಾಡುತ್ತಾಳೆಂಬ ನಂಬಿಕೆ ನಿಮ್ಮಗಳಿಗೆ ಇರಬೇಕು ಅಷ್ಟೇ. ಮೊದಲು ಇಷ್ಟು ಮಾಡಿ ಸಾಕು.''

''ಹಾಗಾದರೆ, ಪೂಜೆ, ಶಾಂತಿ ಹೋಮ ಯಾವುದೂ ಬೇಡ ಅಂತೀರಾ!''

''ಮಾಡಿ ಸೋರಂತೆ. ಮಗ ಮನೆಗೆ ಬಂದು ಹೋಗಲು ಪ್ರಾರಂಭಿಸಲಿ. ಅವನೇ ಮನೆಯಲ್ಲಿಲ್ಲದೇ ಏನು ಮಾಡಿದರೆ ಏನು ಪ್ರಯೋಜನ?''

ಶಾರದಾ ಅವರ ಮಾತಿಗೆ ತಲೆ ಆಡಿಸಲೇಬೇಕಾಯ್ತು. ದಕ್ಷಿಣೆ ಒಪ್ಪಿಸಿ, ನಮಸ್ಕರಿಸಿ ಅಲ್ಲಿಂದ ಹೊರಟಳು. ತಾಯಿತವನ್ನು ದೇವರ ಮನೆಯಲ್ಲಿ ಇಟ್ಟು, ''ದೇವರೇ, ನನ್ನಿಂದಾಗುವುದನ್ನು ನಾನು ಮಾಡ್ತಿದೀನಿ... ಇನ್ನು, ನನ್ನ ಮಗನಿಗೆ ಸದ್ಬುದ್ಧಿಯನ್ನು ನೀನೇ ಕೊಡಬೇಕು'' ಎಂದು ಪ್ರಾರ್ಥಿಸಿದಳು.

ಕೆಲವಾರು ದಿನಗಳು ಕಳೆದುಹೋದವು. ನಿರಾಸೆಯಿಂದ ಕುಗ್ಗಿ ಹೋಗಿದ್ದರು. ''ದೇವರೇ ನೀನೂ ನನ್ನ ಕೈ ಬಿಟ್ಟೆಯಾ? ಒಂದು ಸಾರಿ ಮಗ ಮನೆಗೆ ಬರಲಿ... ಇಲ್ಲದಿದ್ದರೆ, ನನಗೆ ನಿನ್ನ ಮೇಲಿನ ನಂಬಿಕೆಯೇ ಹೊರಟು ಹೋಗುತ್ತದೆ...'' ಅಳುತ್ತಿದ್ದವಳನ್ನು ನಾರಾಯಣಮೂರ್ತಿ ಸಮಾಧಾನಗೊಳಿಸಿದ.

''ನಾನು ಅವತ್ತೇ ಹೇಳಿದೆ. ನಿನ್ನ ಮಗ ಸರಿ ಹೋದರೆ... ಅದು ಒನಕೆ ಚಿಗುರಿದ ಹಾಗೆ ಅಂತ... ನನ್ನ ಮಾತನ್ನೆಲ್ಲಿ ಕೇಳ್ತೀಯಾ! ಅವನಿಗಾಗಿ ಹಗಲೂ ರಾತ್ರಿ ಪರಿತಪಿಸಿ, ಅನಾರೋಗ್ಯ ತಂದುಕೊಳ್ತಿಯ ಅಷ್ಟೇ.''

''ಹಾಗಾಂತ ನಾವು, ತಂದೆ ತಾಯಿಗಳೇ ಸುಮ್ಮನಾಗಿ ಬಿಟ್ಟರೆ...? ಮುಂದೆ ಅವನ ಗತಿಯೇನು? ನಾಳೆ ನಮಗೆ ದಿಕ್ಕ್ಯಾರು?''

''ಅದನ್ನೆಲ್ಲ ಮರೆತು ಬಿಡು ಶಾರದಾ... ಈ ಪ್ರಪಂಚದಲ್ಲಿ ಯಾರಿಗೆ ಯಾರೂ ದಿಕ್ಕಲ್ಲ. ಮನೆಯಿಂದ ಹೊರ ಹೊರಗೇ ಇರೋನನ್ನ ದಂಡಿಸಿ ಬುದ್ಧಿ ಹೇಳುಕ್ಕಂತೂ ಆಗುಲ್ಲ. ಅವನು ಮನೆಗೆ ಬರುವುದೇ ಬೇಡ ಅಂತ ನನಗನ್ನಿಸುತ್ತೆ ಜನ ಆಡಿಕೊಂಡು ನಗುವಂತೆ ಮಾಡಿಬಿಟ್ಟ.''

''ಥೂ ಬಿಡ್ತು ಅನ್ನಿ... ನಮ್ಮ ಮಗು, ಮನೆಗೇ ಬರದಿರುವಂತಹ ಅಯೋಗ್ಯನೇನಲ್ಲ. ಪಂಡಿತರು ತಾಯಿತ ಕೊಟ್ಟಿದ್ದಾರೆ. ಅದರ ಪ್ರಭಾವದಿಂದ ಅವನು ಎಲ್ಲೇ ಇದ್ದರೂ ಖಂಡಿತಾ ಬರ್ತಾನೆ.''

''ಅವನೇನು ತಲೆ ಮರೆಸಿಕೊಂಡು ಹೋಗಿಲ್ಲ. ಬರ್ತಾನೇ ಇರ್ತಾನಲ್ಲ ತನಗೆ ಬೇಕಾದಾಗ, ನೀನು ಅವನು ಕೇಳಿದಷ್ಟು ಹಣ ಕೊಡ್ತೀಯ... ಅದು ಮುಗಿಯುವವರೆಗೂ ಅಲ್ಲಿ ಇಲ್ಲಿ ಬಿದ್ದಿರ್ತಾನೆ. ಆಮೇಲೆ ನಾಯಿ ಕುನ್ನಿಯಂತೆ ಬರ್ತಾನೆ.''

''ಎಂಥಾ ಕಟುಕರು ನೀವು. ಸ್ವಂತ ಮಗನ್ನ ಕಂಡರೆ ಅಸಡ್ಡೆ. ಅದೇ... ಕೂಲಿಯವರಾಗಿ ಬಂದು ಸೇರಿಕೊಂಡೋರ ಮಕ್ಕಳನ್ನ ಕಂಡರೆ ಎಷ್ಟು ಮುಚ್ಚಟೆ.... ಕಲ್ಯಾಣಿ ಹಾಗೆ, ಕೋಮಲ ಹೀಗೆ... ಅಹಹಾ... ಅದೇ ಕೃಷ್ಣ ನಾಯಿ ನಿಮಗೆ...''

''ಆ ಮಕ್ಕಳು ಹಾಗಿದಾರೆ ಅದಕ್ಕೇ ಹೇಳ್ತೀನಿ. ಗುಣಕ್ಕೆ ಮತ್ಸರವೇ

ಅಂತ... ನಿನ್ನ ಮಗನೂ ಹಾಗೇ ಇದ್ದಿದ್ದರೆ. ನಾನೇಕೆ ಈ ಮಾತನ್ನು ಆಡ್ತಿದ್ದೆ?

''ಮನೆಗೆ ಮಾರಿ ಪರರಿಗೆ ಉಪಕಾರಿ ಅಂತ... ನಾಳೆ ಈ ಆ ಸ್ತೀನೆಲ್ಲಾ ಅವರಿಗೇ ಬರೆದುಕೊಟ್ಟರೂ ಕೊಟ್ಟರೇ ನಿಮ್ಮಪ್ಪ...''

''ಕೊಟ್ಟರೆ ಬೇಡ ಅನ್ನುವುದಿಲ್ಲ ನಾನು... ನಮ್ಮ ಮಗನಿಗೆ ಆ ಯೋಗ್ಯತೆ ಇಲ್ಲದಿದ್ದ ಮೇಲೆ, ನಮಗ್ಯಾಕೆ ಆಸ್ತಿ ಪಾಸ್ತಿ! ಆ ಹುಡುಗೀರು ವೃದ್ಧಾಪ್ಯದಲ್ಲಿ ನಮ್ಮನ್ನು ಆದರದಿಂದ ನೋಡಿಕೊಳ್ತಾರೆ... ಆ ವಿಶ್ವಾಸ ನನಗಿದೆ.''

''ಹೀಗೇ ಆಡಿ ಆಡಿ ನನ್ನ ಮಗನ್ನ ಈ ಮನೆಯಿಂದ ದೂರಮಾಡಿದಿರಿ ನೀವುಗಳು. ನನ್ನನ್ನು ದೂರ ಮಾಡಿಕೊಳ್ತೀರಿ ಅಷ್ಟೇ.''

''ನೀನೆಂದು ಹತ್ತಿರವಾಗಿದ್ದೆ ನನಗೆ! ಹಾಗಿದ್ದಿದ್ದರೆ, ನಿನ್ನ ಮಗ ಈ ಮನೆಬಿಟ್ಟು ಹೋಗುತ್ತಿರಲಿಲ್ಲ.''

''ನಿನ್ನ ಮಗ, ನಿನ್ನ ಮಗ ಅಂತ ಯಾಕೆ ಹಾಗಾಡ್ತೀರಿ! ನಿಮ್ಮ ಮನೆ ಜಾಯಮಾನವೇ ಅಂಥದು. ನಿಮ್ಮ ಅಣ್ಣ ಮನೆ ಬಿಟ್ಟು ಹೋಗಲಿಲ್ಲವೆ! ನಿಮ್ಮ ತಂದೆ ತಾಯಿಯ ಹೊಟ್ಟೆ ಉರಿಸಲಿಲ್ಲವೆ?''

''ಸಾಕು ಮಾಡು ಶಾರಾದ. ನಮ್ಮ ಅಣ್ಣ ದೇವರಂತಹ ಮನುಷ್ಯ. ಅವನಿಗಾದದ್ದು ಘೋರ ಅನ್ಯಾಯ. ಮನಃಶಾಂತಿ ಹುಡಿಕ್ಕೊಂಡು ದೇಶಾಂತರ ಹೋದ. ಹೀಗೆ ವಂಶಕ್ಕೇ ಕೆಟ್ಟ ಹೆಸರು ತರುವಂತಹ ಕೆಲಸ ಮಾಡಲಿಲ್ಲ... ಇನ್ನು ಮುಂದೆ ಅವನ ಹಸರನ್ನು ನನ್ನ ಮುಂದೆ ಎತ್ತಬೇಡ. ನೀನುಂಟು... ನಿನ್ನ ಮಗನುಂಟು... ನಾನು ಅವನ ತಂದೆ ಎನ್ನೋ ಒಂದು ಗೌರವದಿಂದ, ಅವನು ಅನ್ನಕ್ಕಾಗಿ ಪರದಾಡದಂತೆ ವ್ಯವಸ್ಥೆ ಮಾಡ್ತೀನಿ.'' ಅವನು ಮುಸುಕೆಳೆದು ಗೋಡೆ ಕಡೆಗೆ ತಿರುಗಿ ಮಲಗಿದಾಗ, ಶಾರದಾ ಮುಸಿ ಮುಸಿ ಅತ್ತಳು. ''ನೀನ್ಯಾಕೆ ಮಗನಾಗಿ ಹುಟ್ಟಿದ್ಯೋ ಈ ಮನೇಲಿ.. ಆನೆ ಹೊಟ್ಟೇಲಿ ಲದ್ದಿ ಬಿದ್ದ ಹಾಗೆ... ಒಳ್ಳೇ ಗುಣ ಒಂದು ಅಂಶವೂ ನಿನ್ನಲಿಲ್ಲವಲ್ಲೋ...'' ಮನದಲ್ಲೇ ಮಗನನ್ನು ಬೈದುಕೊಂಡಳು.

ಹತ್ತಾರು ದಿನಗಳು ಕಳೆದು ಹೋದವು. ಒಂದು ದಿನ ಇದ್ದಕ್ಕಿದ್ದಂತೆ, ಧೂಮಕೇತುವಿನಂತೆ ಕೃಷ್ಣ ಬಂದ. ಮಗನ ಮುಖದಲ್ಲಿ ಏನೋ ಮಹತ್ತರವಾದ ಬದಲಾವಣೆ ಕಂಡುಬರುತ್ತಿದೆ ಎಂದು ಭಾವಿಸಿದಳು. ಇದೆಲ್ಲಾ ಆ ತಾಯಿತದ

ಪ್ರಭಾವ ಎಂದೇ ಅಂದುಕೊಂಡಳು.

ತಂದೆ ಹೊರಗೆ ತೋಟಕ್ಕೆ ಹೋಗುವುದನ್ನೇ ಕಾದಿದ್ದ ಕೃಷ್ಣ ತಾಯಿಯ ಬಳಿಗೆಬಂದಳು. ''ನನಗೆ ಅರ್ಜೆಂಟಾಗಿ ಒಂದು ಸಾವಿರ ರೂಪಾಯಿ ಬೇಕು'' ಅವನು ಗಡುಸಾಗಿ ನುಡಿದಾಗ ಅವಳು ಬೆದರಿದಳು.

''ಒಂದು ಸಾವಿರ? ನಾನೆಲ್ಲಿಂದ ತರಲೋ? ನನ್ನ ಹತ್ತಿರ ಎಲ್ಲಿದೆ?''

''ಅದೆಲ್ಲ ನಂಗೆ ಗೊತ್ತಿಲ್ಲ. ನಾನು ಕಷ್ಟದಲ್ಲಿ ಸಿಕ್ಕಿ ಬಿದ್ದಿದೀನಿ. ನಿನಗೆ ಅಷ್ಟೂ ಅರ್ಥವಾಗುಲ್ವಾ!''

''ಅಂಥಾ ಕಷ್ಟ ನಿನಗೇನು ಬಂದಿದೆಯೊ? ಯಾರಿಗೆ ಕೊಡಬೇಕು?''

''ಯಾರಿಗೇ ಕೊಡಬೇಕು... ಕೊಡದಿದ್ದರೆ ನನ್ನನ್ನ ಕೊಂದು ಹಾಕಿ ಬಿಡ್ತಾರೆ... ನಿನಗೆ ಅದೇ ಬೇಕಿದ್ದರೆ ಹೇಳಿಬಿಡು. ನಾನು ಈಗಲೇ ಈ ಮನೆಯಿಂದ ಹೊರಟು ಹೋಗ್ತೀನಿ. ಮತ್ತೆ ಈ ಮನೆ ಕಡೆ ತಲೆ ಹಾಕುಲ್ಲ.''

''ಯಾಕೆ ಇಂಥಾ ಮಾತುಗಳನ್ನಾಡಿ ಹೊಟ್ಟೆ ಉರಿಸ್ತೀಯೋ?... ನಿನಗೇನು ಅಂತ ಖರ್ಚು ಅಂತ ಕೇಳಿದೆ... ವಿದ್ಯಾವಂತನಾಗಲಿಲ್ಲ... ಹೋಗಲಿ, ತೋಟದ ಕೆಲಸಾನಾದ್ರೂ ನೋಡ್ಕೋಬಾರದಾ? ಆಗ ನಿನ್ನ ಕೈಗೆ ಹಣವೂ ಸಿಗುತ್ತೆ... ಈ ದುರ್ನಡತೆಯೂ ಹೋಗುತ್ತೆ!''

''ಈ ದುರ್ನಡತೆಗೆ ನೀವುಗಳೇ ಕಾರಣ... ನಾನ್ಯಾಕೆ ನೋಡ್ಕೋಬೇಕು ತೋಟದ ಕೆಲಸಾನಾ! ಇದಾರಲ್ಲ ಆ ಪರದೇಶಿಗಳು... ಅವರು ಬಂದು ಸೇರಿಕೊಂಡಿರುವುದೇ ಈ ಕೆಲಸಕ್ಕೆ ತಾನೇ?''

''ಹಾಗಲ್ಲ ಕಣೋ... ಅವರುಗಳು ಎಷ್ಟಾಗಲೀ ಹೊರಗಿನವರು. ಇದು ನಮ್ಮ ಆಸ್ತಿ... ನಮಗೆ ಆಸಕ್ತಿ ಇರಬೇಡವೇ... ಈಗ ನಿಮ್ಮಪ್ಪ ತೋಟದ ಕೆಲಸ ಮಾಡುಲ್ವೆ!''

ನಿನ್ನ ಗಂಡನಿಗೆ ಬೇಕು... ನನಗೆ ಅದೆಲ್ಲ ಬೇಕಿಲ್ಲ. ಇಂಥದ್ದನ್ನೆಲ್ಲಾ ಹೇಳಿ ನನ್ನ ತಲೆ ಕೆಡಿಸಲೇ ಬೇಡ. ಈಗೇನು? ಹಣ ಕೊಡ್ತೀಯೋ ಇಲ್ಲವೋ...

''ಹೀಗೆ ದಿಢೀರನೇ ಕೇಳಿದರೆ ನಾನೆಲ್ಲಿಂದ ತರಲಿ? ಮಧ್ಯಾಹ್ನ ಊಟಕ್ಕೆ ನಿಮ್ಮಪ್ಪ ಬಂದಾಗ ಕೇಳಿ, ವ್ಯವಸ್ಥೆ ಮಾಡಿ ತೆಗೆಸಿಟ್ಟಿರುತ್ತೀನಿ.''

''ಸರಿ ಹಾಗೇ ಮಾಡು... ನನ್ನನ್ನು ಕೇಳಿಕೊಂಡು ಯಾರಾದ್ರೂ ಬಂದರೆ ನಾನು ಮನೆಗೇ ಬಂದಿಲ್ಲ ಅಂತ ಹೇಳು... ರಾತ್ರಿ ಮತ್ತೆ ಮನೆಗೆ ಬರ್ತೀನಿ'' ಹೊರಟವನನ್ನು ಶಾರದಾ ತಡೆದಳು.

''ಎಷ್ಟೋ ದಿನಗಳ ಮೇಲೆ ಮನೆಗೆ ಬಂದಿದೀಯ. ಚೆನ್ನಾಗಿ ಸ್ನಾನ ಮಾಡಿ ಬಾ... ಒಳ್ಳೆಯ ನಿನಗೆ ಬೇಕಾದ, ರುಚಿಯಾದ ಅಡಿಗೆ ಮಾಡಿ ಬಡಿಸ್ತೀನಿ... ಒಂದು ದಿನವಾದ್ರೂ ನಿಶ್ಚಿಂತೆಯಿಂದ ಊಟ ಮಾಡಿಲ್ಲ. ಸದಾ ಬಿದೀಲೇ ಇರ್ತಿದ್ದೆ...''

''ಅದಕ್ಕೆ ಕಾರಣ ಆ ಕಲ್ಯಾಣಿಯರು... ಒಬ್ಬಳು ನಾನು ಹುಟ್ಟೋಕೆ ಮುಂಚೆಯೇ ನನಗೆ ನೆಮ್ಮದಿ ಸಿಗದಂತೆ ಮಾಡಿದಳು. ಇನ್ನೊಬ್ಬಳು ನಾನು ಹುಟ್ಟಿದ ಮೇಲೆ ನಿಶ್ಚಿಂತೆಯಿಂದ ಇರದಂತೆ ಮಾಡಿದಳು. ನೋಡ್ತಿರು... ಒಂದಲ್ಲ ಒಂದು ದಿನ ನಾನು ಅವರಿಬ್ಬರಿಗೆ ಹೇಗೆ ಬುದ್ಧಿ ಕಲಿಸ್ತೀನಿ ಅಂತ. ತಾತನ ಆಸ್ತಿ ನನ್ನ ಕೈಗೆ ಸೇರಲಿ... ಒಬ್ಬೊಬ್ಬರನ್ನು ಹೇಗೆ ಆಟ ಆಡಿಸ್ತೀನಿ...''

''ನೀನು ಹೀಗೆ ಆಡ್ತಾ ಇದ್ದರೆ, ನಿನ್ನ ತಾತ ನಿನಗೆ ಯಾವ ಆಸ್ತೀನೂ ಕೊಡುಲ್ಲ.''

''ಯಾಕೆ ಕೊಡುಲ್ಲ... ಅದು ಪಿತ್ರಾರ್ಜಿತ... ಅದರ ಹಕ್ಕು ಸಂಪೂರ್ಣ ನನಗೇ... ಅದನ್ನು ಹೇಗೆ ವಸೂಲು ಮಾಡಬೇಕು ಅನ್ನೋ ಉಪಾಯ ಸಹ ಗೊತ್ತಿದೆ ನನಗೆ...''

''ಇನ್ನಾದರೂ ಈ ದುರ್ಬುದ್ಧಿ ಬಿಡೋ... ನೀನು ಮದುವೆಯಾಗಿ ನಿನ್ನ ಸಂಸಾರದೊಡನೆ ಈ ಮನೇಲಿ ಬಾಳಬೇಕಾದವನು... ಎಲ್ಲಾ ಆಸ್ತಿ ಪಾಸ್ತಿಯೂ ನಿನ್ನದೇ ತಾನೇ... ಹೋಗಲಿ, ತಾತ ಹೇಗಿದಾರ, ಅಂತನಾದ್ರೂ ಗೊತ್ತಾ ನಿನಗೆ?

''ಅವರು ಹೇಗಿದ್ದರೆ ನನಗೇನು? ಅದನ್ನೆಲ್ಲಾ ವಿಚಾರಿಸಿಕೊಳ್ಳೋಕೆ ಅವರ ಮಗ ಇಲ್ವಾ? ನನಗೇನು ಬೇರೆ ಕೆಲಸ ಇಲ್ವಾ?''

''ನೀನು ಏನು ಕೆಲಸ ಮಾಡ್ತಿದಿಯೋ ನಾನು ಕಾಣೆ... ವೆಚ್ಚ ಮಾಡೋದನ್ನು ಕಲಿತಿದೀಯ. ಈ ವಯಸ್ಸಿಗೇ ಹೀಗಾದ್ರೆ ಮುಂದೆ ಹೇಗೆ ಅಂತ? ಈಗೇನೋ ಎಲ್ಲಾ ನಡೆಯುತ್ತೆ! ಮುಂದೆ ನಿನ್ನದೇ ಒಂದು ಸಂಸಾರ ಅಂತ ಆದರೆ ಅದನ್ನು ಹೇಗೆ ಸಂಭಾಳಿಸುತ್ತೀಯೋ...?''

''ಅದೆಲ್ಲಾ ನಿನಗೇಕೆ? ಈಗ ನಿನ್ನ ಮಾತು ಕೇಳ್ತಾ ಕೂತಿದ್ರೆ ಅವರುಗಳು ಹುಡಿಕ್ಕೊಂಡು ಬಂದೇ ಬಿಡ್ತಾರೆ... ನಾನು ರಾತ್ರಿಗೆ ಮತ್ತೆ ಬರ್ತೀನಿ. ಅಷ್ಟು ಹೊತ್ತಿಗೆ ಹಣ ಹೊಂದಿಸಿಟ್ಟಿರು.'' ಎಂದು ಆಜ್ಞೆ ಮಾಡಿ ಹೊರಟೇ ಹೋದ. ಅವನು ಹೋದ ದಿಕ್ಕನ್ನೇ ನೋಡುತ್ತಾ ಮಂಕಾಗಿ ನಿಂತಿದ್ದವಳನ್ನು ಕೃಷ್ಣಪ್ಪ ಒಳಗಿನಿಂದ ಕರೆದರು.

''ಏನ್ಮಾವಾ? ಕರೆದ್ರಾ?'' ಎನ್ನುತ್ತಾ ಒಳಗೆ ಬಂದಳು.

''ನಿನ್ನ ಮಗ ಬಂದ ಹಾಗಿತ್ತು... ಏನೇನೋ ಮಾತಾಡ್ತಾನೆ? ಅವನ ವರ್ತನೆ, ನಡತೆ ಒಂದೂ ಸರಿ ಇಲ್ಲ ಅಂತ ಅನ್ನಿಸುತ್ತೇ. ದುಸ್ಸಹವಾಸ ಮಾಡಿ, ಏನೇನು ದುಶ್ಚಟಗಳನ್ನು ಕಲಿತಿದಾನೋ...? ನಾರಾಯಣ ಊಟಕ್ಕೆ ಬಂದಾಗ, ನಾನು ಅವನ ಹತ್ತಿರ ಮಾತ್ನಾಡಿ ಒಂದು ಇತ್ಯರ್ಥ ಮಾಡ್ತೀನಿ.''

''ಇವತ್ತು ಹೀಗೆ ಹೇಳ್ತೀರಲ್ಲ ಮಾವಯ್ಯಾ... ಈ ಮುಂಚೆ ಒಂದು ದಿನವಾದ್ರೂ ಹಿರಿಯವರು ಅನ್ನೋ ಅಧಿಕಾರದಿಂದ, ಮೊಮ್ಮಗ ಮಾಡ್ತಿದಾನೆ? ಹೇಗಿದಾನೆ ಅಂತ ವಿಚಾರಿಸಿದ್ರಾ?''

''ನನ್ನ ದುಃಖ ನನಗೆ. ತಂದೆ ತಾಯಿ ನೀವುಗಳು ಇದ್ರಲ್ಲ... ಅವನಿಗೇನು ಕಡಿಮೆಯಾಗಿತ್ತು ಅಂತ?''

''ಕಡಿಮೆಯಾಗಿದ್ದರಿಂದಲೇ ಹೀಗಾದದ್ದು... ಇಲ್ಲಾಂತಂದ್ರೆ ಎಲ್ಲಾ ಸರಿ ಹೋಗ್ತಿತ್ತು.'' ಅವಳು ದುಗುಡದಿಂದ ನುಡಿದಾಗ ಅವರಿಗೂ ಅಸಹನೆ ಹೆಚ್ಚಿತ್ತು.

''ಏನು? ಏನು ಮಾತು ನೀನು ಆಡ್ತಾ ಇರೋದು...? ಊಟ ನೋಟ, ಉಡುಗೆ ತೊಡುಗೆ ಯಾವುದಕ್ಕೆ ಕಡಿಮೆಯಾಗಿತ್ತು ನಿನ್ನ ಮಗನಿಗೆ; ಶುದ್ಧ ಶುಂಠ ಪಾಠ ತಲೆಗೆ ಹತ್ತಲಿಲ್ಲ... ಹಾಗಂತ ದುಸ್ಸಹವಾಸ ನೋಡೋದೆ? ದುಶ್ಚಟಗಳನ್ನು ಕಲಿಯೋದೆ? ರಾಮ ರಾಮ... ಎಂಥಾ ಮಗನ್ನ ಹೆತ್ತೆಯಮ್ಮ...''

''ಮಾವಯ್ಯಾ... ನನ್ನನ್ನೇ ದೂಷಣೆ ಮಾಡಬೇಡಿ... ಅವನು ಹೀಗಾಗುಕ್ಕೆ ಎಲ್ಲರೂ ಕಾರಣರೇ... ತಾತಾ ಅಂತ ನೀವು ಒಂದು ದಿನ, ಅವನನ್ನು ಹತ್ತಿರ ಕರೆದು ತೊಡೆ ಮೇಲೆ ಕೂರಿಸಿಕೊಂಡು ಕತೆ ಹೇಳಿದ್ರಾ?... ಅವರು... ನಿಮ್ಮ ಮಗ, ಮಗೂಂತ ಅಂತ ಎತ್ತಿಕೊಂಡು ಹೊರಗೆ ಎಲ್ಲಾದ್ರೂ ತಿರುಗಾಡಿಸಿಕೊಂಡು

ಬಂದ್ರಾ? ಈಗ ಮಾತಾಡ್ತೀರಲ್ಲ, ಎಲ್ಲರೂ''

''ರಾಮು ಮನೆ ಬಿಟ್ಟು ಹೋದ ಮೇಲೆ... ನಾವುಗಳು ಇಷ್ಟರ ಮಟ್ಟಿಗೆ ಇರುವುದೇ ಹೆಚ್ಚು...''

''ಆಗ ನಿಮ್ಮ ಮಗ ಮನೆ ಬಿಟ್ಟು ಹೋದ್ರು... ಈಗ ಮೊಮ್ಮಗ... ಅದೇ ತಾನೇ ಮಾಡಿರೋದು... ಒಟ್ಟಿನಲ್ಲಿ ನಿಮ್ಮ ವಂಶಕ್ಕೆ ಯಾವುದೋ ಶಾಪ ಅಂತ ಕಾಣುತ್ತೆ....''

''ಶಾರದಾ! ನಾನು ನಿನ್ನ ಮಾವ. ನನ್ನ ಎದುರಿಗೆ ಹೀಗೆಲ್ಲಾ ಮಾತಾಡುವಷ್ಟು ನಾಲಗೆ ನಿನಗೆ?''

''ಬಿಡಿ ಮಾವಯ್ಯ ನಾನೂ ಏನೂ ಚಿಕ್ಕೋಳಲ್ಲ. ಈ ಮನೆಗೆ ಬಂದು ಇಪ್ಪತ್ತೈದು ವರ್ಷಗಳಾದವು. ಇನ್ನೇನಾಗಬೇಕಾಗಿದೆ ನನಗೆ?''

''ನೀನೇ ಹೀಗಾಡಿದ ಮೇಲೆ, ನಿನ್ನ ಮಗ ಆಡೋದು ಆಶ್ಚರ್ಯವೇನಲ್ಲ... ನನ್ನದೇ ತಪ್ಪು. ತೆಪ್ಪಗೆ ರಾಮಾ ಕೃಷ್ಣ ಅಂತ ಬಿದ್ದಿರಬೇಕಾಗಿತ್ತು...'' ಅವರೂ ನೊಂದು ನುಡಿದಾಗ,

''ಸಧ್ಯ... ಹಾಗೆ ಮಾಡಿ ಮೊದಲು ಎಂದು ಅವಳು ಗೊಣಗಿದ್ದು'' ಕೇಳಿಸದೇ ಇರಲಿಲ್ಲ. ಅವಳು ಅಡಿಗೆ ಮನೆ ಕಡೆ ತಿರುಗಿದಳು.

''ಪಾತೂ... ನೀನೇ ಪುಣ್ಯಾತ್ತಿ. ಇಂಥಾ ಅವಹೇಳನದ ಮಾತುಗಳನ್ನು ಕೇಳುವ ಸ್ಥಿತಿ ನಿನಗೆ ಬರಲಿಲ್ಲ...'' ಎಂದು ಗತಿಸಿ ಹೋದ ಹೆಂಡತಿಯನ್ನು ನೆನೆಸಿಕೊಂಡರು.

ಒಳಗೆ ಹೋದ ಶಾರದೆಗೆ ಪಶ್ಚಾತ್ತಾಪವಾಗಿತ್ತು. ತಾನು ದುಡುಕಿ ಹೀಗೆಲ್ಲಾ ಮಾತನಾಡಬಾರದಾಗಿತ್ತು. ಮಗ ಬಂದು ತಲೆ ಕೆಡಿಸಿದ. ಆ ಕಹಿಯನ್ನು ಬಡಪಾಯಿ ಮಾವನ ಮೇಲೆ ಚೆಲ್ಲಿದ್ದು ಸರಿಯಲ್ಲ... ಈ ದಿನ ಮಾವನಿಗೆ ಇಷ್ಟವಾದ ಅಡಿಗೆಯನ್ನೇ ಮಾಡಿ ಬಡಿಸ್ತೀನಿ. ಅವರೂ ಖುಷಿ ಪಟ್ಟರೇ... ಅವರನ್ನೇ ಹಣ ಕೇಳಬಹುದು... ರಾತ್ರಿ ಕೃಷ್ಣ ಬರ್ತಾನೆ... ಇನ್ನು ಏನೇನು ಮಾತು ಕತೆಗಳು ನಡೆಯಲಿದೆಯೋ ಎಂಬ ಆತಂಕದಿಂದ ಅಡಿಗೆ ಕೆಲಸಗಳನ್ನು ಪ್ರಾರಂಭಿಸಿದಳು.

ಮಧ್ಯಾಹ್ನ ಊಟಕ್ಕೆ ಬಂದ ನಾರಾಯಣಮೂರ್ತಿ, ಎಂದಿನಂತೆ ತಂದೆಯನ್ನು ಮಾತನಾಡಿಸಿ ಬರಲೆಂದು ಅವರಿದ್ದೆಡೆಗೆ ಬಂದ. ಮಲಗಿದ್ದವರು ಅವನನ್ನೇ ನೋಡಿದರು. ಅವರ ಮುಖದ ಮೇಲಿನ ನೋವಿನ ಕಳೆಯನ್ನು ಕಂಡು ಮರುಗಿದ.

''ಯಾಕಪ್ಪಾ... ರಾಮು ನೆನಪಿಗೆ ಬಂದ್ನಾ?'' ಅವರ ಕೈ ಹಿಡಿದು ಕೇಳಿದ.

''ಹೂಂ... ನಪ್ಪಾ... ನಿನ್ನ ಅಮ್ಮ, ನಿನ್ನ ಅಣ್ಣ ಎಲ್ಲಾ ನೆನಪಿಗೆ ಬರುತ್ತಿರುತ್ತಾರೆ. ಈಚೆಗೆ ಅವಳು... ನಿನ್ನ ಸೋದರತ್ತೆಯ ನೆನಪು ಬರುವುದೂ ಜಾಸ್ತಿ ಆಗಿದೆ.''

''ಯಾರಪ್ಪಾ ನನ್ನ ಸೋದರತ್ತೆ? ಅವರನ್ನೆಂದೂ ನಾನು ನೋಡಿಯೇ ಇಲ್ಲ.''

''ಇಲ್ಲಪ್ಪಾ... ನೀವುಗಳು ಯಾರೂ ನೋಡಲೇ ಇಲ್ಲ ಅವಳನ್ನು, ನನಗೆ ಹನ್ನೆರಡು ವರ್ಷವಾಗಿದ್ದಾಗ ಅವಳ ಮದುವೆಯಾಯಿತು. ಅದೂ ಅವಳಿಗೆ ಇಷ್ಟವಿಲ್ಲದ ಮದುವೆ. ನನ್ನ ತಾಯಿ ಅವಳಿಗೆ ಮಲತಾಯಿಯಾಗಿದ್ದಳು. ತನ್ನ ಕಡೆಯ ಒಬ್ಬ ವರನನ್ನು ಗೊತ್ತುಮಾಡಿದಾಗ, ಅವಳು ಅತ್ತಿದ್ದನ್ನು ನಾನೇ ಕಂಡಿದ್ದೇನೆ.

''ಚಿಕ್ಕಮ್ಮಾ... ಈ ಹುಡುಗ ನನಗೆ ಇಷ್ಟವಿಲ್ಲ. ನಂಗೆ ಈ ಮದುವೆ ಬೇಡ'' ಎಂದಿದ್ದಳು.

''ಸಾಕು. ಸುಮ್ಮನಿರೇ, ಯಾವ ರಾಜಕುಮಾರ ಬಂದು ನಿನ್ನನ್ನು ವರಿಸಿಕೊಂಡು ಹೋಗ್ತಾನೆ. ನಾನು ಹೇಳಿದ ಹಾಗೆ ಕೇಳಿದ್ರೆ ಸರಿ... ಇಲ್ಲದಿದ್ದರೆ ಈ ಜನ್ಮದಲ್ಲಿ ನಿನಗೆ ಮದುವೆ ಇಲ್ಲ ಅಷ್ಟೇ''

''ಹಾಗೆನ್ನಬೇಡಿ ಚಿಕ್ಕಮ್ಮ... ನನಗೆ ಈಗಲೇ ಮದುವೆ ಬೇಡ. ಬೇಕಾದರೆ, ಮದುವೆ ಇಲ್ಲದೇ ಹಾಗೇ ಜೀವಮಾನವೆಲ್ಲಾ ನಿಮ್ಮ ಮನೇಲಿ ಕಳಿತೀನಿ...''

''ಕಳೀದೇ ಏನು ಮಾಡ್ತೀಯ? ದುಡಿದು ತಂದು ಹಾಕೋಕೆ ನಿಮ್ಮಪ್ಪ ಗಟ್ಟಿಯಾಗಿದಾರೆ. ಬೇಯಿಸಿ ಹಾಕೋಕೆ ಜೀತದಾಳು ನಾನಿದ್ದೇನೆ. ನೀನು ಸುಕುಮಾರಿ ಹಾಗೆ ಇರದೇ ಏನು ಮಾಡ್ತೀಯ? ಆಮೇಲೆ ಜನ ನನ್ನನ್ನೇ

ಆಡಿಕೊಳ್ಳೋದು. ಮಲತಾಯಿ ಬುದ್ದೀನ ಕಡೆಗೂ ತೋರಿಸಿಬಿಟ್ಟಳು ಅಂತ. ನಿನಗೇನಾಗಬೇಕು ಹೇಳು?''

''ಹೋಗಲಿ ಚಿಕ್ಕಮ್ಮ... ಇನ್ನೊಂದೆರಡು ವರ್ಷ ಕಳೀಲಿ... ನನಗೆ ಈಗಲೇ ಮದುವೆ ಬೇಡ... ನನಗ್ಯಾಕೋ ಭಯ.''

''ಭಯ ಏಕೆ? ಭಯವಂತೆ ಭಯ... ನಿನ್ನ ಗಂಡನಾಗೋನು ಹುಲಿಯೇ? ಕರಡಿಯೆ? ಅತ್ತೆಯೇನು ಸಿಂಹಿಣಿಯೇ!''

''ಹಾಗಲ್ಲ ಚಿಕ್ಕಮ್ಮ... ಆ ಹುಡುಗ ನೋಡೋಕೆ ಚೆನ್ನಾಗಿಲ್ಲ...''

''ಅಹಾಹಾ... ನೀನೇನು ತ್ರಿಪುರ ಸುಂದರೀನಾ? ಗಂಡಸಿಗೇಕೆ ರೂಪ? ಅವನಿಗೆ ಗುಣ ಮುಖ್ಯ... ಉದ್ಯೋಗ ಮುಖ್ಯ... ಅಮಲ್ದಾರರ ಕೈ ಕೆಳಗೆ ಗುಮಾಸ್ತನಾಗಿದಾನೆ. ಅಮಲ್ದಾರರಿಗೆ ಸಿಗೋ ಮದ್ಯಾದೆಗಳಲ್ಲಿ ಇವನಿಗೂ ಸ್ವಲ್ಪ ಸಿಗುತ್ತೆ... ನಿನಗೆ ತಿಳುವಳಿಕೆ ಸಾಲದು... ಸುಮ್ಮನೆ ನಾವು ದೊಡ್ಡೋರು ಹೇಳಿದ ಹಾಗೆ ಕೇಳು...'' ಅಲ್ಲಿಗೆ ಎಲ್ಲಾ ಮುಗಿಯಿತು. ಕೆಲವೇ ತಿಂಗಳುಗಳಲ್ಲಿ ಮದುವೆ ನೆರವೇರಿತು. ಆಗ ಈ ಮನೆಯಿಂದ ಹೊರಗೆ ಹೋದವಳು ಮತ್ತೆ ಈ ಮನೆಗೆ ಬಂದದ್ದು ನನ್ನ ಮದುವೆಯ ಹಿಂದಿನ ದಿನವೇ. ಅದೂ ನನ್ನ ತಂದೆಯೇ ಹೋಗಿ ಕರೆದುಕೊಂಡು ಬಂದಿದ್ದರು. ನನ್ನ ಅಕ್ಕನ್ನ ನಾನು ಗುರುತಿಸಲಾಗಿರಲಿಲ್ಲ. ಅಷ್ಟು ಬದಲಾಗಿ ಹೋಗಿದ್ದಳು. ಮುಖದ ಆ ನಿಸ್ತೇಜ ಕಳೆಯೇ ಹೇಳುತ್ತಿತ್ತು, ಅವಳು ಗಂಡನ ಮನೆಯಲ್ಲಿ ಸುಖವಾಗಿಲ್ಲವೆಂದು. ಆದರೆ, ಯಾರಿಗೂ ಅವಳ ಕಷ್ಟ ನಷ್ಟವೇನೆಂದು ಕೇಳಿ ತಿಳಿದುಕೊಳ್ಳಲು ಬಿಡುವಿರಲಿಲ್ಲ. ಬಂದ ನೆಂಟರಿಷ್ಟರೆಲ್ಲಾ, ''ಯಾಕೇ ಹೀಗಾಗಿದೀಯ ಸರಸ್ವತೀ?'' ಎಂದು ಕೇಳಿ ಕೇಳಿ ಅವಳ ದುಗುಡವನ್ನು ಹೆಚ್ಚಿಸಿದ್ದರು. ಮದುವೆಯ ಕಾರ್ಯಕಲಾಪಗಳು ಮುಗಿಯುತ್ತಿದ್ದಂತೆಯೇ, ಅವಳನ್ನು ಅವಳ ಮನೆಗೆ ಕಳಿಸಿ ಬಂದುದಾಯಿತು.

ಆನಂತರ, ಕೆಲವೇ ತಿಂಗಳುಗಳ ನಂತರ ಅವಳಿಗೆ ಒಂದು ಹೆಣ್ಣು ಮಗು ಹುಟ್ಟಿತು ಎಂಬ ಸುದ್ದಿ ಬಂದಿತು. ಅವಳು ಬಾಣಂತನಕ್ಕೆ ಬರಲಿಲ್ಲವಾದ್ದರಿಂದ, ನಮಗೆ ಆ ವಿಷಯ ತಿಳಿದದ್ದೇ ತಡವಾಗಿ. ಆಮೇಲೆ ಸುಮಾರು ಐದಾರು ವರ್ಷಗಳ ನಂತರ, ಅವಳ ಗಂಡ ತೀರಿಕೊಂಡನೆಂಬ ಸುದ್ದಿ ಬಂದಾಗ, ನಮ್ಮ ತಂದೆಯೇ ಹೋಗಿ, ಮಗಳನ್ನು ಮೊಮ್ಮಗಳನ್ನು ನಮ್ಮ ಮನೆಗೆ ಕರೆತಂದರು.

''ಆದರೆ, ಹೇಳಿಕೊಳ್ಳಲು ನಾಚಿಕೆ ಆಗುತ್ತೆ ನಾರಾಯಣ... ನನ್ನ ತಾಯಿ, ಅವಳು ತಾನೂ ಹೆಣ್ಣು ಎಂಬುದನ್ನೇ ಮರೆತು, ಅಕ್ಕನನ್ನು ಬಾಯಿಗೆ ಬಂದಂತೆ ಬೈದು, ಏನೇ ಆದರೂ ಸರಿ. ಅವಳು ಇಲ್ಲಿರಕೊಡದೆಂದು ಗಲಾಟೆ ಮಾಡಿಬಿಟ್ಟಳು. ನನ್ನ ತಂದೆ ಆ ಕ್ಷಣದಲ್ಲಿ ಅಮ್ಮನ ಬಾಯಿ ಮುಚ್ಚಿಸಿದ್ದರೂ, ಆ ನಂತರ, ದಿನ ನಿತ್ಯದ ಮನೆಯ ಆ ವಾತಾವರಣ, ಎಲ್ಲರಿಗೂ ಬೇಸರವನ್ನುಂಟು ಮಾಡುವಂತಿತ್ತು.

ನಿನ್ನ ತಾಯಿ ಪಾರ್ವತಿ, ಒಳ್ಳೆಯವಳಾದುದರಿಂದ ಯಾವ ತಂಟೆಗೂ ಬರುತ್ತಿರಲಿಲ್ಲ. ಆ ನಂತರ, ಪಾರ್ವತಿಯ ಸಲಹೆಯಂತೆ, ನನ್ನ ಅಕ್ಕ ತನ್ನ ಮಗಳೊಡನೆ, ತೋಟದ ಮನೆಯಲ್ಲಿ ವಾಸ ಮಾಡತೊಡಗಿದಳು. ಇದೆಂತಹ ನ್ಯಾಯ? ಮನೆಯ ಹೆಣ್ಣು ಮಗಳಿಗೆ, ಗಂಡನ ಮನೆಯಲ್ಲಿ ಆಶ್ರಯವಿರಲಿಲ್ಲ. ತಂದೆಯ ಮನೆಯಲ್ಲಿಯೂ ಅವಳು ನೆಮ್ಮದಿಯಿಂದ ಬದುಕಲಾಗಲಿಲ್ಲ. ನಾವುಗಳೆಲ್ಲರೂ ಕೃತಜ್ಞರಾಗಿಬಿಟ್ಟೆವು.

ಆಮೇಲೆ, ಕೆಲವೇ ತಿಂಗಳು ಅಷ್ಟೇ. ಒಂದು ದಿನ, ನನ್ನ ಅಕ್ಕ ತನ್ನ ಮಗಳೊಡನೆ ಕಣ್ಮರೆಯಾಗಿಬಿಟ್ಟಳು. ಎಲ್ಲಿಗೆ ಹೋದಳು! ಯಾರ ಜೊತೆ ಹೋದಳು ಅಂತ ಒಂದೂ ತಿಳಿಯಲಿಲ್ಲ. ಗಂಡನ ಮನೆಗೂ ಹೋಗಿಲ್ಲವೆಂದು ತಿಳಿಯಿತು. ಹತ್ತಾರು ಬಾಯಿಗಳು, ಹತ್ತು ತರಹ ಮಾತನಾಡಿದವು. ಆ ಮನೆಯಲ್ಲಿರತೊಡಗಿದಮೇಲೆ ಯಾರದೋ ಸಹವಾಸ ಮಾಡಿ ಅವನೊಡನೆ ಓಡಿ ಹೋದಳು ಅಂತ ಜನರು ಆಡಿಕೊಂಡ ಮಾತೂ ಸಹ ಕೇಳಿಬಂತು. ಯಾರಾದರೂ ಅಪಹರಿಸಿಕೊಂಡು ಹೋದರೋ ಅವಳೇ ಓಡಿ ಹೋದಳೋ... ನಿಜವಂತೂ ತಿಳಿಯಲಿಲ್ಲ. ಆನಂತರ ಅವಳ ಸುದ್ದಿಯೇ ತಿಳಿಯಲಿಲ್ಲ. ನೀನೇ ಹೇಳು ಇದಕ್ಕೆಲ್ಲ ನಮ್ಮ ಅಮ್ಮನೇ ಕಾರಣವಲ್ಲವೆ? ಒಟ್ಟಿನಲ್ಲಿ ನನ್ನ ಅಕ್ಕನ ಬಾಳು ಹಾಳಾಯಿತು. ಅವಳು ಎಷ್ಟು ಕಷ್ಟ ಪಟ್ಟಿರಬಹುದು? ಎಷ್ಟು ನೊಂದಿರಬಹುದು? ಹುಟ್ಟಿದ ಮನೆಯ ಆಶ್ರಯವೂ ಇರದಿದ್ದರೆ ಹೆಣ್ಣು ಮಕ್ಕಳ ಪಾಡು ಎಷ್ಟು. ಹೀನ ಸ್ಥಿತಿಗೆ ಇಳಿಯುತ್ತೆ ಎನ್ನೋದಕ್ಕೆ ನನ್ನ ಅಕ್ಕನೇ ಸಾಕ್ಷಿ.''

ನಾರಾಯಣ ತಲೆ ತಗ್ಗಿಸಿ ನಿಂತಿದ್ದ. ಅವನ ಮನಸ್ಸು ಗೊಂದಲದ ಹೊಂಡವಾಗಿತ್ತು. ಇದೇ ತೋಟದ ಬಾವಿಯಲ್ಲೇ ಬಿದ್ದು ತನ್ನ ಅತ್ತಿಗೆ ಸತ್ತಳು ಎನ್ನುವ ಮಾತು ನೆನಪಿಗೆ ಬಂದು ಮನಸ್ಸು ಕುಂದಿತು.

ಎಷ್ಟೋ ವರ್ಷಗಳ ನಂತರ, ನಮ್ಮ ಮನೆಯಲ್ಲಿ ಅದೂ ಕಲ್ಯಾಣಿ ಈ ಮನೆಯಲ್ಲಿ ಹುಟ್ಟಿದ ಮೇಲೆ, ಸಂಭ್ರಮದ ಕಳೆ ತುಂಬಿತು. ಹಾಗಾಗಿ ಕಲ್ಯಾಣಿ ನಮ್ಮೆಲ್ಲರ ಅಚ್ಚು ಮೆಚ್ಚಿನ ಕೂಸಾಗಿ ಬೆಳೆದಳು... ಅದರೆ ಈಗ ಮನೆ ಬಿಕೋ... ಬಿಕೋ... ಅಂತಿದೆ. ಹೋಗಲಿ, ಅವರುಗಳು ಇಲ್ಲಿಂದ ಹೋದಮೇಲಾದ್ರೂ ನಿನ್ನ ಮಗ ನೇರವಾದ್ನಾ? ಅವನೂ ಆ ಮಕ್ಕಳಂತೆ ಓದಿ ಬರೆದು, ವಿದ್ಯಾವಂತನಾಗಿದಿದ್ದರೆ, ಎಷ್ಟೋ ನೆಮ್ಮದಿ ಇರುತ್ತಿತ್ತು. ಈಗ ನೋಡಿದರೆ, ಆಗಾಗ ಬಂದು ನಿನ್ನ ಹೆಂಡತಿಯನ್ನು ಹಣಕ್ಕಾಗಿ ಪೀಡಿಸ್ತಾನೆ. ಇದೆಲ್ಲಾ ನಿನಗೆ ತಿಳಿದಿದೆಯೋ ಇಲ್ಲವೋ ನನಗೆ ತಿಳೀದು. ಅವನು ಹೀಗೇ ಮುಂದುವರೆದರೆ ಹೇಗೆ? ನಾವುಗಳೇನು ಶಾಶ್ವತವೇ? ಮುಂದೆ, ಈ ಮನೆ, ಈ ತೋಟಕ್ಕೆ ಅವನೇ ವಾರಸುದಾರನಾಗುತ್ತಾನೆ. ಆಗ ಈ ಆಸ್ತಿ ಪಾಸ್ತಿಗಳನ್ನು ಉಳಿಸಿಕೊಳ್ಳುತ್ತಾನೆಂಬ ನಂಬಿಕೆ ನನಗೆ ಖಂಡಿತಾ ಇಲ್ಲ. ನಿನಗೇನನ್ನಿಸುತ್ತೆ? ನಿಜ ಹೇಳು...''

''ಆ ಯೋಗ್ಯತೆ ಅವನಿಗೆಲ್ಲಿದೆ?''

''ಅದಕ್ಕೇ ನಾನು ಒಂದು ಮಾತನ್ನು ನಿನಗೆ ಹೇಳ್ತೀನಿ. ನೀನು ಒಪ್ಪಬೇಕು.''

''ಹೇಳಿ ಅಪ್ಪಾ... ನಿಮ್ಮ ಮಾತಿಗೆ ನಾನು ಎಂದು ಎದುರು ಆಡಿದೀನಿ?''

''ನನಗೆ ರಾಮು, ನೀನು ಇಬ್ಬರೇ ಮಕ್ಕಳಾದರೂ, ಶಿವರಾಮು ಈ ಮನೆಗೆ ಬಂದು ಸೇರಿದ ಮೇಲೆ ನಾನು, ಕಳೆದುಹೋದ ರಾಮುವೇ ಈ ಮನೆಗೆ ಮತ್ತೆ ಬಂದು ಸೇರಿದ ಅಂತಲೇ ಭಾವಿಸಿದೀನಿ. ಅವನಿಗೂ ಇಬ್ಬರೂ ಹೆಣ್ಣು ಮಕ್ಕಳು, ಅವರುಗಳ ಮದುವೆ ಮಾಡಬೇಡವೇ? ಹಾಗಾಗಿ ಆ ತೋಟದ ಮನೆ, ಹಾಗೇ ಸ್ವಲ್ಪ ಭಾಗ ಜಮೀನನ್ನು ಅವನಿಗೆ ಕೊಡೋಣ ಅಂತ; ಮಕ್ಕಳೊಂದಿಗ ಬದುಕಿಕೊಳ್ತಾನೆ. ಏನಂತೀಯಾ?''

''ನಿಮ್ಮಿಷ್ಟ ಅಪ್ಪ... ನನಗೆ ಯಾವ ಅಭ್ಯಂತರವಿಲ್ಲ.''

''ಸರಿ ಹಾಗಾದ್ರೆ. ಆದಷ್ಟು ಬೇಗ ಕಾಗದ ಪತ್ರ ಬರೆಸಿ ಬಿಡೋಣ. ನನಗೋ ದಿನ ದಿನಕ್ಕೆ ಆರೋಗ್ಯ ಹದಗೆಡುತ್ತಿದೆ.''

''ಹುಂ. ನಾನೆಲ್ಲಾ ಆದಷ್ಟು ಬೇಗ ಮಾಡಿಸ್ತಿನಿ.'' ಎಂದು ಅವನು ಹೊರಗೆ ಬಂದ.

ಬಾಗಿಲ ಮರೆಯಲ್ಲಿ ನಿಂತು ಅವರುಗಳ ಮಾತನ್ನು ಕೇಳಿಸಿಕೊಂಡ ಶಾರದಾ ದಂಗಾಗಿದ್ದಳು. ಆಕೆ, ಗಂಡನ ಸೋದರತ್ತೆ ಖಂಡಿತಾ ಶಾಪ ಹಾಕಿರಬೇಕು... ಅದಕ್ಕೇ ಹೀಗೆ ಅನುಭವಿಸ್ತಾ ಇದೀವಿ. ಯಾರೋ ಹಿರಿಯರು ಮಾಡಿದ ತಪ್ಪಿಗೆ, ತನ್ನ ಮಗ ಈ ಸ್ಥಿತಿಗೆ ಬಂದ... ಈಗ ನೋಡಿದರೆ, ನ್ಯಾಯವಾಗಿ ಎಲ್ಲಾ ಆಸ್ತಿಯೂ ನನ್ನ ಮಗನಿಗೆ ಸೇರಬೇಕು. ಅದು ಬಿಟ್ಟು ಯಾರೋ ಹೊರಗಿನಿಂದ ಬಂದವರಿಗೆ ಪಾಲು ಏಕೆ ಕೊಡಬೇಕು?. ಆದರೆ ಈ ವಿಷಯದಲ್ಲಿ ಅಪ್ಪ ಮಗ ಒಂದು... ರಾತ್ರಿ ಕೃಷ್ಣ ಬರ್ತೀನಿ ಅಂತ ಹೇಳಿದಾನೆ. ಅವನಿಗೆ ಹಣ ಬೇರೆ ಕೊಡಬೇಕು...

''ಅಡಿಗೆ ಆಗಿದ್ರೆ ನಮ್ಮಿಬ್ಬರಿಗೂ ಊಟ ಬಡಿಸು...'' ಎನ್ನುತ್ತಾ ನಾರಾಯಣ, ತಂದೆಯನ್ನು ಎಬ್ಬಿಸಿಕೊಂಡು ಬಂದ. ಇಬ್ಬರೂ ಊಟ ಮುಗಿಸಿ ಎದ್ದು ಹೋದರು. ಶಾರದಾ ತಾನು ಬೇಗ ಬೇಗ ಊಟ ಮಾಡಿ, ವಿಶ್ರಮಿಸುತ್ತಿದ್ದ ಗಂಡನ ಬಳಿಗೆ ಬಂದಳು. ''ಕೃಷ್ಣಾ ಬಂದಿದ್ದ'' ಎಂದು ಪೀಠಿಕೆ ಹಾಕಿದಳು.

''ಅವನಿಗೆ ಒಂದು ಸಾವಿರ ರೂಪಾಯಿ ಬೇಕಂತೆ. ಸಾಲ ಮಾಡಿದಾನಂತೆ. ಅವರು ಕೊಂದು ಹಾಕ್ತೀವಿ ಅಂತ ಬೆದರಿಕೆ ಹಾಕಿದಾರಂತೆ.''

''ಒಂದು ಸಾವಿರ ರೂಪಾಯಿ ಸಾಲ...? ಯಾರನ್ನು ಕೇಳಿ, ಮಾಡಿದ್ನಂತೆ? ಅದನ್ನು ನಾನೇಕೆ ತೀರಿಸಬೇಕು! ದುಡೀರಿ ತೀರಿಸಲಿ...''

''ನಿಮಗೆ ಹಣ ಹೆಚ್ಚೋ... ಮಗ ಹೆಚ್ಚೋ...''

''ನನ್ನ ಹತ್ತಿರ ಹಾಗೆಲ್ಲಾ ಹಣ ಎಲ್ಲಿಂದ ಬರುತ್ತೆ! ನಾವೇನು ವ್ಯಾಪಾರ ಮಾಡ್ತೀವೆ?''

''ನಿಮ್ಮಪ್ಪನ್ನ ಕೇಳಿ ನೋಡಿ... ಅವರ ತಿಜೋರೀಲಿ ಹಣ ಇರಬಹುದು.''

''ನಾನು ಈ ಅಯೋಗ್ಯ ನಿಗೋಸ್ಕರ ಅಪ್ಪನ ಹತ್ತಿರ ಹಣ ಕೇಳುಲ್ಲ. ನನಗೂ ಮಾನ ಮರ್ಯಾದೆ ಇದೆ''

''ಮಾನ ಮರ್ಯಾದೆ ಅಂತ ಕೊತರೆ, ಕೈಗೆ ಬಂದ ಮಗನ್ನ ಕಳೆದು ಕೊಳ್ತೀರಿ ಅಷ್ಟೇ...''

''ಈಗ ಇದ್ದು ನನ್ನನ್ನು ಉದ್ಧಾರ ಮಾಡಿರೋದು ಅಷ್ಟರಲ್ಲೇ ಇದೆ.

ಅವನಿಗೆ ಏನೂ ಆಗುಲ್ಲ; ನೀನು ಭಯ ಪಡಬೇಡ. ನಿನ್ನನ್ನು ಹೆದರಿಸಿದಾನೆ ಅಷ್ಟೇ.''

''ಹಾಗಂತೀರಾ?''

''ಮತ್ತಿನ್ನೇನು? ನಿನ್ನ ಹತ್ತಿರ ಹಣ ವಸೂಲು ಮಾಡೋಕೆ ಒಂದು ಉಪಾಯ ಅಷ್ಟೇ.''

''ಹೋಗಲಿ, ನೀವೇ ಹೇಳಿ, ಬೆಳೆದ ಹುಡುಗ. ಖರ್ಚಿಗೆ ಅಂತ ಜೇಬ್ನಲ್ಲಿ ಹಣವೂ ಇಲ್ಲದಿದ್ದರೆ ಏನು ಮಾಡ್ತಾನೆ?''

''ಹೆತ್ತ ತಪ್ಪಿಗೆ ಕೊಡ್ತಾ ಇದೀಯಲ್ಲ. ಬಂದು ಕೇಳಿದಾಗಲೆಲ್ಲಾ ಕೊಟ್ಟಿದೀಯೋ ಇಲ್ಲವೋ?'' ಶಾರದಾ ಸುಮ್ಮನಾದಳು. ತಾನು ಗಂಡನಿಗೆ ತಿಳಿದಂತೆ, ತಿಳಿಯದಂತೆ, ಮಗ ಕೇಳಿದಾಗಲೆಲ್ಲಾ ಹಣ ಕೊಟ್ಟಿದ್ದು ನಿಜ. ಆದರೆ ಈಗ? ಅಷ್ಟು ಹಣವಂತೂ ತನ್ನಲಿಲ್ಲ. ಏನು ಮಾಡಲಿ? ಈ ಆಲೋಚನೆಯಲ್ಲೇ ಸಮಯ ಕಳೆಯಿತು. ರಾತ್ರಿ ಕೆಲಸಗಳನ್ನೆಲ್ಲ ಮುಗಿಸುವ ಸನ್ನಾಹದಲ್ಲಿದ್ದಾಗ ಕೃಷ್ಣ ಬಂದ. ಪಿಸುದನಿಯಲ್ಲಿ ಕೇಳಿದ.

''ಹಣ ಕೊಡು. ಆದಷ್ಟು ಬೇಗ ನಾನು ಇಲ್ಲಿಂದ ಹೋಗಬೇಕು. ಅವರುಗಳು ನನಗೋಸ್ಕರ ಕಾಯುತ್ತಿರುತ್ತಾರೆ.''

''ಊಟ ಮಾಡ್ತೀಯಾ? ನಿನಗೋಸ್ಕರ ಕಾಳು ಹುಳಿ ಮಾಡಿದ್ದೆ.''

''ಯಾರಿಗೆ ಬೇಕಾಗಿದೆ ಈಗ ಊಟ? ಮೊದಲೇ ಹೊತ್ತಾಗ್ತಿದೆ. ರೈಲು ಬರೋ ಹೊತ್ತಿಗೆ ನಾನು ಅಲ್ಲಿರಬೇಕು.''

''ಯಾವ ಊರಿಗೆ ಹೋಗ್ತಾ ಇದೀಯ?''

''ಅದನ್ನೆಲ್ಲ ಮುಂದಿನ ಸಲ ಬಂದಾಗ ಹೇಳ್ತೀನಿ. ಈಗ ಹಣ ಕೊಡು. ಸುಮ್ಮನೇ ಟೈಂ ಹಾಳು ಮಾಡಬೇಡ.''

''ಯಾಕೋ ನನಗೆ ದಿಗಿಲಾಗುತ್ತಿದೆ ಕಣೋ ಕೃಷ್ಣ. ನನ್ನ ಹತ್ತಿರವೂ ಹಣ ಇಲ್ಲ. ನಿಮ್ಮಪ್ಪನ್ನ ಕೇಳಿದೆ. ಅವರೂ ಇಲ್ಲ ಅಂತಂದ್ರು.''

''ಸರಿ ಇದಿಷ್ಟನ್ನ ಹೇಳೋಕೆ ಇಷ್ಟು ಹೊತ್ತು ಮಾಡಿದ್ಯಾ? ಸರಿ ಇನ್ನು ನಿನ್ನ ಪಾಲಿಗೆ ನಾನೂ ಇಲ್ಲ ಅಂತ ತಿಳಿಕೋ'' ಅಂತ ಅವನು ನುಡಿದಾಗ, ಅವಳು

ಅವನ ಕೈಗೆ ಒಂದು ಪುಟ್ಟ ಗಂಟನ್ನಿತ್ತಳು.

''ಇದರಲ್ಲಿ ನನ್ನ ಕೆಲವು ಒಡವೆಗಳಿವೆ. ಅದನ್ನು ಮಾರಿ ನಿನ್ನ ಸಾಲ ತೀರಿಸ್ಕೋ... ಇನ್ನು ಸಾಕು. ಆ ಸಹವಾಸವನ್ನೆಲ್ಲ ಬಿಟ್ಟು ಮನೆಗೆ ಬಂದು ತೋಟದ ಕಾರುಬಾರು ವಹಿಸ್ಕೋ... ಇದೆಲ್ಲ ನಿನ್ನ ಆಸ್ತಿ. ಇದನ್ನೆಲ್ಲಾ ನೀನೇ ಸಂಭಾಳಿಸಬೇಕು. ಇಲ್ಲದಿದ್ದರೆ ಕಂಡೋರ ಪಾಲಾಗಿ ಹೋಗುತ್ತೆ ಅಷ್ಟೇ.''

''ಹಣ ಕೇಳಿದ್ರೆ, ಒಡವೆ ಕೊಡ್ತೀಯಲ್ಲ. ಇಷ್ಟು ಹೊತ್ನಲ್ಲಿ ಯಾವ ಮಾರ್ವಾಡಿಗೆ ಮಾರಲಿ? ಹೋಗಲಿ ಬಿಡು ಹೇಗೋ ಅಡ್ಜಸ್ಟ್ ಮಾಡಿ ಕೊಳ್ತೀನಿ. ಈ ಆಸ್ತಿ ನನ್ನದೇ... ಯಾರ ಪಾಲು ಆಗುವುದು ಸಾಧ್ಯವಿಲ್ಲ. ಈ ಆಸ್ತೀನೆಲ್ಲಾ ಮಾರಿದಾಗ ನನ್ನ ಕೈಗೆ ತುಂಬಾ ಹಣ ಬರುತ್ತಲ್ಲ... ಆಗ ನಿನಗೆ ನಾನು ಇದರ ಎರಡರಷ್ಟು ಒಡವೆಗಳನ್ನು ಮಾಡಿಸಿಕೊಡ್ತೀನಿ'' ಎಂದು ನುಡಿದು, ತಾಯಿಯ ಕೆನ್ನೆ ಸವರಿ, ಕೆಟ್ಟ ನಗೆ ನಕ್ಕು ಅಲ್ಲಿಂದ ಹೊರಬಿದ್ದು ಕತ್ತಲೆಯಲ್ಲಿ ಮರೆಯಾಗಿ ಹೋದ.

ಶಾರದಾ ಅಲ್ಲೇ ಗೋಡೆಗೆ ಒರಗಿ ನಿಂತು ಬಿಕ್ಕಿ ಬಿಕ್ಕಿ ಅತ್ತಳು ''ಎಲ್ಲಾ ಗಂಡು ಮಕ್ಕಳೂ ಕೈಗೆ ಬಂದ ಮೇಲೆ ಸಂಪಾದಿಸಿ, ತಾಯಿಗೆ ಒಡವೆ ಮಾಡಿಸಿ ಕೊಡೋದನ್ನ ಕೇಳಿದೀನಿ. ಅಂಥಾದ್ದರಲ್ಲಿ ಇವನು ನನ್ನ ಒಡವೆಗಳನ್ನು ಮಾರಿ, ತನ್ನ ಕೆಲಸ ಪೂರೈಸಿಕೊಳ್ಳುತ್ತಿದಾನೆ...'' ಅತ್ತು ಅತ್ತು ಸೊರಗಿ ಅಲ್ಲೇ ಕೂತವಳನ್ನು ನಾರಾಯಣ ಬಂದು ಎಚ್ಚರಿಸಿದ.

''ಅದೇನೇ ಹೀಗೆ ಗರ ಬಡಿದವಳ ಹಾಗೆ ಕೂತಿದೀಯಾ? ಹೊತ್ತಾಗಲಿಲ್ವಾ? ಮಲಗುಲ್ವಾ?''

''ಹುಂ. ಮಲಗ್ತೀನಿ. ಕೃಷ್ಣ ಒರ್ತಾನೋ, ಏನೋ ಅಂತ ಕಾಯ್ತಿದ್ದೆ''

''ಬಿಂದರೆ ಎದ್ದು ಬಂದರಾಯ್ತು. ಮಧ್ಯಾರಾತ್ರಿ ಮೀರಿದೆ ಎದ್ದು ಬಂದು ಮಲಕ್ಕೋ...'' ಹಿಂಬಾಗಿಲು, ಮುಂಬಾಗಿಲುಗಳನ್ನು ಭದ್ರಪಡಿಸಿ, ಮಲಗುವ ಕೋಣೆಗೆ ಬಂದಳು. ಏನೋ ಆತಂಕದಿಂದ ನಿದ್ದೆ ಬರಲಿಲ್ಲ.

ಬೆಳಿಗ್ಗೆ ಪೂಜೆ ಮುಗಿಸಿ, ತಿಂಡಿ ಕಾಫಿ ಮುಗಿಸಿ, ನಾರಾಯಣಮೂರ್ತಿ ತೋಟಕ್ಕೆ ಹೊರಡುವುದರಲ್ಲಿದ್ದ. ಅಷ್ಟರಲ್ಲಿ ಮಫ್ತಿಯಲ್ಲಿದ್ದ ಇಬ್ಬರು ಪೋಲಿಸರು ಬಂದು ವಿಚಾರಿಸಿದರು.

''ಹೌದು. ನಾನೇ ನಾರಾಯಣಮೂರ್ತಿ. ನನ್ನಿಂದೇನಾಗಬೇಕು?'' ಅಧೈರ್ಯದಿಂದ ಧ್ವನಿ ನಡುಗಿತ್ತು.

''ನೀವು ಈಗಲೇ ನಮ್ಮ ಜೊತೆ ಸ್ಟೇಷನ್‌ಗೆ ಬರಬೇಕು.''

''ಯಾಕೆ?'' ಅಷ್ಟರಲ್ಲಿ ಒಳಗಿನಿಂದ ಶಾರದಾ ಬಂದು ನಿಂತಳು. ''ನಡೀರಿ...'' ಎನ್ನುತ್ತಾ, ''ನಾನು ಈಗ ಬಂದು ಬಿಡ್ತೀನಿ'' ಎಂದು ಹೆಂಡತಿಗೆ ಹೇಳಿ ಅವರ ಜೊತೆ ನಡೆದ. ಶಾರದಳ ಎದೆ ಢವ ಢವ ಹೊಡೆದುಕೊಂಡಿತು. ''ಏನು ವಿಷಯ ಅಂತ ಇವರೂ ಹೇಳಲಿಲ್ಲ... ಕೃಷ್ಣನಿಗೆ ಏನೋ ಅಪಾಯವಾಗಿರಬೇಕು... ಬೆಲೆ ಬಾಳುವ ಒಡವೆಗಳನ್ನು ಬೇರೆ ತಗೊಂಡು ಹೋಗಿದ್ದ'' ಕೈ ಕಾಲು ತಣ್ಣಗಾದಂತಾಗಿ ಅಲ್ಲೇ ಕುಸಿದು ಕೂತಳು.

ಸುಮಾರು ಒಂದೆರಡು ಗಂಟೆಗಳ ನಂತರ, ನಾರಾಯಣ ಮೂರ್ತಿ ಬಂದ. ಎದುರಾದ ಹೆಂಡತಿಯನ್ನು ದುರುದುರನೆ ನೋಡಿದ.

''ಆಯ್ತು... ಇದೊಂದು ಬಾಕಿ ಇತ್ತು... ಇನ್ನು ತಲೆ ಎತ್ತಿ ನಡೆಯದಂತೆ ಆಗಿ ಹೋಯ್ತು...''

''ಏನಾಯ್ತು?... ಏನಾಯ್ತು?''

''ಕೃಷ್ಣನ್ನ ಪೋಲಿಸರು ಹಿಡಿದಿದಾರೆ... ಯಾರದೋ ಒಡವೆಗಳನ್ನು ಕದ್ದು ಓಡಿ ಹೋಗ್ತಾ ಇದ್ದವನನ್ನು ರೈಲ್ವೇ ಸ್ಟೇಷನ್‌ನ ಬಳಿ ಅರೆಸ್ಟ್ ಮಾಡಿದಾರೆ... ಅವನೇನು ಹೇಳ್ತಾನೆ ಗೊತ್ತಾ? ಇದೆಲ್ಲಾ ಅಮ್ಮನದೇ ಒಡವೆ, ಕೊಟ್ಟವಳು ಅಮ್ಮನೇ ಅಂತ... ಪೋಲಿಸ್ನೋರು ಅದನ್ನೆಲ್ಲಾ ನಂಬ್ತಾರಾ?... ಚೆನ್ನಾಗಿ ಬಡಿದು ಒಳಗೆ ತಳ್ಳಿದಾರೆ...''

ಶಾರದಾ ತಲೆ ತಗ್ಗಿಸಿದಳು. ಕಣ್ಣಿನಿಂದ ಬಳ ಬಳ ನೀರು ಸುರಿಯಿತು.

''ಅಯ್ಯೋಗ್ಯನಿಗೋಸ್ಕರ ಕಣ್ಣೀರು ಸುರಿಸಿದರೆ ಏನು ಪ್ರಯೋಜನ? ಎಂಥಾ ಮರ್ಯಾದೆ ತಂದ ಈ ಮನೆಗೆ? ಅವನು ಬರ್ತಾನೆ ಅಂತ ನೀನು ನಿದ್ದೆಗೆಟ್ಟು ಕಾದಿದ್ದೆ. ಅವನು ಯಾರ ಮನೆಗೋ ಕನ್ನ ಹಾಕುಕ್ಕೆ ಹೋಗಿದ್ದ...''

''ಈಗ ಅವನೆಲ್ಲಿ? ಅವನನ್ನು ಬಿಡಿಸಿಕೊಂಡು ಬರಲಿಲ್ವಾ!''

''ಬಿಡಿಸಿಕೊಂಡು ಬರಬೇಕಾದರೆ ಜಾಮೀನು ಕೊಡಬೇಕು. ಅವನಿಗೆ

ನಾನು ಜಾಮೀನು ಕೊಡುಲ್ಲ..."

"ಅವನು ನಮ್ಮ ಮಗ. ನೋಡಿದೋರು ಏನಂತಾರೆ? ಈಗ ನೀವೇ ಅವನ ಕೈ ಬಿಟ್ಟರೆ ಅವನಿಗೆ ಗತಿ ಯಾರು?"

"ಜೈಲಲ್ಲಿ ಕೋಳೀಲಿ; ಒಂದೆರಡು ತಿಂಗಳು... ಬುದ್ಧಿ ಬಂದರೂ ಬರಬಹುದು. ಮಾಡಿದಾನಲ್ಲ ಘನಂದಾರಿ ಕೆಲಸ..."

"ಆ ಒಡವೆಗಳು ಈಗ ಯಾರ ಹತ್ತಿರ ಇದೆ?"

"ಪೋಲಿಸ್ನೋರ ವಶದಲ್ಲಿದೆ... ಯಾರದ್ದೋ ಏನೋ... ಅವನಾಗಿಯೇ ನಿಜ ಹೇಳಬೇಕು... ಅಥವಾ ಕಳ್ಳತನ ಆದ ಮನೆಯವರು ಕಂಪ್ಲೆಂಟ್ ಕೊಟ್ಟು, ಅವರ ಒಡವೆಗಳನ್ನು ಗುರುತಿಸಬೇಕು... ಆಗ ನಿಜ ಏನೂಂತ ಗೊತ್ತಾಗುತ್ತೆ..."

"ಆ ಒಡವೆಗಳು ನಮ್ಮದೇ ಇರಬಹುದು..."

"ಅದು ಹೇಗೆ ಹೇಳ್ತೀಯ! ನಿನ್ನ ಒಡವೇನೇ ಕದಿಯುವಷ್ಟು ಹೀನ ಕೆಲಸ ಮಾಡಿದಾನೇ ಅಂತೀಯ..."

"ನಾನೇ ಹೋಗಿ ನೋಡ್ತೀನಿ. ನನ್ನ ಒಡವೆಗಳು ಮಾಯವಾಗಿದ್ದರೆ ಅದು ನನ್ನ ಒಡವೇಗಳೇ ಅಂತ. ಅವನು ನಾಚಿಕೊಂಡು ನಾನೇ ಕೊಟ್ಟಿದೀನಿ ಅಂತ ಹೇಳಿರಬಹುದು."

"ಇರಬಹುದು. ಈಗಲೇ ಹೋಗಿ ನೋಡು..." ಕೆಲವೇ ನಿಮಿಷಗಳಲ್ಲಿ ಅವಳು ಒಡವೆಗಳು ಮಾಯವಾಗಿವೆ ಅಂತ ಹೇಳಿದಾಗ, ಅವನು ಹಣೆ ಹಣೆ ಗಟ್ಟಿಸಿಕೊಂಡ.

"ಎಂಥಾ ಕುಲದ್ರೋಹಿ ನಿನ್ನ ಮಗ. ಹುಟ್ಟಿದ ಮನೆಯಲ್ಲೇ ಕಳ್ಳತನ ಮಾಡುವ ನೀಚತನ...!"

"ಆದದ್ದಾಗಿ ಹೋಯ್ತು. ಈಗ ನೀವು ಅವನನ್ನು ಬಿಡಿಸಿಕೊಂಡು ಬರದಿದ್ದರೆ ನಮ್ಮ ಒಡವೆಗಳೂ ನಮಗೆ ದಕ್ಕುವುದಿಲ್ಲ. ನೀವು ಈಗಲೇ ಹೋಗಿ. ಬೇಕಾದರೆ ನಾನೂ ಬರ್ತೀನಿ." ನಾರಾಯಣಮೂರ್ತಿ ತೀಕ್ಷ್ಣವಾಗಿ ಅವಳನ್ನೇ ನೋಡಿ, ಹಾಗೇ ಮತ್ತೆ ರಸ್ತೆಗಿಳಿದ.

ಸಾಯಂಕಾಲದ ಹೊತ್ತಿಗೆ ನಾರಾಯಣಮೂರ್ತಿ ಒಡವೆಗಳೊಂದಿಗೆ ವಾಪಸ್ಸಾದ. ಒಂಟಿಯಾಗಿ ಬಂದವನನ್ನು ನೋಡಿದಳು. ಕೃಷ್ಣ ಎಲ್ಲಿ ಎಂದು ಕೇಳುವ ಧೈರ್ಯ ಬರಲಿಲ್ಲ. ಅವನೂ ಹೇಳಲಿಲ್ಲ. ನಾರಾಯಣಮೂರ್ತಿ ಒಡವೆಯ ಗಂಟನ್ನು ಅವಳ ಕೈಗೆ ಕೊಡಲಿಲ್ಲ.

''ಇನ್ನು ಮುಂದೆ ಬೆಲೆ ಬಾಳುವ ಈ ಒಡವೆಗಳೆಲ್ಲ ತಿಜೋರಿಯಲ್ಲಿರುತ್ತೆ. ನಿನಗೆ ಅದನ್ನು ಜೋಪಾನವಾಗಿ ನೋಡಿಕೊಳ್ಳಲೂ ಆಗುಲ್ಲ.'' ಎಂದು ಒಳಗಿನ ಕೋಣೆಗೆ ಹೋದ.

''ಅಪ್ಪಾ... ಊಟ ಮಾಡಿದ್ರಾ...? ಇವತ್ತು ಏನಾಯ್ತು ಅಂತಂದ್ರೆ! ನನಗೆ ಊಟಕ್ಕೆ ಬರಲು ಸಮಯವೇ ಆಗಲಿಲ್ಲ.''

ಅಪ್ಪನಿಂದ ಉತ್ತರ ಬರದಿದ್ದಾಗ, ಮಂಚದ ಕಡೆ ತಿರುಗಿದ. ಹೇಗೆ ಹೇಗೋ ಮಲಗಿದ್ದವರನ್ನು ಕಂಡು ಗಾಭರಿಯಿಂದ, ಹತ್ತಿರಕ್ಕೆ ಬಂದು ಎಚ್ಚರಿಸಲು ನೋಡಿದ. ಆದರೆ ಜಡವಾಗಿ ಹೋಗಿದ್ದ ದೇಹವನ್ನು ಕಂಡು, ಅಪ್ಪನ ಪ್ರಾಣ ಹೊರಟು ಹೋಗಿದೆ ಎನ್ನುವುದನ್ನು ಅರಿತ. ಯಾಕೆ? ಯಾವಾಗ ಹೀಗಾಯ್ತು ಎನ್ನುವುದನ್ನು ಚಿಂತಿಸಲೂ ಆಗದಷ್ಟು ಮನಸ್ಸು ಜಡವಾಗಿತ್ತು. ಎಷ್ಟೇ ಹೊತ್ತಾದರೂ ಗಂಡ, ಮಾವನ ರೂಮಿನಿಂದ ಹೊರಗೆ ಬರದೇ ಇದ್ದಾಗ, ಸಂಶಯದಿಂದ ಶಾರದಾ ಬಾಗಿಲ ಬಳಿ ಬಂದು ನಿಂತಳು. ಗಂಡ ಎಲ್ಲವನ್ನೂ ಮಾವನಿಗೆ ವರದಿ ಒಪ್ಪಿಸುತ್ತಿರಬಹುದು ಎಂದು ಬಗೆದಿದ್ದಳು. ಆದರೆ ಒಳಗಿನಿಂದ ಯಾವ ಸದ್ದೂ ಇಲ್ಲ. ಮೆಲ್ಲಗೆ ಇಣುಕಿ ನೋಡಿದಳು. ಮಲಗಿದ್ದ ಮಾವನ ಮುಂದೆ ತಲೆ ತಗ್ಗಿಸಿ ಕೂತ ಗಂಡನನ್ನು ಕಂಡಳು. ಆಗ, ಮಾವನಿಗೆ ತಾನು ಆದಿನ ಊಟವನ್ನೇ ಹಾಕಲಿಲ್ಲವೆನ್ನುವುದು ನೆನಪಿಗೆ ಬಂದು, ''ಎಂಥಾ ಅನರ್ಥವಾಯಿತು'' ಎಂದು ತನ್ನನ್ನು ತಾನೇ ಹಳಿದುಕೊಂಡು ಒಳಬಂದಳು. ನಿಜ ಹೇಳಿದರೆ, ಗಂಡ ಎಲ್ಲಿ ಬೈಯುವನೋ ಎಂದುಕೊಂಡು, ಅನುಮಾನಿಸುತ್ತಾ ಗಂಡನ ಪಕ್ಕ ನಿಂತಳು. ಅವನು ಕತ್ತೆತ್ತಿ ಅವಳ ಕಡೆ ನೋಡಿ, ''ಅಪ್ಪ ಇನ್ನಿಲ್ಲ...'' ಎನ್ನುವಂತೆ ಕೈ ಆಡಿಸಿದಾಗ, ಅವಳು ಭಯದಿಂದ ಚೀರಿಕೊಂಡಳು.

''ಸತ್ತು ಎಷ್ಟೋ ಗಂಟೆಗಳೇ ಕಳೆದುಹೋಗಿವೆ ಅಂತನ್ನಿಸುತ್ತೆ. ನನಗಂತೂ ಇವತ್ತು ಅಪ್ಪನ್ನ ವಿಚಾರಿಸುಕ್ಕೇ ಆಗಲಿಲ್ಲ... ಮೊಮ್ಮಗ ಕಳ್ಳ,

ಜೈಲಿನಲ್ಲಿದಾನೆ ಅನ್ನೋ ಸುದ್ದಿ ಕಿವಿಗೆ ಬಿದ್ದು... ಹಾಗೇ ಉಸಿರು ನಿಂತು ಹೋಗಿರಬೇಕು... ನಿನಗೂ ಗೊತ್ತಾಗಲಿಲ್ವಾ!''

''ನಾನಂತೂ, ನೀವು ಮನೆಗೆ ಬರೋದನ್ನೇ ಕಾಯ್ತಿದ್ದೆ... ಅಡಿಗೆ ಸಹ ಮಾಡಲಿಲ್ಲ. ಅಡಿಗೆ ಮಾಡಿದ್ದಿದ್ರೆ ಊಟಕ್ಕೆ ಎಬ್ಬಿಸುಕ್ಕೆ ಬಂದೇ ಬರ್ತಿದ್ದೆ.''

''ಒಟ್ನಲ್ಲಿ ಎಲ್ಲಾ ಮುಗಿದುಹೋಯ್ತು... ಅವರ ಮನಸ್ಸಿಗೂ ನೆಮ್ಮದಿ ಇರಲಿಲ್ಲ. ಕಡೆಗೆ ಈ ಮನೆಯ, ಕೊನೇ ಊಟದ ಋಣವೂ ಇರಲಿಲ್ಲ.''

''ದಯವಿಟ್ಟು ಹಾಗೆನ್ನಬೇಡಿ... ನಾನೇನೂ ದಿನಾ ಅವರನ್ನು ಉಪವಾಸ ಕೆಡವುತಿದ್ನಾ? ಇವತ್ತು ಭಾರಿ ತಪ್ಪು ನಡೆದುಹೋಯ್ತು... ನನ್ನನ್ನು ಕ್ಷಮಿಸಿ ಬಿಡಿ...''

''ಸರಿ ನಾನು ಹೋಗಿ ಶಿವರಾಮುಗೆ ಹೇಳಿ ಬರ್ತೀನಿ. ತಿಳಿಸೋರಿಗೆಲ್ಲಾ ತಿಳಿಸಬೇಕಲ್ಲ...''

''ಯಾರಿಗೆ ಯಾಕೆ ತಿಳಿಸಬೇಕು...? ಆದಷ್ಟು ಬೇಗ ಮುಂದಿನ ಕೆಲಸವನ್ನು ಮುಗಿಸಿಬಿಡಿ. ಇಲ್ಲದಿದ್ದರೆ ರಾತ್ರಿಯೆಲ್ಲಾ ಹೆಣ ಕಾಯ್ತಾ ಕೂತಿರಬೇಕಾಗುತ್ತೆ... ಹೊಟ್ಟೆಗೆ ಹಿಟ್ಟಿಲ್ಲದೇ...''

''ಇವತ್ತು ನನ್ನ ಮಗನ ಅನಾಚಾರದಿಂದ ನನ್ನ ಹೊಟ್ಟೆ ತುಂಬಿ ಹೋಗಿದೆ. ಈ ರಾತ್ರಿ, ನನ್ನನ್ನು ಹುಟ್ಟಿಸಿದ ಈ ಅಪ್ಪನಿಗಾಗಿ ಉಪವಾಸ ವಿರಬಲ್ಲೇ... ನಿನಗೆ ಉಪವಾಸ ವಿರೋಕೆ ಆಗದಿದ್ದರೆ, ನೀನು ಬೇಕಾದರೆ ಹೊಟ್ಟೆ ತುಂಬ ಊಟ ಮಾಡು.''

''ಎಂಥಾ ಮಾತನಾಡ್ತೀರಿ. ಹಿರಿಯೋರ ಹಸಿದ ಹೊಟ್ಟೆಗೆ ಒಂದು ತುತ್ತು ಅನ್ನ ಹಾಕಲಿಲ್ಲ ನಾನು... ನಾನು ಪಾಪಿ... ಅಲ್ಲಿ ನನ್ನ ಮಗ ಜೈಲಿನಲ್ಲಿ ಉಪವಾಸ ಬಿದ್ದಿದಾನೆ. ನನಗೆ ನನ್ನ ಹೊಟ್ಟೆಯ ಚಿಂತೆ ಇಲ್ಲ... ತೀರಿ ಹೋಗಿ ಎಷ್ಟು ಹೊತ್ತಾಗಿದೆಯೋ ಏನೋ... ಹಿರಿಯರ ದೇಹಾನ ತುಂಬಾ ಹೊತ್ತು ಬಿಡಬಾರದು ಅಂತಾರೆ.''

''ಆಗಲಿ, ವಿಚಾರಿಸ್ತೀನಿ. ಶಿವರಾಮುನೂ ಒಂದ್ಮಾತುಕೇಳ್ತೀನಿ... ಆಗೋದಾದ್ರೆ ಹಾಗೇ ಮಾಡೋಣ...''

''ಕೃಷ್ಣನ್ನ ಬಿಡಿಸ್ಕೊಂಡು ಬರೋಕೆ ಆದರೆ ಕರೆದುಕೊಂಡು ಬನ್ನಿ, ಕಡೇ ಸಲ ತಾತನ ಮುಖ ನೋಡಲಿ... ತನ್ನಿಂದಲೇ ಇಷ್ಟೆಲ್ಲಾ ಅನಾಹುತ ಅಂತ ತಿಳಿದರೆ, ಬುದ್ಧಿಯಾದರೂ ಬರಬಹುದು.

''ಅವನು ಲಾಕಪ್‌ನಲ್ಲಿಲ್ಲ. ಅವನನ್ನು ಆಗಲೇ ಬಿಟ್ಟು ಬಿಟ್ರರು. ಅವನನ್ನು ನಾನು ಕರೆಯಲಿಲ್ಲ. ಎಲ್ಲಿಗೆ ಹೋದ್ನೋ ಗೊತ್ತಿಲ್ಲ...''

''ಹಾಗಾದ್ರೆ ಈಗ ಏನು ಮಾಡೋದು? ಬೆಳಗಿನ ತನಕ ಕಾಯೋಣವಾ?''

''ಚೆನ್ನಾಗಿದೆ... ರಾತ್ರಿಯೆಲ್ಲಾ ಕಳೆಯೋದು ಬೇಡ ಅಂತಂದೋಳು ನೀನೇ... ಈಗ ಮಗನಿಗೋಸ್ಕರ ಹೀಗೆ ಹೇಳ್ತಿದೀಯ... ಏನೂ ಬೇಡ... ಅವನು ಬರದಿದ್ರೆ, ಅಪ್ಪನ ಆತ್ಮ ಏನೂ ನೊಂದುಕೊಳ್ಳುಲ್ಲ'' ಎನ್ನುತ್ತಾ, ಅವನು ಚಪ್ಪಲಿ ಮೆಟ್ಟಿ, ತೋಟದ ಮನೆಯ ಕಡೆ ನಡೆದ.

ಕೆಲವೇ ನಿಮಿಷಗಳಲ್ಲಿ ಸುತ್ತ ಮುತ್ತ ಇದ್ದ ಆಪ್ತರೆಲ್ಲಾ ವಿಷಯ ತಿಳಿದು, ಮನೆಯ ಬಳಿ ಬಂದು ಸೇರಿದರು. ನಾರಾಯಣನೊಂದಿಗೆ, ಶಿವರಾಮು ತನ್ನ ಸಂಸಾರದೊಂದಿಗೆ ಬಂದ. ಎಲ್ಲರೂ ಕೃಷ್ಣ ಎಲ್ಲಿ ಎಂದು ಕೇಳುವವರೇ... ಅವನು ಎಲ್ಲಿದಾನೋ, ಎಷ್ಟೋ ಹೊತ್ತಿಗೆ ಬರುತ್ತಾನೋ, ಅವನಿಗಾಗಿ ಕಾಯುವುದರಲ್ಲಿ ಅರ್ಥವಿಲ್ಲ ಎಂದು ಎಲ್ಲರೂ ನಿರ್ಧರಿಸಿ, ಅಂತಿಮ ಕ್ರಿಯೆಯ ಸಿದ್ಧತೆಗಳನ್ನು ನಡೆಸಿದರು.

ಅಂತಿಮ ದರ್ಶನ ಮುಗಿಸಿದ ಶಿವರಾಮುವಿನ ಹೆಂಡತಿ ತನ್ನ ಹೆಣ್ಣುಮಕ್ಕಳೊಡನೆ ತೋಟದ ಮನೆಗೆ ತೆರಳಿದಳು. ಸ್ನಾನ ಮಾಡಿ, ಮನೆಯವರಿಗೆಲ್ಲ ಅಡಿಗೆ ಮಾಡಿ ಕಳಿಸಬೇಕೆಂದುಕೊಂಡಳು. ತಾಯಿಗೆ ಸಹಾಯ ಮಾಡಲೆಂದು ಬಾವಿಯ ನೀರನ್ನು ಸೇದಿ ತರಲು ಬಂದವಳು ಬಾವಿ ಕಟ್ಟೆಯ ಬಳಿ ಕುತಿಳಿದ್ದ ಕೃಷ್ಣನನ್ನು ಕಂಡಳು.

''ಅಬ್ಬಾ... ನೀನಾ? ಇಲ್ಲೇನು ಮಾಡ್ತಿದೀಯ... ನಾನು ಯಾರೋ ಅಂತ ಹೆದರಿಬಿಟ್ಟಿದ್ದೆ...''

''ಓ... ನಿನಗೆ ಹೆದರಿಕೇನೂ ಆಗುತ್ತಾ ಕಲ್ಯಾಣಿ?'' ನಗುತ್ತಾ ನುಡಿದ.

''ಇದು ತಮಾಷೆಗೆ ಸಮಯವಲ್ಲ ಕೃಷ್ಣ... ನಿನ್ನ ಮನೇಲಿ ಏನು ನಡೆದಿದೆ ಅಂತ ನಿನಗೆ ಗೊತ್ತಿಲ್ವಾ?''

''ನನ್ನ ಮನೇಲಿ ನಡೆಯುವ ವಿಚಾರ ನನಗಿಂತ ಮುಂಚೆ ನಿನಗೆ ಗೊತ್ತಿರುತ್ತೆ... ಆದರೆ ಅದೇನು ಅಂತ ನಾನೇನೂ ತಿಳಿದುಕೊಳ್ಳಬೇಕಾಗಿಲ್ಲ. ನಾನು ಇಲ್ಲಿ ಏಕೆ ಬಂದಿದೀನಿ ಅಂತ ಸಹ ಗೊತ್ತಿರಬೇಕಲ್ವಾ?''

''ನಂಗೊತ್ತಿಲ್ಲ... ಆದರೆ ಈಗ ನೀನು ನಿನ್ನ ಮನೆಗೆ ಹೋಗು. ಅಲ್ಲಿ ಎಲ್ಲರೂ ನಿನಗೋಸ್ಕರ ಕಾಯುತ್ತಿರುತ್ತಾರೆ.''

''ನನಗೆ ಅಲ್ಲಿಗೆ ಹೋಗು, ಇಲ್ಲಿಗೆ ಬಾ ಅಂತ ಹೇಳೋಕೆ ನೀನು ಯಾರು? ತಾತ, ಅಪ್ಪ ನಿನ್ನನ್ನ ಉಬ್ಬಿಸಿದಾರೆ ಅಂತ ಅಂದಮಾತ್ರಕ್ಕೆ ನಾನು ನಿನಗೆ ಕೇರ್ ಮಾಡುಲ್ಲ.''

''ಮೊದಲ್ನಿಂದ ನೀನು ನನ್ನನ್ನ ದ್ವೇಷ ಮಾಡ್ತೀಯ ಅಂತ ನನಗೆ ಗೊತ್ತು ಕೃಷ್ಣ. ಆದರೆ ಇವತ್ತು ಆ ಮಾತೆಲ್ಲಾ ಬೇಡ... ನಿನ್ನ ತಾತಾ... ನಮ್ಮ ತಾತಾ... ನಮ್ಮನ್ನೆಲ್ಲಾ ಬಿಟ್ಟು ಹೋಗಿಬಿಟ್ಟರು...''

''ಏನಂದೆ? ನನ್ನ ತಾತ ಅಂತ ಅಂದೆಯಾ? ಅವರೆಂದೂ ನನ್ನ ತಾತನಾಗಿರಲಿಲ್ಲ... ಬರೀ ನಿಮ್ಮ ತಾತ... ಹೋದರೆ ಹೋದರು. ನನಗೇನೂ ನಷ್ಟ ಇಲ್ಲ.''

''ಪ್ಲೀಸ್ ಕೃಷ್ಣ... ಇವತ್ತಾದ್ರೂ ಅಂಥ ಮಾತನ್ನಾಡಬೇಡ.''

''ಹೋಗೇ ಹೋಗು... ನಿನ್ನ ಉಪದೇಶ ಯಾರಿಗೆ ಬೇಕಾಗಿದೆ? ನಾನು ಎಲ್ಲಿಗೂ ಹೋಗುಲ್ಲ... ನಾನು ಇಲ್ಲಿದೀನೀಂತ ಯಾರಿಗಾದ್ರೂ ಹೇಳಿದ್ಯೋ ಕೊಂದು ಹಾಕಿ ಬಿಡ್ತೀನಿ.''

''ನಿನ್ನ ಕೈಯಲ್ಲಿ ಸಾಯುವ ಇಷ್ಟ ನನಗೂ ಇಲ್ಲ. ಎಂದೂ ಇಲ್ಲದ್ದು ಇಲ್ಲಿಗೆ ಬಂದು ಇಲ್ಲಿ ಏನು ಮಾಡ್ತಿದೀಯ...''

''ಆ ಹೆಣದ ಮುಖ ಯಾರು ನೋಡ್ತಾರೆ ರಾತ್ರಿಯೆಲ್ಲಾ. ನಾನು ಈ ರಾತ್ರಿ ಇಲ್ಲಿ ತೋಟದ ಮನೇಲಿ ಕಾಲ ಕಳಿತೀನಿ...''

''ನೀನು... ಇಲ್ಲಿ ಈ ತೋಟದ ಮನೇಲಿರ್ತೀಯ?''

''ನಿನಗೇನು ಕಷ್ಟ? ಇದು ನನ್ನ ಮನೆ. ನನ್ನ ಅಪ್ಪನ ಮನೆ, ನನ್ನ ತಾತ ಕಟ್ಟಿಸಿದ ಮನೆ, ನಿನ್ನ ಮನೆ ಇಲ್ಲ.''

''ಹೌದು, ಇದು ನಿನ್ನ ತಾತ ಕಟ್ಟಿಸಿದ ಮನೆಯೇ... ಆದರೆ ಆ ತಾತನ ಮುಖದರ್ಶನ ಮಾತ್ರ ಬೇಡ... ಮನೇ ಮಾತ್ರ ಬೇಕಾ!''

''ಕಲ್ಯಾಣಿ... ಯಾರ ಹತ್ರ ಮಾತನಾಡ್ತಿದೀಯ?'' ಎನ್ನುತ್ತಾ ಕೋಮಲ ಅಲ್ಲಿಗೆ ಬಂದಾಗ, ಕಲ್ಯಾಣಿ ಎಚ್ಚೆತ್ತುಕೊಂಡಳು.

''ಯಾರೂ ಇಲ್ಲ ಕಣೇ... ತೋಟದ ಆಳು ನೀರು ಸೇದ್ತಾ ಇದ್ನಲ್ಲ. ಹಾಗೇ ಮಾತಾಡಿಸ್ತಾ ನಿಂತಿದ್ದ. ನೀನು ಹೋಗು, ನಾನು ಬರ್ತೀನಿ'' ಎಂದಳು. ತಂಗಿ ಹಾಗೇ ಹಿಂತಿರುಗಿದಳು.

ಸೇದಿ ಇಟ್ಟಿದ್ದ ಬಿಂದಿಗೆಯನ್ನು ಸೊಂಟಕ್ಕೆ ಇಟ್ಟುಕೊಂಡು ಹೊರಟವಳನ್ನು ಕೃಷ್ಣ ಹಿಂದಿನಿಂದ ತಡೆದ.

''ನನ್ನನ್ನು ತೋಟದ ಆಳು ಅಂತೀಯೇನೆ? ನಿನಗೆಷ್ಟು ಕೊಬ್ಬು? ಎನ್ನುತ್ತಾ ಅವಳ ಕೆನ್ನೆಗೆ ಹೊಡೆದ. ಅವಳು ಹಿಂದೆ ಸರಿದಳು. ಬಿಂದಿಗೆ ಸೊಂಟದಿಂದ ಬಿಟ್ಟು ನೀರು ಚೆಲ್ಲಿ ಹೋಯಿತು. ಅವಳ ಕೆನ್ನೆಗೆ ಮತ್ತೆ ಹೊಡೆಯಲೆಂದು ಮುಂದೆ ಬಾಗಿದವನು, ಆಯತಪ್ಪಿ ಅವಳ ಮೇಲೆ ಬಿದ್ದ. ಚೆಲ್ಲಿ ಹೋದ ನೀರಿನಿಂದ ಅವಳ ಮೈಯೆಲ್ಲಾ ಒದ್ದೆಯಾಗಿತ್ತು. ಇಬ್ಬರೂ ಕೆಳಕ್ಕೆ ಬಿದ್ದು ಬಿಟ್ಟರು. ಅವಳು ಅವನನ್ನು ಪಕ್ಕಕ್ಕೆ ತಳ್ಳಿ, ಏಳಲು ನೋಡಿದಳು. ಅವನು ಮತ್ತೆ ಅವಳನ್ನು ತಳ್ಳಿ, ಅವಳ ಮೈ ಮೇಲೆ ಒರಗಲು ಹವಣಿಸಿದ.

''ಕೃಷ್ಣಾ... ನಾನು ಹೋಗಬೇಕು, ಜಾಗ ಬಿಡು... ಅಮ್ಮ ಕಾಯ್ತಾ ಇದಾಳೆ.''

''ಕಲ್ಯಾಣಿ, ನಾನು ನಿನ್ನನ್ನು ಹೋಗಲು ಬಿಡ್ತೀನಿ. ಆದರೆ ನೀನು ನಾನು ಹೇಳಿದ ಹಾಗೆ ಕೇಳಬೇಕು.''

''ನಾನ್ಯಾಕೆ ನೀನು ಹೇಳಿದ ಹಾಗೆ ಕೇಳಬೇಕು? ನೀನು ನನಗಿಂತಚಿಕ್ಕವನು, ನೀನು ನಾನು ಹೇಳಿದ ಹಾಗೆ ಕೇಳಬೇಕು.''

''ನಾನು ಚಿಕ್ಕವನಾಗಿದ್ದರಿಂದಲೇ ಇಷ್ಟು ಕಷ್ಟ ನನಗೆ ಬಂದದ್ದು. ಆದರೆ

ನಾನು ಈಗ ಹಿಂದಿನಂತೆ ಚಿಕ್ಕವನಲ್ಲ. ಬೆಳದಿದೀನಿ. ದೊಡ್ಡವನಾಗಿದೀನಿ... ನೀನೂ ಬೆಳೆದು ದೊಡ್ಡವಳಾಗಿ ಬಿಟ್ಟಿದೀಯ... ನನಗೆ ಗೊತ್ತಾಗಿರಲೇ ಇಲ್ಲ...'' ಎನ್ನುತ್ತಾ ಕೆಟ್ಟದಾಗಿ ನಕ್ಕಾಗ, ಅವಳು ಅವನನ್ನು ಜೋರಾಗಿ ಪಕ್ಕಕ್ಕೆ ತಳ್ಳಿ ಎದ್ದು ನಿಂತು ಕೊಡವನ್ನು ಎತ್ತಿಕೊಂಡು ಬಾವಿಯ ಬಳಿಗೆ ಬಂದಳು.

''ಒಂದು ಕೊಡ ನೀರು ತರುಕ್ಕೆ ಎಷ್ಟು ಹೊತ್ತು ಮಾಡ್ತೀಯ ಕಲ್ಯಾಣಿ? ಯಾರು ಸಿಕ್ಕಿದ್ರು ನಿನಗೆ ಮಾತಿಗೆ?'' ಎನ್ನುತ್ತಾ ಕಲ್ಯಾಣಿಯ ತಾಯಿ ಹೊರಬಂದಾಗ, ಕೃಷ್ಣ ಅಲ್ಲಿಂದ ಮರೆಯಾದ. ಕಲ್ಯಾಣಿ, ಸರಸರನೆ ಮತ್ತೊಂದು ಕೊಡ ನೀರನ್ನು ಸೇದಿ, ಕೊಡವನ್ನೂ ಎತ್ತಿಕೊಂಡಳು.

ಮಧ್ಯರಾತ್ರಿಯ ಹೊತ್ತಿಗೆ, ಕೃಷ್ಣಪ್ಪನವರ ಅಂತ್ಯಕ್ರಿಯೆ ಮುಗಿಯಿತು. ಶಿವರಾಮಯ್ಯ ಮನೆಗೆ ಬಂದು ಸ್ನಾನ ಮಾಡಿದವನು, ಹೆಂಡತಿ ಮಾಡಿಟ್ಟಿದ್ದ ಅಡಿಗೆಯನ್ನು ಡಬ್ಬಿಗಳಿಗೆ ತುಂಬಿಕೊಂಡು, ಮತ್ತೆ ಹೊರಟ.

''ಅಲ್ಲೂ ಆ ಮನೆಯಲ್ಲಿ ಇನ್ನಾರೂ ಇಲ್ಲ. ಅವರಿಬ್ಬರೇ, ನಾರಾಯಣ ಅಂತೂ ಕಂಗಲಾಗಿ ಹೋಗಿದಾನೆ. ಕೃಷ್ಣ ಬರಲೇ ಇಲ್ಲ. ನೀನು ಬಾ... ನಾರಾಯಣನ ಹೆಂಡತಿಗೆ ಸಮಾಧಾನ ಸಿಗುತ್ತೆ.''

''ಈಗ ನಾವೂ ಹೊರಟು ಹೋದರೆ, ಇಲ್ಲಿ? ಮಕ್ಕಳಿಬ್ಬರೇ ಆಗ್ತಾರಲ್ಲ.''

''ಅವರನ್ನು ಕರೆದುಕೊಂಡು ಹೋಗೋಣ.'' ಸರಿ ಎನ್ನುತ್ತಾ ಕಲ್ಯಾಣಿಯನ್ನು ಕರೆದಳು. ಆದರೆ ಉತ್ತರ ಬರಲಿಲ್ಲ. ಅಕ್ಕ-ತಂಗಿ ಇಬ್ಬರೂ ಗಾಢ ನಿದ್ದೆಯಲ್ಲಿದ್ದರು.

''ಸರಿ ಹೊರಗ್ನಿಂದ ಬೀಗ ಹಾಕಿಕೊಂಡು, ಬೇಗ ಹೋಗಿ ಆದಷ್ಟೂ ಬೇಗ ಬಂದು ಬಿಡೋಣ. ಅಷ್ಟರಲ್ಲಿ ಬೆಳಗಾಗಿರುತ್ತೆ ಹೇಗೂ.'' ಎನ್ನುತ್ತಾ ಇಬ್ಬರೂ, ಹೊರಟರು.

ಕತ್ತಲೆಯಲ್ಲಿ ಬಾವಿಯ ಸಮೀಪದಲ್ಲಿದ್ದ ಕೃಷ್ಣ, ಹೊಟ್ಟೆಯ ಹಸಿವನ್ನೂ ತಡೆಯಲಾರದೇ, ಯಾರಿಗೂ ತಿಳಿಯದಂತೆ, ಕಲ್ಯಾಣಿಯ ಮನೆಯೊಳ ಹೊಕ್ಕಿದ್ದ. ಅವರು ಹೊರಡುವುದನ್ನೇ ಕಾದಿದ್ದು, ಅಡಿಗೆ ಮನೆಗೆ ಬಂದು, ಉಳಿದದ್ದನ್ನೆಲ್ಲಾ ತಿಂದ. ಹೊಟ್ಟೆಯ ತಾಪ ಶಮನವಾಗುತ್ತಿದ್ದಂತೇ ಮನ ನಾನಾ ದಿಕ್ಕಿನಲ್ಲಿ ಓಡಿತು.

ಪಕ್ಕ ಪಕ್ಕದಲ್ಲಿ ಮಲಗಿದ್ದ ಅಕ್ಕ ತಂಗಿಯರನ್ನು ಕಂಡ. ದ್ವೇಷದಿಂದ ಕಟಕಟನೆ ಹಲ್ಲು ಕಡಿದ. ನಾನು ಅಲೆಮಾರಿಯಂತೆ, ಕಳ್ಳನಂತೆ, ದಿಕ್ಕು ತಪ್ಪಿದವನಂತೆ ಅಲ್ಲಿ ಇಲ್ಲಿ ತಿರುಗಾಡಿಕೊಂಡು ಬಿದ್ದಿದೇನೆ. ಇವರಿಬ್ಬರೂ ನಿಶ್ಚಿಂತೆಯಿಂದ ನಿದ್ದೆ ಮಾಡುತ್ತಿದಾರೆ. ಅವರ ನಿದ್ದೆಗೆಡಿಸಬೇಕೆಂಬ ಕೆಟ್ಟ ಆಸೆ ಮೂಡಿತು. ಬಚ್ಚಲು ಮನೆಯಿಂದ ಒಂದು ಬಕೆಟ್ ನೀರನ್ನು ತಂದು ಇಬ್ಬರ ಮೇಲೂ ಸುರಿದ. ಇಬ್ಬರೂ ಬೆಚ್ಚಿ ಎದ್ದರು. ಕಣ್ಣು ಹೊಸಕುತ್ತಾ ಕೋಮಲ ಎದ್ದು ಕುಳಿತಳು. ಅವಳನ್ನೇ ಬಿಟ್ಟ ಕಣ್ಣು ಬಿಟ್ಟುಕೊಂಡು ನೋಡತೊಡಗಿದ. ಕಲ್ಯಾಣಿ ನಡುಗಿದಳು.

''ಹೋಗು, ಕೋಮಲ ಬಟ್ಟೆ ಬದಲಾಯಿಸಿ, ಅಲ್ಲೇ ಮಲಕ್ಕೋ...'' ಕಲ್ಯಾಣಿ ತಂಗಿಯನ್ನು ಅಲ್ಲಿಂದ ಕಳಿಸಿದಳು.

''ನೀನು ಬಟ್ಟೆ ಬದಲಾಯಿಸುಲ್ವಾ? ಕಲ್ಯಾಣಿ?'' ಅವನು ವಿಚಿತ್ರವಾಗಿ ನಕ್ಕ.

''ನೀನೇನು ಮಾಡ್ತಿದೀಯ ಇಲ್ಲಿ? ಯಾಕೆ ಬಂದೆ ಇಲ್ಲಿಗೆ?''

''ಇದು ನನ್ನ ಮನೆ. ಬೇಕಾದಾಗ ಬರ್ತೀನಿ. ನನ್ನ ಇಷ್ಟ''

''ಸರಿ. ಆದರೆ ಅದೇನು ಚೆಲ್ಲಾಟ? ನೀರನ್ನೇಕೆ ಸುರಿದೆ?''

''ನೀನೇ ಹೇಳಿದ್ಯಲ್ಲಾ ಚೆಲ್ಲಾಟ ಅಂತ, ಹಾಗೆ ತಿಳಕೋ.''

''ಸುಮ್ಮನೇ ಹೊರಗೆ ಹೋಗು. ಅಮ್ಮನ್ನ ಕರಿತೀನಿ.''

''ನಿಮ್ಮಮ್ಮನಿಗೆ ನಾನೇಕೆ ಹೆದರಬೇಕು? ಇವತ್ತು ನಿಮ್ಮಿಬ್ಬರ ಮೇಲೆ ನನ್ನ ಸೇಡನ್ನು ತೀರಿಸಿಕೊಳ್ಳುವ ಅವಕಾಶ ಸಿಕ್ಕಿದೆ. ನಿಮ್ಮಿಬ್ಬರನ್ನು ಸುಮ್ಮನೇ ಬಿಡ್ತೀನಾ?'' ಅಂತ ಮುಂದೆ ಬಂದ.

''ಬೇಡ ಕೃಷ್ಣ. ಮೊದಲೇ ನಿನ್ನ ಗ್ರಹಚಾರ ಚೆನ್ನಾಗಿಲ್ಲ. ನಮ್ಮ ತಂಟೆಗೆ ಬಂದರೆ ಖಂಡಿತಾ ಸುಮ್ಮನಿರುಲ್ಲ ನಾನು.''

''ಸರಿ ಬಿಡು ನೀನು ಬೇಡ. ನಿನ್ನ ತಂಗೀನೇ ಸಾಕು ನನಗೆ. ಹೇಗೂ ಬಟ್ಟೆ ಬದಲಾಯಿಸುಕ್ಕೆ ಅಂತ ಒಳಗೆ ಹೋಗಿದಾಳೆ. ನಾನೂ ಹೋಗಿ ನೋಡ್ತೀನಿ, ನಿನ್ನ ತಂಗಿ ಹೇಗಿದಾಳೆ ಅಂತ.''

''ಕೃಷ್ಣಾ... ನಿನ್ನ ತಲೆ ಕೆಟ್ಟು ಹೋಗಿದೆ. ನೀನು ಹೀಗೆಲ್ಲಾ ಮಾತಾಡಬಾರದು. ಕೋಮಲ ನಿನ್ನ ತಂಗಿ ಸಮಾನ...''

''ಆದರೆ ನನ್ನ ಸ್ವಂತ ತಂಗಿಯಲ್ಲವಲ್ಲ.''

''ಬೇಡ ಕೃಷ್ಣ... ನೀನು ಈಗ ಇಲ್ಲಿಂದ ಹೊರಟುಹೋಗು. ಇಲ್ಲದಿದ್ರೆ ನಾನೇ ನಿನ್ನನ್ನ ಪೋಲಿಸರಿಗೆ ಹಿಡಿದುಕೊಡ್ತೀನಿ. ಇದುವರೆಗೂ ಸಣ್ಣ ಪುಟ್ಟ ಕಳ್ಳತನ ಮಾಡಿ ಜೈಲಿಗೆ ಹೋಗಿದ್ದೆ. ಆಮೇಲೆ ಜೀವಮಾನವೆಲ್ಲ ಜೈಲಿನಲ್ಲೇ ಕೊಳೀಬೇಕಾಗುತ್ತೆ...''

''ಏನೇ ನನ್ನನ್ನು ಹೆದರಿಸ್ತೀಯಾ? ಮೊದಲು ನಿನಗೆ ಬುದ್ಧಿ ಕಲಿಸಲೇಬೇಕು. ಆ ಮೇಲೆ ನಿನ್ನ ತಂಗಿ, ನಾನು ಹೇಳಿದ ಹಾಗೆ ಕೇಳೇ ಕೇಳ್ತಾಳೆ...''

''ಅಮ್ಮ... ಅಮ್ಮ... ಕಲ್ಯಾಣಿ ಹೆದರಿ ತಿರುಚಿದಳು.'' ಅವನು ವಿಕಟವಾಗಿ ನಕ್ಕ. ''ಅಮ್ಮ ಅಪ್ಪ ಇಬ್ಬರೂ ಮನೇಲಿಲ್ಲ.''

ಅವಳು ಎದ್ದು ಹಿಂಬಾಗಿಲ ಕಡೆ ಓಡಿದಳು. ಅವಳನ್ನು ಹಿಡಿಯಲೆಂದು ಕೃಷ್ಣನೂ ಅವಳ ಹಿಂದೆ ಓಡಿದ. ಅವಳು ಹಾಗಿಲ ಚಿಲಕವನ್ನು ತೆಗೆಯುವ ಮೊದಲೇ ಅವಳನ್ನು ಹಿಡಿದುಕೊಂಡ. ಅವಳು ಕೊಸರಿಕೊಳ್ಳಲು ಪ್ರಯತ್ನಿಸಿದಷ್ಟೂ ಅವನ ಹಿಡಿತ ಹೆಚ್ಚಾಯಿತು. ತನ್ನ ಸೇಡನ್ನು ತೀರಿಸಿಕೊಂಡ ನಂತರವೇ ಅವನ ಹಿಡಿತ ಸಡಿಲವಾದದ್ದು. ಕಲ್ಯಾಣಿ ಸೋತು ಹೋಗಿದ್ದಳು. ತನ್ನ ತಮ್ಮನ ಸಮಾನವಾದ ಕೃಷ್ಣ ತನಗೆ ಹೀಗೆ ಅನ್ಯಾಯ ಮಾಡಬಹುದೆಂದು ಅವಳು ಎಂದೂ ಯೋಚಿಸಿರಲೇ ಇಲ್ಲ.

ಅಳುತ್ತಾ ಇದ್ದವಳನ್ನು ಕಾಲಲ್ಲಿ ಸರಿಸಿ, ''ನಾನು ಕಾಳಸರ್ಪ ಇದ್ದ ಹಾಗೆ... ನನಗೆ ಅನ್ಯಾಯ ಮಾಡಿದವರನ್ನು ನಾನು ಖಂಡಿತಾ ಬಿಡುಲ್ಲ... ಯಾರಿಗಾದ್ರೂ ಈ ವಿಷಯ ಹೇಳಿದ್ಯೋ ನಿನ್ನ ತಂಗಿಗೂ ಇದೇ ಗತಿ ಕಾಣಿಸ್ತೀನಿ'' ಎಂದು ನುಡಿದು, ಹಿಂಬಾಗಿಲನ್ನು ತೆರೆದು ಕತ್ತಲಲ್ಲಿ ಮರೆಯಾಗಿ ಹೋದ. ಕಲ್ಯಾಣಿ ಜ್ಞಾನವಿಲ್ಲದವಳಂತೆ ಎಷ್ಟೋ ಹೊತ್ತು ಮಲಗಿದ್ದಳು.

''ಇವತ್ತು ಕೃಷ್ಣನಿಗೇನಾಯ್ತು! ಎಷ್ಟೇ ಹಂಗಿಸಿ, ಹೀಯಾಳಿನಿಳಿ ಮಾತನಾಡಿದ್ದರೂ, ಎಂದು ಹೀಗೆ ವರ್ತಿಸಿರಲಿಲ್ಲ. ಪಶುವಿನಂತೆ ಕೀಳು ಮಟ್ಟಕ್ಕೆ

ಇಳಿದು ನನ್ನ ಬಾಳನ್ನೇ ಹಾಳು ಮಾಡಿಬಿಟ್ಟನಲ್ಲ.'' ಬಿಕ್ಕಿ ಬಿಕ್ಕಿ ಅತ್ತರೂ ಅವಳಿಗೆ ಯಾರೂ ಸಾಂತ್ವನ ಹೇಳುವವರಿಲ್ಲ. ನಿಧಾನವಾಗಿ ಎದ್ದು ತನ್ನ ತಂಗಿ ಮಲಗಿದ್ದ ಕೋಣೆಗೆ ಬಂದಳು.

ಗಾಢವಾಗಿ ಮಲಗಿ ನಿದ್ರಿಸುತ್ತಿದ್ದವಳನ್ನು ಕಂಡಳು. ''ಕೋಮಲ ಹೆಸರಿಗೆ ತಕ್ಕಂತೆ ನಿನ್ನ ದೇಹ ಅತಿ ಕೋಮಲ... ನಿನಗೆ ಇಂಥದ್ದನ್ನೆಲ್ಲಾ ತಡೆಯುವ ಶಕ್ತಿಯೇ ಇಲ್ಲ... ನಾನು ಇವತ್ತಿನಿಂದ ಕಲ್ಲಾಗಿ ಬಿಟ್ಟೆ... ಅವನ ಬಲಾತ್ಕಾರಕ್ಕೆ ಬಲಿಯಾಗಿಯೂ ನಾನಿನ್ನೂ ಬದುಕಿದ್ದೇನಲ್ಲ... ಇನ್ನು ನನಗೆ ಏನೇ ಆದರೂ ಸರಿ... ನಿನಗೆ ಮಾತ್ರ ಅವನಿಂದ ಯಾವ ತೊಂದರೆಯೂ ಆಗದಂತೆ ನೋಡಿಕೊಳ್ತೀನಿ ಎಂದು ತನ್ನಲ್ಲೇ ನಿರ್ಧರಿಸಿ, ಬಚ್ಚಲು ಮನೆಯ ಕಡೆ ನಡೆದಳು. ಬೆಳಕಾಗುತ್ತಾ ಬಂದಿತ್ತು. ತಂದೆ ತಾಯಿ ವಾಪಸ್ಸು ಬಂದರು. ಸ್ನಾನ ಮಾಡಿ ಹೊರಗೆ ಬಂದವಳನ್ನು ಕಂಡು, ''ಅದೇನೇ... ಇವತ್ತು ಇಷ್ಟ ಬೇಗನೇ ಎದ್ದು ಸ್ನಾನ ಮಾಡ್ತಿದೀಯಲ್ಲ?''

ಬಂದುಗಳಿಗೆ ತಾಯಿಯೊಡನೆ ಎಲ್ಲವನ್ನು ಹೇಳಿಕೊಂಡು ಅತ್ತು ಬಿಡುವ ಮನಸ್ಸಾಯಿತು ಆದರೆ... ಮೊದಲು ಕೋಮಲನ್ನ ಕೃಷ್ಣನ ಕಣ್ಣಿಗೆ ಬೀಳದಂತೆ ಸುರಕ್ಷಿತವಾಗಿಡಬೇಕು... ನಂತರ ನೋಡೋಣ ಎಂದುಕೊಂಡಳು.

''ನಾನು ಪೇಟೆಗೆ ಹೋಗಿ ಬರ್ತೀನಿ. ಸ್ವಲ್ಪ ಕೆಲಸವಿದೆ'' ಎಂದಳು.

''ಪೇಟೆಗೆ ಇವತ್ತಾ?... ನೆನ್ನೆ ಇನ್ನು ನಿನ್ನ ತಾತ ತೀರಿ ಹೋಗಿದಾರೆ. ಪೇಟೇಲಿ ಏನು ಕೆಲಸ?''

''ನಮ್ಮ ಕೆಲಸ ಕಾರ್ಯಗಳಿಗೆ ಇದೆಲ್ಲಾ ಅಡ್ಡ ತಾರಬೇಡಮ್ಮಾ... ಅವರೇನು ನಮ್ಮ ಸ್ವಂತ ತಾತನೇ... ಅವರು ನಮಗೆ ಏನು ಸಂಬಂದ?''

''ಕಲ್ಯಾಣೀ! ನೀನು ಈ ಮಾತುಗಳನ್ನಾಡ್ತಿದೀಯ? ಅವರು ಎಷ್ಟು ಮುದ್ದು ಮಾಡುತ್ತಿದ್ದರು?'' ಶಿವರಾಮಯ್ಯ ನುಡಿದರು.

''ಬಿಡಿ ಅಪ್ಪಾ... ಅವರು ಮುದ್ದು ಮಾಡಿದ ಮಾತ್ರಕ್ಕೆ ಅವರು ನನ್ನ ತಾತನಾಗುವುದಿಲ್ಲ... ಅವರ ಸ್ವಂತ ಮೊಮ್ಮಗ ಕೃಷ್ಣನಿಗೇ ಬೇಡದ ಸಂಬಂಧ ನಮಗೇಕೆ?''

''ಕೃಷ್ಣ ಮನುಷ್ಯ ಜಾತೀನೇ ಅಲ್ಲ... ಅವನಲ್ಲಿ ಮಾನವ ಗುಣಗಳೇ ಇಲ್ಲ. ಅವನೊಬ್ಬ ಪಶು.''

ಅವನು ನಿಜವಾಗಿಯೂ ಪಶುವೇ ಎಂದು ನುಡಿದು, ನಡೆದುದನ್ನು ತಿಳಿಸುವ ಮನಸ್ಸಾದರೂ, ಕೃಷ್ಣನ ಬೆದರಿಕೆಯ ನೆನಪಾಗಿ, ಅಲ್ಲಿಂದ ಹೊರಟು ಹೋದಳು.

ತಾತನ ಸಾವಿನಿಂದ ಅವಳ ಮನಸ್ಸು ಕೆಟ್ಟು ಹೋಗಿದೆ ಅದಕ್ಕೇ ಏನೇನೋ ಮಾತಾಡ್ತಿದಾಳೆ ಎಂದು ಭಾವಿಸಿದರು. ಸಿದ್ಧಳಾಗಿ ಹೊರಬಂದವಳು, ''ಅಮ್ಮ ಕೋಮಲನ್ನ ಮನೆಯಲ್ಲಿ ಒಬ್ಬಳನ್ನೇ ಬಿಟ್ಟು ಎಲ್ಲಿಗೂ ಹೋಗಬೇಡ... ರಾತ್ರಿಯೆಲ್ಲಾ ತುಂಬಾ ಅಳುತ್ತಿದ್ದಳು'' ಎಂದು ತಾಯಿ ಕೊಟ್ಟ ಬಿಸಿ ಬಿಸಿ ಕಾಫಿಯನ್ನು ಹೀರಿ, ಹೊರಗೆ ಹೊರಟಳು.

''ಅತ್ತೇ... ಕಲ್ಯಾಣಿ ಇಲ್ವಾ?'' ಎನ್ನುತ್ತಾ ಕೃಷ್ಣ ಮನೆಯೊಳಗೆ ಬಂದಾಗ ಆಕೆ ಬೆರಗಾದಳು... ಕೃಷ್ಣ ಇಲ್ಲಿಗೆ ಎಂದೂ ಬಂದವನೇ ಅಲ್ಲ... ಕಲ್ಯಾಣಿಯ ತಲೆಯನ್ನೇ ಕಂಡರೆ ಆಗದಿದ್ದವನು... ಈ ದಿನ ಅವನ ಬಾಯಲ್ಲಿ ಕಲ್ಯಾಣಿಯ ಹೆಸರು? ಅಲ್ಲದೇ ನನ್ನನ್ನು ಅತ್ತೇ ಅಂತ ಕರೀತಿದಾನೆ... ಒಂದು ರಾತ್ರಿಯಲ್ಲಿ ಎಂಥಾ ಬದಲಾವಣೆ?

''ಅವಳು ಮನೇಲಿಲ್ಲ. ಪೇಟೆಗೆ ಹೋಗಿದಾಳೆ. ಬಂದ ತಕ್ಷಣ ಕಳಿಸ್ತೀನಿ...'' ಕೃಷ್ಣನಿಗೆ ಆಶ್ಚರ್ಯ. ಈ ತಾಯಿ ತಾನಾಗಿಯೇ ಅವಳನ್ನು ಕಳಿಸ್ತೀನಿ ಅಂತಿದಾಳಲ್ಲ ಎಂದುಕೊಂಡು.

''ಕೋಮಲ ಇಲ್ವಾ... ಅತ್ತೆ?'' ಎನ್ನುತ್ತಾ ಒಳಗೆ ಬಂದು ಕೂತ.

''ಅವಳು ಸ್ನೇಹಿತೆಯ ಮನೆಗೆ ಹೋಗಿದಾಳೆ. ಬೇಕಾದ್ರೆ ಇಬ್ಬರನ್ನು ನಿಮ್ಮ ಮನೆಗೆ ಕಳಿಸ್ತೀನಿ'' ಅಂತ ಅವಳು ನುಡಿದಾಗ, ಅವನು ವಿಚಿತ್ರವಾಗಿ ನಕ್ಕ. ಹಾಗೇ ಮಾಡಿ ಎಂದು ನುಡಿದು ಅತ್ತಿತ್ತ ನೋಡುತ್ತಿದ್ದವನನ್ನೇ ಆಕೆ ಅನುಮಾನದಿಂದ ನೋಡಿದಳು.

''ಕಾಫಿ ಕುಡಿತೀಯಾ ಕೃಷ್ಣಾ!''ಕೇಳಿದಳು.

''ಬೇಡ... ಅದನ್ನೆಲ್ಲ ನಾನು ಕುಡಿಯೋದೇ ಇಲ್ಲ...''

''ನೀನು ಯಾವಾಗ ಬಂದೆ? ನೆನ್ನೆ ರಾತ್ರಿ ಎಲ್ಲರೂ ನಿನಗೋಸ್ಕರ ಎದುರು ನೋಡುತ್ತಿದ್ದರು... ತಾತನ ಅಂತಿಮ ಮುಖ ದರ್ಶನವೂ ಇಲ್ಲದ ಹಾಗಾಯಿತಲ್ಲ.... ಆ ದುಃಖ ಜೀವಮಾನವೆಲ್ಲಾ ಕೊರೀತಿರುತ್ತೆ''

''ಹಾಗೇನಿಲ್ಲ ಅತ್ತೆ... ನಾನು ಎಂದೂ ತಾತ, ಮನೆ ಅಂತ ಹಚ್ಚಿಕೊಂಡವನೇ ಅಲ್ಲ, ನನಗೇಕೆ ದುಃಖ? ನಾನು ನೆನ್ನೆ ರಾತ್ರಿ ಅನುಭವಿಸಿದ ಸುಖವನ್ನು ನಾನು ಈ ಜೀವಮಾನವೆಲ್ಲಾ ಮರೆಯವಂತಿಲ್ಲ'' ಎಂದಕೆಟ್ಟ ನಗೆ ನಕ್ಕ.

ಆಕೆಗೆ ವಿಚಿತ್ರವೆನಿಸಿತು. ತಾತನ ಸಾವು ಇವನಿಗೆ ಖುಷಿಯನ್ನು ತಂದುಕೊಟ್ಟಿದೆಯೆ? ಅದನ್ನೇ ಬಾಯಿಬಿಟ್ಟು ಹೇಳುತ್ತಿದಾನಲ್ಲ... ಇನ್ನು ಇವನ ಹತ್ತಿರ ಮಾತನಾಡಬಾರದು ಎಂದುಕೊಂಡು ಸುಮ್ಮನಾದಳು... ತನ್ನದೇ ಮನೆ ಎಂಬಂತೆ ಎಲ್ಲಾ ಕೋಣೆಗಳನ್ನು ಇಣುಕಿ ನೋಡಿ, ತನ್ನ ಪಾಡಿಗೆ ತಾನು ಹೊರಟು ಹೋದ. ಇವನೇಕೆ ಬಂದಿದ್ದ? ಹೀಗೇಕೆ ಮಾತಾಡಿದ! ಎಂದೂ ಈ ರೀತಿ ವರ್ತಿಸಿರಲಿಲ್ಲ... ನಮ್ಮೊಂದಿಗೆ ಇದ್ದವನೇ ಅಲ್ಲ... ಸಂಶಯದ ಸುಳಿಗಳು ಸುತ್ತಿಕೊಂಡವು.

ತಾತ ಸತ್ತು ಹೋಗಿದಾರೆ. ಬಹುಶಃ ಇವನಿಗೆ ಆಸ್ತಿಯ ಚಿಂತೆ ಇರಬೇಕು. ಅದಕ್ಕೇ ಎಂದೂ ಬರದಿದ್ದವನು ಬಂದು ಮನೆಯ ಹೊರಗೆ ಒಳಗೆ ಎಲ್ಲಾ ನೋಡಿಕೊಂಡು ಹೋಗಿದಾನೆ. ಏನೇನು ಆಸೆಯೋ... ಈ ಹುಚ್ಚು ಮುಂಡೇದಕ್ಕೆ? ಗಂಡ ಮಕ್ಕಳು ಬಂದೊಡನೆ, ಇವನು ಬಂದು ಹೋದ ವಿಷಯ ಹೇಳಬೇಕೆಂದುಕೊಂಡಳು.

ಕಲ್ಯಾಣಿಗೆ ಅವನು ಮನೆಗೆ ಬಂದು ಹೋದ ವಿಷಯ ತಿಳಿದು ಮನಸ್ಸು ಕಹಿಯಾಯಿತು. ''ಅವನು ಇಲ್ಲಿಗೆ ಬರಬಾರದು... ಅವನ ಕಣ್ಣಿಗೆ ಕೋಮಲ ಬೀಳಬಾರದು... ತಾನು ಅವನು ಬರದಂತೆ ತಡೆಯಬೇಕು, ಎಂದು ನಿಶ್ಚಯಿಸಿಕೊಂಡಳು. ತಾನೇ ಕೃಷ್ಣನ ಮನೆಯ ಕಡೆ ನಡೆದಳು. ಅವನು ಅಲ್ಲಿಗೆ ಬಂದೇ ಇಲ್ಲ ಎನ್ನುವ ವಿಷಯ ತಿಳಿದು ಅಚ್ಚರಿಗೊಂಡಳು. ಎಲ್ಲೋ ಅಲೆದಾಡುತ್ತಿರುತ್ತಾನೆ... ಬರದಿದ್ದರೆ ಮತ್ತು ಒಳ್ಳೆಯದೇ ಎಂದುಕೊಂಡು ಹಿಂತಿರುಗಿದಳು. ಆದರೂ ಒಳ ಮನಸ್ಸು ಅವನನ್ನು ನಿರೀಕ್ಷಿಸುತ್ತಿತ್ತು. ಮತ್ತೆ

ನಾಲ್ಕಾರು ದಿನಗಳು ಕಳೆದರೂ ಅವನ ಪತ್ತೆ ಇಲ್ಲದಿದ್ದಾಗ, ನಿರಾಳವೆನಿಸಿತ್ತು. ಪೀಡೆ ತೊಲಗಿತು ಎಂದು ಬೈದುಕೊಂಡರೂ, ತನಗೆ ಅಂಟಿದ ಕಳಂಕವನ್ನು ತೊಳೆಯಲು ಸಾಧ್ಯವೇ ಎಂದುಕೊಂಡಾಗ, ದುಗುಡದ ಮೋಡ ಮನಸ್ಸನ್ನು ಮುದುಡುತ್ತಿತ್ತು. ಆತಂಕದಿಂದ ಮೈ ಬೆವರುತ್ತಿತ್ತು. ಕೋಮಲಳನ್ನು ಬಿಟ್ಟು ಒಂದು ಗಳಿಗೆ ಇರುತ್ತಿರಲಿಲ್ಲ. ಸದಾ ತನ್ನ ಜೊತೆ ಇರುವ ಅಕ್ಕನನ್ನು ಕೋಮಲ ಕೇಳುತ್ತಿದ್ದಳು.

''ಏನೇ ಅಕ್ಕ, ಸದಾ ನನ್ನ ಹಿಂದೆ ಮುಂದೇನೇ ಇರ್ತೀಯಲ್ಲ. ನಿನಗೆ ಒಬ್ಬಳಿಗೆ ಇರುಕ್ಕೆ ಹೆದರಿಕೇನಾ?'' ನಕ್ಕಳು.

''ಯಕೋ ತಾತ ಸತ್ತು ಹೋದ ಮೇಲೆ, ಇಲ್ಲಿರೋದೇ ಬೇಡಾಂತ ಅನ್ನಿಸುತ್ತೆ. ಅಪ್ಪ ಅಮ್ಮ ಬೇಕಾದರೆ ಇಲ್ಲಿರಲಿ... ನಾನು ನೀನು ಪೇಟೆಗೆ ಹೋಗಿ ಯಾವುದಾದರೂ ಹೆಂಗಸರ ಹಾಸ್ಟೆಲ್‌ನಲ್ಲಿರೋಣ... ನಾನು ಕೆಲಸಕ್ಕೆ ಸೇರಿಕೊಂಡು ನಿನ್ನನ್ನು ಓದಿಸ್ತೀನಿ.''

''ನೀನು ಕೆಲಸಕ್ಕೆ ಸೇರ್ತೀಯಾ? ಅಪ್ಪ ಒಪ್ತಾರಾ?''

''ಕೆಲಸಕ್ಕೆ ಸೇರೋದು ಬೇಡ ಅಂತ ಆದರೆ, ಕಾಲೇಜಿಗೆ ಸೇರಿಕೋಳ್ತಿನಿ. ಓದನ್ನು ಮುಂದುವರೆಸ್ತೀನಿ''

''ಮದುವೆ ಮಾಡಿಕೊಂಡು, ಗಂಡನ ಮನೆಗೆ ಹೋಗಬೇಕೂಂತ ಅನ್ನಿಸೋಲ್ಲೇನೇ ಅಕ್ಕಾ?'' ಕಿಲಕಿಲನೆ ತಂಗಿ ನಕ್ಕಾಗ ಅವಳಿಗೆ ನಗಬೇಕೆನಿಸಲಿಲ್ಲ. ಸಿಡುಕಿದಳು.

''ನಾನು ಮದುವೆ ಮಾಡಿಕೊಳ್ಳಲ್ಲ. ಮದುವೆ, ಸಂಸಾರ, ಎಲ್ಲಾ ನಿನಗಿರಲಿ. ನಾನು ಅಪ್ಪ ಅಮ್ಮನ್ನ ನೋಡಿಕೊಂಡು ಹೀಗೇ ಇದ್ದುಬಿಡ್ತೀನಿ.''

''ಸನ್ಯಾಸಿನಿಯ ತರಹಾ...''

''ಸನ್ಯಾಸಿನೀನೋ, ವಿರಾಗಿನಿನೋ ಅದೆಲ್ಲಾ ನಿನಗ್ಯಾಕೆ? ತಲೆ ಹರಟೆ. ನೀನು ಚೆನ್ನಾಗಿ ಓದಿ ವಿದ್ಯಾವಂತೆಯಾಗಬೇಕು. ಅದೇ ನನ್ನ ಆಸೆ'' ತಂಗಿಯ ತಲೆ ಸವರಿದಳು.

''ಸಾಕೇ. ಮಹಾ... ದೊಡ್ಡ ಜ್ಞಾನಿಯ ತರಹ ಆಡಬೇಡ. ನೀನೂ

ಮದುವೆಯಾಗಿ ಖುಷಿಯಾಗಿರಲಿ ಅಂತ ಅಪ್ಪ ಅಮ್ಮನಿಗೆ ಆಸೆ ಇರುಲ್ವಾ? ಸುಮ್ಮನೇ ಉಡಾಫೆ ಹೊಡಿಬೇಡ.''

''ಈಗ್ಯಾಕೆ ಆ ಮಾತು? ಸಮಯ ಬಂದಾಗ ನೋಡೋಣ'' ಅಂತ ಹೇಳಿ, ತಂಗಿಯ ಬಾಯಿ ಮುಚ್ಚಿಸಿದರೂ, ಮುಂದೆ ತನ್ನ ಗತಿಯೇನು ಎಂಬ ಚಿಂತೆ ಕಾಡಿಸದೇ ಇರಲಿಲ್ಲ. ಕೃಷ್ಣ ಮಾಡಿದ್ದು ಅಕ್ಷಮ್ಯ ಅಪರಾಧ, ಆದರೆ ಅವನು ಹೀಗೆ ಮಾಡಿದ ಅಂತ ಯಾರಿಗೂ ಹೇಳುವಂತಿಲ್ಲ... ಅತ್ಯಾಚಾರಕ್ಕೆ ಕಾನೂನು, ಅವನಿಗೆ ಜೀವಾವಧಿ ಶಿಕ್ಷೆಯನ್ನೇ ವಿಧಿಸಬಹುದು. ಆದರೆ... ತಾನು ತನ್ನ ತಂಗಿಯ ಭವಿಷ್ಯಕ್ಕಾಗಿ, ಎಲ್ಲವನ್ನು ಮುಚ್ಚಿಡಬೇಕಾದ ಸ್ಥಿತಿ ಒದಗಿದೆಯಲ್ಲಾ... ತನಗೆ ತಮ್ಮ ಹತ್ತಿರದವನಿಂದಲೇ ಇಂಥ ಅನ್ಯಾಯವಾಗಿದೆ ಅಂತ ಜನರಿಗೆ ತಿಳಿದರೆ ಜನ ನಗುವುದಿಲ್ಲವೇ? ತನ್ನ ತಂದೆ ತಾಯಿ ಅವಮಾನದಿಂದ ತಲೆ ಎತ್ತಿ ತಿರುಗಾಡದಂತಹ ಸ್ಥಿತಿ ಬರುವುದಿಲ್ಲವೇ?... ತಾನು ಸುಮ್ಮನಿರಬೇಕು... ಸುಮ್ಮನಿದ್ದು ಸಮಯ ಬಂದಾಗ ಪ್ರತೀಕಾರ ತೆಗೆದುಕೊಳ್ಳಬೇಕು... ಅವನು ಸುಖವಾಗಿರಲು ಮಾತ್ರ ಬಿಡಬಾರದು... ಹೀಗೆ ಆಲೋಚನೆಗಳ ಸರಮಾಲೆ ಹೆಣೆಯುತ್ತಿದ್ದಳು.

ಒಂದು ವಾರ ಕಳೆಯಿತು. ತಾತ ಕೃಷ್ಣಪ್ಪನವರ ದಿನ ಕರ್ಮಗಳು ಮುಗಿದಿದ್ದವು. ಕೃಷ್ಣ ಮನೆಯ ಕಡೆ ಬಂದಿರಲೇ ಇಲ್ಲ. ಶಾರದಾ ಬಳಗೊಳಗೇ ದುಃಖಿಸಿದಳು. ನನ್ನ ಒಡವೆ ನನಗೆ ಸಿಕ್ಕಿತು... ಮಗ ಒಮ್ಮೆ ಮನೆಗೆ ಬಂದಿದ್ದರೆ ಚೆನ್ನಾಗಿತ್ತೆನಿಸಿತು.

''ತಾಯಿಯ ಒಡವೆಗಳನ್ನು ಕದ್ದ ಚಂಡಾಲನಿಗೆ, ತಾಯಿಗೆ ಮುಖ ತೋರಿಸಲು ಹೀನಾಯ... ಹೇಡಿ ಎಂದು ನಾರಾಯಣ ಬೈದುಕೊಂಡ.

ಒಂದು ದಿನ ದಿढೀರನೇ ಕೃಷ್ಣ ತೋಟದ ಮನೆಗೆ ಬಂದ. ಶಿವರಾಮಯ್ಯ ಮನೇಲಿರಲಿಲ್ಲ. ಉದ್ವೇಗದಿಂದ ಕೃಷ್ಣನ ಮುಖ ಕೆಂಪಾಗಿತ್ತು. ಅತಿ ಭಯಗೊಂಡವನಂತೆ ಕಂಡು ಬರುತ್ತಿದ್ದ.

''ಅತ್ತೇ ಒಂದು ಲೋಟ ತಣ್ಣಗಿರೋ ನೀರು ಕೊಡಿ. ತುಂಬಾ ಬಾಯಾರಿಕೆ ಆಗ್ತಿದೆ'' ಅಂತಂದ. ಅಲ್ಲಿಯೇ ಇದ್ದ ಕಲ್ಯಾಣಿ ಅವನ ಕಡೆ ಸುಮ್ಮನೇ ನೋಡಿದಳು. ತಾಯಿ ಅತ್ತ ಹೋದ ಕೊಡಲೇ ಕೃಷ್ಣ ವಿಸುದನಿಯಲ್ಲಿ, ಅವಳ

ಕಡೆ ನೋಡದೇನುಡಿದ.

''ಪೋಲಿಸ್ನೋರು ನನ್ನನ್ನು ಹುಡುಕ್ತಿದ್ದಾರೆ. ನಾನು ಇಲ್ಲಿರುವುದು ಅವರಿಗೆ ತಿಳಿಯಕೂಡದು. ಒಂದೆರಡು ದಿನ ಅಷ್ಟೇ... ಆ ಮೇಲೆ ನಾನೇ ಹೊರಟು ಹೋಗ್ತೀನಿ''

ಕಲ್ಯಾಣಿ ಏನೂ ನುಡಿಯಲಿಲ್ಲ. ಆಕೆ ತಂದಿತ್ತ ನೀರನ್ನು ಗಟಗಟನೆ ಕುಡಿದು ''ನಿಮ್ಮ ತಂದೆ ಎಲ್ಲಿ?'' ಅವನು ಪ್ರಶ್ನಿಸಿದಾಗ, ಕಲ್ಯಾಣಿ ಉತ್ತರಿಸಲಿಲ್ಲ. ಆಕೆಯೇ ನುಡಿದಳು.

''ಕೋರ್ಚಿನ ಕೆಲಸವಿತ್ತು ಅಂತ ಇಬ್ಬರೂ ಪೇಟೆಗೆ ಹೋಗಿದಾರೆ. ಯಾಕೆ ಅವರಿಂದ ಏನಾದ್ರೂ ಆಗಬೇಕಾಗಿತ್ತಾ?''

''ಏನಿಲ್ಲ... ಕೋರ್ಟು ಕೆಲಸ ಏನಿತ್ತು? ಏನಾದ್ರೂ ಕೇಸು ನಡೀತಿದೆಯಾ?'' ತಾಯಿ ಏನಾದರೂ ಹೇಳುವ ಮೊದಲೇ ಈಗ ಕಲ್ಯಾಣಿ ನುಡಿದಳು.

''ಮನೇ ಕಡೆ ಏನು ನಡೀತಿದೆ ಅಂತ ತಿಳಿಯದ ಮೂರ್ಖ ನೀನು! ನಿಮ್ಮ ತಾತನ ಆಸ್ತಿನೆಲ್ಲಾ ನಿಮ್ಮ ತಂದೆ, ತಮ್ಮ ಹೆಸರಿಗೆ ಮಾಡಿಸಿಕೊಳ್ಳುತ್ತಿದ್ದಾರೆ. ನಿನ್ನ ಕೈಗೆ ಒಂದು ದಮ್ಮಡಿ ಸಿಗದ ಹಾಗೆ ನಿಮ್ಮಪ್ಪ ನಿನಗೆ ಬುದ್ಧಿ ಕಲಿಸ್ತಾರೆ ನೋಡು...!''

''ಕಲ್ಯಾಣಿ... ಆ ಮಾತೆಲ್ಲ ನಿನಗ್ಯಾಕೆ ಸುಮ್ಮನಿರು. ಅಪ್ಪನ ಆಸ್ತಿ ಮಗನಿಗೆ ಸಿಗದೆ ಇನ್ಯಾರಿಗೆ ಹೋಗುತ್ತೆ?'' ತಾಯಿ ಮಧ್ಯೆ ಬಾಯಿ ಹಾಕಿದಾಗ, ಕಲ್ಯಾಣಿ ನುಡಿದಳು.

''ನಾನು ಏನೂ ಆಡಬಾರದ ಮಾತನ್ನಾಡಿಲ್ಲ. ನಾನು ಕೃಷ್ಣನಿಗಿಂತ ಒಂದೆರಡು ವರ್ಷಕ್ಕೆ ದೊಡ್ಡವಳು. ಅವನಿಗೆ ತಿಳುವಳಿಕೆ ಸಾಲದು. ಅದನ್ನ ಹೇಳ್ತಿದೀನಿ.''

''ನನಗೆ ತಿಳುವಳಿಕೆ ಇಲ್ಲ ಅಂತ ಹಂಗಿಸಿ ನುಡಿಯಬೇಡ ಕಲ್ಯಾಣಿ ಅದಕ್ಕೆಲ್ಲಾ ನೀವೇ ಕಾರಣ.''

''ಏನೂ ಅಲ್ಲ. ನೀನು ಹಾಳಾಗುವುದಕ್ಕೆ ನೀನೇ ಕಾರಣ. ಕಳ್ಳ, ಸುಳ್ಳ ಅಂತ ಅನ್ನಿಸ್ಕೊಂಡು, ಪೋಲಿಸು ಜೈಲು ಅಂತ ಹೆದರಿ, ಅವಿತಿಟ್ಟುಕೊಂಡು, ಹೇಡಿ

ಜೀವನ ನಡೆಸುವ ಬದಲು ತೋಟ ಗದ್ದೆ ನೋಡಿಕೊಂಡು ನಿನ್ನ ಜೀವನಾನ ಉದ್ಧಾರ ಮಾಡಿಕೋ...''

''ನಿನ್ನ ಉಪದೇಶ ನನಗೆ ಬೇಕಿಲ್ಲ.''

''ಹಾಗಾದರೆ ಈ ಕ್ಷಣ, ಈ ಮನೆಯಿಂದ ಹೊರಟುಹೋಗು... ಇಲ್ಲದಿದ್ದರೆ, ನಾನೇ ಪೊಲೀಸರಿಗೆ ತಿಳಿಸಬೇಕಾಗುತ್ತದೆ.''

''ಕಲ್ಯಾಣೀ! ಏನೇ ನೀನು? ಕೃಷ್ಣ ಎಷ್ಟಾಗಲೀ ನಿನ್ನ ತಮ್ಮನಿದ್ದ ಹಾಗೇ. ನೀನು ಇಂಥಾ ಮಾತನ್ನಾಡಬಾರದು...''

''ಯಾಕಮ್ಮ ಆಡಬಾರದು? ಅವನು ಎಂದು ನನ್ನ ತಮ್ಮನ ತರಹ ವರ್ತಿಸಿದಾನೆ... ಮೊದಲೆಲ್ಲಾ ನಮ್ಮ ಪಾಡಿಗೆ ನಾವಿದ್ದರೂ, ಹೊಟ್ಟೆ ಉರಿ ಪಟ್ಟುಕೊಂಡು ತಾನು ಹಾಳಾದ, ಈಗ ನಾವು ನೆಮ್ಮದಿಯಿಂದಿರುವುದನ್ನು ಕಂಡು ಅವನಿಗೆ ಸಹಿಸುತ್ತಿಲ್ಲ. ನಮ್ಮ ಬಾಳು ಹಾಳು ಮಾಡ್ತಿದಾನೆ.''

''ಏನೇನೋ ಯಾಕೆ ಮಾತನಾಡ್ತಾ ಇದೀಯೇ... ಸುಮ್ಮನೇ ಒಳಗೆದ್ದು ಹೋಗು...''

''ನಾನ್ಯಾಕಮ್ಮಾ ಹೋಗಲಿ? ನಾನು ಏನು ತಪ್ಪು ಆಡಿದೆ! ನೀನೇ ಹೇಳು ಕೃಷ್ಣ... ನಾನು ಆಡಿದ್ದೆಲ್ಲಾ ಸುಳ್ಳಾ?''

ಕೃಷ್ಣ ತಲೆತಗ್ಗಿಸಿದ. ಅವನ ಮುಖ ಕಪ್ಪಿಟ್ಟಿತ್ತು. ಅವಳು ಏನೇನು ಆಡಿಬಿಡುವಳೋ ಎಂಬಂತೆ ಹೆದರಿದ. ಅವನನ್ನೇ ಗಮನಿಸುತ್ತಿದ್ದ ಕಲ್ಯಾಣಿ ಸುಮ್ಮನಾದಳು. ಕೃಷ್ಣ ನಿರಾಳವಾಗಿ ಉಸಿರಾಡಿದ, ಏನೂ ನಡೆದಿಲ್ಲವೆಂಬಂತೆ. ಆಕೆಗೆ ಏನೂ ಅರ್ಥವಾಗಿರಲಿಲ್ಲ. ಮಗಳೆಂದೂ ಹೀಗೆಲ್ಲ ಮಾತನಾಡಿದವಳಲ್ಲ ಅಂತ ಗೊತ್ತು. ಅಲ್ಲದೇ ಕೃಷ್ಣ ಎಂದೂ ಹೀಗೇ ಮನೆಗೆ ಬಂದವನೇ ಅಲ್ಲ. ಏನೋ ಅವರಿಬ್ಬರ ಮಧ್ಯೆ ಜಗಳ ನಡೆದು, ಕೃಷ್ಣ ನಾಲ್ಕು ಹೆಚ್ಚು ಮಾತುಗಳನ್ನಾಡಿರಬಹುದು. ಅದನ್ನೇ ಇವಳು ದೊಡ್ಡದು ಮಾಡುತ್ತಿದಾಳಲ್ಲ... ಎಷ್ಟಾಗಲೀ ಹೆಣ್ಣು ಹುಡುಗಿ... ಅಲ್ಲದೇ ಅವರ ಆಶ್ರಯದಲ್ಲಿರುವವರು ನಾವು... ಇವಳು ಸುಮ್ಮನಿರಬಾರದೇ ಅಂತೆನಿಸಿತ್ತು.

ಅಷ್ಟರಲ್ಲಿ ಕೋಮಲ ಹೊರಗಿನಿಂದ ಬಂದಳು. ಕೃಷ್ಣ ಅವಳನ್ನೇ

ನೋಡಿ ಕಿರುನಗೆ ನಕ್ಕು ಕಲ್ಯಾಣಿಯ ಕಡೆ ನೋಡಿದ. ಕಲ್ಯಾಣಿಗೆ ಅವನ ದೃಷ್ಟಿಯ ಅರ್ಥಸಿಕ್ಕಿತ್ತು. ಸ್ವಲ್ಪ ಮೆತ್ತಗಾದಳು. ಎದ್ದು ತಂಗಿಯ ಕೈ ಹಿಡಿದಳು.

'ಈ ಕೋಮಿ ಒಬ್ಬಳು ಇಲ್ಲದೇ ಇದ್ದಿದ್ದರೇ, ಇವನಿಗೆ ನಾನು ಖಂಡಿತಾ ಹೆದರುತ್ತಿರಲಿಲ್ಲ' ಅಂತಂದುಕೊಂಡು, ತಂಗಿಯನ್ನು ಎಳೆದುಕೊಂಡು ಒಳಗಿನ ಕೋಣೆಗೆ ಹೊಕಟು ಹೋದಳು. ಕೃಷ್ಣ ತನ್ನಲ್ಲೇ ನಕ್ಕ. ಎಷ್ಟು ಹೊತ್ತಾದರೂ ಅವನು ಹೊರಡುವ ಸೂಚನೆ ತೋರದಿದ್ದಾಗ, ಆಕೆ ಗೊಂದಲಗೊಂಡಳು. ಯಾಕೆ ಇಲ್ಲಿಯೇ ಇದಾನೆ ಅಂತ ಅಂದುಕೊಂಡರೂ, ಸೌಜನ್ಯದಿಂದ,

''ಊಟದ ಸಮಯವಾಗಿದೆ. ಊಟ ಮಾಡ್ತೀಯ ಕೃಷ್ಣಾ?'' ಅಂತ ಕೇಳಿದಳು.

''ಹೂಂ. ನಾನೇ ಕೇಳೋಣ ಅಂತಿದ್ದೆ...''

ತಟ್ಟೆ ಬಟ್ಟಲುಗಳನ್ನಿಟ್ಟು ಬಡಿಸಿ, ಕಲ್ಯಾಣಿಯನ್ನು ಕರೆಯಲೆಂದು ಹೋದಾಗ, ಅವಳು ಸಿಡುಕಿದಳು. ''ಆ ತೋಳನಿಗೆ ಊಟ ಬೇರೆ ಕೇಡು... ನಾವು ಬರುಲ್ಲ... ಅವನನ್ನು ಆದಷ್ಟು ಬೇಗ ಮನೆಯಿಂದ ಕಳಿಸು...''

ಅವಳು ನುಡಿದದ್ದು ಅವನಿಗೂ ಕೇಳಿಸಿತ್ತು. ಬಡಿಸಿದ್ದನ್ನೆಲ್ಲಾ ಗಬಗಬನೆ ತಿಂದು ಎದ್ದ. ಕೈ ತೊಳೆದು ನುಡಿದ.

''ನೀವುಗಳೂ ಊಟ ಮಾಡಿ. ನಾನು ಸ್ವಲ್ಪ ಹೊತ್ತು ಮಲಗಿರ್ತೀನಿ. ಯಾರಾದ್ರೂ ನನ್ನನ್ನ ಕೇಳಿಕೊಂಡು ಬಂದ್ರೆ ನಾನು ಇಲ್ಲಿ ದೀನೀಂತ ಹೇಳಬೇಡಿ. ಸುಮ್ಮನೇ ಪೀಡಿಸ್ತಾರೆ ಅದು ಕೊಡಿಸು ಇದು ಕೊಡಿಸು ಅಂತ. ನನ್ನ ಹತ್ತಿರ ಹಣ ಎಲ್ಲಿದೆ?'' ತನಗೆ ತಾನೇ ಎಂಬಂತೆ ಆಡಿದ.

ಕಲ್ಯಾಣಿ, ಕೋಮಲ ಇಬ್ಬರೂ ಆಚೆಗೆ ಬರುವುದನ್ನೇ ಕಾದಿದ್ದ ಕೃಷ್ಣ, ಆ ಕೋಣೆಗೆ ಹೋಗಿ, ಬಾಗಿಲನ್ನು ಒಳಗಿನಿಂದ ಭದ್ರ ಪಡಿಸಿಕೊಂಡು ಮಲಗಿಬಿಟ್ಟ. ಕಲ್ಯಾಣಿ ತಾಯಿಯ ಕಡೆ ನೋಡಿ ಸಿಡುಕಿದಳು.

''ನೋಡಿದ್ಯಾ! ಹೊಟ್ಟೆ ತುಂಬಾ ತಿಂದ. ಈಗ ಬಿದ್ದುಕೊಂಡ... ಇನ್ನು ಇಲ್ಲಿಂದ ಹೋಗುಲ್ಲ.''

''ಹೋಗದೇ ಏನಾಡ್ತಾನೆ! ಅವನಿಗೇನು ಮನೆ ಮಠ ಇಲ್ಲವೆ?

ಹೋಗದಿದ್ದರೆ ನಾವೇ ಉಪಾಯವಾಗಿ ಕಳಿಸೋಣ.'' ಊಟ ಮುಗಿಸಿ, ಹೊರಗಿನ ಹಜಾರದಲ್ಲೇ ಮಲಗಿದರು. ಕತ್ತಲೆಯಾದ ಮೇಲೆ ಕೃಷ್ಣ ರೂಮಿನಿಂದ ಹೊರಗೆ ಬಂದ. ಯಾರಿಗೂ ಏನೂ ಹೇಳದೇ ಹೊರಗೆ ನಡೆದ.

ಶಿವರಾಮಯ್ಯ ವಾಪಸ್ಸು ಬಂದು ದಣಿವಾರಿಸಿಕೊಂಡ ನಂತರ ತಾಯಿ ನಡೆದ ವಿಷಯವನ್ನೆಲ್ಲಾ ತಿಳಿಸಿದಳು. ''ನನಗ್ಯಾಕೋ ಆತಂಕವಾಗುತ್ತೆ; ಎಂದೂ ಬಂದವನಲ್ಲ. ಹೀಗೆ ಪದೇ ಪದೇ ಬರುತ್ತಿದ್ದರೆ... ಏನೂಂತ ತಿಳಿಯೋಣ... ಅವನನ್ನು ಹುಡುಕಿಕೊಂಡು ಅವನ ಸ್ನೇಹಿತರು ಬರಬಹುದು.... ಏನೇನು ಸಹವಾಸವೋ... ಬಂದರೆ ಸಾಕು, ಸಿಗರೇಟಿನ ವಾಸನೆ ಮೂಗಿಗೆ ಬಡಿಯುತ್ತೆ. ಅವರ ಅಪ್ಪನ ಮನೆ ಇದೆಯಲ್ಲ ಅಲ್ಲೇ ಯಾಕೆ ಹೋಗಿರಬಾರದು?...''

ಶಿವರಾಮು ತಗ್ಗಿದ ಧ್ವನಿಯಲ್ಲಿ ನುಡಿದ.

''ಅಮ್ಮನ ಒಡವೆಗಳನ್ನು ಕದ್ದು ಜೈಲಿಗೆ ಹೋಗಿ ಬಂದವನು... ಅಲ್ಲಿಗೆ ಹೋಗಲು ಮುಖವಿಲ್ಲ. ಅಲ್ಲದೇ... ಈಗ ಅವರ ತಾತ, ಆಸ್ತಿಯಲ್ಲಿ ನಮಗೂ ಸ್ವಲ್ಪ ಭಾಗ ಕೊಟ್ಟಿದಾರೆ ಅಂತ ತಿಳಿದರೆ ಇನ್ನೂ ಏನೇನು ಆಡ್ತಾನೊ?''

''ಏನಂದ್ರಿ? ಅವರ ಆಸ್ತೀಲಿ ನಮಗ್ಯಾಕೆ ಭಾಗ? ನೀವು ಬೇಡಾಂತ ಅನ್ನ ಬೇಕಾಗಿತ್ತು.''

''ನಾನು ಎಷ್ಟೋ ಹೇಳಿದೆ. ನಾರಾಯಣಮೂರ್ತಿಯದು ಒಂದೇ ಹಠ; ಅದು ಅವರ ತಂದೆಯ ಅಂತಿಮ ಇಚ್ಛೆ ಆಗಿತ್ತಂತೆ. ಅಲ್ಲದೇ ಇನ್ನೂ ಒಂದು ಮಾತು ಹೇಳಿದ. ನಾರಾಯಣ, ''ಕೃಷ್ಣನ ಮೇಲೆ ನನಗೆ ನಂಬಿಕೆ ಇಲ್ಲ. ಕಲ್ಯಾಣಿ, ಕೋಮಲರ ಭಾಗದ್ದು ಆಸ್ತಿಯಾದರೂ ಉಳಿಯಲಿ ಅಂತ ಆಸೆ ಅಂತಂದ.''

''ಆದರೂ ನೀವು ಒಪ್ಪಬಾರದಾಗಿತ್ತು. ನಾರಾಯಣ ಏನೋ ತಂದೆಯ ಮಾತಿಗೆ ಒಪ್ಪಿರಬಹುದು. ಆದರೆ ಶಾರದಾ? ಅವಳ ಮನಸ್ನಲ್ಲಿ ಏನಿದೆಯೊ? ಅವಳಿಗೂ, ಕಲ್ಯಾಣೀನ, ಕೋಮಲನ್ನ ಕಂಡರೆ ಅಷ್ಟಕ್ಕಷ್ಟೇ...''

''ನಾರಾಯಣ ಇನ್ನು ಒಂದು ಒಳ್ಳೆ ಕೆಲಸ ಮಾಡಿದ ಗೊತ್ತಾ? ತನ್ನ ಭಾಗದ ಆಸ್ತಿಯೆಲ್ಲಾ ಕೇವಲ ತನ್ನ ಹೆಂಡತಿಗೆ ಅಂತ ಪತ್ರ ಬರೆಸಿದಾನೆ. ಮಗನ ಹೆಸರನ್ನೇ ನಮೂದಿಸಿಲ್ಲ.''

''ಕೃಷ್ಣನಿಗೆ ಗೊತ್ತಾದರೆ ಏನೇನು ಹಗರಣವಾಗುತ್ತೋ?...''

''ಅದು ಅವರ ಮನೆಯ ಹಣೇಬರದ. ನಾವು ಆದಷ್ಟು ಬೇಗ ಕಲ್ಯಾಣಿಗೆ ಮದುವೆ ಮಾಡಿ, ಇಲ್ಲಿಂದ ಬೇರೆ ಊರಿಗೆ ಹೊರಟುಹೋಗೋಣ. ಇದನ್ನೆಲ್ಲ ನಾರಾಯಣನಿಗೇ ವಾಪಸ್ಸು ಕೊಟ್ಟುಬಿಡ್ತೀನಿ.''

''ಸರಿ ಹಾಗೇ ಮಾಡಿ'' ಹೊರಗೆ ನಿಂತಿದ್ದ ಕಲ್ಯಾಣಿ ತಂದೆ ತಾಯಿಯ ಮಾತುಗಳನ್ನು ಕೇಳಿಸಿಕೊಂಡಿದ್ದಳು.

ರಾತ್ರಿಯಾಗಿತ್ತು. ಕೋಮಲಳ ಹೊರತು ಇನ್ನಾರಿಗೂ ನಿದ್ದೆ ಬಂದಿರಲಿಲ್ಲ. ಮುಂದೇನು ಹಗರಣಗಳು ಜರುಗಲಿವೆಯೋ ಎಂದು ಎಲ್ಲರೂ ಎದುರು ನೋಡುತ್ತಿರುವಂತೆ, ಕಣ್ಣು ಬಿಟ್ಟುಕೊಂಡು ಮಲಗಿದ್ದರು. ತಾಯಿಯ ಒಡವೆಗಳನ್ನೇ ಕದ್ದು ಮಾರಲು ಪ್ರಯತ್ನಿಸಿದ ಕೃಷ್ಣ, ತನ್ನ ಮನೆಯಲ್ಲಿಯೂ ಏನಾದರೂ ಕದ್ದಿರಬಹುದು ಎಂಬ ಅನುಮಾನದಿಂದ ಕಲ್ಯಾಣಿ ರೂಮಿನಲ್ಲಿ ಪರಿಶೀಲಿಸಿದ್ದಳು. ಪರ್ಸಿನಲ್ಲಿದ್ದ ಅಲ್ಪಸ್ವಲ್ಪ ಹಣವನ್ನು ಲಪಟಾಯಿಸಿದ್ದ. ತನಗೆ ತಿಳಿದಂತೆ, ಬೆಲೆಬಾಳುವ ವಸ್ತುವಾಗಲೀ, ಒಡವೆಯಾಗಲೀ ಅಲ್ಲಿರಲಿಲ್ಲವಾದ್ದರಿಂದ ಗೊತ್ತಾಗಲಿಲ್ಲ... ಆದರೂ ಕೃಷ್ಣನೆಂತಹ ನೀಚ ಎನ್ನುವುದು ಪ್ರಮಾಣವಾಗಿತ್ತು. ಮನೆ ಮನೆಯರಿಗೇ ದ್ರೋಹ! ಅವನು ಈ ಮನೆಯವನೇ ಅಲ್ಲವೇನೋ...? ಹುಟ್ಟಿದಾಗ, ಮಗು ಅದಲು ಬದಲಾಗಿರಬಹುದೇ ಎಂಬ ಅನುಮಾನ ಬರುವಷ್ಟು ತಾಯಿ ದ್ರೋಹಿ! ವಾತ್ಸಲ್ಯವಿಲ್ಲದ ನಿರ್ದಯಿ!!

ಅಕ್ಕ ತಂಗಿಯರಿಲ್ಲ ಎಂದು ಎಷ್ಟೋ ಜನ ಗಂಡು ಮಕ್ಕಳು ಪರಿತಾಪ ಪಡುತ್ತಾರೆ. ಅಂಥಾದ್ದರಲ್ಲಿ ಸ್ವಂತ ಅಕ್ಕನಂತೆ ಆ ಮನೆಯಲ್ಲಿ ಬೆಳೆದ ನನಗೇ ದ್ರೋಹ ಮಾಡಿದ... ಪ್ರೀತಿ, ವಿಶ್ವಾಸ, ಬಂಧು ಬಾಂಧವ್ಯ ಏನೂ ತಿಳಿಯದ ಮೂಢ!! ಅವನಿಗೆ ಬೇಕಿದ್ದರೆ ಬೇರೆ ಹೆಣ್ಣುಗಳಿರಲಿಲ್ಲವೆ? ಇದು ನನಗೆ ಮಾಡಿದ ಅವಮಾನ, ನನ್ನ ಮೇಲೆ ಪ್ರತೀಕಾರದ ಮನೋಭಾವದಿಂದ ಎಸೆಗಿದ ಅತ್ಯಾಚಾರ... ಆದರೆ ನಾನೆಷ್ಟು ಅಸಹಾಯಕಳು... ಅವನಿಗೆ ಸರಿಯಾಗಿ ಬುದ್ಧಿ ಕಲಿಸಬೇಕೆಂಬ ಛಲವಿದ್ದರೂ, ಪರಿಸ್ಥಿತಿಯ ಕಾರಣಗಳಿಂದ ಹೆದರುತ್ತಿದೇನಲ್ಲಾ...

ಯಾರೋ ಹೊರಗಿನಿಂದ ಬಾಗಿಲನ್ನು ದಬದಬನೆ ಬಡಿದ ಸದ್ದು... ಜತೆಗೇ ಕಲ್ಯಾಣೀ... ಕಲ್ಯಾಣೀ... ಎಂದು ಅಸ್ಪಷ್ಟವಾಗಿ ಕೊರಗುವ ಧ್ವನಿ...

ಯಾರು? ಯಾರು ಇಷ್ಟು ಹೊತ್ನಲ್ಲಿ ಎಂದುಕೊಂಡು ಶಿವರಾಮಯ್ಯ ಎದ್ದು ನೋಡಲೆಂದು ಬಂದಾಗ, ಕಲ್ಯಾಣಿಯೂ ಎದ್ದು ಬಂದಳು. ಕೃಷ್ಣನೇ ಇರಬಹುದು ಎಂದೆನಿಸಿತ್ತು. ಹೊರಬಾಗಿಲಿನಲ್ಲಿ ನಿಂತು, ನನ್ನ ಹೆಸರು ಹಿಡಿದು ಕರೆಯಲು ಇವನಿಗೆಷ್ಟು ಧೈರ್ಯ...?

ತೆರೆದ ಬಾಗಿಲನ್ನು ಅವನನ್ನು ನೋಡಿದರೇ ತಿಳಿಯುತ್ತಿತ್ತು.

''ಕೃಷ್ಣಾ... ಇಷ್ಟು ಹೊತ್ನಲ್ಲಿ ಇಲ್ಲಿಗ್ಯಾಕೆ ಬಂದೆ?'' ಶಿವರಾಮ ಗಡುಸಾಗಿ ಕೇಳಿದಾಗ, ನಿಂತಿದ್ದ ಅವರನ್ನು ತಳ್ಳಿದ.

''ಹೋಗೆಲೇ ನೀನ್ಯಾರೋ ಅದನ್ನೆಲ್ಲಾ ಕೇಳೋಕೆ. ಇದು ನನ್ನ ಮನೆ, ನಾನು ಬರ್ತೀನಿ...'' ಶಿವರಾಮಯ್ಯ ತತ್ತರಿಸಿದ. ಅವನ ಹೆಂಡತಿ ಮುಂದೆ ಬಂದಳು.

''ನೋಡಿ ಅತ್ತೇ... ನನಗೆ ಬುದ್ಧಿ ಹೇಳೋಕೆ ಬರ್ತಾನಲ್ಲ... ಈ ಮುದುಕ, ಇರಲಿ ಆಮೇಲೆ ವಿಚಾರಿಸಿಕೊಳ್ತೀನಿ. ಕಲ್ಯಾಣಿ ಎಲ್ಲಿ? ನನ್ನ ಮುದ್ದು ಕಲ್ಯಾಣಿ ಎಲ್ಲಿ?'' ಆಕೆ ನಡುಗಿಹೋದಳು.

''ಚೆನ್ನಾಗಿ ಕುಡಿದು ಬಂದಿದಾನೆ. ಈಗ ಏನೇನೋ ಮಾತಾಡ್ತಿದಾನೆ... ಇವನನ್ನು ಮನೆಯಿಂದ ಹೊರಗೆ ಕಳಿಸುವುದು ಹೇಗೆ? ಹೋದರೂ ಹೊರಗೆ ಕೂಗಾಡಿ ಕಿರುಚಾಡಿ, ನಮ್ಮ ಮರ್ಯಾದೆ ಹೋಗುವಂತೆ ಮಾಡುತ್ತಾನೋ ಏನೋ...''

''ಅರೇ ಕಲ್ಯಾಣೀ... ನನ್ನ ಚಿನ್ನ ಇಲ್ಲೇ ನಿಂತಿದೀಯಾ...'' ಎನ್ನುತ್ತಾ ಮುಂದೆ ಮುಂದೆ ಬಂದವನನ್ನು ಶಿವರಾಮಯ್ಯ ತಡೆದರು.

''ಜ್ಞಾನವಿಟ್ಟುಕೊಂಡು ಮಾತಾಡು ಕೃಷ್ಣ... ಕಲ್ಯಾಣಿ ನಿನ್ನ ಅಕ್ಕ; ಅವಳ ಹತ್ತಿರ ಏನಿದೆಲ್ಲಾ ಮಾತು?''

''ಯಾಕೆ ಆಡಬಾರದು? ಅವಳು ನನ್ನ ಅಕ್ಕ ಏನಲ್ಲ. ನನಗೂ ಅವಳಿಗೂ ಏನು ಸಂಬಂಧ ಅಂತ ನಿಮಗೆ ಗೊತ್ತಿಲ್ವಾ? ನೀನೇ ಹೇಳ್ತೀಯೋ ಅಥವಾ ನಾನೇ

ಹೇಳಲೋ ಕಲ್ಯಾಣಿ...?'' ಅವಳ ಕೈ ಹಿಡಿದ. ಅವಳು ಕೈ ಬಿಡಿಸಿಕೊಂಡಳು. ಭಯದಿಂದ ನಿಶ್ಶಕ್ತಿಯಾದಂತಾಗಿತ್ತು.

''ಹುಚ್ಚುಹುಚ್ಚಾಗಿ ಮಾತನಾಡಬೇಡ ಕೃಷ್ಣಾ... ದಯವಿಟ್ಟು ಈಗ ಇಲ್ಲಿಂದ ಹೊರಟುಹೋಗು...''

''ನಿನ್ನ ಬಿಟ್ಟು ನಾನೆಲ್ಲಿಗೆ ಹೋಗಲೇ ಚಿನಾಲಿ...? ಈ ಮುದುಕನಿಗೆ ಹೇಳು... ಅವತ್ತು ಏನು ನಡೀತು ಅಂತ...'' ಕಲ್ಯಾಣಿ ಕಲ್ಲಾದಳು. ಸುಮ್ಮನೇ ನಿಂತಿದ್ದವಳನ್ನು ಶಿವರಾಮಯ್ಯ ಅಲುಗಾಡಿಸಿದ.

''ಏನಾಯ್ತು ಹೇಳು ಕಲ್ಯಾಣಿ... ಈ ನೀಚ ಏನು ಮಾಡಿದ ಅಂತ ಹೇಳು. ಇವತ್ತೇ ಇವನ ಗತಿ ಮುಗಿಸ್ತೀನಿ.''

''ಅವಳನ್ನೇನು ಕೇಳ್ತಿಯೋ ಮುದುಕ... ಅವಳು ನಾಚ್ಕೋತಾಳೆ. ನನ್ನನ್ನು ಕೇಳು... ನಾನು ಹೇಳ್ತೀನಿ... ಅದೇ ಅವತ್ತು ನಾನು ಜೈಲಿನಿಂದ ಸೀದಾ ಇಲ್ಲಿಗೆ ಬಂದೆ. ನನ್ನ ತಾತ ಸತ್ತುಹೋದ ಅಂತ ತಿಳೀತು... ಖುಷಿಯಿಂದ ಕಲ್ಯಾಣೀನ ತಬ್ಬಿಕೊಂಡೆ. ಆಮೇಲೆ ಎಲ್ಲಾ ಆಗಿಹೋಯ್ತು. ನೀವೆಲ್ಲಾ ದುಃಖದಿಂದ ಅಳ್ತಾ ಇದ್ರಿ... ನಾನು ಇಲ್ಲಿ ಸುಖ ಅನುಭವಿಸ್ತಾ ಇದ್ದೆ... ಕಲ್ಯಾಣಿ ನಿನಗೆ ನೆನಪಿಲ್ವಾ ಆ ರಾತ್ರಿ?''

ಶಿವರಾಮಯ್ಯ ಕೃಷ್ಣನ ಕೆನ್ನೆಗೆ ರಪಪರನೆ ಬಾರಿಸಿದರು. ಹೊಡೆತ ತಾಳಲಾರದೇ ಅವನು ಕುಸಿದು ಬಿದ್ದ. ಅಲ್ಲೇ ನಿಂತಿದ್ದ ಕಲ್ಯಾಣಿಯನ್ನು ಚೆನ್ನಾಗಿ ಹೊಡೆದು ತಳ್ಳಿದರು. ಅವಳೂ ಆ ರಭಸಕ್ಕೆ ಬಿದ್ದಳು.

''ಅವನಂತೂ ಅಯೋಗ್ಯ... ನಿನಗಾದ್ರೂ ಬುದ್ಧಿ ಬೇಡವೇನೆ? ನೀನ್ಯಾಕೆ ಸುಮ್ಮನಿದ್ದೆ... ನನಗೇಕೆ ಹೇಳಲಿಲ್ಲ?'' ಎನ್ನುತ್ತಾ ತಾಯಿಯೂ ಹೊಡೆದಾಗ ಕಲ್ಯಾಣಿ ಮಾತನಾಡದೇ ಮೌನವಾಗಿ ಅತ್ತಳು.

ಕೋಪ ಅವಮಾನಗಳಿಂದ ಜರ್ಝರಿತರಾಗಿದ್ದ ಶಿವರಾಮಯ್ಯ ಮನೆಯಿಂದ ಹೊರಗೆ ದುಡುದುಡು ನಡೆದಾಗ, ಆಕೆ ತಡೆಯಲಿಲ್ಲ. ಈಗಲೇ ಹೋಗಿ ನಾರಾಯಣಮೂರ್ತಿಗೆ, ಎಲ್ಲಾ ತಿಳಿಸಲಿ... ಎಲ್ಲಾ ಒಂದು ಇತ್ಯರ್ಥವಾಗುತ್ತದೆ. ಆದರೆ ಈ ಕಡು ಪಾಪಿ ಎಂಥಾ ಕೆಲಸ ಮಾಡಿಬಿಟ್ಟ? ಇವಳೂ ಏಕೆ ಸುಮ್ಮನಿದ್ದಳು...? ಬೆಳೆದ ಹುಡುಗಿಯನ್ನು ನಾವು ಮನೇಲಿಟ್ಟು

ಕೊಂಡಿರುವುದೇ ತಪ್ಪು. ಮದುವೆ ಮಾಡಿಬಿಡಬೇಕಾಗಿತ್ತು. ಹಣಕಾಸಿನ ತೊಂದರೆ, ನಮ್ಮ ಮನೆ ಹುಡುಗಿಯನ್ನು ಮದುವೆಯಾಗಲು ಯಾರು ಮುಂದೆ ಬರುತ್ತಾರೆ... ಅಂತ ಆದರೆ ಈಗ ಏನೇನೋ ಆಗಿಹೋಯ್ತಲ್ಲಾ... ಇದನ್ನು ಸರಿಪಡಿಸುವುದು ಹೇಗೆ? ನಾವು ತಲೆ ಎತ್ತಿ ತಿರುಗಾಡದಂತೆ ಆಗಿಹೋಯ್ತಲ್ಲಾ... ಮಾನಮರ್ಯಾದೆ ಹೋದ ಮೇಲೆ ನಾವು ಬದುಕಿದ್ದೂ ಏನು ಪ್ರಯೋಜನ?... ಉದ್ವೇಗಕ್ಕೊಳಗಾದವಳಂತೆ, ಆಕೆ ಅಡಿಗೆ ಮನೆಗೆ ಹೋಗಿ ಬಾಗಿಲನ್ನು ಭದ್ರಪಡಿಸಿಕೊಂಡಳು.

ಕೆಳಗೆ ಬಿದ್ದದ್ದ ಕೃಷ್ಣ ಎದ್ದು ಕಲ್ಯಾಣಿ ಬಿದ್ದ ಕಡೆಗೆ ನಡೆದು ಬಂದ. ಎದ್ದು ನಿಲ್ಲಲ್ಲೂ ಶಕ್ತಿ ಇಲ್ಲದಂತೆ ಬಿದ್ದಿದ್ದ ಕಲ್ಯಾಣಿಯ ಧ್ವನಿಯೂ ಉಡುಗಿ ಹೋಗಿತ್ತು. ''ಬೇಡ... ಬೇಡ... ನನ್ನ ಹತ್ತಿರಬರಬೇಡ'' ಎದು ಅವನನ್ನು ತಳ್ಳಲು ನೋಡಿದಳು. ಆದರೆ ಅವನ ಹಿಡಿತದ ಶಕ್ತಿಯಲ್ಲಿ ಅವಳು ಸೋತುಹೋದಳು. ಮತ್ತೊಮ್ಮೆ ಅವನ ಬಲಾತ್ಕಾರಕ್ಕೆ ಬಲಿಯಾದಳು. ಸೇಡಿನಿಂದ ಅವನು ಕ್ರೂರ ಪಶುವಿನಂತೆ ನರ್ತಿಸಿದ.

ಬೆಳಗಾಯಿತು. ಕೋಮಲ ಎದ್ದು ಬಂದಳು. ಮುಂಬಾಗಿಲು ತೆಗೆದಿದೆ. ಮನೆಯಲ್ಲಿ ಸದ್ದೇ ಇಲ್ಲ. ಹೊರಬಾಗಿಲಿನಲ್ಲಿ ನಿಂತು ನೋಡಿದಳು... ಅಲ್ಲಿಯೂ ಯಾರೂ ಇಲ್ಲ. ಮತ್ತೆ ಒಳಗೆ ಬಂದು, ನರಳುತ್ತಾ ಒಂದು ಮೂಲೆಯಲ್ಲಿ ಬಿದ್ದಿದ್ದ ಕಲ್ಯಾಣಿಯನ್ನು ಕಂಡಳು.

''ಏನಾಯ್ತೇ... ಏನಾಯ್ತೇ... ಇಲ್ಲಿ ಯಾಕೆ ಹೀಗೆ ಬಿದ್ದಿದ್ದೀಯಾ? ಮೈಕೈಯೆಲ್ಲಾ ಊದಿದೆ... ಏನಾಯ್ತೇ... ಯಾರು ಹೊಡೆದರೆ?''

ಕಲ್ಯಾಣಿ ಕಣ್ಣು ಬಿಟ್ಟು ತಂಗಿಯನ್ನು ನೋಡಿ ಅತ್ತಳು... ''ಕೋಮಲಾ ನೀನು ಸರಿಯಾಗಿದೀಯಾ ತಾನೇ...'' ಎಂದು ತಂಗಿಯ ಮುಖವನ್ನು ನೋಡಿ ಚೀರಿದಳು. ಅಪ್ಪ ಅಮ್ಮನ ಹೊಡೆತದಿಂದ ಜರುರಿತವಾಗಿದ್ದ ದೇಹದ ಮೇಲೆ ಅತಿಕ್ರಮಣ ಮಾಡಿದ ಕೃಷ್ಣನ ಬಲಪ್ರಯೋಗದಿಂದ ಮೈಕೈಯೆಲ್ಲಾ ಹಿಂಡಿ ಹಾಕಿದಂತಹ ನೋವು... ಎದ್ದು ಕೂರಲು ಪ್ರಯತ್ನಿಸಿದಳು; ಕೃಷ್ಣನ ಸುಳಿವಿಲ್ಲ. ಯಾವಾಗಲೋ ಎದ್ದು ಹೋಗಿದಾನೆ... ಸಧ್ಯ ತಂಗಿಯ ತಂಟೆಗೆ ಹೋಗಿಲ್ಲ ಎಂದು ಆ ಸಂಕಟದಲ್ಲೂ ಸಮಾಧಾನ ತಂದುಕೊಂಡಳು. ''ಅಮ್ಮ ಎಲ್ಲಿ?...

ಅವಳನ್ನು ಸ್ವಲ್ಪ ಕರೀತೀಯಾ?'' ನೋವಿನಿಂದ ನರಳುತ್ತಾ ನುಡಿದಳು.

''ಅಮ್ಮ ಕಾಣ್ತಾನೇ ಇಲ್ಲ... ಅಡಿಗೆ ಮನೆ ಬಾಗಿಲು ಸಹ ಹಾಕಿದೆ.''

''ಹೋಗಿ ನೋಡೇ...'' ರೇಗಿದಳು.

''ಒಳಗ್ನಿಂದ ಚಿಲುಕ ಹಾಕಿಕೊಂಡಿದೆ... ಬಡಿದರೂ ತೇಗೀತಿಲ್ಲ'' ಅವಳು ಮತ್ತೆ ಬಂದು ನುಡಿದಾಗ, ಕಲ್ಯಾಣಿ ಆತಂಕಗೊಂಡಳು. ರಾತ್ರಿ ಅಪ್ಪ ಮನೆಯಿಂದ ಹೊರಗೆ ಹೋದರು... ಎಲ್ಲಿಗೆ ಹೋದರೋ ಏನೋ? ಅಮ್ಮ ಅಡಿಗೆ ಮನೆಗೆ ಹೋಗಿ ಬಾಗಿಲು ಹಾಕಿಕೊಂಡವಳು ಮತ್ತೆ ಹೊರಗೇ ಬಂದಿಲ್ಲ... ಏನೋ ಅನಾಹುತವಾಗಿದೆ ಎಂದು ಗಾಭರಿಯಿಂದ ತಂಗಿಗೆ ಹೇಳಿದಳು.

''ನೀನು ಈಗಲೇ ಹೋಗಿ ನಾರಾಯಣ ಚಿಕ್ಕಪ್ಪನ ಮನೇಲಿ ಅಪ್ಪ ಇರಬಹುದು. ಅವರನ್ನು ಕರೆದುಕೊಂಡು ಬಾ... ಹಾಗೇ ಚಿಕ್ಕಪ್ಪನನ್ನೂ ಕರೆದುಕೊಂಡು ಬಾ... ಕೃಷ್ಣ ಇದ್ದರೆ ಅವನ ಹತ್ತಿರ ಮಾತನಾಡಬೇಡ. ಬೇಗ ಬಂದು ಬಿಡು'' ಎಂದು ತಂಗಿಯನ್ನು ಓಡಿಸಿದಳು. ಅವಳು ತೆವಳುತ್ತಾ ಅಡಿಗೆ ಮನೆ ಬಾಗಿಲಿಗೆ ಬಂದು, ''ಅಮ್ಮಾ... ಅಮ್ಮಾ'' ಎನ್ನುತ್ತಾ ಬಾಗಿಲು ಬಡಿದಳು. ಒಳಗಿನಿಂದ ಯಾವ ಸದ್ದೂ ಇಲ್ಲ.

ಓಡಿ ಓಡಿ ಬರುತ್ತಿದ್ದ ಕೋಮಲಳನ್ನು ಕಂಡ ಕೆಲವು ಕೆಲಸದ ಆಳುಗಳು, ಅವಳನ್ನು ನಿಲ್ಲಿಸಿದರು. ಅವಳು ಅಳುತ್ತಾ, ಮನೆಯಲ್ಲಿ ನಡೆದಿರುವ ವಿಷಯ ತಿಳಿಸಿದಾಗ, ಕೆಲವರು, ಕಲ್ಯಾಣಿಯ ಮನೆಯ ಕಡೆ ಬಂದರು. ಕೆಲವರು ನಾರಾಯಣ ಮೂರ್ತಿಯ ಮನೆ ಕಡೆ ಓಡಿದರು.

''ಕೋಮ್ಲವ್ವಾ... ನೀವು ಮನೆಗೆ ಬನ್ನಿ... ಅವರು ಚಿಕ್ಕಪ್ಪಾರನ್ನು ಕರೆದುಕೊಂಡು ಬತ್ತಾರೆ'' ಎಂದು ಹೇಳಿ, ಅವಳನ್ನು ಮನೆಗೆ ಕರೆದುಕೊಂಡು ಬಂದರು.

ಕಲ್ಯಾಣಿ ಸಂಕೋಚದಿಂದ ಹಿಡಿಯಾದಳು. ಏನು ನಡೀತು ಅಂತ ಎಷ್ಟು ಕೇಳಿದರೂ ಹೇಳದೇ ಸುಮ್ಮನೆ ಅತ್ತಳು. ಅಡಿಗೆ ಮನೆಯ ಬಾಗಿಲನ್ನು ಒಡೆದು ನೋಡಿದರು... ಒಳಗೆ ರಕ್ತದ ಮಡುವಿನಲ್ಲಿ ಬಿದ್ದಿದ್ದ ಆಕೆಯನ್ನು ಕಂಡರು... ''ಕೊಲೆ ಕೊಲೆ'' ಅಂತ ಕೂಗಿಕೊಂಡರು.

ಕೆಲವೇ ನಿಮಿಷಗಳಲ್ಲಿ ತೋಟದ ಆಸುಪಾಸಿನ ಜನರೆಲ್ಲಾ ಸೇರಿದರು. ನಾರಾಯಣ ಮೂರ್ತಿಯೂ ಶಾರದೆಯೂ ಧಾವಿಸಿ ಬಂದರು.

''ಶಿವರಾಮು ಎಲ್ಲಿ?...! ನಾರಾಯಣಮೂರ್ತಿ ಕೇಳಿದ.

''ರಾತ್ರಿ ನಿಮ್ಮ ಮನೆಗೆ ಬರಲಿಲ್ವಾ ಚಿಕ್ಕಪ್ಪಾ?''

''ಇಲ್ಲವಲ್ಲ... ವಿಷಯ ತಿಳಿದದ್ದೇ ಈಗ... ಏನಾಯ್ತು? ಯಾರು ಬಂದಿದ್ರು? ಕಳ್ಳರೋ ದರೋಡೆಕಾರರೋ ಬಂದಿದ್ರೆ, ಸಹಾಯಕ್ಕೆ ಯಾರನ್ನು ಯಾಕೆ ಕರೆಯಲಿಲ್ಲ?''

''ನಂಗೇನೂ ಜ್ಞಾಪಕವಿಲ್ಲ. ಒಂದು ಹೊತ್ನಲ್ಲಿ ಯಾವುದೋ ವಿಷಯಕ್ಕೆ ಅಪ್ಪ ಅಮ್ಮ ಜಗಳ ಆಡ್ತಿದ್ದರು. ನಾನು ಈಗಲೇ ಹೋಗಿ ನಾರಾಯಣನನ್ನು ಕರೆದುಕೊಂಡು ಬರ್ತೀನಿ ಅಂತ ಅಪ್ಪ ಹೊರಗೆ ಹೋದರು. ಅಮ್ಮ ಸಿಟ್ಟಿನಿಂದ ಅಡಿಗೆ ಮನೆ ಬಾಗಿಲು ಹಾಕಿಕೊಂಡು ಬಳಗೇ ಇದ್ದು ಬಿಟ್ಟಳು. ನನಗೆ ಹುಶಾರಿರಲಿಲ್ಲ... ನನಗೆ ಏನೂ ತಿಳೀದು. ಚೆನ್ನಾಗಿ ನಿದ್ದೆ ಬಂದಿತ್ತು...''

'ಕಲ್ಯಾಣಿ ಸುಳ್ಳು ಹೇಳುತ್ತಿದಾಳೆಂದು ಅರಿವಾಗಿತ್ತು. ಯಾರಿಗೋ ಅವಳು ಹೆದರುತ್ತಿದಾಳೆಂದೂ ತಿಳಿಯಿತು. ಈಗ ಬಲಂವಂತ ಮಾಡುವುದು ಸರಿ ಅಲ್ಲವೆಂದ್ಕುಕೊಂಡು ನಾರಾಯಣ ಸುಮ್ಮನಾದ. ಇಷ್ಟಾದರೂ ಶಿವರಾಮಯ್ಯನ ಪತ್ತೆ ಇಲ್ಲ. ಅಪ್ಪ ಅವಮಾನ ತಾಳಲಾರದೇ ಮನೆ ಬಿಟ್ಟು ಹೋಗಿದಾರೆನ್ನುವುದು ಖಚಿತವಾಯಿತು. ಕಲ್ಯಾಣಿಗೆ ಅಮ್ಮ ಆತ್ಮಹತ್ಯೆ ಮಾಡಿಕೊಂಡಿದಾಳೆ; ಇದಕ್ಕೆಲ್ಲಾ ಕಾರಣ ಈ ಕೃಷ್ಣನೇ... ಕೃಷ್ಣನ ಹೆಸರನ್ನು ಹೇಳಿ, ಅವನು ಮಾಡಿರುವ ಅನಾಚಾರವನ್ನೆಲ್ಲಾ ಪೋಲಿಸರಿಗೆ ತಿಳಿಸಿ, ಅವನಿಗೆ ಜೀವಾವಧಿ ಶಿಕ್ಷೆ ಕೊಡಿಸಬಹುದು... ಆದರೆ ಅದನ್ನು ನಂಬಿಸಲು ನನ್ನ ಹತ್ತಿರ ಏನು ಸಾಕ್ಷಿ?'

ಆದರೆ ಮುಂದೆ ನಮ್ಮಿಬ್ಬರ ಗತಿ?... ನಾನೀಗ ನನಗೋಸ್ಕರ ಅಲ್ಲವಾದರೂ, ಕೋಮಲಳಿಗೋಸ್ಕರ ಬದುಕಬೇಕಾಗಿದೆ! ಕೃಷ್ಣ ತಲೆ ತಪ್ಪಿಸಿಕೊಂಡು ಹೋಗಿದಾನೆ. ಪೋಲಿಸರು ಅವನನ್ನು ಹುಡುಕುವ ಮೊದಲೇ... ಅವನು ಕೋಮಲಳ ಬಾಳನ್ನು ಹಾಳು ಮಾಡಿದರೇ.?

ಅಲ್ಲದೇ, ನಾರಾಯಣ ಮೂರ್ತಿಯೇ ಈಗ ನಮಗೆ ಆಧಾರ... ಈಗ ಅವರೂ ದೂರವಾಗಿಬಿಟ್ಟರೆ ಅಪ್ಪನನ್ನು ಹುಡುಕಿಸುವುದು ಹೇಗೆ?... ಆ

ದುಃಖದಲ್ಲೂ ಕಲ್ಯಾಣಿ ಇಷ್ಟೆಲ್ಲಾ ಚಿಂತಿಸಿ, ಕೃಷ್ಣನ ಹೆಸರನ್ನು ನಾಲಿಗೆಯ ತುದಿಯಲ್ಲೂ ಆಡಲಿಲ್ಲ.

ನನ್ನದೇನೂ ತಪ್ಪಿರಲಿಲ್ಲ... ಕೋಮಲಳಿಗಂತೂ ಯಾವ ವಿಷಯವೂ ತಿಳಿಯದು. ಅಂಥದ್ದರಲ್ಲಿ, ನಮ್ಮಿಬ್ಬರನ್ನು ಅನಾಥರನ್ನಾಗಿ ಬಿಟ್ಟುಹೋಗಲು ಈ ಅಮ್ಮನಿಗೆ ಮನಸ್ಸಾದರೂ ಹೇಗೆ ಬಂತು! ಮುಂದೆ ಮಕ್ಕಳ ಗತಿಯೇನು ಎಂದು ಚಿಂತಿಸದೆ ಆತ್ಮಹತ್ಯೆ ಮಾಡಿಕೊಂಡದ್ದು ನಿಜಕ್ಕೂ ತಪ್ಪು ಎಂದೇ ಅನ್ನಿಸತೊಡಗಿತ್ತು. ಅಪ್ಪ ಅಮ್ಮನಿಗೆ ಅವಮಾನವಾಗುತ್ತದೆ ಎಂದು ತಾನು, ಆತ್ಮಹತ್ಯೆ ಮಾಡಿಕೊಂಡಿರಲಿಲ್ಲ... ಆದರೆ ಮಕ್ಕಳ ಬಗ್ಗೆ ಚಿಂತಿಸದೇ ಮನೆ ಬಿಟ್ಟು ಹೋದ ಅಪ್ಪ, ಆತ್ಮಹತ್ಯೆ ಮಾಡಿಕೊಂಡ ಅಮ್ಮ ಇಬ್ಬರೂ ಹೇಡಿಗಳು ಎಂದೆನಿಸಿತ್ತು. ತಂಗಿಯನ್ನು ತಬ್ಬಿಕೊಂಡು ಅತ್ತಳು. ನಾರಾಯಣಮೂರ್ತಿ, ಹಾಗೂ ಶಾರದಾ ಇಬ್ಬರೂ ಆತಂಕದಿಂದ ದಿಕ್ಕು ತೋಚದೇ ನಿಂತಿದ್ದರು. ಇಬ್ಬರಿಗೂ ಏನೋ ತಳಮಳ! ಪೋಲಿಸರು ಬಂದಾಗ ಕಲ್ಯಾಣಿ ಏನು ಹೇಳಿ ಬಿಡುವಳೋ...? ಅವರಿಗೂ, ಅವರಿಗೇ ತಿಳಿಯದಂತೆ ಕೃಷ್ಣ ಹಾಗೂ ಅವನ ಸ್ನೇಹಿತರ ಮೇಲೇ ಅನುಮಾನ. ಆದರೂ ಅದೇನೇನು ಆಗಿಹೋಗುತ್ತೋ ಆಗಿಹೋಗಲಿ ಎನ್ನುವಂತೆ ಹಲ್ಲು ಕಚ್ಚಿ ನಿಂತರು.

ಪೊಲೀಸರು ಬಂದು ಎಲ್ಲವನ್ನು ಪರಿಶೀಲಿಸಿ, ಹೇಳಿಕೆಗಳನ್ನು ವಿವರವಾಗಿ ಬರೆದುಕೊಂಡು, ದೇಹವನ್ನು ಸಮೀಪದ ಸರ್ಕಾರಿ ಆಸ್ಪತ್ರೆಗೆ ಸಾಗಿಸಿದರು. ಶಿವರಾಮಯ್ಯನನ್ನು ಹುಡುಕುವ ಪ್ರಯತ್ನವೂ ನಡೆಯಿತು. ಶಿವರಾಮಯ್ಯ ಬರದೇ ಅವರ ಹೆಂಡತಿಯ ಸಂಸ್ಕಾರ ನಡೆಯುವುದು ಹೇಗೆ?

ಪೋಲಿಸರ ವಶಕ್ಕೆ ತೋಟದ ಮನೆಯನ್ನು ಒಪ್ಪಿಸಿ, ಬಲವಂತವಾಗಿ ಕಲ್ಯಾಣಿಯನ್ನು, ಕೋಮಲಳನ್ನು ತಮ್ಮ ಮನೆಗೆ ಹೊರಡಿಸಿದರು.

''ಪೋಲಿಸ್ನೋರು ಪತ್ತೆ ಹಚ್ತಾರೆ... ನಿಮ್ಮಪ್ಪ ಎಲ್ಲಿದ್ದರೂ ವಾಪಸ್ಸು ಬರ್ತಾರೆ... ಅಂಥಾ ಜಗಳ ಗಂಡ ಹೆಂಡಿರಲ್ಲಿ ಏನು ನಡೀತು ಅಂತ?'' ಶಾರದಾ ಕೆದಕಿ ಕೇಳಿದಾಗ ನಾರಾಯಣಮೂರ್ತಿ ಗದರಿದ.

''ಮಕ್ಕಳು ಹೆದರಿ ಕಂಗಾಲಾಗಿವೆ. ಅದೇನು ಪ್ರಶ್ನೆ? ಏನೇ ಮಾತುಕತೆ ಇದ್ದರೂ ನಾವು ನಾವು ಆಡಿಕೊಳ್ಳೋಣ. ಪೋಲಿಸ್ನೋರ ಎದುರಿಗೆ

ಮಾತನಾಡಬೇಡ'' ಎಂದು ಕೆಳದನಿಯಲ್ಲಿ ನುಡಿದು,

''ನೀನು ಮನೆಗೆ ಈ ಮಕ್ಕಳನ್ನು ಕರೆದುಕೊಂಡು ಹೋಗು. ನಾನು ಪೋಲಿಸ್ ಸ್ಟೇಷನ್‌ಗ ಹೋಗಿ ಬರ್ತೀನಿ'' ಎಂದು ಹೇಳಿ, ಅವರುಗಳನ್ನು ಕಳಿಸಿದ.

ಶಾರದೆಗೆ ಮೊದಲಿನಿಂದಲೂ, ಕಲ್ಯಾಣಿ, ಕೋಮಲರನ್ನು ಕಂಡರೆ ಪ್ರೀತಿ, ಆದರವಿರಲಿಲ್ಲ. ತನ್ನ ಮಗನ ದುರ್ನಡತೆಗೆ ಅವರಿಬ್ಬರೇ ಕಾರಣ ಎಂದು ಬಲವಾಗಿ ನಂಬಿದ್ದವಳು. ತನ್ನ ಒಡವೆಗಳನ್ನು ತೆಗೆದುಕೊಂಡು ಹೋಗಿ ಪೋಲಿಸರ ಕೈಗೆ ಸಿಕ್ಕಿಬಿದ್ದ ಕೃಷ್ಣ ಎಲ್ಲರ ಕಣ್ಣಿನಲ್ಲೂ ಅಪರಾಧಿ! ಅದಕ್ಕೆ ತಕ್ಕ ಹಾಗೆ ದುಶ್ಚಟಗಳು, ದುಸ್ಸಹವಾಸ ಅವನ ಅಪರಾಧವನ್ನು ಖಚಿತಗೊಳಿಸುತ್ತವೆ.

ಮಾವನವರು, ಶಿವರಾಮಯ್ಯನವರಿಗೂ ಆಸ್ತಿಯಲ್ಲಿ ಪಾಲು ಕೊಟ್ಟಿರುವ ವಿಷಯ ಕೃಷ್ಣನಿಗೆ ತಿಳಿದು, ಅಲ್ಲಿಗೆ ಹೋಗಿ ಗಲಾಟೆ ಮಾಡಿ ಅವಮಾನ ಮಾಡಿರಬಹುದೇ? ಶಿವರಾಮಯ್ಯ ಪೋಲಿಸ್ ಕಂಪ್ಲೆಂಟ್ ಕೊಡಲೆಂದೇ ಹೋಗಿ, ಕೃಷ್ಣನಿಗೆ ಹೆದರಿ, ಮನೆಗೆ ಬಾರದೇ ಎಲ್ಲಿಯಾದರೂ ಅವಿತು ಕುಳಿತಿರಬಹುದೇ? ನಮ್ಮ ಮಾವನಿಗ್ಯಾಕೆ ಇಂಥಾ ದುರ್ಬುದ್ಧಿಯೋ... ಕೆಲಸ ಕೊಟ್ಟು, ತಿನ್ನಲು, ಉಣ್ಣಲು ಉಡಲು ಅನುಕೂಲ ಒದಗಿಸಿಕೊಟ್ಟಿದ್ದು ಸಾಲದೇ... ಆಸ್ತಿಯಲ್ಲಿ ಪಾಲು ಏಕೆ ಕೊಡಬೇಕಾಗಿತ್ತು? ಇವರೆಲ್ಲಾ ಬದುಕಿದ್ದಾಗಲೂ ಸುಖವಾಗಿರಲು ನಮ್ಮನ್ನು ಬಿಡಲಿಲ್ಲ. ಈಗ ಸತ್ತಮೇಲೂ ನಾವು ನೆಮ್ಮದಿಯಿಂದ ಉಸಿರಾಡದಂತೆ ಮಾಡುತ್ತಿದಾರೆ... ಅವಳ ಆಲೋಚನೆ ನಾನಾ ದಿಕ್ಕಿನಲ್ಲಿ ಹರಿಯುತ್ತಿದ್ದವು.

ನಾರಾಯಣಮೂರ್ತಿಯೂ ಹೆಚ್ಚು ಕಡಿಮೆ ಹೀಗೇ ಚಿಂತಿಸುತ್ತಿದ್ದ. ಅಪ್ಪ, ಶಿವರಾಮುಗೆ, ಆಸ್ತಿಯಲ್ಲಿ ಪಾಲು ಕೊಟ್ಟಿದ್ದು ಖಂಡಿತಾ ತಪ್ಪಲ್ಲ. ಕೃಷ್ಣನಿಗೆ ಅದು ತಪ್ಪಾಗಿ ಕಂಡಿರಬಹುದು. ಆದರೆ ಅದನ್ನು ಅವನಿಗೆ ತಿಳಿಸಿದವರ್‍ಯಾರು? ಇವಳೇ ಇರಬೇಕು... ನನಗೆ ತಿಳಿಯದಂತೆ, ಹಣಕ್ಕಾಗಿ ಮನೆಗೆ ಬಂದವನಿಗೆ ಹೇಳಿರಬೇಕು. ಅವಳಿಗೆ ಹೊಟ್ಟೆ ಉರಿ... ಕೃಷ್ಣನಿಗೆ ಎಷ್ಟು ಮಾಡಿದರೂ, ಸಾಲದು. ಮುಂದೆ ಅವನು ಅವಳಿಗೆ ಮಾಡುವುದು ಅಷ್ಟರಲ್ಲೇ ಇದೆ. ಆದರೆ ಮಗನ ಮೇಲೆ ಕುರುಡು ಮೋಹ!

ಇದರಿಂದ ಎಷ್ಟು ಅನ್ಯಾಯವಾಯಿತು ಅಂತ ಇವಳಿಗೆ ತಿಳಿಯಬೇಡವೆ?

ಶಿವರಾಮು ಎಲ್ಲಿ ಹೋದನೋ ಏನೋ? ಅತ್ತಿಗೆ, ತನ್ನ ಎದೆಗೇ ಚಾಕು ಚುಚ್ಚಿಕೊಂಡು ಆತ್ಮಹತ್ಯೆ ಮಾಡಿಕೊಳ್ಳುವಂತಹ ಜಗಳ ಅವರಿಬ್ಬರ ಮಧ್ಯೆ ಏನು ನಡೆದಿರಬಹುದು? ಇಲ್ಲ, ಅಲ್ಲಿ ಮೂರನೇ ಒಬ್ಬ ವ್ಯಕ್ತಿ ಖಂಡಿತಾ ಬಂದಿದಾನೆ. ಅವನು ಕೃಷ್ಣನೇ ಇರಬೇಕು. ಕಲ್ಯಾಣಿಗೆ ನಿಜ ಏನೂಂತ ತಿಳಿದಿದೆ. ಆದರೆ ಅವಳು ಏಕೆ ಬಾಯಿ ಬಿಡುತ್ತಿಲ್ಲ? ಏನೋ ಸುಳ್ಳು ಹೇಳಿದಳಲ್ಲ. ಪೋಲಿಸ್ನೋರು ಪತ್ತೆ ಹಚ್ಚದೇ ಇರುತ್ತಾರೆಯೆ? ಆಗ ಕೃಷ್ಣನಿಗೆ ಜೈಲು ಶಿಕ್ಷೆಯಾಗುವುದು ಖಂಡಿತಾ. ಈ ಮೊದಲೂ ನನ್ನ ಮಗ ಎಷ್ಟೋ ಸಲ ಜೈಲಿಗೆ ಹೋಗಿ ಬಂದಿರಬಹುದು. ಆ ಸುಳಿವೇ ಸಾಕು ಅವರಿಗೆ...

ಆ ರಾತ್ರಿ, ಸುಮಾರು ಹತ್ತು ಗಂಟೆಯ ಹೊತ್ತಿಗೆ ಕೃಷ್ಣ ತೋಟದ ಬಾವಿಯ ಬಳಿ ಬಂದಾಗ, ಅಲ್ಲಿ ಸೇರಿದ್ದ ಜನರನ್ನು ಕಂಡು, ಕುತೂಹಲದಿಂದ ತಾನೂ ಬಂದು ನಿಂತ. ಪೆಟ್ರೋಮಾಕ್ಸ್ ದೀಪದ ಬೆಳಕಿನಲ್ಲಿ ಬಾವಿಯಲ್ಲಿ ತೇಲುತ್ತಿದ್ದ ಶಿವರಾಮಯ್ಯನ ಹೆಣವನ್ನು ಮೇಲೆ ಎತ್ತುವ ಕೆಲಸ ನಡೆಯುತ್ತಿತ್ತು. ಹಾಗೇ ಅಲ್ಲಿ ನಿಂತಿದ್ದ ಜನ ಸಮೂಹದ ಕಡೆ ಕಣ್ಣು ಹಾಯಿಸಿದ. ಪರಿಚಯದವರು ಯಾರೂ ಇದ್ದಂತಿರಲಿಲ್ಲ. ಇವನನ್ನು ಯಾರೂ ಗುರುತಿಸಿದಂತೆ ಕಾಣಲಿಲ್ಲ. ತೋಟದ ಬಳಿ ಬಂದು ಬಾಗಿಲು ಬಡಿದ. ಒಳಗಿನಿಂದ ಯಾರೂ ಬರಲಿಲ್ಲ. ಮುಂಬಾಗಿಲಿಗೆ ಬಂದು ನೋಡಿದ. ಬೀಗ ಹಾಕಿತ್ತು. ನೆನ್ನೆ ದಿನದ ನನ್ನ ಅವತಾರ ಕಂಡು ಹೆದರಿ ಎಲ್ಲರೂ ಮನೆ ಬಿಟ್ಟು ಹೋಗಿದ್ದಾರೆಂದೇ ಬಗೆದ. ಹಿಂದಿದ್ದ ಮೋಟು ಗೋಡೆಯ ಮೇಲೆ ಹತ್ತಿ ಮನೆಯ ಮೇಲೆ ಬಂದು, ಎರಡು ಮೂರು ಹೆಂಚನ್ನು ತೆಗೆದು, ಬಚ್ಚಲು ಮನೆಯ ತೊಟ್ಟಿಯ ಮೇಲೆ ಇಳಿದ. ಒಳಗೆ ಯಾರೂ ಇಲ್ಲ ಎನ್ನುವುದು ಖಚಿತವಾಗಿದ್ದರೂ, ದೀಪ ಉರಿಯುತ್ತಿರುವುದನ್ನು ಕಂಡು, ಅನುಮಾನದಿಂದ ಒಳಗೆ ಬಂದ. ಮನೆಯೊಳಗಿನ ಸಾಮಾನುಗಳೆಲ್ಲ ಇದ್ದ ಹಾಗೇ ಇವೆ. ಯಾವುದೂ ಅಸ್ತವ್ಯಸ್ತವಾಗಿಲ್ಲ. ಅಡಿಗೆ ಮನೆಗೆ ಬಂದ. ನೆಲದ ಮೇಲೆ ಮೂಡಿದ್ದ ರಕ್ತದ ಕಲೆ ಅಸಹ್ಯವನ್ನುಂಟುಮಾಡುವಂತಿತ್ತು. ಹಾಗೇ ಏನೋ ಒಂದು ತರಹ ಕೆಟ್ಟವಾಸನೆ. ಅಲ್ಲಿರಲು ಆಗದೇ ಹೊರಬಂದು, ರೂಮಿಗೆ ಹೋಗಿ, ಹಾಸಿದ್ದ ಹಾಸಿಗೆಯ ಮೇಲೆ ಬೆಚ್ಚಗೆ ಹೊದ್ದು ಮಲಗಿದ.

ಒಂದು ಹೊತ್ತಿನಲ್ಲಿ ಯಾರೋ ಜೋರಾಗಿ ಮಾತನಾಡುತ್ತಿರುವ ಧ್ವನಿ, ಪೋಲಿಸ್ ವ್ಯಾನು ಬಂದು ನಿಂತ ಸದ್ದು ಕೇಳಿ ಹೆದರಿ, ಮತ್ತೆ ಮಾಡನ್ನೇರಿ, ಮೇಲಿನಿಂದ ಇಳಿದು ಹೊರಬಂದ. ದೂರದಿಂದ ನಿಂತು ನೋಡಿದ ತಂದೆಯ ಧ್ವನಿ ಕೇಳಿತು.

''ಅಪ್ಪಾ ಇಲ್ಲೇನು ಮಾಡ್ತಿದಾರೆ?'' ಎಂದು ತಿಳಿದುಕೊಳ್ಳುವ ಕುತೂಹಲವಾದರೂ, ಅಲ್ಲಿ ಪೋಲಿಸರ ಎದುರಿಗೆ ನಿಲ್ಲಲು ಹೆದರಿ, ಸೀದಾ ತನ್ನ ಮನೆಗೆ ಬಂದ. ಶಾರದೆ ಮಗನನ್ನು ಕಂಡು ತಲ್ಲಣಿಸಿದಳು. ಅವನನ್ನು ಒಳಗಿನ ರೂಮಿಗೆ ಎಳೆದುಕೊಂಡು ಹೋಗಿ,

''ಇಲ್ಲಿಂದ ನೀನು ಕದಲಿದ್ದೇ ಆದರೆ ನನ್ನಾಣೆ... ತೋಟದ ಮನೆ ತುಂಬಾ ಪೋಲಿಸ್ನೋರು ತುಂಬಿಕೊಂಡಿದಾರೆ. ಅನಿಷ್ಟಕ್ಕೆಲ್ಲಾ ಶನೀಶ್ವರನೇ ಕಾರಣ ಎನ್ನುವಂತೆ, ನಿನ್ನನ್ನು ಹಿಡಿದು ಲಾಕಪ್‌ಗೆ ಹಾಕ್ತಾರೆ. ಅಷ್ಟೇ.''

''ಅಂಥಾದ್ದೇನಾಯ್ತು?...''

''ಏನಾಯ್ತು ಅಂತ ಕೇಳ್ತೀಯ... ನಡೀಬಾರದ ಅನಾಹುತ ನಡೆದು ಹೋಯಿತು. ಗಂಡ ಹೆಂಡಿತಿಗೆ ಜಗಳ ಆಗಿ, ಇಬ್ಬರೂ ಆತ್ಮಹತ್ಯೆ ಮಾಡಿಕೊಂಡಿದಾರೆ. ಶಿವರಾಮಯ್ಯನ ಹೆಣ ಆ ಬಾವಿಲಿ ತೇಲುತ್ತಿದೆಯಂತೆ. ನಿಮ್ಮಪ್ಪ ತೆಗೆಸುಕ್ಕೆ ಅಂತ ಆಳುಗಳನ್ನು ಗೊತ್ತುಮಾಡಿಕೊಂಡು ಹೋಗಿದಾರೆ.

ಕೃಷ್ಣ ಉಸಿರುಗಟ್ಟಿದವನಂತೆ ಚಡಪಡಿಸಿದ. ಬಾವಿಯ ಹತ್ತಿರ ಜನ ಸೇರಿದ್ದನ್ನು ಕಂಡಿದ್ದ. ಬಂದುಗಳಿಗೆ, ಕಲ್ಯಾಣಿ ಏನಾದರೂ ಬಾವಿಗೆ ಬಿದ್ದಿರಬಹುದೇ ಅಂತನ್ನಿಸಿತ್ತು. ಆದರೆ ಅಲ್ಲಿ ತಮ್ಮ ಮನೆಯವರ ಯಾರ ಮುಖವನ್ನು ಕಂಡಿರಲಿಲ್ಲ. ಆದರೆ ಈಗ ಅಮ್ಮ ಏನು ಹೇಳುತ್ತಿದಾಳೆ!

''ಕಲ್ಯಾಣಿ, ಕೋಮಲ ಎಲ್ಲಿ?''

''ಇಬ್ಬರನ್ನೂ ನಮ್ಮ ಮನೆಗೇ ಕರೆದುಕೊಂಡು ಬಂದೆವು. ಅವಳು ಸಾವಿತ್ರಿ, ಚಾಕು ಚುಚ್ಚಿಕೊಂಡು ಸತ್ತು ಬಿದ್ದಿದ್ದಳು.'' ಈಗ ಕೃಷ್ಣನಿಗೆ ಎಲ್ಲಾ ಅರ್ಥವಾಯಿತು. ಈ ಅನರ್ಥಕ್ಕೆಲ್ಲಾ ತಾನೇ ಕಾರಣ. ಆದರೆ ಆ ವಿಷಯ ಈ ಅಮ್ಮನಿಗೆ ಗೊತ್ತಿಲ್ಲ. ಕಲ್ಯಾಣಿ ಏನು ಹೇಳಿರಬಹುದು? ನನಗೆ ಹೆದರಿರಬಹುದು

ಅಂತನ್ನಿಸಿದಾಗ ಲಕ್ಷ್ಮಣನಗೆ ತುಟಿಯಂಚಿನಲ್ಲಿ ಕಂಡಿತು. ಕಲ್ಯಾಣಿಯೇ ಯಾರಿಗೂ ಏನೂ ಹೇಳದಿದ್ದರೆ ತನಗೆ ಏನೂ ಅಪಾಯವಿಲ್ಲವೆಂದು ಕೊಂಡುನಿರಾಳವಾಗಿ ಉಸಿರಾಡಿದ.

''ನಾನು ಕಲ್ಯಾಣಿಯನ್ನು ಮಾತನಾಡಿಸಿಕೊಂಡು ಬರ್ತೀನಿ'' ಎಂದ.

''ಬೇಡ ಬಿಡು. ಅವಳ ಹತ್ತಿರ ಏನು ಮಾತು? ನಿನ್ನ ಈ ದುರ್ದಶೆಗೆ ಅವರೇ ಕಾರಣ... ಈಗ ಅಪ್ಪ ಅಮ್ಮ ಇಲ್ಲ. ಇನ್ನು ನಮ್ಮ ಮನೇಲೇ ವಕ್ಕರಿಸುತ್ತಾರೆ.'' ಕೃಷ್ಣ ಉತ್ತರಿಸಲಿಲ್ಲ. ಅವನ ಆಲೋಚನೆ ಬೇರೆ ದಿಕ್ಕಿನಲ್ಲಿ ಓಡುತ್ತಿತ್ತು.

''ನಿಮ್ಮ ತಾತ ಎಂಥಾ ಕೆಲಸ ಮಾಡಿದಾರೆ ಗೊತ್ತಾ? ಶಿವರಾಮಯ್ಯನ ಹೆಸರಿಗೆ ಆ ತೋಟದ ಮನೆ, ಸ್ವಲ್ಪ ಜಮೀನು ಕೊಟ್ಟು, ಪತ್ರ ಬರೆಸಿದಾರಂತೆ. ಅವರಿಗ್ಯಾಕೆ ಕೊಡಬೇಕು ನೀನೇ ಹೇಳು?''

''ತಾತಂಗೆ ಅವರನ್ನು ಕಂಡರೆ ಇಷ್ಟವಿತ್ತು ಅದಕ್ಕೇ ಕೊಟ್ಟಿದಾರೆ. ಅದಕ್ಕೆ ನಾನೇನು ಹೇಳಲಿ?'' ತಾಯಿಯ ಮೇಲೆ ರೇಗಿದ.

''ನೀನು ಸರಿಯಾಗಿದ್ದಿದ್ದರೆ ಈ ಸ್ಥಿತಿ ಬರುತ್ತಿರಲಿಲ್ಲ. ಇಷ್ಟು ದಿನ ಎಲ್ಲಿದ್ದೆ? ನಿನ್ನ ತಾತ ಸತ್ತ ದಿನವೂ ಬರಲಿಲ್ಲ. ನಾನೇ ನಿನಗೆ ಒಡವೆಗಳನ್ನು ಕೊಟ್ಟೆ ಅಂತ ನಿಮ್ಮಪ್ಪನಿಗೆ ಗೊತ್ತಿಲ್ಲ. ಗೊತ್ತಿದ್ದಿದ್ದರೆ, ಅವತ್ತೇ ನನ್ನನ್ನೂ ಮನೆಯಿಂದಾಚೆ ತಳ್ಳಿಬಿಡುತ್ತಿದ್ದರು.''

''ಬಿಡಮ್ಮ ಹೋಗಲಿ. ರೈಲ್ವೇ ಸ್ಟೇಷನ್ ಬಳಿ ನನ್ನ ಸ್ನೇಹಿತರಿಗೋಸ್ಕರ ಕಾಯ್ತಿದ್ದೆ. ಪೋಲಿಸ್ನೋನಿಗೆ ಅನುಮಾನ ಬಂದು ನಮ್ಮೆಲ್ಲರನ್ನೂ ಒಳಗೆ ಹಾಕಿದ, ನಾನೇನೋ ಬಚಾವಾದೆ. ನನ್ನ ಸ್ನೇಹಿತರಲ್ಲಿ ಕೆಲವರು ಇನ್ನು ಜೈಲಿನಲ್ಲೇ ಇದಾರೆ... ಅವರೆಲ್ಲರ ಬಿಡುಗಡೆ ಯಾವಾಗಲೋ...''

''ಇನ್ನಾದರೂ ಆ ಸಹವಾಸಗಳನ್ನು ಬಿಟ್ಟು ಮನೆ ಕಡೆ ಗಮನ ಕೊಡು. ಇಲ್ಲದಿದ್ದರೆ ಎಲ್ಲಾ ಆಸ್ತಿಯೂ ನಿನ್ನ ಕೈಬಿಟ್ಟು ಹೋಗುತ್ತದೆ.''

''ಹೇಗೆ ಕೈ ಬಿಟ್ಟು ಹೋಗುತ್ತೆ? ಕೋರ್ಟು ಕಟ್ಟೆ ಹತ್ತಿದರೂ ಸರಿ. ನನ್ನ ಆಸ್ತಿ ನನ್ನ ಕೈ ಸೇರಲೇಬೇಕು. ನನಗೆ ಹಣ ಬೇಕು ಹಣ... ಎಲ್ಲವನ್ನೂ ಮಾರಿ,

ನನಗೆ ಇಷ್ಟ ಬಂದ ಹಾಗೆ ಖರ್ಚು ಮಾಡ್ತೀನಿ''

''ಥೂ ಮುಂಡೇದೇ... ಆಸ್ತೀನ ಮಾರಿಕೊಂಡು ತಿಂದರೆ, ನಿರ್ಗತಿಕನಾಗಿ ಹೋಗ್ತೀಯ... ಇದು ನಿಮ್ಮ ತಾತ, ನಿಮ್ಮ ಅಪ್ಪ ಕಷ್ಟಪಟ್ಟು ಊರ್ಜಿತಗೊಳಿಸಿದ ಆಸ್ತಿ. ಮಾರ್ತಾನಂತೆ... ಮಾರ್ತಾನೆ, ಒಂದು ಕಾಸು ಸಂಪಾದಿಸುವ ಯೋಗ್ಯತೆ ಇಲ್ಲ ನಿನಗೆ. ಮಾರುವ ಮಾತನ್ನು ಮಾತ್ರ ಆಡಬೇಡ.''

''ಸರಿ ನೀನೂ ಅದೇ ಜಾತಿಗೆ ಸೇರಿದವಳೇ... ನಾನು ಕೇಳಿದಾಗೆಲ್ಲಾ ನೀನು ಹಣ ಕೊಟ್ಟರೆ ಸಾಕು... ಆಸ್ತಿನೆಲ್ಲಾ ನೀನೇ ಇಟ್ಕೋ...''

''ನಿನಗೆ ಈ ಜನ್ಮದಲ್ಲಿ ಬುದ್ಧಿ ಬರುಲ್ಲ ಕಣೋ ಕೃಷ್ಣ... ನಾನು ಇರೋತನಕ ಹೇಗೋ ಆಗುತ್ತೆ. ಆಮೇಲೆ ನಿನ್ನ ಗತಿ ಏನೋ... ನೆನೆಸಿಕೊಂಡರೇ ದಿಗಿಲಾಗುತ್ತೆ.''

''ಅದಕ್ಕೆ ನೀನೇ ಒಂದು ವ್ಯವಸ್ಥೆ ಮಾಡಿಬಿಡು...''

''ನಾನೂ ಅದನ್ನೇ ಯೋಚಿಸ್ತಿದೀನಿ. ನಿನ್ನ ತಾತ ಸಾಯದೇ ಇದ್ದಿದ್ದರೆ ಇಷ್ಟು ಹೊತ್ತಿಗೆ ನಿನ್ನ ಮದುವೆ ಮುಗಿದುಹೋಗಿರುತ್ತಿತ್ತು... ಮದುವೆ ಆದರೆ ಜವಾಬ್ದಾರಿ ಹೆಚ್ಚುತ್ತೆ...''

''ಸಮಸ್ಯೆ ಹೆಚ್ಚುತ್ತೆ... ನನಗೆ ಮದುವೆ ಗಿದುವೆ ಏನೂ ಬೇಡ.''

''ಹಾಗೆನ್ನಬೇಡ ಕೃಷ್ಣ... ನಿನ್ನೋರು ಅಂತ ಒಬ್ಬರು ಹತ್ತಿರದವರು ಇರಬೇಕು. ನಾವುಗಳು ಶಾಶ್ವತಾನಾ?''

''ನನಗೆ ಯಾರೂ ಬೇಡ. ನಮ್ಮೋರು ಅಂತ ಇರೋರೆಲ್ಲಾ ನನಗೆ ಏನೇನು ಮಾಡಿದಾರೆ ಅಂತ ನನಗೂ ಗೊತ್ತು.''

''ಹೋಗಲಿ ಬಿಡು. ಈಗೇಕೆ ಆ ಮಾತು, ಹೇಗೂ ವರ್ಷ ಕಳೆಯೋವರೆಗೂ ಮದುವೆ ಮಾತಿಲ್ಲ. ಅಲ್ಲದೇ ಕಲ್ಯಾಣಿ, ಕೋಮಲಳ ಜವಾಬ್ದಾರಿಯೂ ನಮ್ಮ ತಲೆಗೇ ಅಂಟಿದೆ. ಕಲ್ಯಾಣಿಗೆ ಮದುವೆ ಮಾಡಿ ಕಳಿಸಿದರೆ ಅವಳು ತಂಗಿಯನ್ನು ಕರೆದುಕೊಂಡು ಹೋಗ್ತಾಳೆ. ಆಗ ಎಲ್ಲಾ ಸಲೀಸು.''

ಒಳಗೆ ಅಳುತ್ತಾ ಕೂತಿದ್ದ ಕಲ್ಯಾಣಿ, ತಾಯಿ ಮಗನ ಮಾತುಗಳನ್ನು ಅಲ್ಪ ಸ್ವಲ್ಪ ಕೇಳಿಸಿಕೊಂಡಿದ್ದಳು. ಕೃಷ್ಣ ಹಾಳಾಗುವುದಕ್ಕೆ ಅವನ ತಾಯಿಯೂ ಕಾರಣ...

ಅಪರೋಕ್ಷವಾಗಿ ನಾವುಗಳೂ ಕಾರಣ ಇರಬಹುದು. ಆದರೆ ಸ್ವಂತ ತಾಯಿಯೇ ಹೀಗೆಲ್ಲಾ ಮಗನೊಡನೆ ಮಾತನಾಡಿ, ಅವನ ಮನಸ್ಸನ್ನು ಕೆಡಿಸುವಬದಲು, ಅವನನ್ನು ತಿದ್ದುವಂತಿದ್ದರೇ... ಕೃಷ್ಣ ಖಂಡಿತಾ ಸುಧಾರಿಸುತ್ತಿದ್ದ ಎಂದೆನಿಸಿತ್ತು.

ಚಿಕ್ಕಮ್ಮ ಹೇಳುವಂತೆ, ''ತಾನು ಮದುವೆಯಾಗಿ, ಕೋಮಲನ್ನ ನನ್ನ ಜೊತೆ ಕರೆದುಕೊಂಡು ಹೋಗಬಹುದಾಗಿತ್ತು... ಆದರೆ ಈಗ ಮದುವೆಯ ಮಾತನ್ನು ಯೋಚಿಸಲೂ ಮನಸ್ಸು ಹಿಂಜರಿಯುತ್ತೆ. ಈ ಕೃಷ್ಣ ಅದಕ್ಕೂ ಕಲ್ಲು ಹಾಕಿಬಿಟ್ಟ. ಅವನಿಗೆ ಎಷ್ಟು ರೀತಿಯ ಶಿಕ್ಷೆ ಕೊಟ್ಟರು ಸಾಲದು. ಆದರೆ ಆ ಶಿಕ್ಷೆ ಕೊಡುವವರಾರು? ಪೋಲಿಸರು, ಜೈಲು ಎಲ್ಲಾ ಅವನಿಗೆ ಪರಿಚಿತವೇ... ಯಾವುದಕ್ಕೂ ಹೆದರುತ್ತಾನೋ ಇಲ್ಲವೋ...

ನಾನು ಕೃಷ್ಣನ ಮೇಲೆ ಕಂಪ್ಲೇಂಟ್ ಕೊಟ್ಟು ಅವನನ್ನು ಜೈಲಿಗೆ ಕಳಿಸಬಹುದು.... ಕೇಸು, ಕೋರ್ಟು ಕಛೇರಿ ಅಂತ ನನ್ನ ಜೊತೆ ಸುತ್ತುವವರ್‍ಯಾರು! ನನಗೆ ಹಣಕಾಸು ಒದಗಿಸುವವರ್‍ಯಾರು? ಎಲ್ಲಾದಕ್ಕೂ ಚಿಕ್ಕಪ್ಪನೇ ಗತಿ. ಚಿಕ್ಕಪ್ಪನ ಮಗನನ್ನೇ ಜೈಲಿಗೆ ಕಳಿಸಿ ಅವರ ಸಹಾಯ ಕೇಳುವುದಾದರೂ ಹೇಗೆ? ಅಥವಾ ಅವರಿಂದ ದೂರವಾಗಿ ಈಗ ನಾನು ನನ್ನ ತಂಗಿ ಬದುಕುವುದಾದರೂ ಹೇಗೆ? ಕಾಲ ಬರಲಿ ಒಂದಲ್ಲ ಒಂದು ದಿನ ಅವನ ಮೇಲೆ ಪ್ರತೀಕಾರವನ್ನು ತೆಗೆದುಕೊಳ್ಳುವ ಸಮಯ ಬಂದೇ ಬರುತ್ತದೆ. ಅದಕ್ಕೆ ಮೊದಲು ಕೋಮಲ ಓದಿ, ಕೆಲಸಕ್ಕೆ ಸೇರಿಕೊಂಡು, ಮದುವೆಯಾಗಿ ಸುಖವಾಗಿರಬೇಕು... ಅಲ್ಲಿಯತನಕ ತಾನು ಆತುರ ಪಡಬಾರದು ಎಂದು ತನ್ನಲ್ಲೇ ನಿರ್ಧರಿಸಿಕೊಂಡು ತಂಗಿಯನ್ನು ಎಬ್ಬಿಸಿಕೊಂಡು ರೂಮಿನಿಂದ ಹೊರಬಂದಳು.

ಮಾತನಾಡುತ್ತಿದ್ದ ತಾಯಿ ಮಗ ಅವರಿಬ್ಬರನ್ನು ಕಂಡು ಸುಮ್ಮನಾದರು. ''ಇಷ್ಟು ಹೊತ್ನಲ್ಲಿ ಎಲ್ಲಿಗೆ ಹೊರಟೆ ಕಲ್ಯಾಣಿ?'' ಶಾರದಾ ಕೇಳಿದಾಗ, ''ತೋಟದ ಮನೆಗೆ ಹೋಗ್ತೀನಿ'' ಎಂದಳು.

''ಬೇಡ ಕಲ್ಯಾಣಿ... ನಿನ್ನ ಚಿಕ್ಕಪ್ಪ ಹೇಳಿ ಕಳಿಸುವವರೆಗೂ ನಾವುಗಳು ಹೋಗುವುದು ಬೇಡ. ಅಲ್ಲಿಯ ಪರಿಸ್ಥಿತಿ ಹೇಗಿದೆಯೊ?''

''ಸರಿ ಹೊರಗೆ ಚಿಕ್ಕಪ್ಪನಿಗೆ ಕಾಯ್ತಾ ಕೂತಿರ್ತಿವಿ'' ಎಂದು ತಂಗಿಯ ಕೈ

ಹಿಡಿದು ಹೊರಗೆ ಜಗುಲಿಯ ಮೇಲೆ ಕೂತಳು.

ಎಷ್ಟು ಹೊತ್ತಾದ್ರೂ ನಾರಾಯಣ ಬರದಿದ್ದಾಗ, ಶಾರದಾ ಬಂದು ಕರೆದಳು. ''ಹೀಗೆ ವಯಸ್ಸಿಗೆ ಬಂದ ಹೆಣ್ಣು ಮಕ್ಕಳು ಕತ್ತಲಲ್ಲಿ ಬೀದಿ ಬಾಗಿಲಲ್ಲಿ ಕೂತಿರಬಾರದು, ನಡೀರಿ ಒಳಗೆ. ಒಂದು ತುತ್ತು ಊಟ ಮಾಡಿ ಮಲಗಿಕೊಳ್ಳಿ. ಚಿಕ್ಕಪ್ಪ ಬರೋದು ಎಷ್ಟು ಹೊತ್ತಾಗುತ್ತೋ ಏನೋ...''

ಊಟ ಮಾಡುವ ಮನಸ್ಸಿಲ್ಲದಿದ್ದರ, ಹೊಟ್ಟೆ ಹಸಿವನ್ನು ಮುಚ್ಚಲು ಅಕ್ಕ ತಂಗಿಯರು ಊಟ ಮಾಡಿದರು. ಕೃಷ್ಣ ಆಗಾಗ್ಗೆ ಇಬ್ಬರ ಕಡೆ ನೋಡುತ್ತಾ ಇದ್ದ. ಕಲ್ಯಾಣಿಗೆ ಅದರ ಅರಿವಾಗುತ್ತಿತ್ತು. ರೂಮಿಗೆ ಹೋಗಿ ಬಾಗಿಲನ್ನು ಭದ್ರ ಪಡಿಸಿಕೊಂಡು, ತಂಗಿಯನ್ನು ತಬ್ಬಿತೊಂಡು ಮಲಗಿದಳು. ಕೃಷ್ಣನ ಮನಸ್ಸಿನಲ್ಲಿ ನಾನಾ ರೀತಿಯ ಆಲೋಚನೆಗಳು ಮೂಡಿಬರುತ್ತಿದ್ದವು.

ನಾರಾಯಣ ವಾಪಸ್ಸು ಮನೆಗೆ ಬಂದಾಗ ಮಧ್ಯರಾತ್ರಿ ಮೀರಿತ್ತು. ಶಾರದಾ ಕೇಳದಿದ್ದರೂ, ಅವನೇ ನುಡಿದ.

''ಎಲ್ಲಾ ಮುಗಿಸಿ ಬಿಟ್ಟೇ ಬಂದೆ... ಎರಡು ದಿನದ ದೇಹ ನೋಡುವ ಹಾಗಿರಲಿಲ್ಲ. ಪೋಲಿಸರ, ಡಾಕ್ಟರ ಅನುಮತಿ ಪಡೆದು ಅಂತಿಮ ಕ್ರಿಯೆ ಮಾಡಿದ್ದಾಯ್ತು... ಕಲ್ಯಾಣಿ, ಕೋಮಲ ಎಲ್ಲಿ?''

''ಮಲಗಿದಾರೆ. ಎಬ್ಬಿಸ್ಲಾ?''

''ಬೇಡ ಎದ್ದು ಏನು ಮಾಡ್ತಾರೆ! ಒಟ್ಟಿನಲ್ಲಿ ಎಲ್ಲಾ ಮುಗಿದು ಹೋಯ್ತು. ಅಲ್ಲಾ... ಯಾಕೆ ಹೀಗೆ ಆಯ್ತು ಅಂತ?''

''ಅವರದರು ಪಡೆದುಕೊಂಡು ಬಂದದ್ದು. ಏಳಿ... ಸ್ನಾನ ಮಾಡಿ, ಊಟ ಮಾಡಿ ಮಲಗಿ. ಎರಡು ದಿನದಿಂದ ನಿದ್ದೆ ಇಲ್ಲ; ಊಟವಿಲ್ಲ...''

''ಸಧ್ಯ, ಅಪ್ಪ ಇದನ್ನೆಲ್ಲ ನೋಡುವ ಮುಂಚೇನೇ ಹೋದ್ರು... ಇಲ್ಲದಿದ್ರೆ... ಅವರ ಸ್ಥಿತಿ ಏನಾಗ್ತಿತ್ತೋ...''

''ಅದಕ್ಕೇ ಹೇಳಿದ್ದು... ಏನಾದರೂ, ಶಾಂತಿ, ಹೋಮ ಮಾಡಿಸೋಣ ಅಂತ... ನೀವು ಸುಮ್ಮನೇ ದುಡ್ಡು ಖರ್ಚು ಅಂತ ದಬಾಯಿಸಿಬಿಟ್ರಿ... ಕೃಷ್ಣಂಗೂ ಒಳ್ಳೇದಾಗುತ್ತಿತ್ತು...''

''ಅವನ ಹೆಸರನ್ನು ಎತ್ತಬೇಡ ನನ್ನೆದುರಿಗೆ. ಅವನಿಂದಲೇ ಇಷ್ಟೆಲ್ಲಾ ಆದದ್ದು. ಇನ್ನು ಅವನಿಗೆ ಒಳ್ಳೇದಾಗೋದು ಅಷ್ಟರಲ್ಲೇ ಇದೆ.''

''ನಿಮಗೆ ಮಗ ಅಂತಂದ್ರೆ ಒಂದು ದಿನವೂ ಪ್ರೀತಿ ವಾತ್ಸಲ್ಯ ಇಲ್ಲ. ಅದೇ ಆ ಹುಡುಗೀರಿಗೆ ಪ್ರಾಣ ಬೇಕಾದ್ರೂ ಕೊಡ್ತೀರಿ.''

''ಈಗ ಆ ಮಾತೆಲ್ಲ ಯಾಕೆ? ನಾನು ನೀರು ಹುಯ್ದುಕೊಂಡು ಬರ್ತೀನಿ... ಅಡಿಗೆ ಬಿಸಿ ಮಾಡು'' ಎಂದು ನುಡಿದು ಬಚ್ಚಲ ಮನೆ ಕಡೆಗೆ ನಡೆದ.

ಮುಂದಿನ ಹದಿನೈದು ದಿನಗಳು, ಶಿವರಾಮಯ್ಯ ದಂಪತಿಗಳ ದಿನ ಕಾರ್ಯಗಳನ್ನು ಮಾಡುವುದರಲ್ಲಿ ಕಳೆದುಹೋದವು.

ನಾರಾಯಣ, ಕಲ್ಯಾಣಿಯನ್ನು ಕರೆದು ಹೇಳಿದ. ''ಆ ಮನೆಯ ಸಾಮಾನುಗಳನ್ನೆಲ್ಲ ಇಲ್ಲಿಗೇ ತರಿಸಿ ಬಿಡ್ತೀನಿ. ನೀವುಗಳು ಇನ್ನೂ ಮುಂದೆ ಇಲ್ಲೇ ನಮ್ಮ ಮನೇಲೇ ಇರಬೇಕಲ್ಲಾ....'' ಶಾರದೆಗೆ ಆ ಮಾತು ಹಿಡಿಸಲಿಲ್ಲ. ಆದರೆ ಏನನ್ನು ಆಡಲಿಲ್ಲ.

''ಕೃಷ್ಣ... ಆಗ ಈಗ ಮನೆಗೆ ಬರುತ್ತಾನೆ. ಈ ಹುಡುಗಿಯರು ಇದ್ದರೆ ಅವನ ತಲೆ ಕೆಟ್ಟುಹೋದ ಹಾಗಾಡ್ತಾನೆ. ತಾನು ಏನಾದರೂ ಮಾಡಿ ಆ ಹುಡುಗಿಯರು ಅಲ್ಲೇ ಇರುವ ಹಾಗೆ ಮಾಡಬೇಕು'' ಎಂದುಕೊಂಡಳು.

ಅಷ್ಟರಲ್ಲಿ ಕಲ್ಯಾಣಿ ನುಡಿದಳು. ''ಇಲ್ಲ ಚಿಕ್ಕಪ್ಪ... ನಾನು ಕೋಮಲ ಇಬ್ಬರೂ ಪೇಟೆಗೆ ಹೋಗಿಬಿಡೋಣ ಅಂತ ನಿರ್ಧರಿಸಿದೀವಿ... ನಾನು ಯಾವುದಾದರೂ ಕೆಲಸಕ್ಕೆ ಸೇರಿಕೊಳ್ತೀನಿ. ಕೋಮಲಳ ಓದೂ ಮುಂದುವರೆಯುತ್ತೆ...''

''ಏನಂದೆ? ನಾನು ಇದ್ದುಕೊಂಡು, ನೀನು ಕೆಲಸಕ್ಕೆ ಸೇರಿಕೊಳ್ಳೋದಕ್ಕೆ ಒಪ್ತೀನಿ ಅಂತ ಅಂದ್ಕೊಂಡ್ಯಾ? ಹದಿನೈದು ದಿನಗಳಲ್ಲಿ ಅಷ್ಟು ದೊಡ್ಡೋಳಾಗಿ ಬಿಟ್ಟಾ?''

ಶಾರದಾ ಮಧ್ಯೆ ನುಡಿದಳು:

''ಅವಳು ಹೇಳೋದ್ರಲ್ಲಿ ತಪ್ಪೇನಿದೆ?... ಅಪ್ಪ ಅಮ್ಮ ಇಬ್ಬರೂ ಇಲ್ಲದೇ ಇರುವಾಗ, ಅವಳು ಎಲ್ಲಿದ್ರೇನು?''

''ನೀನು ಸುಮ್ಮನಿರು... ಈ ಹುಡುಗಿಯರು ನಮ್ಮ ಮನೇಲೇ ಹುಟ್ಟಿ ಬೆಳೆದೋರು... ಇದು ಅವರದ್ದೇ ಮನೆ. ಈ ಮನೆ ಬಿಟ್ಟು ಬೇರೆ ಎಲ್ಲಿಗೆ ಹೋಗಬೇಕು? ಅವರಿಬ್ಬರ ಮದುವೆಯಾಗಿ, ಗಂಡನ ಮನೆಗೆ ಹೋಗುವವರೇಗೂ, ಅವರಿಬ್ಬರೂ ಈ ಮನೆಯಿಂದ ಎಲ್ಲಿಗೂ ಹೋಗುವುದಿಲ್ಲ'' ಅವನು ಒತ್ತಿ ನುಡಿದಾಗ ಕಲ್ಯಾಣಿ ಪೆಚ್ಚಾದಳು. ಆ ಕ್ಷಣದಲ್ಲಿ ನಾರಾಯಣ ಮೂರ್ತಿಯ ಎದುರಿಗೆ ಏನನ್ನೂ ಆಡಲಾಗಲಿಲ್ಲ. ಆದರೆ, ಶಾರದೆಗೆ ತಾವು ಅಲ್ಲಿರುವುದು ಇಷ್ಟವಿಲ್ಲವೆನ್ನುವುದನ್ನು ಅರಿತಳು. ಸಮಯ ನೋಡಿ ಚಿಕ್ಕಮ್ಮನೊಡನೆ ಮಾತನಾಡಿದಳು.

''ನನಗೆ ಕೆಲಸ ಸಿಗುವವರೆಗೂ ನಾನು ತೋಟದ ಮನೇಲಿರ್ತೀನಿ... ನೀವು ಚಿಕ್ಕಪ್ಪನ್ನ ಒಪ್ಪಿಸಿ.''

''ಹೂಂ'' ಎಂದು ಒಪ್ಪಿಕೊಂಡಳು ಶಾರದಾ.

''ನೀನು ಇವತ್ತೇ, ನಿನ್ನ ತಂಗಿಯ ಜೊತೆ ತೋಟದ ಮನೆಗೆ ಹೋಗು. ನಾನು ಅವರ ಹತ್ತಿರ ಮಾತನಾಡ್ತೀನಿ. ನೀನು ಯೋಚಿಸಬೇಡ'' ಎಂದು ಧೈರ್ಯ ಹೇಳಿದಳು.

ಮಧ್ಯಾಹ್ನ ಊಟದ ಸಮಯದಲ್ಲಿ ನಾರಾಯಣ, ಅವರಿಬ್ಬರನ್ನು ಕಾಣದಿದ್ದಾಗ ಪ್ರಶ್ನಿಸಿದ. ''ಅವರಿಬ್ಬರದ್ದೂ ಊಟ ಆಯ್ತಾ?''

''ಬೆಳಿಗ್ಗೆನ್ನೇ, ನೀವು ಮನೆಯಿಂದ ಹೊರಟ ಸ್ವಲ್ಪ ಹೊತ್ತಿನಲ್ಲೇ ಅವರಿಬ್ರೂ, ತೋಟದ ಮನೆಗೆ ಹೊರಟುಹೋದ್ರು...''

''ನೀನು ಬೇಡಾಂತ ತಡೀಲಿಲ್ವಾ?'' ರೇಗಿದ.

''ನಾನು ಬೇಡಾಂತಂದ್ರೆ ಕೇಳ್ತಾಳಾ ಕಲ್ಯಾಣಿ... ಅಲ್ಲದೇ ಅವಳಿಗೆ ಅಲ್ಲಿರಬೇಕೂಂತ ಆಸೆ ಇದ್ರೆ ನಾವು ಬಲವಂತವಾಗಿ ಅವರನ್ನು ಇಲ್ಲಿ ಇಟ್ಟುಕೊಳ್ಳೋಕೆ ಆಗುಲ್ಲ. ಅದಕ್ಕೆ ಸರಿ ಹೋಗುಲ್ಲ.''

''ಅವರಿಬ್ಬರೂ ಚಿಕ್ಕವರು, ತಿಳುವಳಿಕೆ ಸಾಲದು... ನಿನಗಾದ್ರೂ ತಿಳೀಬೇಡ್ವಾ?'' ಆಕ್ಷೇಪಣೆಯ ಧ್ವನಿಯಲ್ಲಿ ನುಡಿದ.

''ಕಲ್ಯಾಣಿಗೆ ನನಗಿಂತ ತಿಳುವಳಿಕೆ ಜಾಸ್ತಿ... ನನಗಿಂತ ಧೈರ್ಯವಂತೆ...

ತೋಟದ ಮನೇಲಿ ಇರಬಲ್ಲೇ ಎನ್ನೋ ಹಠದಿಂದ ಅವಳು ಹೋಗಿರುವಾಗ ನಾನು ಏನು ಹೇಳಿದರೂ ಕೇಳುತ್ತಿರಲಿಲ್ಲ... ಬೇಕಾದರೆ, ನೀವು ಹೋಗಿ ರಾತ್ರಿ ಹೊತ್ತು ಆ ಮನೇಲೇ ಮಲಕ್ಕೊಳಿ... ನಾನು ಬೇಡ ಅನ್ನಲ್ಲ.''

''ಇಲ್ಲಿ ನೀನು ಒಬ್ಬಳೇ ಆಗ್ತೀಯಲ್ಲಾ...''

''ನೀವೇನು ಚಿಂತಿಸಬೇಡಿ. ಕೃಷ್ಣ ಬರ್ತಾನೆ...''

''ಓ... ನಾನು ಮನೇಲಿಲ್ಲದಾಗ ಕೃಷ್ಣ ಮನೆಗೆ ಬರ್ತಾನಾ? ಈ ಪ್ಲಾನ್ ನಿನ್ನದೋ ಅವನದೋ?''

''ಪ್ಲಾನ್ ಏನ್ಬಂತು? ನನ್ನ ಮಗ ನನ್ನ ಮನೆಗೆ ಬರೋಕೆ ಹೆದರಬೇಕಾಗಿಲ್ಲ... ಆ ಹುಡುಗಿಯರು ಇದ್ದರೆ ಅವನಿಗೂ ಮುಜುಗರ... ಈ ನೆವದಿಂದಲಾದ್ರೂ ಮಗ ಮನೆಗೆ ಬರಬೇಡಾಂತ ನಾನೆಂದು ಹೇಳಿದ್ದೆ?''

ಅವನಿಗೇ ಮುಖವಿರಲಿಲ್ಲ. ನಿನ್ನ ಒಡನೆಗಳನ್ನು ಕದ್ದು, ಜೈಲಿಗೆ ಹೋಗಿದ್ದನಲ್ಲ''

''ಅದನ್ನೆಲ್ಲಾ ಮರೆಯೋದೇ ಇಲ್ವಾ? ಕಾಲ ಹೀಗೇ ಇರುತ್ತಾ? ನಮ್ಮ ಕೃಷ್ಣನೂ ಒಂದಲ್ಲ ಒಂದು ದಿನ ಬದಲಾಗ್ತಾನೆ... ಆ ಕಾಲ ಬಹಳ ಬೇಗ ಬರುತ್ತೆ. ವರ್ಷ ಕಳೀತಿದ್ದ ಹಾಗೆ ಅವನಿಗೆ ಮದುವೆ ಮಾಡ್ತೀನಿ. ನೋಡ್ತಿರಿ... ಹೇಗೆ ಜವಾಬ್ದಾರಿ ಬರುತ್ತೆ ಅಂತ.''

''ಅಂಥಾ ಅವಿವೇಕ ಮಾತ್ರ ಮಾಡಬೇಡ ಶಾರದಾ... ಯಾವುದೋ ಹುಡುಗಿಯ ಗ್ರಹಚಾರ ಕೆಟ್ಟಿದ್ದರೆ, ಅವಳು ಇವನ ಹೆಂಡತಿಯಾಗಿ ಬರಬೇಕು ಅಷ್ಟೇ...''

''ಆ ಹುಡುಗಿಯ ಕಾಲ್ಗುಣದಿಂದ ಅವನು ಸುಧಾರಿಸುತ್ತಾನೆ ಅಂತ ಪಂಡಿತರೇ ಹೇಳಿದಾರೆ. ಅವರು ಹೇಳೋದೆಲ್ಲಾ ನಿಜವಾಗುತ್ತೆ.''

''ಮೊದಲು ಕಲ್ಯಾಣಿಯ ಮದುವೆಯನ್ನು ಮಾಡೋಣ. ಪಂಡಿತರನ್ನು ವಿಚಾರಿಸಿ ಯಾವುದಾದ್ರೂ ತಕ್ಕನಾದ ವರ ಇದ್ದರೆ ಗೊತ್ತು ಮಾಡು.''

''ಒಟ್ಟಿನಲ್ಲಿ ಸ್ವಂತ ಮಗನಿಗಿಂತ, ಕಂಡೋರ ಮಕ್ಕಳ ಚಿಂತೆಯೇ ಜಾಸ್ತಿ ನಿಮಗೆ...''

''ಶಾರದಾ... ಅವರೂ ನಮ್ಮ ಮನೆ ಮಕ್ಕಳೇ... ನಿನಗೆಷ್ಟು ಸಲ ಹೇಳಬೇಕು... ಹೀಗೆ ಭೇದ ಮಾಡಬೇಡಾಂತ''

''ರಕ್ತ ಸಂಬಂಧವೇ ಇಲ್ಲ... ಅವರು ಹೇಗೆ ನಮ್ಮ ಮನೆ ಮಕ್ಕಳಾಗುತ್ತಾರೆ...?'' ಅವನು ಕಿಡಿಗಣ್ಣಿನಿಂದ ಅವಳ ಕಡೆ ನೋಡಿದ.

''ನನಗೇಕೋ ನಿಮ್ಮ ಮೇಲೇ ಅನುಮಾನ ಬರುತ್ತಿದೆ.'' ಅವಳು ಕೊಂಕಿ ನುಡಿದಾಗ ಅವನು ಕೈ ಎತ್ತಿದ. ಆದರೆ ಅವಳಿಗೆ ಏಟು ಕೊಡದೇ ಹಾಗೆ ಕೈ ಇಳಿಸಿ, ಅವಳ ಕಡೆ ಉರಿಗಣ್ಣಿನಿಂದ ನೋಡಿದ.

''ನಿನ್ನ ಈ ಕೊಳಕು ಬುದ್ಧಿಯೇ ನಿನ್ನ ಮಗನಿಗೆ ಬಂದಿದೆ. ನಿನ್ನ ಕೈ ಕೆಳಗೆ ಆ ಹೆಣ್ಣು ಮಕ್ಕಳು ಇದ್ದರೆ ಇದೇ ಬುದ್ಧಿ ಬರುತ್ತೆ. ಅವರು ತೋಟದ ಮನೇಲಿರೋದೇ ಸರಿ'' ಎಂದು ಹೇಳಿ, ಅವಳ ಕಡೆ ತಿರುಗಿ ನೋಡದೇ ಮನೆಯಿಂದ ಹೊರನಡೆದ.

ಅಪ್ಪ ಆ ಕಡೆ ಹೋಗುತ್ತಿದ್ದ ಹಾಗೆ ಕೃಷ್ಣ ಎಲ್ಲಿದ್ದನೋ... ತಾಯಿಯ ಎದುರಿಗೆ ಪ್ರತ್ಯಕ್ಷನಾದ. ತಾಯಿ ಸಡಗರದಿಂದ ಅವನಿಗೆ ಊಟ ಬಡಿಸಿದಳು.

''ನಾನು, ಪಂಡಿತರ ಮನೆಗೆ ಹೋಗಿ ಬರ್ತೀನಿ... ಕಲ್ಯಾಣಿಯ ಮದುವೆ ಆಗಿ ಅವಳು ಈ ಮನೆಯಿಂದ ಹೋದರೆ, ನಿನ್ನ ಸಂಸಾರ ನೆಟ್ಟಗಾಗುತ್ತೆ... ನೋಡ್ತಿರು''

''ಕಲ್ಯಾಣಿಗೆ ಮದುವೇನಾ?''... ಕೃಷ್ಣ ಕೆಟ್ಟದಾಗಿ ನಕ್ಕ.

''ಯಾಕೋ ನಗ್ತೀಯ? ಒಂದು ಹೆಣ್ಣಿಗೆ ಒಂದು ಗಂಡು ಅಂತ ಭಗವಂತ ಸೃಷ್ಟಿ ಮಾಡಿರುತ್ತಾನೆ. ಕಲ್ಯಾಣಿ ಏನು ಕುರೂಪಿಯಲ್ಲ. ಕೆಲಸ ಕಾರ್ಯ ಎಲ್ಲಾ ಬರುತ್ತೆ. ಯಾವುದಾದ್ರೂ ಎರಡನೇ ವರ ಆದರೂ ಪರವಾಗಿಲ್ಲ. ಅವಳು ಆದಷ್ಟು ಬೇಗ ಇಲ್ಲಿಂದ ಹೋದರೆ ಸಾಕು''

ಕೃಷ್ಣ ಎದ್ದು ಹೋದಾಗ, ಶಾರದಾ ಗಂಭೀರವಾದಳು. ಇವನ ಮನಸ್ನಲ್ಲಿ ಏನಿದೆಯೊ? ನಾನು ಯಾರ ಮಾತನ್ನು ಕೇಳಬಾರದು, ಆದಷ್ಟು? ಬೇಗ ಒಂದು ಗಂಡನ್ನು ನೋಡಲೇಬೇಕು ಎಂದು ನಿರ್ಧರಿಸಿದಳು.

ಕೃಷ್ಣ ಕಲ್ಯಾಣಿಯನ್ನು ನೋಡುವ ಆಸೆಯಿಂದ ಅವಳನ್ನು

ಹುಡುಕಿಕೊಂಡು ತೋಟದ ಮನೆಗೆ ಬಂದ. ಅವಳು ಒಬ್ಬಳೇ ಇದ್ದಳು ಕೋಮಲ ಸ್ಕೂಲಿಗೆ ಹೋಗಿದ್ದಳು. ಕಲ್ಯಾಣಿ ಭಯಗೊಂಡರೂ, ಅದನ್ನು ತೋರಗೊಡಲಿಲ್ಲ.

''ಕಲ್ಯಾಣೀ... ನಿನಗೊಂದು ಸಂತಸದ ಸುದ್ಧಿ...'' ಎಂದ. ಅವಳು ಮಾತನಾಡಲಿಲ್ಲ. ಅವನೇ ಮತ್ತೆ ನುಡಿದ.

''ಅಮ್ಮ ನಿನಗೆ ಮದುವೆ ಮಾಡಿ ಕಳಿಸುವ ಆತುರದಲ್ಲಿದ್ದಾಳೆ. ಗಂಡುಗಳನ್ನು ವಿಚಾರಿಸಲು ಪಂಡಿತರ ಮನೆಗೆ ಹೋಗಿದಾಳೆ''

''ಯಾಕೇ ನಿನ್ನ ಮದುವೆ ವಿಷಯ ಕೇಳಿ ನಿನಗೆ ಖುಷಿಯಾಗಲಿಲ್ವಾ?''

''ನನ್ನ ಖುಷೀನೆಲ್ಲಾ ಹಾಳು ಮಾಡಿದೋನು ನೀನು... ನಾಚಿಕೆಯಿಲ್ಲದೇ ಕೇಳ್ತೀಯಲ್ಲಾ...?''

''ನಿನ್ನ ಹತ್ತಿರ ನನಗೆ ನಾಚಿಕೆ ಏಕೆ?''

''ನಾಚಿಕೆ, ಹೇಸಿಗೆ ಏನೂ ಇಲ್ಲದೋನು ನೀನು... ನಂಗೊತ್ತು...'' ಹಲ್ಲು ಕಡಿದಳು.

''ಏಯ್ ಕಲ್ಯಾಣಿ... ನನ್ನನ್ನ ರೇಗಿಸಬೇಡ... ನಿನ್ನ ಮದುವೆ ನಡೀದ ಹಾಗೆ ಮಾಡಿ ಬಿಡ್ತೀನಿ...''

''ನೀನೇನು ಮಾಡ್ತೀಯ? ಸುಮ್ಮನೇ ಹೋಗು... ನಮ್ಮ ಮನೀಗೆ ಬಂದು ನನ್ನ ಮನಸ್ಸನ್ನು ಹಾಳು ಮಾಡಬೇಡ. ಹೊರಟು ಹೋಗು.''

''ನಾನು ಬಂದು, ಹಾಗೇ ಸುಮ್ಮನೇ ಹೋಗಿ ಬಿಡ್ತೀನಾ? ನಂಗೊತ್ತು ನೀನು ಒಬ್ಬಳೇ ಇದೀಯ... ನೀನೂ ಮದುವೆ ಮಾಡಿಕೊಂಡು ಹೊರಟು ಹೋದರೆ, ಆಮೇಲೆ ನನಗೆ ಸುಲಭವಾಗಿ ಎಲ್ಲಿ ಸಿಗ್ತೀಯ?''

''ನೀನು ಹೀಗೆ ಬಂದೂ ಬಂದೂ ಹಿಂಸೆ ಮಾಡಿದರೆ, ನಾನು ನಿಮ್ಮಪ್ಪನಿಗೆ ಹೇಳ್ತೀನಿ.''

''ಹೋಗೆಲೇ... ಅಪ್ಪನಿಗೆ ಯಾರು ಹೆದರ್ತಾರೆ? ಎಂದು ಮುಂದೆ ಮುಂದೆ ಬಂದವನ ಕೆನ್ನೆಗೆ ಪಟೀರನೇ ಹೊಡೆದಳು. ತತ್ತರಿಸಿ ಹಿಂದೆ ಸರಿದವನು ಮತ್ತೆ ಮುಂದೆ ಬಂದು ಅವಳ ಕೈ ಹಿಡಿದ.

''ಏನೇ ನನ್ನ ಕೆನ್ನೆಗೆ ಹೊಡೆಯುವಷ್ಟು ಧೈರ್ಯಾನಾ? ನಿನಗಿನ್ನು ಬುದ್ಧಿ ಬಂದಿಲ್ವಾ? ನಿನಗೆ ಬುದ್ಧಿ ಹೇಗೆ ಕಲಿಸಬೇಕು ಅಂತ ನನಗೆ ಗೊತ್ತು...'' ಎನ್ನುತ್ತಾ ಬಾಗಿಲ ಕಡೆ ತಿರುಗಿದವನನ್ನು ನಿಲ್ಲಿಸಿದಳು.

''ಮತ್ತೆ ಮತ್ತೆ ನನ್ನನ್ನು ಹೆದರಿಸಬೇಡ ಕೃಷ್ಣಾ. ಕೋಮಲ ನಿನ್ನ ಕಣ್ಣಿಗೆ ಬೀಳದಂತೆ ಅವಳನ್ನು ನಾನು ನೋಡಿಕೊಳ್ತೀನಿ. ಅಷ್ಟರ ಮೇಲೂ ನೀನು ಅವಳ ತಂಟೆಗೆ ಹೋದರೆ ಪೋಲಿಸ್ ಕಂಪ್ಲೆಂಟ್ ಕೊಡ್ತೀನಿ. ನಿನ್ನ ಅಪರಾಧವೆಲ್ಲಾ ಹೊರಬಿದ್ದು, ನೀನು ಜೀವಮಾನವೆಲ್ಲಾ ಜೈಲಿನಲ್ಲೇ ಕೊಳೆಯುವ ಹಾಗೆ ಮಾಡ್ತೀನಿ.''

''ನೀನು ಹಾಗೆಲ್ಲಾ ಏನು ಮಾಡುಲ್ಲ. ಆ ಧೈರ್ಯ ನಿನಗೆಲ್ಲಿದೆ?'' ಕೃಷ್ಣ ನಕ್ಕ.

''ಹಾಗೆ ನಗಬೇಡ ಕೃಷ್ಣಾ... ನಿನ್ನ ಕಾರಣದಿಂದ, ಕಳೆದು ಹೋದ ನನ್ನ ಶೀಲ ಮತ್ತೇ ಬರುವುದಿಲ್ಲ ನನಗೆ ಗೊತ್ತು... ನಾನು ನಿನ್ನನ್ನು ಎಂದಿಗೂ ಕ್ಷಮಿಸುವುದಿಲ್ಲ...''

''ಹೋಗೇ ಹೋಗೇ... ನಾನೆಲ್ಲಿ ನಿನ್ನ ಕ್ಷಮೆ ಕೇಳಿದೆ? ನಾನು ಏನೂ ಹೆದರುವವನಲ್ಲ... ಹುಟ್ಟುವಾಗಲೇ ನನಗೆ ಪ್ರತಿಸ್ಪರ್ಧಿಯಾಗಿದ್ದ ನಿನ್ನ ಮೇಲೆ ನನಗೆ ಸಿಟ್ಟಿತ್ತು. ತೀರಿಸಿಕೊಂಡೆ... ನನಗೆ ಸಿಗಬೇಕಾದ ಪ್ರೀತಿ, ವಾತ್ಸಲ್ಯಗಳಲ್ಲಿ ನಿನಗೂ ಹೆಚ್ಚಿನ ಪಾಲು ಹೋದಾಗಲೇ ನನ್ನಲ್ಲಿ ಸೇಡಿನ ಕಿಡಿ ಹೊತ್ತಿಕೊಂಡಿತು. ಆದರೆ ಈಗ... ಒಂದೆರಡು ಸಾರಿ ನಿನ್ನ ಸಹವಾಸ ಮಾಡಿದ ಮೇಲೆ ನನಗೆ ನಿನ್ನ ಆಸೆ ಹೆಚ್ಚಾಗಿದೆ. ಅದನ್ನು ಕಾಮ ಅಂತ ಬೇಕಾದ್ರೂ ಅಂದುಕೋ... ಅತ್ಯಾಚಾರ ಅಂತ ಬೇಕಾದ್ರೂ ಅನ್ನು... ಆದರೆ ಒಂದೇ ಒಂದು ಬೇಜಾರು... ಯಾರಿಗೂ ತಿಳಿಯದಂತೆ ಬಂದು ನಿನ್ನ ಸಹವಾಸ ಮಾಡಬೇಕಾಗಿದೆ... ಅದನ್ನು ತಪ್ಪಿಸಲು ಒಂದು ಉಪಾಯವಿದೆ. ನೀನು ನನ್ನನ್ನು ಮದುವೆಯಾಗಿ ಬಿಡು... ಆಗ ನಾವು ಯಾರಿಗೂ ಹೆದರಬೇಕಾಗಿಲ್ಲ...''

ಕಲ್ಯಾಣಿ ಅವನನ್ನೇ ಕ್ರೂರವಾಗಿ ನೋಡಿದಳು. ''ನಾನು ನಿನ್ನ ಮದುವೆಯಾಗಬೇಕಾ? ಅದು ಈ ಜನ್ಮದಲ್ಲಿ ಸಾಧ್ಯವಿಲ್ಲ...''

''ಯಾಕೆ ಸಾಧ್ಯವಿಲ್ಲ? ಈಗ ನಿನಗೆ ಬೇರೆ ದಾರಿಯೇ ಇಲ್ಲವಲ್ಲ...

ಮೊದಲೇ ಎಲ್ಲಾ ಅನುಭವಿಸಿದವಳು ಅಂತ ತಿಳಿದರೆ ಯಾವ ವರ ನಿನ್ನನ್ನು ಮದುವೆಯಾಗ್ತಾನೆ?'' ಅವನು ವ್ಯಂಗ್ಯವಾಗಿ ನಕ್ಕಾಗ ಅವಳಿಗೆ ಅಸಹ್ಯವೆನಿಸಿತು.

''ನೀನು ಇಷ್ಟು ನೀಚ ಅಂತ ನಾನು ತಿಳಿದಿರಲಿಲ್ಲ. ನೀನು ಮನುಷ್ಯ ಜಾತೀನೇ ಅಲ್ಲ. ನಿನ್ನಂಥೋನ್ನ ಮದುವೆಯಾಗುವ ಬದಲು ಹಾಗೇ ಇರುವುದು ವಾಸಿ... ಹಾಳು ಬಾವಿಗೆ ಬಿದ್ದು ಆತ್ಮಹತ್ಯೆ ಮಾಡಿಕೊಳ್ತೇನೇ ಹೊರತು ನಿನ್ನನ್ನು ಮದುವೆಯಾಗುವುದಿಲ್ಲ.''

ಅದರಿಂದ ನಿನಗೇ ನಷ್ಟ... ನಾನು ಹೇಳಿದ ಹಾಗೆ ಕೇಳು... ಈಗ ದಿಕ್ಕಿಲ್ಲದವಳು ನೀನು... ನನ್ನನ್ನ ಮದುವೆಯಾದರೆ ಈ ಆಸ್ತಿ ಪಾಸ್ತಿ ಎಲ್ಲಾ ನಿನ್ನದಾಗುತ್ತೆ...''

''ಈ ಆಸ್ತಿಯ ಆಸೆಗೆ ನಿನ್ನಂಥೋನ ಪತ್ನಿ ಯಾಗುವ ಬದಲು ಒಬ್ಬ ಭಿಕ್ಷುಕನ್ನ ಬೇಕಾದ್ರೂ ಮದುವೆಯಾಗಬಹುದು. ನನ್ನನ್ನ ರೇಗಿಸಬೇಡ ಹೊರಟುಹೋಗು...''

''ನನ್ನನ್ನ ಕೆಣಕ್ತಾ ಇದೀಯ ಕಲ್ಯಾಣಿ... ನಿನ್ನ ಕೋಪ ಹೆಚ್ಚಾದಷ್ಟೂ ನನ್ನ ಪಾಪ ಹೆಚ್ಚಾಗುತ್ತೆ. ನೀನು ಆಸೆಯಿಂದ ಒಲಿದು ನಿನ್ನ ಬಳಿಗೆ ಬಾ ಅಂತ ನಾನೇನು ಹೇಳುವುದಿಲ್ಲ. ಅಲ್ಲದೇ ನನ್ನ ಬಲಾತ್ಕಾರದಲ್ಲೇ ನಿನಗೆ ಮಜ ಸಿಗುವುದಾದರೆ ನಾನು ಏಕೆ ಬೇಡ ಅನ್ನಲಿ...''

''ಥೂ... ದುಷ್ಟ'' ಎಂದು ಅವನ ಮೇಲೆ ಉಗುಳಿ, ಹೊರಗೆ ಹೋಗಲಿದ್ದವಳನ್ನು ಬಲವಾಗಿ ಹಿಡಿದುಕೊಂಡ. ''ನಾನು ಕೆಟ್ಟವನು ಅಂತ ಗೊತ್ತಿದ್ದೂ ನನ್ನನ್ನ ಕೆರಳಿಸ್ತೀಯಾ...'' ಎನ್ನುತ್ತಾ ತನ್ನ ಹಿಡಿತವನ್ನು ಮತ್ತು ಬಿಗಿಗೊಳಿಸಿದ.

''ಅಮ್ಮಾ ಕಲ್ಯಾಣೀ...'' ಎಂದು ನಾರಾಯಣಮೂರ್ತಿ ಕರೆಯುತ್ತಾ ಮನೆಯೊಳಗೆ ಬಂದಾಗ, ಅಳುತ್ತಿದ್ದ ಕಲ್ಯಾಣಿ ಕಣ್ಣೊರೆಸಿಕೊಂಡಳು. ಅಪ್ಪ ಅಮ್ಮನನ್ನ ನೆನೆಸಿಕೊಂಡು ಅಳುತ್ತಿರಬಹುದೆಂದು ಭಾವಿಸಿದ ನಾರಾಯಣ ಸಮಾಧಾನ ಹೇಳಿದ.

''ಎಷ್ಟು ದಿನಾ ಹೀಗೇ ಅತ್ತರೂ, ಸತ್ತವರು ವಾಪಸ್ಸು ಬರುವುದಿಲ್ಲ.

ನೀನೇ ದೊಡ್ಡವಳು ಹೀಗಾಡಿದ್ರೆ ಇನ್ನೂ ಕೋಮಲನ ಗತಿಯೇನು?''

''ನಾನು ಕೋಮಲನ ಜತೆ ಪೇಟೆಗೆ ಹೋಗಿ ಬಿಡ್ತೀನಿ. ನಮಗೆ ಅಲ್ಲಿರಲು ಅನುಕೂಲ ಮಾಡಿಕೊಡಿ ಚಿಕ್ಕಪ್ಪಾ... ಈ ವರ್ಷ ಕಳೆದರೆ, ಅವಳೂ ಕಾಲೇಜಿಗೆ ಸೇರುತ್ತಾಳೆ. ಹೋಗಿ ಬರೋದೇ ಆದರೆ, ಅವಳು ಓದುವುದು ಯಾವಾಗ? ನಾನೂ ಯಾವುದಾದರೂ ಕೋರ್ಸ್‌ಗೆ ಸೇರಿಕೊಳ್ಳೋಣ ಅಂತಿದೀನಿ.'' ಅವಳು ಅಳುತ್ತಾ ನುಡಿದಾಗ ಅವನು ನುಡಿದ.

''ಇನ್ನೂ ಕೋರ್ಸು, ಕೆಲಸ ಎಲ್ಲಾ ಯಾಕೆ? ಮದುವೆ ಮಾಡಿಕೊಂಡು ಹಾಯಾಗಿ ಗಂಡನ ಮನೇಲಿರು'' ಅವಳು ತಲೆ ತಗ್ಗಿಸಿ ಬಿಕ್ಕಿ ಬಿಕ್ಕಿ ಅಳಲು ಪ್ರಾರಂಭಿಸಿದಾಗ, ಅವನು ನಕ್ಕ.

''ಮದುವೆ ಅಂದ್ರೆ ಯಾರಾದ್ರೂ ಅಳ್ತಾರೇನೇ ಹುಚ್ಚಿ...''

''ನನಗೆ ಮದುವೆ ಬೇಡ ಚಿಕ್ಕಪ್ಪ... ನಾನು ಹೀಗೇ ಇದ್ದುಬಿಡ್ತೀನಿ.''

''ಈಗ ದುಃಖದಲ್ಲಿ ಹಾಗನ್ನಿಸುತ್ತೆ... ಆದರೆ ಒಂಟಿಯಾಗಿ ಹೆಣ್ಣು ಮಕ್ಕಳು ಎಷ್ಟು ದಿನ ಹೀಗೇ ಇರೋಕೆ ಆಗುತ್ತೆ...? ನನ್ನ ಕಾಲದಲ್ಲಿ ಸರಿ... ಮುಂದೆ ಕೃಷ್ಣ ನಿಮ್ಮಗಳನ್ನೆಲ್ಲಾ ನೋಡಿಕೊಳ್ತಾನೆ ಅನ್ನೋ ನಂಬಿಕೇನೇ ಇಲ್ಲ. ನಾನು ಮನೆಗೆ ಹೋಗಿ ಊಟ ಮಾಡಿಕೊಂಡು ಬಂದ್ಬಿಡ್ತೀನಿ. ಅಷ್ಟು ಹೊತ್ತಿಗೆ ಕೋಮಲನೂ ಬರಬಹುದು. ನೀವಿಬ್ಬರೂ ಊಟ ಮಾಡಿ ಮಲಗಿರಿ ಭದ್ರವಾಗಿ ಬಾಗಿಲನ್ನು ಹಾಕಿಕೊಳ್ಳುವುದನ್ನು ಮರೆಯಬೇಡಿ'' ಎಂದು ಹೇಳಿ ಅವಳ ತಲೆ ಮೇಲೆ ಕೈಯನ್ನಿಟ್ಟು ವಿಶ್ವಾಸದಿಂದ ಸವರಿದ.

ಪಂಡಿತರು, ಶಾರದೆ ತಿಳಿಸಿದಂತೆ, ಕಲ್ಯಾಣಿಗೆ ತಕ್ಕನಾದ ನಾಲ್ಕಾರು ವರಗಳ ವಿಳಾಸವನ್ನು ಕೊಟ್ಟು ವಿವರಗಳನ್ನು ಹೇಳಿದರು. ಶಾರದಾ ನೆಮ್ಮದಿಯಿಂದ ನಿಟ್ಟುಸಿರುಬಿಟ್ಟಳು.

''ಈ ವರಗಳನ್ನು ವಿಚಾರಿಸಿ ಆದಷ್ಟು ಬೇಗ ಕಲ್ಯಾಣಿಗೆ ಮದುವೆ ಮಾಡಿ ಕಳಿಸಿದ್ರೆ ಸಾಕಾಗಿದೆ'' ಗಂಡನೊಡನೆ ನುಡಿದಾಗ, ಅವನು ಗದರಿದ.

''ಈಗೇನು ಅವಳು ನಿನ್ನ ಎದೆ ಮೇಲೆ ಕೂತಿದಾಳಾ? ಅವಳ ಪಾಡಿಗೆ ಅವಳಿದಾಳಲ್ಲ...''

''ಅವಳು ಇರುವುದು ನಮ್ಮ ಆಶ್ರಯದಲ್ಲೇ... ನಮ್ಮ ಜವಾಬ್ದಾರಿ ಕಳೀ ಬೇಡ್ವೇ... ಒಬ್ಬರಲ್ಲ ಅಂತ ಇಬ್ಬಿಬ್ಬರು ಇದಾರಲ್ಲ. ಎಲ್ಲಾ ಖರ್ಚೂ ವೆಚ್ಚವೂ ನಮಗೇ ತಾನೇ...'' ಕೊಂಕುತ್ತಾ ನುಡಿದಳು.

''ಶಿವರಾಮುವಿನ ಭಾಗದ ಮನೆ, ಜಮೀನು ಎಲ್ಲಾ ಕಲ್ಯಾಣಿಯ ಹೆಸರಿಗೆ ವರ್ಗಾಂತರವಾಗುತ್ತೆ. ಅದನ್ನು ಮಾರಿಬಿಟ್ಟು ಬಂದ ಹಣದಲ್ಲಿ ಮದುವೆ ಖರ್ಚು ತೂಗಿಸಬಹುದು... ಅದಕ್ಯಾಕೆ ಚಿಂತೆ?''

''ನಿಮಗೇನು ಬುದ್ಧಿ ಇಲ್ವಾ? ಅದನ್ನೆಲ್ಲಾ ನಿಮ್ಮ ಹೆಸರಿಗೇ ಬರೆಸಿಕೊಳ್ಳಿ... ನಿಮ್ಮ ಅಪ್ಪನ ಆಸ್ತೀನೇ ತಾನೇ...''

''ಇಲ್ಲ. ನಾನು ಆ ಕೆಲಸ ಮಾಡುವುದಿಲ್ಲ. ಆ ಹೆಣ್ಣು ಮಕ್ಕಳಿಗೆ ಅನ್ಯಾಯ ಮಾಡುವುದಿಲ್ಲ. ಅಪ್ಪನ ಅಂತಿಮ ಇಚ್ಛೆ ಅದೇ ಆಗಿತ್ತು.''

''ಇದರಲ್ಲಿ ಅನ್ಯಾಯವೇನು ಬಂತು? ನಮ್ಮ ಆಸ್ತಿ ನಮ್ಮದೇ ಆಗಿರುತ್ತೆ... ಚಿನ್ನದಂಥಾ ಜಮೀನನ್ನು ಯಾರಾದ್ರೂ ಮಾರ್ತಾರಾ? ನಾಳೆ ನಮ್ಮ ಕೃಷ್ಣನಿಗೆ ಮದುವೆ ಆಗಿ ಸಂಸಾರಸ್ಥನಾದರೆ, ಎಷ್ಟು ಆಸ್ತಿ ಇದ್ದರೂ ಸಾಲದು.''

''ಹೌದು... ಹೌದು... ನಿನ್ನ ಮಗನಿಗೆ ಎಷ್ಟು ಆಸ್ತಿ ಇದ್ದರೂ ಸಾಲದು. ಆದರೆ ಅದನ್ನು ಉಳಿಸಿಕೊಂಡು ಊರ್ಜಿತಗೊಳಿಸುವ ಯೋಗ್ಯತೆ ಎಲ್ಲಿದೆ ನಿನ್ನ ಮಗನಿಗೆ?''

''ಅವನನ್ನು ಎಷ್ಟು ಅಂದು ಆಡಿದರೂ ನಿಮಗೆ ತೃಪ್ತಿ ಇಲ್ಲ ಬಿಡಿ. ಅದಕ್ಕೇ ಒಬ್ಬ ಜಾಣೆ ಹುಡಿಗೀನ ಈ ಮನೆಯ ಸೊಸೆಯನ್ನಾಗಿ ಮಾಡಿಕೊಳ್ಳೋಣ. ಎಲ್ಲಾ ಛಾತಿ ಇರುವಂತಹ ಹುಡುಗೀನ ಹುಡುಕೋಣ.''

ನಾರಾಯಣ ಗೊಳ್ಳನೆ ನಕ್ಕ. ''ಈ ದಡ್ಡನಿಗೆ ಯಾವ ಜಾಣ ಹುಡುಗಿ ಸಿಗ್ತಾಳೆ? ವಿದ್ಯೆ ಇಲ್ಲ ಬುದ್ಧಿ ಇಲ್ಲ. ಎದೆ ಸೀಳಿದರೂ ನಾಲ್ಕಕ್ಷರ ಬರುಲ್ಲ. ಇಂಥೋನಿಗೆ ಜಾಣ ಹುಡುಗಿ... ನಿನ್ನ ಆಸೆ ನೋಡು...''

''ಹೌದ್ರೀ... ನನಗೆ ಆಸೆ... ಅದರಲ್ಲಿ ತಪ್ಪೇನು? ಕುರಿಕಾಯ್ಕೊಂಡಿದ್ದ ಕುರುಬಂಗೆ ರಾಜಕುಮಾರಿ ಪತ್ನಿಯಾಗಲಿಲ್ವೇ... ಆ ಮೇಲೆ ಅವನು ಮಹಾಕವಿ ಕಾಳಿದಾಸನಾಗಲಿಲ್ವೇ...'' ನಾರಾಯಣ ನಕ್ಕ.

''ಅದು ಕುತಂತ್ರದಿಂದ ಆದದ್ದು... ನಿನ್ನ ಮಗ ಕಾಳಿದಾಸನಷ್ಟು ಮೇಧಾವಿ ಆಗ್ತಾನೆ ಅನ್ನೋ ಕನಸು ಕಾಣಬೇಡ.''

''ಯಾಕೆ ಕಾಣಬಾರದು? ನನಗೆ ನನ್ನ ಮಗನ ಜೀವನ ಮುಖ್ಯ. ತಾಯಿ ತಂದೆಯಿಂದ ಆಗದ್ದು ಕೈ ಹಿಡಿದ ಹೆಂಡತಿಯಿಂದ ಆಗಬಹುದು. ಅವನ ಜೀವನ ಸುಧಾರಿಸಬಹುದು. ಶುರು ಮಾಡೋ ಮೊದಲೇ ಅಪಶಕುನ ನುಡೀತೀರಿ...''

''ನಿನ್ನ ಮಗನ ಜೀವನ ಸುಧಾರಿಸಿ, ಅವನೂ ಒಬ್ಬ ಮನುಷ್ಯ ಅಂತಾದ್ರೆ, ನನಗೇನು ಸಮಾಧಾನವಿರುಲ್ವೇ...? ಆದರೆ ಒಬ್ಬ ಹುಡುಗಿಯ ಬಾಳು ಹಾಳಾಗಬಾರದು. ದುಡುಕಬೇಡ, ಯೋಚಿಸಿ ನಿರ್ಧಾರಕ್ಕೆ ಬಾ.''

''ನೀವು ಅಷ್ಟು ಹೇಳಿದ್ರಲ್ಲ... ಅದೇ ಸಾಕು. ಯಾರಾದರೂ ಬಡವರ ಮನೆ ಹುಡುಗಿಯಾದರೂ ಸರಿ, ಅನಾಥೆಯಾದರೂ ಸರಿ... ಅಂತಹವಳು ವಿಧಿ ಇಲ್ಲದೇ ಖಂಡಿತಾ ಇವನನ್ನು ಒಪ್ಪಿಕೊಳ್ತಾಳೆ.''

''ನಿನ್ನ ಧೈರ್ಯ! ಜಾಣ ಹುಡುಗಿ, ಈ ದುಷ್ಟನೊಡನೆ ಬಾಳಲಾಗದೇ, ಹಗರಣಗಳು ನಡೆಯುವಂತಾಗಬಾರದು.''

''ಆ ಚಿಂತೆ ನಿಮಗೆ ಬೇಡ. ಅದಕ್ಕೆ ತಕ್ಕ ಬಂದೋಬಸ್ತು ನಾನು ಮಾಡ್ತೀನಿ.'' ಎಂದು ಅವಳು ಸಡಗರದಿಂದ ಒಳಗೆ ಹೋದಾಗ ಅವನು ಹಣೆ ಚಚ್ಚಿಕೊಂಡ.

''ಇವಳಿಗೆ ಯಾವಾಗ ತಿಳುವಳಿಕೆ ಬರುತ್ತೋ... ಈ ಅವಿವೇಕಿಗೆ ಮದುವೆ ಮಾಡುವ ಆಸೆ ಅತಿರೇಕವಾಯ್ತಲ್ಲಾ... ನೋಡೋಣ... ಹೇಗೂ ಈ ವರ್ಷ ಕಳೆಯಬೇಕು. ಅಷ್ಟರಲ್ಲಿ ಏನೇನು ಬದಲಾವಣೆಗಳಾಗುತ್ತವೋ...'' ಎಂದು ತನಗೆ ತಾನೇ ಹೇಳಿಕೊಂಡು, ಶಾರದಾ ಕೊಟ್ಟಿದ್ದ ವಿಳಾಸಗಳ ಕಡೆ ಗಮನ ಕೊಟ್ಟ.

ಯಾವುದಾದರೂ ಒಬ್ಬ ಗಂಡಿನೊಡನೆ ಮಾತು ಕತೆ ಮುಂದುವರೆಯುವ ಮೊದಲೇ, ಕಲ್ಯಾಣಿಗೆ ತನ್ನ ದೇಹದಲ್ಲಾಗಿರುವ ಬದಲಾವಣೆಯ ಅರಿವಾಗಿತ್ತು... ಯಾರಿಗೂ ತಿಳಿಯದಂತೆ ಲೇಡಿ ಡಾಕ್ಟರರ ಬಳಿ ಹೋಗಿ, ಸಲಹೆಯನ್ನು ಪಡೆದು ಎಲ್ಲವನ್ನು ಕಳೆದುಕೊಂಡು ಸುಧಾರಿಸಿಕೊಂಡಳು. ಹುಶೀರಿಲ್ಲದೇ ಬಿಳುಚಿಕೊಂಡಿದ್ದವಳನ್ನು ನಾರಾಯಣ ಗಮನಿಸಿ, ಪ್ರೀತಿಯಿಂದ ಗದರಿದ.

''ಊಟ ತಿಂಡಿ ಸರಿಯಾಗಿ ಮಾಡ್ತಿಲ್ಲ ನೀನು... ನೋಡು ಹೇಗಾಗಿ ಹೋಗಿದೀಯ. ಮುಂದಿನವಾರ ಒಬ್ಬ ವರ ನಿನ್ನನ್ನು ನೋಡಲು ಬರಲು ಒಪ್ಪಿಕೊಂಡಿದ್ದಾನೆ.''

''ಚಿಕ್ಕಪ್ಪ ನಿನಗೆ ಈ ಮದುವೆ ಬೇಡ... ನಾನು ಮದುವೆಯಾಗಿ ಯಾರೊಬ್ಬರ ಪತ್ನಿಯಾಗಿರಲು ಲಾಯಖ್ಖಿಲ್ಲ...''

''ಏನಮ್ಮಾ... ಏನು ಹೇಳ್ತಿದೀಯ ನೀನು... ಏನೇ ತೊಂದರೆ ಇದ್ದರೂ, ಎಲ್ಲಾ ಸರಿ ಹೋಗುತ್ತೆ...''

''ನನಗೇನು ತೊಂದರೆ ಅಂತ ನಾನೇ ಹೇಗೆ ಬಾಯಿ ಬಿಟ್ಟು ಹೇಳಲಿ ಚಿಕ್ಕಪ್ಪಾ... ಇದಕ್ಕೆಲ್ಲಾ ಯಾರು ಕಾರಣ ಅಂತ ತಿಳಿದರೆ, ಖಂಡಿತಾ ನಿಮ್ಮ ಮನಸ್ಸಿಗೆ ನೋವಾಗುತ್ತದೆ...''

''ಕಲ್ಯಾಣಿ... ಯಾರು ನಿನಗೆ ತೊಂದರೆ ಕೊಡ್ತಿದಾರೆ... ನನ್ನ ಹತ್ತಿರ ಹೇಳಲು ಸಂಕೋಚವೆನಿಸಿದರೆ, ನಿನ್ನ ಚಿಕ್ಕಮ್ಮನ ಹತ್ತಿರ ಹೇಳು ನಾನು ಅವಳನ್ನು ಕಳಿಸ್ತೀನಿ.''

''ಬೇಡ... ಚಿಕ್ಕಪ್ಪಾ... ಅವರಿಗೆ ನನ್ನ ಮಾತಿನ ಮೇಲೆ ನಂಬಿಕೆ ಖಂಡಿತಾ ಬರುಲ್ಲ...''

''ಅಂಥಾದ್ದೇನಾಯ್ತು... ಕೃಷ್ಣ ನಿನ್ನನ್ನ ಹೆದರಿಸಿ, ಬೆದರಿಕೆ ಹಾಕಿರಬಹುದು... ಅವನು ದುಷ್ಟ ನಿಜ... ಆದರೆ ನಾವು? ನಾವು ನಿನಗೆ ಸಹಾಯ ಮಾಡ್ತೀವಿ... ನೋಡು... ಅವಳೇ ನಿನಗೆ ವರನನ್ನು ಹುಡುಕಿದ್ದಾಳೆ.

''ಬೇಡ ಚಿಕ್ಕಪ್ಪ... ನನಗೆ ಖಂಡಿತಾ ಈ ಮದುವೆ ಬೇಡ.. ನನಗೆ ಇಲ್ಲಿ ಇರುವ ಮನಸ್ಸೇ ಇಲ್ಲ. ಅವತ್ತೇ ಹೇಳಿದ್ದೆನಲ್ಲ... ನನಗೆ ಪೇಟೆಯಲ್ಲಿರಲು ಅನುಕೂಲ ಮಾಡಿಕೊಡಿ... ನನ್ನಿಂದ ಯಾರಿಗೂ ತೊಂದರೆ ಬೇಡ''

ಅವಳು ಬಿಕ್ಕಿ ಬಿಕ್ಕಿ ಅಳಲು ಪ್ರಾರಂಭಿಸಿದಾಗ ಅವನಿಗೆ ಗಾಭರಿ ಆಯ್ತು. ಏನೋ ಆಗಬಾರದ್ದು ಆಗಿದೆ ಎಂಬ ಅನುಮಾನವೂ ಬಂತು... ಶಾರದ ಎಷ್ಟೇ ಕೆಟ್ಟವಳಾದರೂ ಹೆಂಗಸು... ಅವಳು ಸಮಾಧಾನವಾಗಿ ಕೇಳಿದರೆ, ನಿಜ ಏನೂಂತ ತಿಳಿಯುತ್ತೆ ಅಂತ ಅಂದುಕೊಂಡು ತನ್ನ ಮನೆಗೆ ಬಂದ. ತಾಯಿ ಮಗ ಒಟ್ಟಿಗೇ

ಕೂತು ಊಟ ಮಾಡುತ್ತಿದ್ದರು. ತಂದೆಯನ್ನು ಕಂಡೊಡನೆ ಕೃಷ್ಣ ಎದ್ದು ಕೈತೊಳೆದು ಮನೆಯಿಂದ ಆಚೆ ಹೊರಟ. ಇದ್ದಕ್ಕಿದ್ದಂತೇ ಮಗನ ಮೇಲೆ ಅತಿ ಸಂದೇಹ ಮೂಡಿತು. ಬಂದಿದ್ದವನು ಹಾಗೆ ಕೃಷ್ಣನನ್ನು ಹಿಂಬಾಲಿಸಿದ. ಕೃಷ್ಣ ತೋಟದ ಮನೆಯ ಕಡೆ ತಿರುಗಿದ್ದನ್ನು ಕಂಡು ಅನುಮಾನ ಇನ್ನು ದೃಢವಾಯಿತು.

''ಏನೇ ಕಲ್ಯಾಣೀ... ಒಬ್ಬಳೇ ಇದೀಯ? ಎಲ್ಲಿ ನಿನ್ನ ತಂಗಿ?'' ಎಂದೆನ್ನುತ್ತಾ ಅವಳನ್ನು ಸಮೀಪಿಸಿದ.

''ಬೇಡ... ಕೃಷ್ಣ ನನ್ನನ್ನು ಮುಟ್ಟಬೇಡ... ನೀನು ನನಗೆ ಎಂತೆಂಥಾ ಕಷ್ಟಗಳನ್ನು ಕೊಟ್ಟಿದೀಯ... ನಾನು ಇದುವರೆಗೂ, ನನ್ನ ತಂಗಿಗೋಸ್ಕರ, ಚಿಕ್ಕಪ್ಪನಿಗೋಸ್ಕರ ಎಲ್ಲವನ್ನು ಸಹಿಸಿಕೊಂಡೆ... ಇನ್ನು ನನ್ನಿಂದ ಸಾಧ್ಯವಿಲ್ಲ. ನಾನು ಆತ್ಮಹತ್ಯೆ ಮಾಡಿಕೊಂಡು ನನ್ನ ಸಾವಿಗೆ ನೀನೇ ಕಾರಣ ಎನ್ನೋದನ್ನ ಜಾಹೀತು ಮಾಡ್ತೀನಿ. ಜೀವಮಾನವೆಲ್ಲಾ ಜೈಲಿನಲ್ಲಿರಬೇಕಾಗುತ್ತೆ... ನೀನು... ನೋಡ್ತಿರು.''

''ಬಂದಾಗೆಲ್ಲಾ ಹೀಗೇ ಜಗಳ ಆಡ್ತೀಯಲ್ಲಾ... ಯಾಕೆ ನಿನಗೂ ಗಂಡಸಿನ ಸಹವಾಸಬೇಕೂಂತ ಅನ್ನಿಸೋಲ್ವಾ? ಸರಿಯಾದ ವಯಸ್ನಲ್ಲಿ ನಿಮ್ಮಪ್ಪ ನಿನಗೆ ಮದುವೆ ಮಾಡಿದ್ದರೆ, ನಿನಗೆ ಒಂದೋ ಎರಡೋ ಮಕ್ಕಳಾಗಿರುತ್ತಿದ್ದವು'' ಅವನ ಕೆಟ್ಟ ನಗೆ ಅವಳನ್ನು ಹೆದರಿಸಿತ್ತು.

''ಅದಕ್ಕೇ ನಾನು ಇದೆಲ್ಲಾ ಬೇಡ... ಸರಿಯಲ್ಲ ಅಂತ ನಿನಗೆ ಹೇಳಿದ್ದು... ಈಗಾಗಲೇ ನಾನು ಒಂದು ಸಲ ಡಾಕ್ಟರ ಹತ್ತಿರ ಹೋಗಿ ಬಂದಾಯ್ತು. ಎಲ್ಲಾ ಕಳೀತು... ಇನ್ನಾದರೂ ನನ್ನ ಪಾಡಿಗೆ ನನ್ನನ್ನು ಬಿಟ್ಟುಬಿಡು'' ಕೈಮುಗಿದಳು.

''ಒಂದು ಸಾರಿ ಡಾಕ್ಟರ ಹತ್ತಿರ ಹೋಗಿ ಬಂದ ಮೇಲೆ ಇನ್ಯಾಕೆ ಹೆದರಿಕೆ! ಮತ್ತು ಇನ್ನೊಂದು ಸಾರಿ ಹೋದರಾಯ್ತು... ಅದಕ್ಕೇ ಹೇಳಿದ್ದು ನಾವಿಬ್ಬರೂ ಮದುವೆಯಾಗೋಣ ಅಂತ. ನಿನಗೆ ಅದು ಬೇಕಿಲ್ಲದಿದ್ದರೆ ಬೇಡ ಬಿಡು... ನನಗೆ ಮಾತ್ರ ನೀನು ಬೇಕು...'' ಎನ್ನುತ್ತಾ ಅವಳನ್ನು ಹಿಡಿದುಕೊಳ್ಳಲು ಮುಂದೆ ಬಾಗಿದ... ಹಿಂದಿನಿಂದ ನಾರಾಯಣಮೂರ್ತಿ ಅವನನ್ನು ಎಳೆದು ಕೆನ್ನೆಗೆ ರಪರಪನೆ ರಾಚಿದ... ತಪ್ಪಿಸಿಕೊಂಡು ಓಡಲಿದ್ದವನನ್ನು ಕೆಳಕ್ಕೆ ಕೆಡವಿ ಕಾಲಲ್ಲಿ ಮೆಟ್ಟಿದ.

''ನೀನು ಇಷ್ಟು ಕೀಳುಮಟ್ಟಕ್ಕೆ ಇಳಿತೀಯ ಅಂತ ನಾನು ಅಂದುಕೊಂಡಿರಲಿಲ್ಲ್ವೋ ಚಂಡಾಲ... ಇವತ್ತೇ ಕಡೆ ಇನ್ನು ನಿನ್ನ ಮುಖ ನೋಡಲು ನನಗಿಷ್ಟವಿಲ್ಲ... ತೊಲಗಿ ಹೋಗು... ಈ ಜಾಗದಿಂದ''

ಕೃಷ್ಣ ಎದ್ದು ಮೈಧೂಳನ್ನು ಕೊಡವಿಕೊಂಡು, ತಂದೆಯ ಕಡೆ ಕ್ರೂರವಾಗಿ ನೋಡಿದ... ''ನನ್ನ ಭಾಗದ ಆಸ್ತೀನ ನನಗೆ ಕೊಟ್ಟುಬಿಡಿ. ನನ್ನ ಪಾಡಿಗೆ ನಾನು ಹೋಗ್ತೀನಿ. ನನಗೂ ನಿಮ್ಮ ಮನೇಲಿ ಇರಬೇಕೆಂಬ ಆಸೆ ಖಂಡಿತಾ ಇಲ್ಲ.''

''ಥೂ ಹಲ್ಕಾ... ಮಾಡಿದ್ದು ಹಲ್ಕಾ ಕೆಲಸ... ಆಸ್ತಿಯಂತೆ ಆಸ್ತಿ... ಅಕ್ಕನ ಸಮಾನಳಾದ ಹುಡುಗಿಯನ್ನು ಕೆಡಿಸುಕ್ಕೆ ನಾಚಿಕೆ ಆಗಲಿಲ್ಲ ನಿನಗೆ... ಆ ಹುಡುಗಿ ಎಷ್ಟು ನೊಂದಿರಬೇಕು... ಸಧ್ಯ ಅವರ ಅಪ್ಪ ಅಮ್ಮ ಬದುಕಿಲ್ಲವಲ್ಲ ಇದನ್ನೆಲ್ಲ ನೋಡೋಕೆ...''

''ಇದನ್ನು ನೋಡಿಯೇ ಅವರ ಅಪ್ಪ ಅಮ್ಮ ಆತ್ಮಹತ್ಯೆ ಮಾಡಿಕೊಂಡಿದ್ದು, ನಿಮಗೆ ಗೊತ್ತಿಲ್ಲ ಅಷ್ಟೇ. ನೀವೂ ಬೇಕಾದರೆ ಆತ್ಮಹತ್ಯೆ ಮಾಡಿಕೊಳ್ಳಿ ನಾನು ಕೇರ್ ಮಾಡುಲ್ಲ...''

''ನಿನ್ನಂಥೋನಿಗೆ ಮದುವೆ ಮಾಡಬೇಕೂಂತ ನಿನ್ನ ತಾಯಿ ಕುಣೀತಿದಾಳೆ... ಅವಳಿಗೆ ಬುದ್ಧಿ ಇಲ್ಲ... ನೀನು ಈ ಕ್ಷಣ ಹೊರಟುಹೋಗು. ತಿರುಪೆ ಮಾಡು... ನಾನೂ ಕೇರ್ ಮಾಡುಲ್ಲ.'' ಎತ್ತರದ ಧ್ವನಿಯಲ್ಲಿ ನುಡಿದ.

''ನಾನ್ಯಾಕೆ ತಿರುಪೆ ಎತ್ತಲಿ! ನಿಮ್ಮನ್ನ ತಿರುಪೆ ಎತ್ತೋ ಹಾಗೆ ಮಾಡದಿದ್ದರೆ ನನ್ನ ಹೆಸರು ಕೃಷ್ಣನೇ ಅಲ್ಲ... ನನ್ನ ಆಸ್ತಿ ನನಗೆ ಸಿಗೋವರೆಗೂ ನಾನು ಇಲ್ಲಿಂದ ಕದಲುಲ್ಲ. ಕೇಸು ಹಾಕಿ, ಕೋರ್ಟಿನ ಕಟ್ಟೆ ಹತ್ತಿದರೂ ಸರಿ... ಇದು ಕಲ್ಯಾಣಿಯ ಮನೆ. ಕಲ್ಯಾಣಿ ನನ್ನ ಹೆಂಡತಿ. ತಾಳಿ ಕಟ್ಟದಿದ್ದರೇನಾಯ್ತು... ಸಂಬಂಧ ಅದೇ...'' ಎಂದ.

ಹೊಡೆಯಲೆಂದು ಕೈ ಎತ್ತಿದ ನಾರಾಯಣನನ್ನು ತಡೆದು... ''ನನ್ನ ಮೇಲೆ ಕೈ ಮಾಡಿದರೆ ನಾನು ಸುಮ್ಮನಿರೋನಲ್ಲ... ಹುಶಾರ್. ಮರ್ಯಾದೆ ಇದ್ದರೆ ಇಲ್ಲಿಂದ ಹೊರಟು ಹೋಗಿ...''

ಅವಮಾನದಿಂದ ನಾರಾಯಣಮೂರ್ತಿಯ ಮುಖ ಕೆಂಪಾಯಿತು.

ಇವನು ಕೊಲೆ ಮಾಡುವುದಕ್ಕೂ ಹೇಸುವವನಲ್ಲ... ಇವನ ಸಹವಾಸವೇ ಬೇಡ ಎಂದುಕೊಂಡು... ''ನಿನ್ನಿಂದ ದೂರವಿದ್ದರೇ ನನಗೆ ಮರ್ಯಾದೆ... ಯಾವ ಆಸ್ತಿಯೂ ನನ್ನ ಹೆಸರಿನಲ್ಲಿಲ್ಲ... ಮರ್ಯಾದೆಯೇ ಇಲ್ಲದಿದ್ದ ಮೇಲೆ ನನಗೆ ಏನೂ ಬೇಡ...'' ಆ ಕ್ಷಣದಲ್ಲಿ ಹೆಂಡತಿಯ ಮೇಲೆ ಅಸಾಧ್ಯವಾದ ಕೋಪ ಬಂದಿತು. ಈ ಅನಾಹುತಕ್ಕೆಲ್ಲಾ ಅವಳೇ ಕಾರಣ... ಅವಳನ್ನು ಕೊಂದು ಜೈಲಿಗೆ ಹೋದರೂ ಪರವಾಗಿಲ್ಲ... ಕಲ್ಯಾಣಿಗೆ ಆದ ಅನ್ಯಾಯಕ್ಕೆ ಪ್ರಾಯಶ್ಚಿತ್ತವಾದಂತಾಗುತ್ತದೆ ಎಂದುಕೊಂಡು ಮನೆ ಕಡೆ ನಡೆದ.

ದಾರಿಯಲ್ಲಿ ಪಂಡಿತರು ಸಿಕ್ಕಿ ಮಾತನಾಡಿಸಿದರು. ಹಾಗೇ ಕಲ್ಯಾಣಿಯ ಬಗ್ಗೆಯೂ ವಿಚಾರಿಸಿದರು. ''ಕಲ್ಯಾಣಿ ತುಂಬಾ ಒಳ್ಳೆಯ ಹುಡುಗಿ ಅಂತ ಶಾರದಮ್ಮ ಹೇಳಿದರು. ಆ ಹುಡಿಗಿ ಒಪ್ಪೋದಾದ್ರೆ ನಿಮ್ಮ ಕೃಷ್ಣಂಗೇ ಯಾಕೆ ತಂದುಕೋಬಾರದು?''

ನಾರಾಯಣ ಬೆಚ್ಚಿದ. ಅವನ ಮುಖದಲ್ಲಿ ಗಾಭರಿಯನ್ನು ಕಂಡು ಪಂಡಿತರು ಕೇಳಿದರು.

''ಯಾಕೆ ನಾರಾಯಣಮೂರ್ತಿಗಳೇ, ನಾನು ಆಡಬಾರದ್ದನ್ನೇನು ಆಡಿದೆ? ನೀವೇಕೆ ಬೆಚ್ಚಿದಿರಿ?''

''ಶಿವರಾಮಯ್ಯ ನನ್ನ ಅಣ್ಣನ ಸಮಾನ. ಆ ಹುಡುಗಿ ನನ್ನ ಮಗಳಿದ್ದಂತೆ ಅದು ಹೇಗೆ ಸಾಧ್ಯ ನೀವೇ ಹೇಳಿ...''

''ಸೊಸೇನ ಸಹ ಮಗಳಂತೆ ನೋಡಿಕೊಳ್ಳಬೇಕಲ್ಲವೇ? ಏನೋ ನನಗೆ ಹಾಗೆನ್ನಿಸಿತು. ಹಾಗೆ ಹೇಳಿದೆ. ಮೊದಲ್ನಿಂದ ನಿಮ್ಮ ಮನೆಯ ವಿಷಯಗಳನ್ನೆಲ್ಲಾ ತಿಳಿದವಳು, ಹಾಗೆ ಹೇಳಿದೆ. ಮೊದಲ್ನಿಂದ ನಿಮ್ಮ ಮನೆಯ ವಿಷಯಗಳನ್ನೆಲ್ಲಾ ತಿಳಿದವಳು. ಮನೇ ವಿಷಯ ಮನೆಯಲ್ಲೇ ರಹಸ್ಯವಾಗಿರುತ್ತೆ ಅಲ್ಲವೆ?''

''ಅಂದರೆ? ನಿಮ್ಮ ಮಾತಿನ ಅರ್ಥ ನನಗಾಗಲಿಲ್ಲ.''

''ಅಂಗೈ ಹುಣ್ಣಿಗೆ ಕನ್ನಡಿ ಯಾಕೆ ಅಂತ. ನಿಮ್ಮ ಮಗನ ಬಗ್ಗೆ ಆಸು ಪಾಸಿನವರಿಗೆಲ್ಲಾ ಗೊತ್ತು. ಅವನಿಗೆ ಅಂತ ಹೆಣ್ಣು ಹುಡುಕುವುದು ಸುಲಭವಲ್ಲ''

''ಅವನಿಗೆ ಮದುವೆಗೆ ಅವಾಂತರವೇನಿಲ್ಲ... ಯಾವ ಹೆಣ್ಣು ಅವನ

ಹೆಂಡತಿಯಾಗುವ ಯೋಗವಿದೆಯೋ ಅವಳು ತಾನಾಗಿಯೇ ಬರ್ತಾಳೆ. ನಾನು ಆ ಬಗ್ಗೆ ತಲೆ ಕೆಡಿಸಿಕೊಳ್ಳುಲ್ಲ... ನನಗೆ ಸ್ವಲ್ಪ ಅರ್ಜೆಂಟು ಕೆಲಸವಿದೆ. ನಾನು ಬರ್ತೀನಿ, ನಮಸ್ಕಾರ'' ಎಂದು ಹೇಳಿ ದುರ್ದಾನ ತೆಗೆದುಕೊಂಡ ವನಂತೆ ದುಡು ದುಡು ನಡೆದ. ಪಂಡಿತರು ಅವನು ಹೋದ ದಿಕ್ಕನ್ನೇ ನೋಡುತ್ತಾ ನಿಂತರು.

ಕೃಷ್ಣನ ಜಾತಕದಲ್ಲಿ ಗ್ರಹಗಳು ಶುಭಸ್ಥಾನದಲ್ಲಿ ಇಲ್ಲ. ಯೋಗ ಕಾರಕವಾಗಿಲ್ಲ. ಹುಡುಗಿಯ ಕಾಲ್ಗುಣದಿಂದ ಅವನ ದೆಸೆ ಕುದುರಬಹುದು ಅಂತೆನಿಸಿತ್ತು. ಆದರೆ ಹೆಣ್ಣುಗಳನ್ನು ವಿಚಾರಿಸಿದಾಗ, ಕೃಷ್ಣನ ಕೀರ್ತಿ ತಿಳಿದಿದ್ದ ಕೆಲವರು, ಅವನಿಗೆ ಮಗಳನ್ನು ಕೊಡುವ ಬದಲು, ಹಾಳು ಬಾವಿಗೆ ತಳ್ಳುವುದೇ ಸರಿ ಅಂತ ಸಹ ನುಡಿದಿದ್ದರು.

ಕಲ್ಯಾಣಿಯ ಜಾತಕವನ್ನು ಪರಿಶೀಲಿಸಿದ ಅವರು ಚಿಂತಿತರಾಗಿದ್ದರು. ಹುಡುಗಿಗೆ ವಿವಾಹ ಯೋಗವಿರುವಂತೆ ಇಲ್ಲ ಅಂತನ್ನಿಸಿತ್ತು... ಆದರೆ ಅನೇಕ ಕಷ್ಟಗಳನ್ನು ಅವಳು ಎದುರಿಸಬೇಕಾಗಬಹುದು ಎನ್ನುವುದನ್ನು ಗುರುವೆಸಿದ್ದರು. ಆ ವಿಷಯಗಳನ್ನು ಗಮನದಲ್ಲಿಟ್ಟುಕೊಂಡು, ಈ ಸಲಹೆಯನ್ನು ನೀಡಿದ್ದರು. ಕಲ್ಯಾಣಿ ಇದೇ ಮನೆಯಲ್ಲಿದ್ದರೆ ಕಷ್ಟಗಳು ಪರಿಹಾರವಾಗಬಹುದು ಅಂತೆನ್ನಿಸಿತ್ತು. ಈಗಾಗಲೇ ಅವಳು ಕಷ್ಟಗಳ ಮಡುವಿನಲ್ಲಿ ಬಿದ್ದಿದಾಳೆ ಎನ್ನುವುದನ್ನು ಗುರುತಿಸಿ, ಇದರಿಂದ ಕೃಷ್ಣ-ಕಲ್ಯಾಣಿಯರಿಗೆ ಒಳಿತಾಗುವುದಾದರೆ ಆಗಲಿ ಎಂದು ಈ ಮಾತನ್ನು ಎತ್ತಿದ್ದರು. ಆದರೆ ನಾರಾಯಣನಿಗಾಗಲೀ, ಶಾರದಮ್ಮನಿಗಾಗಲೀ, ಎಲ್ಲಾ ವಿವರವಾಗಿ ತಿಳಿಸುವುದು ಹೇಗೆ?'' ದೇವರಿಚ್ಛೆ ಇದ್ದ ಹಾಗೆ ಆಗಲಿ ಎಂದು ಆಕಾಶದ ಕಡೆ ಕೈ ಮಾಡಿ ನಿಟ್ಟುಸಿರುಗರೆದು ಮುಂದೆ ಅಡಿ ಇಟ್ಟರು.

ಮನೆಗೆ ಬಂದಾಗ, ಯಾರೋ ಇಬ್ಬರು ಅಪರಿಚಿತ ಹೆಂಗಸರು ಶಾರದೆಯೊಡನೆ ಮಾತದಾಡುತ್ತಿದ್ದರು. ಅವರುಗಳ ಮಾತನ್ನು ಆಲಿಸುವ ಆಸಕ್ತಿಯಾಗಲೀ ವ್ಯವಧಾನವಾಗಲೀ ಇರಲಿಲ್ಲವಾದ್ದರಿಂದ ಸೀದಾ ಒಳಗೆ ಹೋದ. ಬಿಸಿಲಿನಲ್ಲಿ ನಡೆದು ಬಂದುದರಿಂದಲೋ, ಅಥವಾ ತಲೆ ತುಂಬಾ ಏನೇನೊ ವಿಷಯಗಳು ತುಂಬಿದ್ದರಿಂದಲೋ ವಿಪರೀತ ತಲೆನೋವು ಪ್ರಾರಂಭವಾಗಿತ್ತು. ನಿಶ್ಯಕ್ತಿಯಿಂದ ನಿಲ್ಲಲೂ ಆಗುತ್ತಿಲ್ಲವೆಂತೆನ್ನಿಸಿದಾಗ ಮಂಚದ ಮೇಲೆ ಕೂರಲೆಂದು ಮುಂದೆ ಹೆಜ್ಜೆ ಇಟ್ಟವನಿಗೆ, ಹೆಜ್ಜೆಯನ್ನೂ

ಎತ್ತಿಡಲೂ ಆಗದಂತಾಗಿ ಅಲ್ಲೇ ಕುಸಿದು ಬಿದ್ದ. ಶಾರದಾ... ಎಂದು ಕೂಗಲು ಬಾಯಿ ತೆರೆಯಲು ನೋಡಿದ. ಗಂಟಲಿನಿಂದ ಸ್ವರವೇ ಹೊರಡಲಿಲ್ಲ... ಕಣ್ಣು ಕತ್ತಲೆಯಿಟ್ಟಂತಾಗಿ, ಭಯದಿಂದ ಮೈಯೆಲ್ಲಾ ಬೆವತಿತು... ಹಾಗೇ ನೆಲಕ್ಕೆ ಉರುಳಿದ. ಮುಂದೇನಾಯಿತು ಎಂದು ಗೊತ್ತಾಗಲಿಲ್ಲ.

ಆ ಅಪರಿಚಿತ ಹೆಂಗಸರು ಅತ್ತ ಹೋದ ಮೇಲೆ, ಶಾರದಾ ಗಂಡನನ್ನು ಮಾತನಾಡಿಸಲೆಂದು ಒಳಗೆ ಬಂದಳು. ಜ್ಞಾನವಿಲ್ಲದೆ ಬಿದ್ದಿದ್ದ ಗಂಡನನ್ನು ಕಂಡು ಭಯದಿಂದ ಚೀರಿಕೊಂಡಳು. ಕೂಗಿ ಕರೆದು, ಅಲ್ಲಾಡಿಸಿದರೂ ಅವನು ಏಳದಿದ್ದಾಗ, ಪಕ್ಕದ ಮನೆಯವರನ್ನು ಕರೆತಂದಳು. ಕೆಲವೇ ಗಂಟೆಗಳಲ್ಲಿ, ತೋಟದ ಆಳುಗಳ ಸಹಾಯದಿಂದ ಅವನನ್ನು ಎತ್ತಿನ ಗಾಡಿಯಲ್ಲಿ ಮಲಗಿಸಿ, ಪಕ್ಕದ ಊರಿನ ಆಸ್ಪತ್ರೆಗೆ ಕರೆದೊಯ್ದರು. ಕಲ್ಯಾಣಿ ದಿಕ್ಕು ತೋಚದವಳಂತೆ ಅಳುತ್ತಾ ನಿಂತಿದ್ದಾಗ, ಪಕ್ಕದ ಮನೆಯವರೇ ಸಮಾಧಾನ ಹೇಳಿದರು.

ಎಂದಿನಂತೆ ರಾತ್ರಿ ಚೆನ್ನಾಗಿ ಕತ್ತಲಾದ ಮೇಲೆ ಕೃಷ್ಣ ಕಳ್ಳನಂತೆ ಮನೆಗೆ ಬಂದ. ಮನೆಯಲ್ಲಿ ದೀಪವಿಲ್ಲ. ಅಮ್ಮ ಎಲ್ಲಿಯೂ ಕಾಣಲಿಲ್ಲ... ಅಕ್ಕ ಪಕ್ಕದವರೊಂದಿಗೆ ಅವನು ಮಾತನಾಡುತ್ತಿರಲಿಲ್ಲವಾದ್ದರಿಂದ ಅವನು ಸೀದಾ ಮತ್ತೆ ತೋಟದ ಮನೆಗೆ ಬಂದ ಮುಂಬಾಗಿಲಿನಲ್ಲಿ ಕುಳಿತಿದ್ದ ಕೆಲವರು ಅವನನ್ನು ಗುರುತಿಸದೇ ''ಯಾರಪ್ಪಾ ನೀನು! ಇಷ್ಟೊತ್ನಲ್ಲಿ ಏನು ಕೆಲಸ?'' ಎಂದಾಗ ಅವನು ಅವರಿಗೆ ಉತ್ತರಿಸದೇ ''ಕಲ್ಯಾಣೀ... ಎನ್ನುತ್ತಾ ಒಳನುಗ್ಗಲು ನೋಡಿದಾಗ ಅವರು ತಡೆದರು.

ಕಲ್ಯಾಣಿ ಅವನ ಧ್ವನಿ ಕೇಳಿ ಹೆದರಿದರೂ, ಅವನು ಏನಾದರೂ ಹಗರಣ ಮಾಡದೇ ಬಿಡುವವನಲ್ಲ ಎಂದುಕೊಂಡು ಹೊರಬಂದಳು.

''ಇವರೆಲ್ಲಾ ಯಾರು! ಇನ್ಯಾಕೆ ಕೂತಿದಾರೆ! ನಿನ್ನ ಬಾಡಿಗಾರ್ಡ್ಸ್?'' ಎಂದು ವ್ಯಂಗ್ಯವಾಗಿ ಕೇಳಿದ.

''ಕೃಷ್ಣ ಚಿಕ್ಕಪ್ಪನಿಗೆ ಲಕ್ವ ಹೊಡೆದಿದೆ... ಪಕ್ಕದ ಊರಿನ ಆಸ್ಪತ್ರೆಗೆ ಸೇರಿಸಿದಾರೆ. ನನ್ನ ಜೊತೆಗೆ ಇವರುಗಳು ಇಲ್ಲಿ ಇರ್ತಾರೆ. ನೀನು ಹೋಗು...'' ಎಂದಳು.

''ಏನಂದೆ? ಅಪ್ಪನಿಗೆ ಲಕ್ವಾ ಹೊಡೀತಾ?'' ಎಂದು ಚಪ್ಪಾಳೆ ತಟ್ಟಿ

ನಗಲಿದ್ದವನು, ಸುತ್ತಲೂ ಇದ್ದವರನ್ನು ನೋಡಿ ಸುಮ್ಮನಾದ.

''ಇವರು ಯಾರು?'' ಅಲ್ಲಿದ್ದ ಒಬ್ಬ ವ್ಯಕ್ತಿ ಕೇಳಿದ.

''ನಮ್ಮ ಚಿಕ್ಕಪ್ಪನ ಮಗ ಕೃಷ್ಣ...'' ಅಂತ.

''ಹೌದ್ರಾ? ನಾವೆಂದೂ ಈ ಹುಡುಗನ್ನ ಕಂಡಿರಲೇ ಇಲ್ಲ...''

''ಬೇರೆ ಊರ್ನಲ್ಲಿ ಓದ್ತಾ ಇದ್ದ... ಬಂದರೂ ತೋಟದ ಮನೆಗೆ ಬರುತ್ತಿರಲಿಲ್ಲ.'' ಕಲ್ಯಾಣಿ ಅಷ್ಟು ಸುಲಭವಾಗಿ ಸುಳ್ಳು ಹೇಳುತ್ತಿರುವುದನ್ನು ಗಮನಿಸಿ, ಓರೆಗಣ್ಣಿನಿಂದ ಅವಳ ಕಡೆ ನೋಡಿದ. ಇವರಲ್ಲಿ ಯಾರೂ ನನ್ನನ್ನು ನೋಡೇ ಇಲ್ಲ ಅಂತ ಅನ್ನುವುದು ನಿಜ... ಈ ತೋಟದ ಮನೆಗೆ ಈ ಮುಂಚೆ ಬಂದವನು ಅಲ್ಲ... ಈ ಊರಿನಲ್ಲೇ ಇರದೇ ಪರದೇಶಿಯಂತೆ ಅಲೆದಾಡಿಕೊಂಡಿದ್ದವನು... ಕೃಷ್ಣ ಒಳಕ್ಕೆ ಹೆಜ್ಜೆ ಇಟ್ಟ. ತಕ್ಷಣ ಕಲ್ಯಾಣಿ ಹೊರಕ್ಕೆ ಬಂದಳು.

''ಕೃಷ್ಣ ಸ್ವಲ್ಪ ಹೊರಕ್ಕೆ ಬಾ...'' ಎಂದು ಅವನನ್ನು ಕರೆದಳು. ''ಇವನು ಚಿಕ್ಕಪ್ಪನ ಮಗ ಕೃಷ್ಣ... ಅವರಿಗೆ ಹುಶಾರಿಲ್ಲದಿರುವುದರಿಂದ, ತೋಟದ ಕಾರುಬಾರವನ್ನೆಲ್ಲಾ ಇವನೇ ನೋಡಿಕೊಳ್ತಾನೆ... ಕೃಷ್ಣ ಈಗ ನೀನು ಮನೆಗೆ ಹೋಗು. ಅಮ್ಮ ಒಬ್ಬರೇ ಇರಬಹುದು.'' ಎಂದಳು.

''ಅಮ್ಮ ಮನೆಗೆ ಇನ್ನೂ ಬಂದಿರಲಿಲ್ಲ...''

''ನೀನು ಆಸ್ಪತ್ರೆಗೆ ಹೋಗು. ಅಲ್ಲಿ ನಿನ್ನ ಅವಶ್ಯಕತೆ ಬೀಳಬಹುದು... ಹೋಗೋ ವೆಂಕಟ, ಇವರನ್ನು ಅವರ ಮನೇ ತನಕ ನಿನ್ನ ಗಾಡೀಲಿ ಬಿಟ್ಟು ಬಾ.'' ಕಲ್ಯಾಣಿ ನುಡಿದಾಗ, ವೆಂಕಟ ಎದ್ದ. ಕೃಷ್ಣ ವಿಧಿ ಇಲ್ಲದೇ ಆ ಹಳೇ ಮೋಟಾರ್ ಬೈಕ್‌ನ ಹಿಂದಿನ ಸೀಟನ್ನೇರಿದ.

''ಕಲ್ಯಾಣಿ ನೀನೇ ಜಾಣೆ ಅಂತ ಅಂದುಕೋಬೇಡ. ನನ್ನ ಕೈಗೆ ಮತ್ತೆ ಮತ್ತೆ ಸಿಗದೇ ಎಲ್ಲಿಗೆ ಹೋಗ್ತೀಯ, ಅಂತ ಅಂದುಕೊಂಡು ಮನೆಯ ದಿಕ್ಕಿಗೆ ಓಡುತ್ತಿದ್ದ ಗಾಡಿಯನ್ನು ನಿಲ್ಲಿಸಿದ.

''ಮನೆಗೆ ಬೀಗ ಹಾಕಿದೆ. ನಾನು ಆಸ್ಪತ್ರೆಗೆ ಹೋಗ್ತಿನಿ. ಹಾಗಂತ ಕಲ್ಯಾಣಿಗೆ ಹೇಳಿಬಿಡು ''ಅಂತ ಹೇಳಿ, ಆ ಕತ್ತಲಲ್ಲಿ ಎಲ್ಲೋ ಮರೆಯಾದ.

''ಮೂರು ನಾಲ್ಕು ದಿನಗಳು ಕಳೆದವು. ತಾಯಿ ಸಹ ಮನೆಗೆ ಬಂದಿರಲಿಲ್ಲ. ಕಲ್ಯಾಣಿಯ ಮನೆಯ ಮುಂದೆ ಯಾರಾದರೊಬ್ಬರು ಇರುತ್ತಿದ್ದರು. ವಿಧಿ ಇಲ್ಲದೇ ಅವನು ತನ್ನ ಸ್ನೇಹಿತರನ್ನು ಹುಡುಕಿಕೊಂಡು ಹೊರಟ.

ಬರಿಗೈಲಿ ಬಂದ ಅವನನ್ನು ಅವನ ಸ್ನೇಹಿತರು ವಿಶ್ವಾಸದಿಂದ ಸ್ವಾಗತಿಸದಿದ್ದರೂ, ಅವನು ತನ್ನ ತಂದೆಯ ಅನಾರೋಗ್ಯದ ಬಗ್ಗೆ ಹೇಳಿದಾಗ ಅವರುಗಳು ಚುರುಕಾದರು.

''ಇದೇ ತಕ್ಕ ಸಮಯ ಕೃಷ್ಣ... ಹೇಗೂ ನಿಮ್ಮ ಅಪ್ಪನ ಕೈಲಿ ಆಗುಲ್ಲ. ಎಲ್ಲಾ ಕಾರುಬಾರನ್ನು ನೀನೇ ವಹಿಸಿಕೋ.. ಆದಷ್ಟು ಬೇಗ ಎಲ್ಲಾದನ್ನು ನಿನ್ನ ಹೆಸರಿಗೆ ಮಾಡಿಸಿಕೋ. ಆಮೇಲೆ ಚೆನ್ನಾಗಿ ಬೆಲೆ ಬಂದಾಗ ಮಾರಿದರೆ ನಿನಗೇ ಲಾಭ. ಆ ಹಳ್ಳೀಲಿ ಏನಿದೆ? ಅದೇ ಬಂಡವಾಳವನ್ನು ಇಲ್ಲಿ ಹಾಕಿ ಯಾವುದಾದರೂ ಬಿಸಿನೆಸ್ ಮಾಡೋಣ... ನಾವು ನಿನಗೆ ಸಹಾಯ ಮಾಡ್ತೀವಿ.''

''ನೀವೆಲ್ಲಾ ಏನು ಸಹಾಯ ಮಾಡ್ತೀರಿ ಅಂತ ನನಗೂ ಗೊತ್ತು. ನನ್ನ ಹತ್ತಿರ ಹಣವಿದ್ದರೆ, ನಗ್ತಾ ನಗ್ತಾ ಮಾತಾಡಿಸ್ತೀರಿ. ಇಲ್ಲದಿದ್ರೆ ಒಂದು ಬೀಡೀ ತುಂಡನ್ನು ಸಹ ನನಗೆ ಕೊಡಲ್ಲ. ನನಗೆ ಗೊತ್ತು ಕಣ್ರೋ...''

''ಹಾಗಲ್ಲ ಕೃಷ್ಣ, ನಮಗೆ ತಾನೇ ಏನು ಆದಾಯ ಇದೆ ನೀನೇ ಹೇಳು. ಅಲ್ಲಿ ಇಲ್ಲಿ ಕಳ್ಳತನದಿಂದ ಜೂಜಿನಿಂದ ಬಂದ ಹಣ ಸಾಕಾಗುಲ್ಲ. ನಾವು ನಿನ್ನ ಹಾಗೆ ಶ್ರೀಮಂತರಲ್ಲ.''

''ನಾವು ಎಷ್ಟೋ ಸಲ ನಿನಗೆ ಸಹಾಯ ಮಾಡಿಲ್ವಾ? ನೀನು ಜೈಲಿನಲ್ಲಿದ್ದಾಗ, ನಿನ್ನನ್ನ ಮಾತ್ರ ನಿನ್ನ ಅಪ್ಪ ಬಿಡಿಸಿಕೊಂಡು ಹೋದರು. ನಾವು ಎರಡು ತಿಂಗಳು ಇದ್ದೆವು... ಜೈಲಿನಲ್ಲಿ ಬಿಟ್ಟಿ ಊಟನಾದ್ರೂ ಸಿಗುತ್ತಿತ್ತು. ಹೊರಗೆ ಇದ್ದರೆ ಅದೂ ಇಲ್ಲ. ಈಚೆಗೆ ನೀನೂ ಹೆಚ್ಚಿಗೆ ಸಿಗುವುದೇ ಇಲ್ಲ... ಸಣ್ಣಪುಟ್ಟ ಕಳ್ಳತನದಿಂದ ಏನೂ ಸಿಗುಲ್ಲ... ಪೋಲಿಸರ ಭಯ ಬೇರೆ''

''ಹೌದೋ... ನೀನು ನಮ್ಮೆಲ್ಲರನ್ನು ಮರತೇ ಬಿಟ್ಟಿಯೇನೋ ಅಂತ ಅಂದುಕೊಂಡಿದ್ದೆವು... ಮನೇ ಊಟ ಹೊಟ್ಟೆಗೆ ಬಿದ್ದು ಗುಂಡು ಗುಂಡಗೆ ಆಗಿದೀಯಲ್ಲೋ ಮಗನೇ...'' ಒಬ್ಬ ಬೆನ್ನ ಮೇಲೆ ಕೈ ಹಾಕಿ ಹೊಡೆದಾಗ, ಕೃಷ್ಣ, ''ತೆಗೆಯೋ ಕೈನಾ...'' ಎಂದು ರೇಗಿದ.

"ಯಾಕೋ ಹೀಗಾಡ್ತೀಯಾ ಏನಾಯ್ತೋ ನಿನಗೆ?"

"ನಾನು ಏನೋ ಯೋಚಿಸ್ತಿದ್ದೆ. ನಾಳೆ ನೀವುಗಳೆಲ್ಲಾ ನನ್ನ ಜತೆಗೆ ನನ್ನ ತೋಟದ ಮನೆಗೆ ಬನ್ನಿ. ಪುಷ್ಕಳವಾಗಿ ಊಟ ಮಾಡೋರಂತೆ." ಎಲ್ಲರೂ ಖುಷಿಯಿಂದ "ಹೋ..." ಎಂದರು.

ದಿಢೀರನೇ ಬಂದಿಳಿದ ಜನರನ್ನು ನೋಡಿ ಕಲ್ಯಾಣಿ ಗಾಭರಿಗೊಂಡಳು. ಚಿಕ್ಕಪ್ಪನಿಗೆ ಏನೋ ಆಗಿರಬೇಕು ಎಂದು ಭಾವಿಸಿದಳು. ಕೃಷ್ಣ ಅವರುಗಳನ್ನು ಒಳಕ್ಕೆ ಬರುವಂತೆ ಕರೆದು, ತಾನು 'ಕಲ್ಯಾಣೀ' ಎಂದು ಕರೆಯುತ್ತಾ ಬಂದ "ಕಲ್ಯಾಣಿ ಇವರೆಲ್ಲಾ ನನ್ನ ಸ್ನೇಹಿತರು... ಎಲ್ಲರೂ ಎರಡು ದಿನದಿಂದ ಉಪವಾಸವಿದಾರೆ. ಚೆನ್ನಾಗಿ ಅಡಿಗೆ ಮಾಡಿ ಎಲ್ಲರಿಗೂ ಬಡಿಸು" ಅವನು ಅಪ್ಪಣೆ ಮಾಡಿದಾಗ ಅವಳಿಗೆ ಅಳು ಬರುವಂತಾಗಿತ್ತು.

"ನಾನು ಈಗ ಆಸ್ಪತ್ರೆಗೆ ಹೋಗಬೇಕು... ಚಿಕ್ಕಪ್ಪನ್ನ ಡಿಸ್ಚಾರ್ಜ್ ಮಾಡ್ತಾರಂತೆ."

"ಹೋಗೂನಂತೆ. ಅಡಿಗೆ ಮಾಡಿಟ್ಟು ಹೋಗು. ನಾವೇ ಬಡಿಸಿಕೊಳ್ತೀವಿ.

"ಸರಿ. ಹಾಗಾದ್ರೆ... ನೀನು ಅರ್ಧಗಂಟೆ ಬಿಟ್ಟು ಬಾ... ನಾನು ಎಲ್ಲಾ ರೆಡಿ ಮಾಡಿರ್ತೀನಿ... ನೀವುಗಳೆಲ್ಲ ಇಲ್ಲೇ ಕೂತಿದ್ದರೆ ಮಾತ್ರ ನನ್ನ ಕೈಲಿ ಆಗುಲ್ಲ."

"ಸರಿ ಹಾಗಾದ್ರೆ ನಾನು ಅವರಿಗೆಲ್ಲಾ ನಮ್ಮ ತೋಟಾನ ತೋರಿಸ್ಕೊಂಡು ಬರ್ತೀನಿ... ಅವರುಗಳಿಗೂ ತಿಳಿಯಲಿ ನಾನು ಎಷ್ಟು ಶ್ರೀಮಂತ" ಅಂತ ಎಂದು ನುಡಿದು, ಕಣ್ಣು ಹೊಡೆದು ನಕ್ಕು ಹೊರನಡೆದ.

ಕಲ್ಯಾಣಿ ಸರ ಸರನೆ ಅಡಿಗೆ ಕೆಲಸಗಳನ್ನು ಪ್ರಾರಂಭಿಸಿ, ಮಾಡಿದ್ದ ಅಡಿಗೆ ಪದಾರ್ಥಗಳನ್ನು ತಂದು ಹಾಲಿನಲ್ಲಿಟ್ಟು ತಟ್ಟೆ ಬಟ್ಟಲುಗಳನ್ನಿಟ್ಟು ಮುಂಬಾಗಿಲನ್ನು ಎಳೆದು ಬೀಗ ಹಾಕಿ, ಬೀಗದ ಕೈಯನ್ನು ಒಬ್ಬ ಕೆಲಸದಾಳಿನ ಕೈಯಲ್ಲಿ ಕೊಟ್ಟು, ಅಲ್ಲೇ ಜಗುಲಿಯ ಮೇಲೆ ಕುಳಿತಿರುವಂತೆ ಹೇಳಿ ತನ್ನ ಪಾಡಿಗೆ ತಾನು ಆಸ್ಪತ್ರೆಗೆ ಹೊರಟುಹೋದಳು.

ಆಸ್ಪತ್ರೆಯಲ್ಲಿ ಚಿಕ್ಕಪ್ಪನ್ನ ನೋಡಿ ಅವಳಿಗೆ ದುಃಖ ಉಕ್ಕಿತು. ಡಾಕ್ಟರನ್ನು ಕೇಳಿದಾಗ ಅವರು ನುಡಿದಿದ್ದರು. ''ಇನ್ನು ಮೂರು ನಾಲ್ಕು ತಿಂಗಳಾದರೂ ಬೇಕು, ಇವರು ಚೆನ್ನಾಗಿ ಸುಧಾರಿಸಿಕೊಳ್ಳೋಕೆ. ಮನೆಗೆ ಕರೆದುಕೊಂಡು ಹೋಗುವುದೇ ವಾಸಿ'' ಅಂತ.

ಶಾರದ ಅಳುತ್ತಾ ನುಡಿದಿದ್ದಳ: ''ಸರ್ಕಾರಿ ಆಸ್ಪತ್ರೆ... ಔಷಧಿ ಬೆಡ್ ಇತ್ಯಾದಿಗೆ ಹಣ ಕಟ್ಟಬೇಕಾಗಿಲ್ಲ. ಆದರೂ, ನನ್ನ ಕೈಲಿ ಬಿಡಿಗಾಸಿಲ್ಲ. ಗಾಭರಿಯಲ್ಲಿ ಬರಿಗೈಲೇ ಬಂದುಬಟ್ಟೆ... ಈಗ ಏನು ಮಾಡೋಣ? ಕೃಷ್ಣ ಸಹ ಬರಲಿಲ್ಲ. ಪಾಪಿ...''

ಅವನು ಸ್ನೇಹಿತರ ಜತೆ ಕೂತು ಮಜವಾಗಿ ಊಟ ಮಾಡುತ್ತಿದಾನೆಂದು ಹೇಳಲು ಮನಸ್ಸಾಗದೇ, ''ನಾನು ಈಗಲೇ ಹೋಗಿ ಪರಿಚಯದವರ ಹತ್ತಿರ ಹಣಾನ ಸಾಲ ತಗೊಂಡು ಬರ್ತೀನಿ... ನೀವು ಯೋಚನೆ ಮಾಡಬೇಡಿ'' ಎಂದು ಹೇಳಿ ಅಲ್ಲಿಂದ ಹೊರಟಳು. ಮೊದಲು ತನ್ನ ತಂಗಿಯ ಕಾಲೇಜಿಗೆ ಹೋಗಿ ಅವಳನ್ನು ಕರೆದುಕೊಂಡು, ಒಬ್ಬ ಮಾರ್ವಾಡಿಯ ಅಂಗಡಿಗೆ ಬಂದಳು.

ತಾಯಿಯ ಕತ್ತಿನಲ್ಲಿದ್ದ ಒಂದೆಳೆ ಸರವನ್ನು ತಂಗಿಗೆ ಕೊಟ್ಟಿದ್ದಳು ತಂದೆಯ ರಿಸ್ಟ್ ವಾಚನ್ನು ಅವಳು ಸದಾ ತನ್ನ ಬಳಿಯೇ ಇಟ್ಟುಕೊಂಡಿರುತ್ತಿದ್ದಳು ತಂದೆ ದೇವರ ಪೂಜೆ ಮಾಡುವಾಗ ಧರಿಸುತ್ತಿದ್ದ ಚಿನ್ನದ ಉಂಗುರಕ್ಕೆ ಚೆನ್ನಾಗಿ ದಾರ ಸುತ್ತಿ ತನ್ನ ಕೈ ಬೆರಳಿಗೆ ಹಾಕಿಕೊಂಡಿದ್ದಳು. ಇವಷ್ಟೇ ಅವಳ ಒಡವೆ ಅದನ್ನು ಅಡವಿಟ್ಟು ಅವನು ಕೊಟ್ಟಷ್ಟು ಹಣವನ್ನು ತೆಗೆದುಕೊಂಡು ಮತ್ತೆ ಆಸ್ಪತ್ರೆಗೆ ಬಂದಳು.

ಚಿಕ್ಕಮ್ಮ ಒಬ್ಬ ಹುಡುಗಿಯ ಜೊತೆ ಮಾತನಾಡುತ್ತಾ ನಿಂತಿದ್ದಳು. ಕಲ್ಯಾಣಿಯೇ, ಕೊಡಬೇಕಾಗಿದ್ದ ಬಿಲ್ಲಿನ ಹಣವನ್ನು ತೀರಿಸಿ, ಚಿಕ್ಕಪ್ಪನನ್ನು ಡಿಸ್ಚಾರ್ಜ್ ಮಾಡಿಸಿದಳು. ಆಸ್ಪತ್ರೆಯ ಸಮೀಪದಲ್ಲಿದ್ದ ಟ್ಯಾಕ್ಸಿ ಸ್ಟ್ಯಾಂಡಿಗೆ ಹೋಗಿ ಒಂದು ಟ್ಯಾಕ್ಸಿಯನ್ನು ಗೊತ್ತು ಮಾಡಿಕೊಂಡು ಬಂದಳು. ಚಿಕ್ಕಮ್ಮನೊಂದಿಗೆ ಮಾತನಾಡುತ್ತಿದ್ದ ಆ ಹುಡುಗಿ ಕಲ್ಯಾಣಿಯನ್ನೇ ಬೆರಗಾಗಿ ನೋಡುತ್ತಿದ್ದಳು. ಆಸ್ಪತ್ರೆಯ ಸಿಬ್ಬಂದಿಯವರ ಸಹಾಯದಿಂದ ನಾರಾಯಣಮೂರ್ತಿಯನ್ನು ಟ್ಯಾಕ್ಸಿಯ ಹಿಂದಿನ ಸೀಟಿನಲ್ಲಿ ಮಲಗಿಸಿದರು.

ಟ್ಯಾಕ್ಸಿ ಹೊರಟಿತು. ಚಿಕ್ಕಮ್ಮ ನೋಡುತ್ತಿದ್ದ ಆ ಹುಡುಗಿಯ ಕಡೆ ಕೈಯಾಡಿಸಿದಳು.

ಕಲ್ಯಾಣಿಯ ಕಡೆ ತಿರುಗಿ ನುಡಿದಳು. ಆ ಹುಡುಗಿ ಬೃಂದಾ ಅಂತ, ಪಾಪ ಅನಾಥೆ, ತಂದೆ ತಾಯಿ ಯಾರೂ ಇಲ್ಲ, ಚಿಕ್ಕಪ್ಪನೇ ಸಾಕಿದ್ದಂತೆ, ಈಗ ಅವರಿಗೂ ಹುಶಾರಿಲ್ಲ. ಅದೇನೋ ಆಪರೇಷನ್ ಆಗಬೇಕಂತೆ... ಪಾಪ. ಒಬ್ಬಳೇ ಹುಡುಗಿ... ಆದರೂ ಎಷ್ಟು ಧೈರ್ಯವಂತೆ ನೋಡು... ಹಗಲೂ ರಾತ್ರಿ ಚಿಕ್ಕಪ್ಪನ ಸೇವೆ ಮಾಡುತ್ತಾಳೆ...'' ಕಲ್ಯಾಣಿ ಏನು ಹೇಳಲಿಲ್ಲ.

''ಕಲ್ಯಾಣೀ... ನಿಮ್ಮ ಚಿಕ್ಕಪ್ಪನಿಗೆ ಈ ಸ್ಥಿತಿ ಬಂತಲ್ಲೇ... ಇನ್ನು ನನ್ನ ಗತಿಯೇನೇ?... ಮನೆ ಕಡೆ, ತೋಟದ ಕಡೆ ಎಲ್ಲಾ ನೋಡಿಕೊಳ್ಳುತ್ತಿದ್ದರು. ಇನ್ಯಾರು ಮಾಡ್ತಾರೆ ಇನ್ನು ಮುಂದೆ ಇದನ್ನೆಲ್ಲ? ಕೃಷ್ಣನಿಗೆ ಇದೆಲ್ಲ ಬೇಕಿಲ್ಲ. ನೀವು ಹೆಣ್ಣು ಮಕ್ಕಳು... ನಿಮ್ಮಿಂದ ಸಾಧ್ಯಾನಾ?''

''ನಾನು ಎಲ್ಲಾ ನೋಡಿಕೊಳ್ತೀನಿ ಚಿಕ್ಕಮ್ಮ... ನೀವು ಹೆದರಬೇಡಿ. ನಾನೇ ಈ ಮನೆಯ ಹಿರಿಮಗ ಅಂತ ತಿಳಿದುಕೊಳ್ಳಿ... ಚಿಕ್ಕಪ್ಪನ ಆರೋಗ್ಯ ಚೆನ್ನಾಗಿ ಸುಧಾರಿಸುವವರೆಗೂ, ನಾನು ಹೊರಗಿನ ಕೆಲಸ ಕಾರ್ಯಗಳನ್ನು ನೋಡಿಕೊಳ್ತೀನಿ. ಕೋಮಲ ನಿಮ್ಮ ಜೊತೆಗಿದ್ದು, ಮನೆಕೆಲಸಗಳಲ್ಲಿ ನಿಮಗೆ ಸಹಾಯ ಮಾಡ್ತಾಳೆ.''

''ನೀನು ಇಷ್ಟು ಹೇಳಿದ ಮೇಲೆ ನನಗಿನ್ನೇನು ಭಯ? ಹಣ ಕಾಸಿಗೂ ಅಷ್ಟೇ. ನೀನೇ ಏನಾದರೂ ಮಾಡಬೇಕು. ಚಿಕ್ಕಪ್ಪನ ಔಷಧೋಪಚಾರಕ್ಕೆ ಸಹ ನನ್ನ ಹತ್ತಿರ ಹಣವಿಲ್ಲ.'' ಶಾರದಾ ಕೈ ಚೆಲ್ಲಿ ನುಡಿದಳು.

''ಅಪ್ಪ ಬದುಕಿದ್ದಾಗ ನಮ್ಮಿಬ್ಬರ ಮದುವೆಗೆ ಅಂತ ಆಗಾಗ್ಗೆ ಹಣವನ್ನು ಬ್ಯಾಂಕಿನಲ್ಲಿ ಜಮಾ ಮಾಡುತ್ತಿದ್ದರು. ಅದು ಎಷ್ಟಿದೆಯೋ ತಿಳೀದು. ನಾನು ನಾಳೆನೇ ಹೋಗಿ ವಿಚಾರಿಸ್ತೀನಿ. ನೀವು ಚಿಂತೆ ಮಾಡಬೇಡಿ.''

ಈ ಮಾತುಗಳನ್ನು ಕೇಳಿಸಿಕೊಂಡ ನಾರಾಯಣ ಸಂಜ್ಞೆ ಮಾಡಿ ಏನನ್ನೋ ಹೇಳಲು ಪ್ರಯತ್ನಿಸಿದ. ಆದರೆ ಅದು ಏನೆಂದು ಯಾರಿಗೂ ಅರ್ಥವಾಗಲಿಲ್ಲ. ಮನೆಗೆ ಬರುವವರೆಗೂ ಮತ್ತೆ ಯಾರೂ ಮಾತನಾಡಲಿಲ್ಲ.

ತೋಟ ಗದ್ದೆಗಳ ಕೆಲಸ ಎಂದರೆ, ಶ್ರಮ ಜಾಸ್ತಿ. ಪರಿಶ್ರಮಕ್ಕೆ ತಕ್ಕ

ಫಲವಿಲ್ಲ ಅಂತಲ್ಲ. ಆದರೆ ಫಸಲು ಬಂದಾಗ ಸರಿಯಾದ ಬೆಲೆಗೆ ಮಾರಾಟವಾದರೆ ಚೆನ್ನಾಗಿ ಲಾಭ. ಆ ಲಾಭದ ಹಣದಲ್ಲಿ ನಾರಾಯಣ ಹೆಂಡತಿಗೆ ಚೂರು ಪಾರು ಒಡವೆಗಳನ್ನು ಮಾಡಿಸಿಕೊಟ್ಟಿದ್ದ. ತಾಯಿಯ ಹಾಗೂ ರಾಮಚಂದ್ರನ ಹೆಂಡತಿಯ ಒಡವೆಗಳೆಲ್ಲ ಈಗ ಶಾರದೆಯ ಬಳಿಯೇ ಇದೆ. ಆದರೆ ಇನ್ನು ಮುಂದೆ ಖರ್ಚು ಜಾಸ್ತಿ. ತನ್ನ ಕೈಯಲ್ಲೂ ಕೆಲಸ ಸಾಗುವುದಿಲ್ಲ. ಆಳು ಕಾಳುಗಳೊಡನೆ ಗುದ್ದಾಡಿ, ವ್ಯಾಪಾರಗಾರರೊಡನೆ ಹೋರಾಡಿ, ಆಯವ್ಯಯಗಳ ಈ ಕೆಲಸಗಳನ್ನು ನೋಡಿಕೊಳ್ಳುವುದು ಈ ಹೆಂಗಸರಿಂದ ಅಸಾಧ್ಯ... ಆದ್ದರಿಂದ, ಈ ಎರಡು ಮನೆಗಳನ್ನು ಬಿಟ್ಟು, ಉಳಿದ ತೋಟ, ಜಮೀನುಗಳನ್ನು ಮಾರುವುದೆಂದು ನಾರಾಯಣಮೂರ್ತಿ ಚಿಂತಿಸಿದ. ಅದನ್ನೇ ಬಹಳ ಕಷ್ಟಪಟ್ಟು ಶಾರದೆಗೆ ತಿಳಿಯಪಡಿಸಿದ. ಅಲ್ಲೇ ಇದ್ದ ಕಲ್ಯಾಣಿಗೂ ಅರ್ಥವಾಗಿತ್ತು.

ನಂತರ, ಅಲ್ಲಿದ್ದ ಸ್ಕೂಲಿನ ಮೇಷ್ಟ್ರು ಒಬ್ಬರನ್ನು ಕರೆಸಿ, ತನಗೆ ಅನಿಸಿದ್ದನ್ನೂ ಬರಹದ ಮೂಲಕ ತಿಳಿಸಿ, ಪತ್ರಗಳನ್ನು ಬರೆಸಿದ. ಬ್ಯಾಂಕಿನಲ್ಲಿ ಅವನ ಹೆಸರಿನಲ್ಲಿದ್ದ ಹಣವನ್ನು ಶಾರದೆಯ ಹೆಸರಿಗೆ ವರ್ಗಾಯಿಸಿ, ಹೊಸ ಅಕೌಂಟ್ ಮಾಡಿಸಿದ.

''ಇದಿಷ್ಟೇ ಹಣ ನನ್ನ ಹತ್ತಿರವಿರುವುದು, ಇತಿ ಮಿತಿಯಿಂದ ನಮ್ಮ ಸಂಸಾರಕ್ಕೆ ಖರ್ಚು ಮಾಡಬೇಕು. ನಿನ್ನ ಮಗ ಬಂದು ಕೇಳಿದರೆ ಖಂಡಿತಾ ಕೊಡಬೇಡ... ನಾವೆಲ್ಲಾ ತೋಟದ ಮನೆಗೇ ಹೋಗೋಣ. ಈ ಮನೇನ ಭೋಗ್ಯಕ್ಕೆ ಕೊಡೋಣ...'' ಗಂಡನ ಈ ಸಲಹೆ ಅವಳಿಗೆ ಸರಿ ಎನಿಸಲಿಲ್ಲ.

''ಈ ಊರು, ಈ ಮನೆ ಬಿಟ್ಟು ತೋಟದ ಮನೆಗೆ ಹೋಗೋದು ನನಗೆ ಸುತರಾಂ ಇಷ್ಟವಿಲ್ಲ. ಆ ಜಾಗವೇ ನನಗೆ ಭಯವನ್ನುಂಟು ಮಾಡುತ್ತೆ. ಒಂದಾದ ಮೇಲೆ ಇನ್ನೊಂದು ದುರ್ಮರಣಗಳು ಆಗಿವೆ ಆಜಾಗದಲ್ಲಿ.''

ಕಲ್ಯಾಣಿ ಪೆಚ್ಚಾದಳು... ಆದರೆ ಅವಳುಚ ಏನನ್ನು ಹೇಳುವಂತಿಲ್ಲ. ತಾನೊಂದು ಕೆಲಸಕ್ಕೆ ಸೇರಿದ್ದರೆ ಚೆನ್ನಾಗಿತ್ತೆನಿಸಿತ್ತು. ಆದರೆ ಸಧ್ಯಕ್ಕೆ ಯಾವುದೂ ಆಗುವುದಿಲ್ಲ. ಮೊದಲು ಚಿಕ್ಕಪ್ಪ ಸುಧಾರಿಸಿಕೊಳ್ಳಲಿ ಎಂದುಕೊಂಡಳು.

ತೋಟದ ಕೆಲಸಗಾರರೆಲ್ಲಾ ನಾರಾಯಣಮೂರ್ತಿಯನ್ನು ಬಂದು

ನೋಡಿಕೊಂಡು ಹೋದರು. ತಮ್ಮಿಂದಾಗುವ ಸಹಾಯವನ್ನು ತಪ್ಪದೇ ಮಾಡುತ್ತೀವಿ ಎಂದು ಭಕ್ತಿಯಿಂದ ನುಡಿದುದು, ನಾರಾಯಣನಿಗೆ ನೆಮ್ಮದಿಯನ್ನುಂಟುಮಾಡಿತ್ತು.

ಕೋಮಲ, ಕಲ್ಯಾಣಿ ಮತ್ತೆ ಈ ಮನೆಯಲ್ಲೇ ಇರಲಾರಂಭಿಸಿದರು. ಕೋಮಲ ಕಾಲೇಜಿಗೆ ಹೋಗುತ್ತಿದ್ದಳು. ಕಲ್ಯಾಣಿ ಯಾರಿಗೂ ತಿಳಿಯದಂತೆ ಕೆಲಸಕ್ಕೆ ಪ್ರಯತ್ನಿಸುತ್ತಿದ್ದಳು. ಕೃಷ್ಣ ತೋಟದ ಮನೆಯಲ್ಲಿ ತನ್ನ ಸ್ನೇಹಿತರೊಡನೆ ಇರಲಾರಂಭಿಸಿದ. ತಮ್ಮಿಬ್ಬರ ಅಗತ್ಯದ, ಬಟ್ಟೆ ಇತ್ಯಾದಿಗಳನ್ನು ಕಲ್ಯಾಣಿ ತಂದುಕೊಂಡಳು. ಆಗ ಕೃಷ್ಣ ಮನೆಯಲ್ಲಿರಲಿಲ್ಲ. ಮನೆಯ ರಂಪ ಅಸಹ್ಯವನ್ನುಂಟುಮಾಡುವಂತಿತ್ತು. ಕೆಲಸದಾಳಿಗೆ ಎಲ್ಲವನ್ನು ಕ್ಲೀನ್ ಮಾಡುವಂತೆ ಹೇಳಿ ತನ್ನ ಪಾಡಿಗೆ ಹೊರಟುಹೋದಳು.

ಗಂಡ ಮನೆಯಲ್ಲೇ ಇರುವುದರಿಂದ ಕೃಷ್ಣ ಬರುತ್ತಿಲ್ಲವೆಂದು ಶಾರದಾ ಭಾವಿಸಿದಳು. ಆದರೆ ಸ್ವಂತ ಮಗ, ಅಪ್ಪ ಅನಾರೋಗ್ಯದಿಂದ ನರಳುತ್ತಿರುವಾಗ ಸಹ ಬಂದು ನೋಡಲಿಲ್ಲವಲ್ಲ... ಎಂಥಾ ಕಟುಕ! ಎಂದೆನಿಸಿತ್ತು. ಆದರೆ ಅವನಿಗೆ ತಿಳಿದಿದೆಯೋ ಇಲ್ಲವೋ ಎಂದು ತನಗೆ ತಾನೇ ಹೇಳಿಕೊಂಡಳು.

ಕಲ್ಯಾಣಿ ತನ್ನ ಕಣ್ಣೆದುರಿಗೇ ಇರುವುದು ನಾರಾಯಣಮೂರ್ತಿಗೆ ನೆಮ್ಮದಿ. ಕೃಷ್ಣ ತಾನಿರುವ ಕಡೆ ಬರುವುದಿಲ್ಲ. ಇನ್ನಾದರೂ ಆ ಅತ್ಯಾಚಾರ ನಿಂತಿತಲ್ಲ... ಅಂತೆನ್ನಿಸಿದರೂ, ನಡೆದ ಘಟನೆಗಳೆಲ್ಲಾ ನೆನಪಿಗೆ ಬರತೊಡಗಿದಾಗ, ಮನಸ್ಸು ಕಲಕಿ ಹೋಗುತ್ತಿತ್ತು. ಕೆಲವೇ ತಿಂಗಳುಗಳೊಳಗೆ ನಮ್ಮ ಮನೆಯಲ್ಲಿ ಏನೇನು ನಡೆದು ಹೋಯಿತು...? ಇನ್ನು ಸರಿ ಹೋಗುವ ಬಗೆಯಾದರೂ ಹೇಗೆ?

ಆ ದಿನ ಪಂಡಿತರು ಏನು ನುಡಿದರು? ಕಲ್ಯಾಣೀನ ನಮ್ಮ ಮನೆ ಸೊಸೆಯನ್ನಾಗಿ ಮಾಡಿಕೊಳ್ಳುವುದೇ... ಅದು ಖಂಡಿತಾ ಸಾಧ್ಯವಿಲ್ಲ. ಅವಳು ಕೃಷ್ಣನ ಹೆಂಡತಿಯಾಗುವುದು ಬೇಡ. ಈ ಪಾಪ ಕೆಲಸಕ್ಕೆ ಮಾತ್ರ ನಾನು ಎಂದೂ ಒಪ್ಪುವುದಿಲ್ಲ... ''ಅವನ ತಳ ಮಳ ಹೆಚ್ಚಿದಷ್ಟು ರಕ್ತದ ಒತ್ತಡ ಹೆಚ್ಚುತ್ತಿತ್ತು. ತಂದೆಗೆ ಒದಗಿದ ಕಡೇ ಸ್ಥಿತಿಯನ್ನು ನೆನೆಸಿಕೊಂಡಾಗ ಅವನಭಯ ಹೆಚ್ಚುತ್ತಿತ್ತು...

ಕೃಷ್ಣ ಎಲ್ಲೋ ಹೊರಗೆ ತಿರುಗಾಡಿಕೊಂಡಿದ್ದು, ಆಗ ಈಗ ಕಲ್ಯಾಣಿಗೆ

ಹಿಂಸೆಯನ್ನು ಕೊಡುವ ಬದಲು, ಅವನು ತನ್ನ ಮನೆಯಲ್ಲಿ ಕಣ್ಣೆದುರಿಗೆ ಓಡಾಡಿಕೊಂಡಿದ್ದರೆ ಎಷ್ಟೋ ನೆಮ್ಮದಿ... ಹೀಗೆ ಮಾಡಬೇಕಾದರೆ, ಅವನು ಕೇಳಿದಷ್ಟು ಹಣ ಕೊಡಬೇಕಾಗುತ್ತದೆ... ಇಲ್ಲ.... ಅವನನ್ನು ಆಕರ್ಷಿಸಿ, ತನ್ನ ಹದ್ದುಬಸ್ತಿನಲ್ಲಿಟ್ಟುಕೊಳ್ಳುವಂತಹ ಒಂದು ಹುಡುಗಿಯ ಜೊತೆ ಮದುವೆ ಮಾಡಬೇಕಾಗುತ್ತದೆ... ಇದರಲ್ಲಿ ಯಾವುದು ಸರಿ? ಯಾವುದು ತಪ್ಪು? ಎರಡೂ ಸರಿಯಲ್ಲ ಎಂದು ಮನಸ್ಸು ಹೇಳುತ್ತಿತ್ತು... ಇದುವರೆಗೂ ಕೃಷ್ಣನ ನಡತೆ ತಿಳಿದವರು ಸಹ, ನಾರಾಯಣಮೂರ್ತಿಯ ಬಗ್ಗೆ ಗೌರವ ಜೊತೆಗೆ, ಕೃಷ್ಣನ ಸಹವಾಸ ನಮಗೇಕೆ ಎನ್ನೋ ಉದಾಸೀನ... ಜೊತೆಗೆ ಸ್ವಲ್ಪ ಭಯ ಕೂಡ...

ಒಂದು ತೋಟ, ಸಾಕಷ್ಟು ಜಮೀನು, ಎರಡು ಮನೆಗಳ ಯಜಮಾನ ನಾರಾಯಣಮೂರ್ತಿಗೆ ಊರಿನವರೆಲ್ಲ ಗೌರವ ಕೊಡುತ್ತಿದ್ದರು. ಅವರ ಮಗ ಅಷ್ಟೇ ನಾಲ್ಲಾಯಕ್ಕು ಎಂದು ಎಲ್ಲರಿಗೂ ತಿಳಿದಿದ್ದರೂ, ಅದನ್ನು ಆಡಿಕೊಳ್ಳಲು ಇಷ್ಟಪಡುತ್ತಿರಲಿಲ್ಲ. ಆಷ್ಟಾಗಿ, ಕೃಷ್ಣ ಬೆಳೆಯುತ್ತಾ ದೊಡ್ಡವನಾದಂತೆ ಅವನನ್ನು ಕಂಡವರೇ ಕಡಿಮೆ. ಅವನ ಸ್ನೇಹಿತರು ಎಲ್ಲಿಯವರೋ, ಎಲ್ಲಾ ಎಲ್ಲಿರುತ್ತಾರೋ... ಎಲ್ಲೆಲ್ಲಿ ಓಡಾಡುತ್ತಾರೋ ಆ ಬಗ್ಗೆ ತಲೆ ಕೆಡಿಸಿಕೊಳ್ಳಲು ಯಾರಿಗೂ ಸಮಯವಿಲ್ಲ. ಆ ಊರಿನಲ್ಲಿ ಮನೆಗಳೇ ವಿರಳ. ದೊಡ್ಡ ಸಿಟಿಗಳಲ್ಲಿರುವಂತೆ, ಪಕ್ಕ ಪಕ್ಕದಲ್ಲಿ ಅಂಟಿಕೊಂಡಂತೆ ಕಾಂಪೌಂಡ್ ಆಗಲೀ ಮನೆಗಳಾಗಲೀ ಇಲ್ಲ. ವಿಶೇಷ ಹಬ್ಬ ಹರಿದಿನಗಳಲ್ಲಿ ಬೆರೆಯುತ್ತಿದ್ದರೇ ಹೊರತು, ಆಗಾಗ್ಗೆ ಒಬ್ಬರನ್ನೊಬ್ಬರು ಕಾಣುವುದೇ ಕಡಿಮೆ. ಮನೆಯಲ್ಲಿ ಹೆಂಗಸರಿಗೆ ಸಾಕಷ್ಟು ಕೆಲಸವಿದ್ದರೆ, ಗಂಡಸರು ಹೊರಗೆ ಗದ್ದೆ ತೋಟಗಳಲ್ಲಿ ದುಡಿಯುತ್ತಿದ್ದರು. ಅದೂ ಒಂದು ತರಹ ಯಾಂತ್ರಿಕ ಜೀವನವೆಂದೇ ಹೇಳಬೇಕು. ಜೊತೆಗೆ ಧರ್ಮ, ಜಾತಿಗಳು ಬೇರೆ ಬೇರೆಯಾದುದರಿಂದ, ಅವರವರ ಪಾಡು ಅವರಿಗೆ. ಆದರೂ, ಸುತ್ತಲಿನ ವಿದ್ಯಾಮಾನಗಳು ತಿಳಿಯದು ಎಂದೇನಲ್ಲ... ಆದರೆ ಅದನ್ನೇ ಅಪಪ್ರಚಾರ ಮಾಡುತ್ತಿರಲಿಲ್ಲ. ಇದನ್ನು ಒಳ್ಳೆಯ ಗುಣ ಎನ್ನಬೇಕೋ ಬೇಡವೋ ಅದೂ ಸಹ ಗೊತ್ತಾಗುವುದಿಲ್ಲ. ಹೀಗಿರುವಾಗ ನಾರಾಯಣಮೂರ್ತಿ ತನ್ನ ಮನೆಯ ಸಮಸ್ಯೆಗಳನ್ನು ಇನ್ನೊಬ್ಬರೊಡನೆ ಚರ್ಚಿಸಲು, ಹಂಚಿಕೊಳ್ಳಲು ಇಷ್ಟಪಡಲಿಲ್ಲ. ಅವನಿಗೆ ತಿಳಿದಂತೆ ಬೇರೆ ಯಾರೂ, ಎಂದೂ ಅವನ ಮನೆ ಬಾಗಿಲಿಗೆ ಬಂದು, ತಮ್ಮ

ಮನೆಯ ಸಮಸ್ಯೆಗಳನ್ನು ಹೇಳಿಕೊಂಡಿರಲಿಲ್ಲ. ಅಥವಾ, ಆವರ ಮನೆಯಲ್ಲಿ ನಡೆದ ದುರ್ಘಟನೆಗಳಿಂದ ಹೆದರಿ ಆದಷ್ಟೂ ದೂರವಿದ್ದರೋ... ಅಥವಾ ಕೃಷ್ಣನ ನಡತೆ ಅವರನ್ನು ದೂರವಿರಿಸಿತ್ತೋ... ಅದೂ ಸಹ ನಾರಾಯಣಮೂರ್ತಿಗೆ ತಿಳಿಯದು ಅವನ ಮನೆಯ ತಾಪತ್ರಯಗಳೇ ಅವನಿಗೆ ಸಾಕಷ್ಟು ಇರುವಾಗ, ಅವರಿವರ ಮನೆಯವರು ಏನು ಮಾಡುತ್ತಾರೆ ಎಂದು ತಿಳಿದುಕೊಳ್ಳುವ ಆಸಕ್ತಿ ಸಹ ಇವನಿಗಿರಲಿಲ್ಲ. ಶಾರದೆ ಸಹ ಆದಷ್ಟೂ ಯಾರೊಡನೆ ಬೆರೆಯುತ್ತಿರಲಿಲ್ಲ. ಬೆರೆತರೂ, ಮಗನ ಮಾತು ಬರದಂತೆ ಜಾಗರೂಕಳಾಗಿರುತ್ತಿದ್ದಳು.

ಈಗ ತಾನು ಅನಾರೋಗ್ಯದಿಂದ ಹಾಸಿಗೆ ಹಿಡಿದಿದ್ದೇನೆ. ತನಗೆ ಸಹಾಯಕರ್ಯಾರಿಲ್ಲ. ಮಗನೋ ಅಯೋಗ್ಯ. ಕೈಗೆ ಕೈ ಜೋಡಿಸುವ ಸಹಾಯಕನಾಗದೇ, ಕುತ್ತಿಗೆಗೇ ಕೈ ಹಾಕುವ ಶತ್ರುವಾಗಿದಾನೆ. ಒಡ ಹುಟ್ಟಿದ ಅಣ್ಣ ದೇಶಾಂತರ ಹೋದ... ಅಣ್ಣನಂತಿದ್ದ ಶಿವರಾಮು ಆತ್ಮಹತ್ಯೆ ಮಾಡಿಕೊಂಡ... ಮಗ ಪ್ರಯೋಜನವಿಲ್ಲ... ನನಗೆ ಆಪ್ತರು ಯಾರೂ ಇಲ್ಲ. ನನ್ನ ಸುಖ ದುಃಖ ಹಂಚಿಕೊಳ್ಳಲು ನನಗೆ ಯಾರಿಲ್ಲ. ಅವನು ಅನೇಕ ಯಾತನೆಗಳಿಂದ ಬಳಲಿದ. ಗಂಡನ ಯಾತನೆಯನ್ನು ಶಾರದಾ ಯಾವ ರೀತಿಯಿಂದ ಕಡಿಮೆ ಮಾಡಬಲ್ಲಳು? ಅವಳೂ ಒಬ್ಬಳೇ ಕೊರಗುತ್ತಿದ್ದಳು. ದಿನಗಳು ಸರಿದರೂ, ಯಾವ ಸಮಸ್ಯೆಗೂ ಪರಿಹಾರ ಸಿಕ್ಕಿರಲಿಲ್ಲ.

ಈ ಮಧ್ಯೆ ನಾರಾಯಣನನ್ನು ಮತ್ತೊಮ್ಮೆ ಡಾಕ್ಟರಿಗೆ ತೋರಿಸಲೆಂದು ಆಸ್ಪತ್ರೆಗೆ ಕರೆದೊಯ್ದರು. ಅಲ್ಲಿ ಮತ್ತೊಮ್ಮೆ ಅವಳಿಗೆ ಬೃಂದಳ ಭೇಟಿ ಯಾಯಿತು. ಹರ್ನಿಯ ಆಪರೇಷನ್ ನಂತರ ಸುಧಾರಿಸಿಕೊಳ್ಳುತ್ತಿದ್ದ ಅವಳ ಚಿಕ್ಕಪ್ಪನನ್ನು ಒಂದೆರಡು ದಿನಗಳಲ್ಲಿ ಡಿಸ್ಚಾರ್ಜ್ ಮಾಡಿಸಿಕೊಂಡು ಮನೆಗೆ ಕರೆದೊಯ್ಯಬೇಕಾಗಿತ್ತು. ಬೃಂದ ತನ್ನ ಅಸಹಾಯಕತೆಯನ್ನು ಹೇಳಿಕೊಂಡಳು.

''ನಮ್ಮ ಮನೆಯಲ್ಲಿ ನಾವು ಇಬ್ಬರೇ ಇರುವುದು. ನಮ್ಮದೇ ಒಂದು ಸಣ್ಣ ಬಟ್ಟೆ ಅಂಗಡಿ ಇದೆ. ಆದರೆ, ಚಿಕ್ಕಪ್ಪಂಗೆ ಹುಶಾರಿಲ್ಲದೇ ಎಷ್ಟೋ ದಿನಗಳಿಂದ ಅಂಗಡಿ ಬಾಗಿಲನ್ನು ಮುಚ್ಚಿಬಿಚ್ಚಿದ್ದೇವೆ. ನನಗೆ ಏನು ಮಾಡಬೇಕೂಂತ ತೋಚುತ್ತಿಲ್ಲ. ನಾನು ಅಂಗಡಿಯಲ್ಲಿ ಕೂರುವಂತಿಲ್ಲ. ಅದು

ನಮ್ಮ ಚಿಕ್ಕಪ್ಪನಿಗೆ ಒಪ್ಪದ ಕೆಲಸ.''

''ಈಗ ನನ್ನ ಪರಿಸ್ಥಿತಿಯೂ ಹೆಚ್ಚು ಕಡಿಮೆ ಹಾಗೇ. ನಮ್ಮದೇ ತೋಟ ಜಮೀನು ಎಲ್ಲಾ ಇದ್ದರೂ, ಅದನ್ನು ನೋಡಿಕೊಳ್ಳುವವರು ಯಾರೂ ಇಲ್ಲ. ನನ್ನ ಮಗನೋ ಈಗಿನ ಕಾಲದವನು. ಅವನಿಗೆ ಅದೆಲ್ಲ ಬೇಕಿಲ್ಲ. ಎಲ್ಲವನ್ನೂ ಮಾರಿ ಪಟ್ಟಣಕ್ಕೆ ಹೋಗೋಣ, ಬಿಸಿನೆಸ್ ಮಾಡೋಣ ಅಂತಾನೆ. ಕಲ್ಯಾಣಿ ನನ್ನ ಭಾವನ ಮಗಳು, ಎಷ್ಟು ದಿನಾಂತ ನಮ್ಮ ಮನೇಲಿರುತ್ತಾಳೆ? ಮದುವೆ ಮಾಡಿಕೊಂಡು ಗಂಡನ ಮನೆಗೆ ಹೋಗಬೇಡವೇ?'' ಅಲ್ಲಿಯೇ ಇದ್ದ ಕಲ್ಯಾಣಿ ಇಬ್ಬರ ಮಾತುಗಳನ್ನು ಕೇಳಿಸಿಕೊಂಡಳು.

ಇದ್ದಕ್ಕಿದ್ದಂತೆ ಶಾರದೆಗೆ ಏನನ್ನಿಸಿತೋ ಏನೋ, ಬೃಂದಾಳ ಕೈ ಹಿಡಿದು ನುಡಿದಳು. ''ನಿನಗೆ ಯಾರೂ ಇಲ್ಲ ಅಂತ ದುಃಖ ಪಡಬೇಡ. ಇಂತಹ ಸಮಯದಲ್ಲಿ ನಮ್ಮಂತಹವರು ಒಬ್ಬರಿಗೊಬ್ಬರು ಸಹಾಯಕರಾಗಬೇಕು. ಸಂಕೋಚವಿಲ್ಲದೇ ಏನೂ ಬೇಕಾದರೂ ಕೇಳು. ನನ್ನ ಕೈಲಾದ ಸಹಾಯಾನ ನಾನು ಮಾಡ್ತೀನಿ.'' ಕಲ್ಯಾಣಿ ಬೃಂದಾಳ ಮುಖ ನೋಡಿದಳು. ಅವಳಿಗೂ ಬೃಂದಾಳ ಬಗ್ಗೆ ಮರುಕವುಂಟಾಗಿತ್ತು. ಸ್ವಂತದವರು ಅಂತ ಇರೋದು ಚಿಕ್ಕಪ್ಪ ಒಬ್ಬರೇ... ಆದರೆ ಅವರಿಗೆ ಕೃಷ್ಣನಂತಹ ದುಷ್ಟ ಮಗನಿಲ್ಲ... ಅದಕ್ಕೇ ಬದುಕಿದ್ದಾಳೆ. ನನ್ನ ಹಾಗೆ ಬದುಕಿಯೂ ಸತ್ತಿಲ್ಲ... ಕೃಷ್ಣ ಸ್ವಂತ ಚಿಕ್ಕಪ್ಪನ ಮಗನಾಗಿದ್ದಿದ್ದರೆ, ಬಹುಶಃ ಹೀಗೆ ವರ್ತಿಸುತ್ತಿರಲಿಲ್ಲವೋ ಏನೋ... ಎಷ್ಟಾಗಲೀ ರಕ್ತ ಸಂಬಂಧವೇ ಬೇರೆ...''

''ಕಲ್ಯಾಣಿ ಬೃಂದಂಗೆ ನಮ್ಮ ಮನೆ ವಿಳಾಸಾನ ಬರೆದುಕೊಡು... ನಿನಗೆ ಏನಾದರೂ ಸಹಾಯಬೇಕಾದರೆ, ಸಂಕೋಚವಿಲ್ಲದೇ ಕೇಳು. ಕಲ್ಯಾಣಿ ತುಂಬಾ ಒಳ್ಳೆಯ ಹುಡುಗಿ. ಏನು ಸಹಾಯ ಬೇಕಾದ್ರು ಮಾಡ್ತಾಳೆ.''

ಕಲ್ಯಾಣಿಗೆ ಅತಿರೇಕವೆನಿಸಿತು. ಚಿಕ್ಕಮ್ಮ ಈ ಮಾತನ್ನೆಲ್ಲಾ ಆಡುವ ಅವಶ್ಯಕತೆ ಏನಿತ್ತು ಅಂತೆನ್ನಿಸಿತ್ತು. ಆದರೂ ವಿಳಾಸವನ್ನು ಬರೆದುಕೊಟ್ಟಳು. ಹಾಗೆ ಬೃಂದಳ ವಿಳಾವನ್ನು ಬರಸಿಟ್ಟುಕೊಂಡಳು.

ರಸ್ತೆಯಲ್ಲಿ ವಾಪಸ್ಸು ಬರುವಾಗ, ''ಬೃಂದನ್ನ ನೋಡಿದರೆ ಅಷ್ಟೇ ಅಂತ ಅನ್ನಿಸುತ್ತೆ. ಪಾಪ... ಎಷ್ಟು ಕಷ್ಟ! ನೀನೇ ಅಂತ ಕೇಳೋರಿಲ್ಲ... ಚಿಕ್ಕಪ್ಪನೂ

ಸತ್ತುಹೋದರೆ ಅವಳ ಗತಿ ಏನಾಗುತ್ತೋ..." ಅಂತಂದಳು.

ಕಲ್ಯಾಣಿ ಆಶ್ಚರ್ಯಗೊಂಡಳು. ಚಿಕ್ಕಮ್ಮ ಆ ಹುಡುಗಿಯ ಬಗ್ಗೆ ಅಷ್ಟೇಕೆ ಚಿಂತಿಸುತ್ತಾಳೆ ಎಂದು ಅರ್ಥವಾಗಲಿಲ್ಲ. ಈಗ ಮನೆಯಲ್ಲಿ ಯಾವುದೂ ಸರಿ ಇಲ್ಲ. ದಿನಗಳು ಮಾತ್ರ ಸರಿದು, ಕಾಲ ಓಡುತ್ತಿದೆ.... ಚಿಂತೆಯ ಕ್ಷಣಗಳು ಜಾಸ್ತಿಯಾಗುತ್ತಿವೆ... ಅಂಥಾದ್ದರಲ್ಲಿ ಚಿಕ್ಕಮ್ಮನಿಗೆ ಈ ಹುಡುಗಿಯಮಾತೇಕೆ?

ಆದರೆ, ಶಾರದೆಯ ಮನಸ್ಸಿನಲ್ಲಿದ್ದುದೇ ಬೇರೆ... ಬೃಂದಳನ್ನು ಮೊದಲು ಕಂಡು, ಮಾತಾಡಿದ್ದಾರಭ್ಯ ಆಗಾಗ ಒಂದು ಆಸೆ ಹುಟ್ಟುತ್ತಿತ್ತು. ಹುಡುಗಿ ಜಾಣೆ, ತಿಳುವಳಿಕಸ್ಥೆ, ಸುಶೀಲೆ, ಲಕ್ಷಣವಂತೆ... ಇಷ್ಟು ಗುಣಗಳು ಸಾಕು... ಒಂದು ಸಾರಿ ನಮ್ಮ ಮನೆಯ ಸೊಸೆಯಾಗಿ ಬಂದುಬಿಟ್ಟರೆ, ಎಲ್ಲಾ ಜವಾಬ್ದಾರಿಯನ್ನು ಅವಳಿಗೇ ವಹಿಸಿಬಿಡ್ತೀನಿ. ಇಂಥ ಚಿಕ್ಕವಯಸ್ಸಿನ ಹೆಂಡತಿ ಮನೆಯಲ್ಲಿದ್ದರೆ ಕೃಷ್ಣ ತಾನಾಗಿಯೇ ಸರಿ ಹೋಗುತ್ತಾನೆ. ಹೆಂಡತಿ ಹೇಳಿದಂತೆ ಕೇಳಿಯೇ ಕೇಳುತ್ತಾನೆ. ಎಲ್ಲಾ ಸರಿ ಹೋಗುತ್ತದೆ... ಈ ಭಾವನೆ ಅವಳಿಗೆ ಪದೇ ಪದೇ ಬರುತ್ತಿತ್ತು. ಅವಳನ್ನು ಕಂಡಾಗ, ಹೆಚ್ಚುತ್ತಿತ್ತು. ಆದರೆ ಇದೇ ಮಾತನ್ನು ಯಾರೊಡನೆಯೂ ಆಡುವ ಧೈರ್ಯವಿಲ್ಲ. ಕೃಷ್ಣನ ಮದುವೆಗೆ ಯಾರೂ ಒಪ್ಪುವುದಿಲ್ಲವೇನೋ ಎಂಬ ಅನುಮಾನ. ದುಡುಕಿ ಮಾತನಾಡಿ, ಕೆಲಸವನ್ನು ಪ್ರಾರಂಭಿಸುವ ಮೊದಲೇ ಅದು ನಿಂತು ಹೋಗುತ್ತದೇನೋ ಎಂಬ ಅನುಮಾನ. ಈ ಕಾರಣಗಳಿಂದ ತನ್ನ ಆಸೆಯನ್ನು ಅದುಮಿಟ್ಟುಕೊಂಡಳು. ಸಮಯ ಬಂದಾಗ ತಾನೇ ಮುಂದುವರೆಸುವುದು ಎಂದು ನಿರ್ಧರಿಸಿದಳು. ಹೇಗೂ ಈ ವರ್ಷ ಕಳೆಯಬೇಕಲ್ಲ...

ಈ ಸಮಯ ಕಡೆಗೂ ಒಂದು ದಿನ ಒದಗಿತು. ಪಕ್ಕದ ಊರ ದೇವತೆಯ ಹಬ್ಬ... ಊರ ಜಾತ್ರೆ... ಕೆಲವರು ಗಾಡಿ ಕಟ್ಟಿಸಿಕೊಂಡು ಜಾತ್ರೆಗೆ ಹೊರಟಿದ್ದರು. ಊರ ದೇವತೆಗೆ ಹರಕೆ ಹೊತ್ತವರು, ನಂಬಿಕೆ ವಿಶ್ವಾಸ ಉಳ್ಳ ಭಕ್ತರು ಅನೇಕರು ಅಲ್ಲಿ ಸೇರುತ್ತಿದ್ದರು. ಇದೇ ಒಂದು ಅವಕಾಶ, ಹಾಗೇ ಬೃಂದಳ ಮನೆಗೂ ಹೋಗಿ ಬರಬಹುದು ಎಂದು ನಿಶ್ಚಯಿಸಿಕೊಂಡು ಕಲ್ಯಾಣಿಯನ್ನು ಆಹ್ವಾನಿಸಿದಳು. ಆದರೆ ಅವಳು,

"ನಾನು ಚಿಕ್ಕಪ್ಪನ ಜೊತೆ ಮನೆಯಲ್ಲೇ ಇರ್ತೀನಿ. ನೀವು ಕೋಮಲನ್ನ

ಕರೆದುಕೊಂಡು ಹೋಗಿ'' ಎಂದು ನುಡಿದು, ಕೋಮಲಳನ್ನು ಬಲವಂತವಾಗಿ ಹೊರಡಿಸಿದಳು.

ಚಿಕ್ಕಪ್ಪ ಕೈಲಾಗದೇ ಹಾಸಿಗೆಯ ಮೇಲೆ ಮಲಗಿರುವವರು... ಒಂದು ವೇಳೆ ಕೃಷ್ಣ ಬಂದು, ಯಾರೂ ಮನೆಯಲ್ಲಿ ಇಲ್ಲದ್ದನ್ನೂ ಕಂಡು, ಕೋಮಲಳನ್ನೂ ಕೆಡಿಸಿ ಬಿಟ್ಟರೇ... ಅದೇ ಹೆದರಿಕೆ ಅವಳಿಗೆ. ಈಚೆಗೆ, ಕೃಷ್ಣ ಮನೆಗೆ ಬರುವುದನ್ನು ಮತ್ತೆ ಕಡಿಮೆ ಮಾಡಿದ್ದಾನೆ. ಮನೆಯಲ್ಲಿ ಅಪ್ಪ ಇರುತ್ತಾರೆಂದೋ... ಅಥವಾ ತಾನು ಈ ಮನೆಯಲ್ಲಿ ಇರುವುದರಿಂದಲೋ... ಆದರೂ ತಾಯಿಯಿಂದ ಹಣವನ್ನು ಕೀಳಲು ಬಂದಾಗ, ಚಿಕ್ಕಮ್ಮ ಮನೆಯಲ್ಲಿಲ್ಲಿದ್ದರೆ, ತನ್ನನ್ನು ಹಿಂಸಿಸದೇ ಬಿಡುತ್ತಿರಲಿಲ್ಲ. ಒಂದೆರಡು ಸಲ, ಅವನು ಬಂದ ಕೂಡಲೇ ತೋಟಕ್ಕೆ ಓಡಿ ಹೋಗಿ ಕೆಲಸಗಾರರ ನಡುವೆ ಕೂತು ಬಿಡುತ್ತಿದ್ದಳು. ಆದರೆ ರಾತ್ರಿಯ ಹೊತ್ತು ಒಮ್ಮೊಮ್ಮೆ ಸಿಕ್ಕಿಬೀಳುತ್ತಿದ್ದಳು.

''ಚಿಕ್ಕಮ್ಮಂಗೆ ಹೇಳ್ತೀನಿ ಅಂತ ಹೆದರಿಸಿದರೆ,'' ಬಾಯಿ ಮುಚ್ಚು... ನೀನೇನಾದರೂ ಕಿತಾಪತಿ ಮಾಡಿದರೆ.... ನಿನಗೇ ಗೊತ್ತು... ಕೋಮಲಂಗೂ ಇದೇ ಸ್ಥಿತಿ ಒದಗುತ್ತೆ ಅಂತ... ನಾನು ಎಂಥಾ ಭಂಡ ಅಂತ ನಿನಗೂ ಗೊತ್ತು... ನಾನು ಯಾವುದಕ್ಕೂ ಹೆದರುವವನಲ್ಲ...'' ಎಂದು ಹೆದರಿಸುತ್ತಿದ್ದ.

ಅವನು ಹಾಗೆ ಹೇಳಿದರೂ, ಅವನು ಕೆಲವು ವಿಷಯಗಳಿಗೆ ಹೆದರುತ್ತಿದ್ದ. ಲಾಕಪ್ಪಿನಲ್ಲಿ ಬಂಧಿಯಾಗಿ ಬಿದ್ದಿರುವುದು... ಗೂಳಿಯಂತೆ ಫ್ರೀಯಾಗಿ ತಿರುಗಾಡಿಕೊಂಡಿರಲು ಸಾಧ್ಯವಿಲ್ಲವಲ್ಲ..., ಪೋಲಿಸರ ಹೊಡೆತ... ಎಲ್ಲಿ ಅಂದರೆ ಅಲ್ಲಿ, ಮುಖ ಮೂತಿ ನೋಡದೇ ಹೊಡೆಯುತ್ತಿದ್ದ ಅವರನ್ನು ಕಂಡರೆ ಭಯ. ಎಷ್ಟೋ ದಿನಗಳವರೆಗೂ ಸತಾಯಿಸುತ್ತಿದ್ದ ಆ ನೋವು ಅವನನ್ನು ಕೆರಳಿಸುತ್ತಿತ್ತು. ಜೊತೆಗೆ ಕೈಯಲ್ಲಿ ಬೇಕೆಂದಾಗ ಖರ್ಚು ಮಾಡಲು, ಹಣ ಸಿಗದೇ ಪಡಬೇಕಾದ ಫಜೀತಿ, ಅವನನ್ನು ಇನ್ನು ಕೆರಳಿಸುತ್ತಿತ್ತು. ಸ್ನೇಹಿತರೋ, ನಿನಗೇನು ಕಡಿಮೆ... ಶ್ರೀಮಂತರ ಮನೆಯವನು ನೀನು, ನೀನು ಕೇಳಿದಷ್ಟು ಹಣವನ್ನು ನಿನ್ನ ತಾಯಿ ಕೊಡುತ್ತಾರೆ ಎಂದು ಪುಸಲಾಯಿಸಿ ಉಬ್ಬಿಸುತ್ತಿದ್ದರು. ಹಣವೊಂದನ್ನು ಬಿಟ್ಟು ಇನ್ನೆಲ್ಲಾ ವಿಷಯಗಳಲ್ಲೂ ಸಹಾಯಕರಾಗಿದ್ದರು. ಸಣ್ಣಪುಟ್ಟ ಕಳ್ಳತನ, ಮಾಡಿ, ಸಿಕ್ಕ ಹಣದಿಂದ ಜೂಜಾಡುತ್ತಿದ್ದರು, ಕುಡಿದು

ಆನಂದ ಪಡುತ್ತಿದ್ದರು. ಒಂದು, ಮೆಚ್ಚಬೇಕಾದ ವಿಷಯವೆಂದರೆ ಅವರಲ್ಲಿದ್ದ ಒಗ್ಗಟ್ಟು. ಯಾರೂ ಯಾರನ್ನು ಬಿಟ್ಟು ಕೊಡುತ್ತಿರಲ್ಲಿ. ಆದರೂ, ಕೃಷ್ಣ ತಾನು ಕಲ್ಯಾಣಿಯೊಡನೆ ಇಟ್ಟುಕೊಂಡಿರುವ ಸಂಬಂಧದ ವಿಷಯವನ್ನು ಮಾತ್ರ ಅವರೊಡನೆ ಹೇಳಿರಲಿಲ್ಲ.... ಎಲ್ಲರೂ ಹೆಚ್ಚು ಕಡಿಮೆ ಇವನ ವಯಸ್ಸಿನವರೇ, ಆದರೆ ಯಾರಿಗೂ ಹೆಂಗಸಿನ ಸಂಬಂಧ ಮಾಡುವ ಧೈರ್ಯವಿರಲಿಲ್ಲ... ತಿಳಿದರೆ ಅವರುಗಳು ತನ್ನನ್ನು ಖಂಡಿತಾ ಬಿಡುವುದಿಲ್ಲ. ಕಲ್ಯಾಣಿಯನ್ನು ಅವರೊಡನೆ ಹಂಚಿಕೊಳ್ಳಲು ಅವನಿಗೆ ಇಷ್ಟವಿಲ್ಲ... ಅಲ್ಲದೇ ಅವಳು ತನ್ನ ಅಕ್ಕ ಎಂದು ಎಲ್ಲರಿಗೂ ಹೇಳಿಬಿಟ್ಟಿದ್ದ... ಅವನಿಗೇ ಏನೋ ಅಳುಕು... ಅವರುಗಳ ಕಣ್ಣಿಗೆ ಕೋಮಲ ಬೀಳುವುದು ಬೇಡ ಅಂದೆನಿಸಿತ್ತು. ಇಷ್ಟೆಲ್ಲಾ ಅಂಜಿಕೆಯನ್ನು ತನ್ನಲ್ಲಿಟ್ಟುಕೊಂಡು ಕಲ್ಯಾಣಿಯನ್ನು ಹೆದರಿಸುತ್ತಿದ್ದ.

ಜಾತ್ರೆಗೆಂದು ಹೋದ ಶಾರದ ಮೊದಲು ಮಾಡಿದ ಕೆಲಸ, ಬೃಂದಳ ಮನೆಯನ್ನು ಹುಡುಕಿ ಅವಳ ಮನೆಗೆ ಹೋದುದು; ಬೃಂದ ನಗೆ ಮುಖದಿಂದ ಸ್ವಾಗತಿಸಿ ಉಪಚರಿಸಿದಳು. ಅತ್ತಿತ್ತ ನೋಡುತ್ತಿದ್ದಳು ಶಾರದಾ.

''ಈಗ ನಿಮ್ಮ ಚಿಕ್ಕಪ್ಪ ಹೇಗಿದಾರೆ? ಹುಶಾರಾಗಿದಾರಾ?'' ಕೇಳಿದಳು.

''ಹುಂ. ಪರವಾಗಿಲ್ಲ.'' ಅತ್ತಿತ್ತ ಶಾರದಳ ಗಮನ ಸರಿಯುತ್ತಿದ್ದುದನ್ನು ಗಮನಿಸಿ ಸಂಕೋಚದಿಂದ ನುಡಿದಳು. ಬಾಳೆ ಹಣ್ಣು, ಕೋಸಂಬರಿ ಪಾನಕಗಳನ್ನು ಅವರ ಮುಂದೆ ತಂದಿತ್ತು, ''ತಗೊಳ್ಳಿ'' ಎಂದಳು.

''ಊರದೇವತೆಯ ಹಬ್ಬ... ನಾನು ಮನೆಬಿಟ್ಟು ಎಲ್ಲೂ ಹೋಗಲಾಗುವುದಿಲ್ಲ. ಅದಕ್ಕೇ ಮನೆಯಲ್ಲೇ ದೇವಿಗೆ ಪೂಜೆ ಮಾಡಿದೆ.'' ಎಂದಳು.

''ಒಳ್ಳೇದಾಯ್ತು... ಎಲ್ಲಿ ಪೂಜೆ ಮಾಡಿದರೂ ದೇವಿಗೆ ಸಲ್ಲುತ್ತದೆ'' ಎಂದು ನುಡಿದು, ಕೋಮಲಳಿಗೂ ತೆಗೆದುಕೊಳ್ಳುವಂತೆ ಹೇಳಿ, ತಾನೂ ಪಾನಕವನ್ನು ಕುಡಿದು, ಮತ್ತೊಮ್ಮೆ ಮನೆಯನ್ನು ವೀಕ್ಷಿಸಿದಳು.

ಸಮಾರಾಗಿದ್ದ ಚಿಕ್ಕ ಮನೆ, ನೋಡಿದರೆ, ಹೆಚ್ಚು ಅನುಕೂಲಸ್ಥರಲ್ಲ ಎಂದು ಹೇಳಬಹುದಾದ ಸ್ಥಿತಿಯಲ್ಲಿತ್ತು. ಮನೆಯ ಒಂದು ಮೂಲೆ ಜಾಗವನ್ನು ಅಂಗಡಿಯನ್ನು ಮಾಡಿಕೊಂಡಿದ್ದರು. ಜೋಡಿಸಿಟ್ಟಿದ್ದ ಬಟ್ಟೆಗಳನ್ನು ನೋಡಿದರೆ

ವ್ಯಾಪಾರವೂ ಇದ್ದಂತೆ ಇಲ್ಲ ಅಂತನ್ನಿಸಿತು. ಏನೋ ಒಂದು ತರಹ ನೆಮ್ಮದಿ ಉಂಟಾಯಿತು.

''ನಾನು ನಿಮ್ಮ ಚಿಕ್ಕಪ್ಪನ ಹತ್ತಿರ ಮಾತನ್ನಾಡುತ್ತಿನಿ... ನೀನು ಕೋಮಲನನ್ನು ಕರೆದುಕೊಂಡು ಜಾತ್ರೆಗೆ ಹೋಗಿ ಬಾ... ಚಿಕ್ಕೋರು ಪುಟ್ಟೋರು... ನಿಮಗೆ ಅಂಥ ಆಸೆ ಎಲ್ಲಾ ಇರುತ್ತೆ... ಅದು ಸಹಜ... ಹೋಗೇ ಕೋಮಲ... ಸುತ್ತಾಡಿ ಬಾ... ನಿನಗೆ ಏನು ಬೇಕೋ ಅದನ್ನಾ ತಗೋ'' ಎನ್ನುತ್ತಾ ಕೈಗೆ ಒಂದಿಷ್ಟು ಹಣವನ್ನು ತುರುಕಿದಳು.

''ನನಗೆ ಇದೆಲ್ಲ ಅಪರೂಪವಲ್ಲ... ಪರವಾಗಿಲ್ಲ ನೀವು ಹೋಗಿಬನ್ನಿ'' ಎಂದಳು ಬೃಂದಾ.

''ಆದರೆ ನಮ್ಮ ಕೋಮಲಂಗೆ ಅಪರೂಪವೇ... ವರ್ಷ, ವರ್ಷವೂ ನಾವೇನು ಬರುಲ್ಲ. ನೀವು ಒಬ್ಬರಿಗೊಬ್ಬರು ಜೊತೆಯಾಗಿ ಬೇಗ ಹೋಗಿ, ಬೇಗ ಬನ್ನಿ. ಈ ನಡುವೆ ನನ್ನ ಕೈಲಿ ಬೇಗ ಬೇಗ ನಡೆಯುಕ್ಕೆ ಸಹ ಆಗುಲ್ಲ'' ಎನ್ನುತ್ತಾ ತನ್ನ ಮಂಡಿ ಚಿಪ್ಪನ್ನು ಕೈನಿಂದ ನೀವಿಕೊಂಡಳು. ಕೋಮಲಳ ಆಸೆಯ ಕಣ್ಣನ್ನು ಗಮನಿಸಿದ ಬೃಂದಾ ಹೊರಟಳು. ಅತ್ತ ಅವರಿಬ್ಬರೂ ಹೊರಟ ಕೂಡಲೇ ಶಾರದಾ, ಬೃಂದಾಳ ಚಿಕ್ಕಪ್ಪ ಮಲಗಿದ್ದೆಡೆಗೆ ಹೋಗಿ, ತನ್ನ ಪರಿಚಯ ವನ್ನು ಹೇಳಿಕೊಂಡು, ಮಾತಿಗೆ ಪ್ರಾರಂಭಿಸಿ, ತನ್ನ ಆಸೆಯನ್ನು ವ್ಯಕ್ತಪಡಿಸಿದಳು.

''ನಮಗೆ ಇರೋನೊಬ್ಬ ಮಗ... ಏನೋ ಅವನ ತಲೆಗೆ ವಿದ್ಯೆ ಹತ್ತಲಿಲ್ಲ... ಸ್ವಲ್ಪ ಜವಾಬ್ದಾರಿ ಕಡಿಮೆ... ನಮ್ಮ ತೋಟ ಜಮೀನುಗಳಿಂದ ಬರುವ ಆದಾಯವೇ ಬೇಕಾದಷ್ಟಿದೆ... ಆದರೆ ಈಗ ನಮ್ಮ ಯಜಮಾನರೂ ಹಾಸಿಗೆ ಹಿಡಿದು ಮಲಗಿಬಿಟ್ಟಿದಾರೆ... ಅದನ್ನೆಲ್ಲಾ ನೋಡಿಕೊಳ್ಳುವವರೇ ಇಲ್ಲ ವಾಗಿದೆ. ಕಲ್ಯಾಣಿ ಕೋಮಲ ಹೆಣ್ಣು ಹುಡುಗಿಯರು... ಅವರಿಗ್ಳೂ ಮದುವೆ ಮಾಡಿ ಕಳಿಸಿಬಿಟ್ಟರೆ ಮನೆ ಬಿಕೋ ಎನ್ನುತ್ತೆ... ಆದ್ದರಿಂದ ಬೃಂದನ್ನ ನಮ್ಮ ಮನೆಯ ಸೊಸೆಯನ್ನಾಗಿ ಮಾಡಿಕೊಳ್ಳುವ ಇಚ್ಛೆ ನನ್ನದು... ನಿಮಗೆ ಏನೂ ಅಭ್ಯಂತರವಿಲ್ಲವೆಂದು ಭಾವಿಸಿದ್ದೇನೆ.''

''ಅಭ್ಯಂತರ ಇದೆ ತಾಯಿ... ಅಭ್ಯಂತರವಿದೆ. ನಮ್ಮ ಬೃಂದ ಮೂಲಾ ನಕ್ಷತ್ರದಲ್ಲಿ ಹುಟ್ಟಿಬಿಟ್ಟಿದಾಳೆ. ಹುಟ್ಟಿದ ಕೆಲವೇ ವರ್ಷಗಳಲ್ಲಿ ಅನಾಥಳಾಗಿ

ಬಿಟ್ಟಳು... ಈ ಊರಿನಲ್ಲಿ ಹರಡಿದ ಕಾಲರಾ ರೋಗಕ್ಕೆ ಅವಳ ತಂದೆ, ತಾಯಿ, ನನ್ನ ಹೆಂಡತಿ, ನನ್ನ ಒಂದು ಮಗು ಎಲ್ಲರೂ ಬಲಿಯಾಗಿ ಬಿಟ್ಟರು... ಅದೇನು ಕಾರಣವೋ ನಾವಿಬ್ಬರು ಉಳಿದುಕೊಂಡೆವು. ಈಗನ್ನಿಸುತ್ತೆ ನಾವೂ ಇಬ್ಬರೂ ಹೊರಟು ಹೋಗಿದ್ದರೆ ಚೆನ್ನಾಗಿತ್ತೇನೋ ಅಂತ...''

''ಛೆ! ಹಾಗೇಕೆ ಅಂತೀರಿ... ಬಿಡ್ತು ಅನ್ನಿ. ಆ ದೇವಿ ನಿಮ್ಮಿಬ್ಬರನ್ನು ಉಳಿಸಿರಬೇಕಾದರೆ, ಏನೋ ಪ್ರಬಲವಾದ ಕಾರಣವೇ ಇರಬೇಕು...''

''ಆದರೇನು ತಾಯಿ...? ನೀವೇ ನೋಡಿದೀರಲ್ಲ... ನಾನು ಸ್ಥಿತಿವಂತನಲ್ಲ. ಹೆಸರಿಗೆ ಬಟ್ಟೆ ಅಂಗಡಿ ಇದೆ ಅಂತ... ಯಾವ ಆದಾಯವೂ ಇಲ್ಲ. ನಾನೂ ಬ್ರಾಹ್ಮಣ. ಏನೋ ದಾನ ದಕ್ಷಿಣೆ ಅಂತ ಒಂದಿಷ್ಟು ಮೇಲಿನ ಖರ್ಚಿಗೆ ಆಗುತ್ತೆ. ಬೃಂದಾ ಆಗೋ ಹೊತ್ತಿಗೆ ಎಲ್ಲಾ ಸರಿತೂಗಿಸಿಕೊಂಡು ಹೋಗ್ತಾಳೆ. ಇನ್ನ್ಯಾರಾದರೂ ಆಗಿದ್ದಿದ್ರೆ ಮನೆ ಬಿಟ್ಟು ಯಾರ ಹಿಂದೆಯೋ ಓಡಿ ಹೋಗಿರುತ್ತಿದ್ದಳು.''

''ಛೀ... ನೀವೇ ನಿಮ್ಮ ಮಗಳ ಬಗ್ಗೆ ಹೀಗೆಲ್ಲಾ ಮಾತನಾಡಬಾರದು. ನೀವು ದೊಡ್ಡ ಮನಸ್ಸು ಮಾಡಿ, ಅವಳನ್ನು ಧಾರೆ ಎರೆದುಕೊಡಿ. ನಮ್ಮ ಮನೇಲಿ ಖಂಡಿತಾ ಸುಖವಾಗಿರುತ್ತಾಳೆ...''

''ಏನು ಸುಖವೋ ಏನೋ...? ಹುಟ್ಟಿದ್ದು ಮೂಲಾನಕ್ಷತ್ರದಲ್ಲಿ... ಅಲ್ಲದೇ ಜಾತಕದಲ್ಲಿ ಸ್ವಲ್ಪ ಕುಜದೋಷ ಕೂಡಾ ಇದೆ. ಈ ಕಾರಣದಿಂದ ಜಾತಕದಲ್ಲಿ ಸ್ವಲ್ಪ ಕುಜದೋಷ ಕೂಡಾ ಇದೆ. ಈ ಕಾರಣದಿಂದ ಜಾತಕ ಕೂಡಿಬರದೇ ಮದುವೆ ಆಗುವುದು ನಿಧಾನವಾಗಿದೆ...''

''ನನಗೆ ಜಾತಕದಲ್ಲಿ ನಂಬಿಕೆ ಇಲ್ಲ. ಮನೋಬಲ, ಗ್ರಹ ಬಲಕ್ಕಿಂತ ಮಿಗಿಲಾದದ್ದು... ನಿಮ್ಮ ಮಗಳ ಕಾಲ್ಗುಣದಿಂದ, ನನ್ನ ಮಗ ಸಂಸಾರಸ್ಥನಾಗಿ ಜವಾಬ್ದಾರಿಯಿಂದ ಜೀವನ ಸಾಗಿಸಿದರೆ ಅಷ್ಟು ಸಾಕು ಆಮೇಲೆ ಎಲ್ಲಾ ತಾನಾಗಿಯೇ ಸರಿಹೋಗುತ್ತದೆ.''

''ನೀವೇ ಇಷ್ಟು ಹೇಳಿದ ಮೇಲೆ, ನಾನೇಕೆ ಬೇಡ ಅನ್ನಲಿ... ಆದರೆ ದುಡುಕಬೇಡಿ. ಮತ್ತೊಮ್ಮೆ ಯೋಚಿಸಿ. ನನ್ನ ಮಗಳು ನನಗೆ ಭಾರವಲ್ಲ. ಹೇಗೋ ನಡೆಯುತ್ತೆ. ಆದರೆ ಅವಳನ್ನು ಯಾರಾದರೂ ದೂಷಿಸಿದರೆ ಮಾತ್ರ

ನಾನು ಸಹಿಸೋಲ್ಲ.''

''ನಾನು ಖಂಡಿತಾ ದೂಷಿಸೋಲ್ಲ. ಪ್ರಮಾಣ ಮಾಡಿ ಹೇಳ್ತೀನಿ. ನಿಮ್ಮ ಮಗಳು ದೇವಿ ಇದ್ದ ಹಾಗಿದಾಳೆ. ಅವಳನ್ನು ದೂಷಿಸಿ ನಾನು ಯಾವ ನರಕಕ್ಕೆ ಹೋಗ್ಲಲಿ?''

''ಹಾಗಲ್ಲ... ಮೂಲಾ ನಕ್ಷತ್ರದಲ್ಲಿ ಹುಟ್ಟಿದ ಹುಡಿಗಿಗೆ ಮಾವನಿಲ್ಲದ ಮನೆ ಹುಡುಕಬೇಕು. ಹಾಗೆ ಶಾಸ್ತ್ರದಲ್ಲಿ ಬರೆದಿದೆ. ಅದನ್ನು ಮೀರುಕ್ಕೆ ಆಗುತ್ಯೆ!

ಶಾಸ್ತ್ರ ಸಂಪ್ರದಾಯ ಎಲ್ಲಾ ನಾವು ನಾವು ಮಾಡಿಕೊಂಡಿರುವುದು; ನಮಗೆ ಹೇಗೆ ಬೇಕೋ ಹಾಗೆ ನಾವು ಬದಲಾಯಿಸಿಕೊಳ್ಳುವ ಹಕ್ಕು ನಮಗಿದೆ. ಅಲ್ಲದೇ ಮೊದಲೇ ಹೇಳಿದ್ನಲ್ಲ... ನನಗೆ ಅದರಲ್ಲಿ ನಂಬಿಕೆ ಇಲ್ಲ ಅಂತ. ನಾನು ಯಾವುದೇ ಕಾರಣಕ್ಕೂ ನಿಮ್ಮ ಮಗಳ ಮನಸ್ಸನ್ನು ನೋಯಿಸುವುದಿಲ್ಲ. ಜೀವನ ದಲ್ಲಿ ನಾನು ಸಾಕಷ್ಟು ನೊಂದಿದೇನೆ... ಆ ಹಿಂಸೆ ನನಗೆ ಚೆನ್ನಾಗಿ ಗೊತ್ತು.. ಹ್ಞಾಂ ಹಾಗೇ ಒಂದು ಮಾತು... ನಿಮಗೆ ತಾನೇ ನಿಮ್ಮ ಮಗಳನ್ನು ಬಿಟ್ಟು ಬೇರೆ ಯಾರಿದಾರೆ...? ಅವಳನ್ನು ಬಿಟ್ಟು ಇರಲು ನಿಮಗೆ ಕಷ್ಟವೆನಿಸಬಹುದು... ನಿಮಗೂ ಆರೋಗ್ಯ ಚೆನ್ನಾಗಿಲ್ಲ. ವಯಸ್ಸಾಗಿದೆ. ನೀವು ತಾನೇ ಏಕೆ ಒಂಟಿಯಾಗಿರಬೇಕು? ನಿಮ್ಮ ಮಗಳ ಮನೆ, ನಿಮ್ಮ ಮನೆಯೇ.... ನೀವು ಬಂದು ನಮ್ಮ ಜೊತೆಯಲ್ಲೇ ಇರಬೇಕು... ಅದು ನನ್ನ ಅಪೇಕ್ಷೆ ಎಂದು ಕೈ ಮುಗಿದು ಕೇಳಿಕೊಂಡಾಗ, ಅದು ಉತ್ಪ್ರೇಕ್ಷೆ ಎನಿಸದೇ ಇರಲಿಲ್ಲ ಆತನಿಗೆ. ಆದರೆ ತಮ್ಮ ಮನೆಯ ಸಮಸ್ಯೆಗಳೇ ಅನೇಕವಿರುವಾಗ, ಬೃಂದನಿಗೆ ಒಂದು ನೆಲೆ ಸಿಕ್ಕಂತಾಗುತ್ತದೆ... ನಾನೇನು ಶಾಶ್ವತವಾಗಿ ಅವಳ ಜೊತೆ ಇರುವುದಿಲ್ಲ. ಮದುವೆಯಾಗುವ ಯೋಗ ತಾನಾಗಿಯೇ ಕೂಡಿಬರುತ್ತಿರುವಾಗ ಅದನ್ನು ತಪ್ಪಿಸಲು ತಾನೇನು ಮೂರ್ಖನೇ ಎಂದುಕೊಂಡರೂ,

''ಆಗಲಿ, ನೀವು ಇಷ್ಟು ಹೇಳಿದ ಮೇಲೆ, ನಾನು ಒಪ್ಪದೇ ಇರುವುದು ಅಸಾಧ್ಯ. ಆದರೂ ಬೃಂದನ್ನ ಒಂದು ಮಾತು ಕೇಳ್ತೀನಿ. ಅವಳೂ ಒಪ್ಪಿದರೆ, ಮಾತ್ರ... ನಾನು ಬಲವಂತದಿಂದ ಅವಳನ್ನು ಒಪ್ಪಿಸುವುದಿಲ್ಲ.''

''ಸರಿ. ನಿಮ್ಮಿಷ್ಟ. ನಾನೂ ಬಲವಂತ ಮಾಡುವುದಿಲ್ಲ. ಆದರೆ ನಮ್ಮ ದೇವಿ ನನಗೆ ನಿರಾಸೆ ಮಾಡುವುದಿಲ್ಲವೆಂಬ ನಂಬಿಕೆ ನನಗಿದೆ.'' ಎಂದು

ಮುಖ್ಯವಾಗಿ ಆಡಬೇಕಾಗಿದ್ದ ಮಾತನ್ನು ಮುಗಿಸಿ, ಲೋಕಾಭಿರಾಮವಾಗಿ ಬೇರೆ ಮಾತುಗಳನ್ನಾಡಿದಳು.

ಕೋಮಲ ಬೃಂದಾ ವಾಪಸ್ಸು ಬಂದನಂತರ, ಮತ್ತೆ ತನ್ನ ಊರಿಗೆ ಹೊರಟಳು. ''ಊಟ ಮಾಡಿಕೊಂಡು ಹೋಗಬಹುದಲ್ಲ'' ಎಂದು ಬೃಂದಾ ನುಡಿದಾಗ, ''ಬೇಡಮ್ಮ ಹೊತ್ತಾಗಿ ಹೋಗುತ್ತೆ... ಕಲ್ಯಾಣಿ ಒಬ್ಬಳೇ ಇಧಾಳೆ... ನೀನೇ ನಾಳೆ ನಾಡಿದ್ದರಲ್ಲಿ ನಿಮ್ಮ ಚಿಕ್ಕಪ್ಪನೊಂದಿಗೆ ನಮ್ಮ ಮನೆಗೆ ಬಾ...'' ಎಂದು ಹೇಳಿ ಗಾಡಿ ಹತ್ತಿದಳು.

ಆ ಹಳ್ಳಿಯ ಆಸು ಪಾಸುಗಳೆಲ್ಲ ಕುಗ್ರಾಮವೇನಲ್ಲ. ವಿದ್ಯುಚ್ಛಕ್ತಿಯ ಸೌಲಭ್ಯವಿದೆ. ಹೆದ್ದಾರಿಯವರೆಗೆ ನಡೆದರೆ, ಆಗೊಮ್ಮೆ ಈಗೊಮ್ಮೆ ಬರುವ ಬಸ್ಸಿನ ಸೌಕರ್ಯವಿದೆ. ಆದರೂ ಅಲ್ಲಿ ವಾಸಿಸುವವರೆಲ್ಲಾ ತೋಟಗಾರರು, ಜಮೀನುದಾರರೂ ಆಗಿರುವುದರಿಂದ, ಎಲ್ಲರ ಮನೆಯಲ್ಲೂ ಎತ್ತಿನ ಗಾಡಿಗಳು ಇದ್ದೇ ಇವೆ. ಕೆಲವರು ಬೈಸಿಕಲ್ ಇಟ್ಟುಕೊಂಡಿದಾರೆ. ಈಚೆಗೆ ಅನುಕೂಲವಿರುವವರು, ಸೆಕೆಂಡ್ ಹ್ಯಾಂಡ್‌ನಲ್ಲಿ ಮೋಟಾರ್ ಬೈಕ್ ಸಹ ಕೊಂಡುಕೊಂಡಿದಾರೆ.

ನಾರಾಯಣಮೂರ್ತಿಯ ಮನೆಯಲ್ಲಿ ಎರಡು ಸೈಕಲ್‌ಗಳಿದ್ದವು. ಒಂದು ಸೈಕಲ್ಲನ್ನು ಶಾರದ ಮನೆಯವರಿಗೆ ತಿಳಿಯದಂತೆ ಮಾರಿ, ಸಿಕ್ಕ ಹಣವನ್ನು ಮಗನ ಕೈಗೆ ತುರುಕಿದ್ದಳು. ಇನ್ನೊಂದು ಸೈಕಲ್ಲನ್ನು ಒಂದೆರಡು ದಿನ ಉಪಯೋಗಿಸಿದ ಶಾಸ್ತ್ರ ಮಾಡಿದ ಕೃಷ್ಣ ತಾನೇ ಮಾರಿ, ಹಣವನ್ನು ಉಡಾಯಿಸಿದ್ದ. ತನಗೂ ಬೈಕು ಕೊಡಿಸು ಎಂದು ತಾಯಿಯನ್ನು ಪೀಡಿಸಿದ್ದ. ಆದರೆ ಅವಳು ಒಪ್ಪಿರಲಿಲ್ಲ.

''ಅದಕ್ಕೆ ಅಂತ ಐದಾರು ಸಾವಿರ ನಾನೆಲ್ಲಿಂದ ತರಲಿ! ನಿಮ್ಮಪ್ಪನ್ನ ಕೇಳಿದರೆ ನನ್ನನ್ನ ಕೊಂದೇ ಹಾಕಿಬಿಡ್ತಾರೆ ಅಷ್ಟೇ... ನೀನೇ ಕಷ್ಟ ಪಟ್ಟು ದುಡಿದು, ನಿನ್ನ ಹಣದಲ್ಲಿ ಬೈಕಲ್ಲ... ಕಾರನ್ನು ತಗೊಂಡು ಓಡಿಸು. ಅದು ಬಿಟ್ಟು ಸದಾ ನನ್ನನ್ನೇ ಪೀಡಿಸ್ತೀಯಲ್ಲ ನಾನೆಲ್ಲಿಂದ ಹಣ ತರಲಿ?''

''ತಾಯಿ ಹತ್ತಿರ ಅಷ್ಟು ಹಣ ಇಲ್ಲವೆನ್ನುವುದನ್ನು ಕೃಷ್ಣ ಬಲ್ಲ. ತಂದೆಯನ್ನು ಅವನು ಕೇಳಲಾರ. ಮನೆಯ ಯಾವ ಸಾಮಾನೂ ಐದಾರು ಸಾವಿರ

ರೂ ಬೆಲೆ ಬಾಳುವುದಿಲ್ಲ. ಅಲ್ಲದೇ ಅವನಿಗೆ ಅಷ್ಟೊಂದು ಹಣವನ್ನು ಸಾಲವನ್ನಾಗಿ ಕೊಡುವ ಸ್ನೇಹಿತರ್‍ಯಾರಿಲ್ಲ. ಆನಂತರ ಸ್ನೇಹಿತರು ಬೆದರಿಕೆ ಹಾಕಿದ್ದಾರೆಂದು ಹೇಳಿ ತಾಯಿಯ ಒಡವೆಗಳನ್ನು ತೆಗೆದುಕೊಂಡು ಹೋಗಿ, ಪೋಲಿಸರ ಕೈಗೆ ಸಿಕ್ಕಿಬಿದ್ದು, ಒದೆತ ತಿಂದು ಬಂದುದನ್ನು ಅವನು ಮರೆಯಲಾರ. ತಾಯಿಯ ಒಡವೆಗಳು ಈಗ ಮನೆಯಲ್ಲೇ ಇದೆ. ಈಗ ತಾಯಿಯೇ ಅದನ್ನು ಮಾರಿ, ತನಗೆ ಹಣ ಕೊಟ್ಟರೆ ತನ್ನ ಖರ್ಚಿಗಾಗುತ್ತದೆಂದು ಬಗೆದ. ತಾಯಿ ವಾಪಸ್ಸಾಗುವುದನ್ನೇ ಕಾಯುತ್ತಾ ಕುಳಿತ.

ಮಗ ಮನೆಯಲ್ಲೇ ಇರುವುದನ್ನು ಕಂಡು ಅವಳ ಮನಸ್ಸು ಅರಳಿತು. ಇದು ಪಂಡಿತರ ತಾಯಿತನ ಪ್ರಭಾವ! ಅದು ಅವನನ್ನು ಮನೆಯ ಕಡೆ ಆಕರ್ಷಿಸುತ್ತಿದೆ ಎಂದುಕೊಂಡು, ಜಾತ್ರೆಯಿಂದ ತಂದಿದ್ದ ಬೆಂಡು, ಒತ್ತಾಸು, ಪುರಿ, ಹುರಿಗಡಲೆಗಳನ್ನು ಅವನ ಕೈಗೆ ಹಾಕಿದಳು.

''ನೋಡಿದ್ಯಾ, ಊರದೇವತೆಯ ಜಾತ್ರೆಗೆ ಹೋಗಿದ್ದೆ. ಮನೆಗೇ ಬರದಿದ್ದವನು, ಇದರ ಆಸೆಗೆ ಬಂದು ಕಾಯುತ್ತಾ ಕೂತಿದೀಯ''

''ಏನಿಲ್ಲ... ನಾನು ಇದಕ್ಕೆ ಅಂತ ಬರಲಿಲ್ಲ.''

''ಚಿಕ್ಕ ಹುಡುಗನಾಗಿದ್ದಾಗ, ನಿನ್ನನ್ನ ಸೊಂಟಕ್ಕೆ ಎತ್ತಿಕೊಂಡು ಜಾತ್ರೆಯಲ್ಲಿ ತಿರುಗಾಡಿದ್ದೆ. ಅದು ಬೇಕು, ಇದುಬೇಕು ಅಂತ ನೀನು ಹಠ ಮಾಡಿದ್ದೇ ಮಾಡಿದ್ದು. ಬೆಲೂನು, ಕನ್ನಡಕ, ಟಕಟಕ ಅನ್ನೋ ಗಾಡಿ... ಒಂದೇ ಎರಡೇ...''

''ಸಾಕು, ಸಾಕು ನನಗೆ ಆ ಹಳೇ ಕತೆಯೆಲ್ಲಾ ಬೇಕಿಲ್ಲ. ಈಗ ನನಗೆ ಮೋಟಾರ್ ಬೈಕ್ ಬೇಕು ಕೊಡಿಸು...''

''ಅಯ್ಯೋ ಶಿವನೇ, ನನಗೆ ನಾನೆಲ್ಲಿಂದ ತರಲೋ ಅಷ್ಟು ಹಣಾನ... ಅಲ್ಲದೇ ನೀನೆಲ್ಲಿಗೆ ತಿರುಗಬೇಕು... ನಿನಗೇಕೆ ಬೈಕು...?''

'ಠಅದೆಲ್ಲಾ ನಿನಗೇಕೆ? ನನಗೇ ಅಂತ ಏನು ಕೊಡಿಸಿದೀರಿ ನೀವು. ಬರೀ ಹೆತ್ತು ಬಿಟ್ಟರೆ ಸಾಕಾ? ನಾನೂ ಎಲ್ಲರ ಹಾಗೆ ಇರಬೇಕಂತ ಆಸೆ ಆಗುಲ್ವಾ? ನಿನ್ನ ಒಡವೆಗಳನ್ನು ಕೊಡು... ಅದನ್ನು ಮಾರಿ, ಸೆಕೆಂಡ್ ಹ್ಯಾಂಡ್ ಬೈಕು ತಗೋತೀನಿ.''

ಶಾರದಂಗೆ ಅಳು ಬರುವಂತಾಯಿತು. ಮಗನಿಗೆ ಮದುವೆ ಮಾಡುವ ಆಸೆ ಇಟ್ಟುಕೊಂಡು ಬಂದವಳು... ಮದುವೆಯಲ್ಲಿ ತೊಡಲು, ತನ್ನ ಹತ್ತಿರ ಒಡವೆಗಳೇ ಇಲ್ಲದಿದ್ದರೇ... ಅಥತಲ್ಲೇ ಸೊಸೆಗೂ ಒಂದೆರಡು ಒಡವೆಗಳನ್ನು ಇಡುವ ಆಸೆ... ಯೋಚಿಸಿ ನುಡಿದಳು.

''ಅವತ್ತೂ ಪೋಲಿಸರ ಕೈನಿಂದ ಬಿಡಿಸಿಕೊಂಡು ಬಂದಮೇಲೆ, ಅದು ನಿಮ್ಮ ಅಪ್ಪನ ಹತ್ತಿರವೇ ಇತ್ತು... ಅದೇ ದಿನ ನಿಮ್ಮ ತಾತ ಸತ್ತರು... ಆಮೇಲೆ ಒಂದಾದ ಮೇಲೊಂದು ಖರ್ಚು... ಅದೇನು ಇಟ್ಟುಕೊಂಡಿದಾರೋ ಮಾರೇ ಬಿಟ್ಟಿದಾರೋ ನನಗೆ ತಿಳಿಯದಲ್ಲ. ನಾನು ಕೇಳ್ಲೇ ಇಲ್ಲ...''

''ನಿನ್ನ ಒಡವೆಗಳನ್ನು ಮಾರೋಕೆ ಅವರ್ಯಾರು...?''

''ಹಾಗೆಲ್ಲ ಅನ್ನಬೇಡ. ಅವರು ನನ್ನ ಗಂಡ. ಅಲ್ಲದೇ ಆ ಒಡವೆಗಳೆಲ್ಲ ಅವರ ತಾಯಿಯದು... ಅವರ ಅತ್ತಿಗೆಯದು. ನನಗೆ ಅಂತ ನಮ್ಮ ಅಪ್ಪನ ಮನೇಲಿ ಯಾವ ಒಡವೆಯನ್ನು ಹಾಕಿರಲಿಲ್ಲ... ಅದರಿಂದ ಅದನ್ನು ಕೇಳುವ ಹಕ್ಕೂ ಸಹ ನನಗಿಲ್ಲ...''

''ಮತ್ತೆ ನಿನ್ನ ಸೊಸೆಗೆ ಏನು ಒಡವೆ ಕೊಡ್ತೀ?'' ವ್ಯಂಗ್ಯವಾಗಿ ನುಡಿದು, ಒಳಗಿದ್ದ ಕಲ್ಯಾಣಿಯ ಕಡೆ ನೋಡಿದ.

''ಆ ಸಮಯ ಬಂದಾಗ ಮಾಡಿಸಿದರಾಯ್ತು. ಆಗ ಹೇಗೋ ಅನುಕೂಲ ಒದಗುತ್ತೆ.''

''ಒಟ್ಟಿನಲ್ಲಿ ಈ ಮನೇಲಿ, ಮೊದಲ್ನಿಂದ ನನಗೇ ಅಂತ ಯಾವುದೂ ಸುಲಭವಾಗಿ ಸಿಗಲಿಲ್ಲ. ಕಳ್ಳತನ, ಸುಳ್ಳುತನ, ಭಂಡತನದಿಂದ ವಸೂಲು ಮಾಡಿಕೊಳ್ಳಬೇಕಾಯ್ತು. ನನ್ನ ಮನೇಲಿ ನಾನೇ ಪರಕೀಯನಾಗಿ ಬೆಳೆದೆ. ಮನೇಲಿರುಕ್ಕೆ ಆಗುಲ್ಲ ಅಂತ ಹೊರಗೆ ಇರತೊಡಗಿದೆ. ಆದರೆ ಹೊರಗೆ ಇರಬೇಕಾದರೂ, ಮರ್ಯಾದೆ ಬೇಡವೆ?''

''ಅದನ್ನೇ ನಾನೂ ಹೇಳೋದು? ನೀನೇಕೆ ಹೊರಗೆ ಇರಬೇಕು? ಇದು ನಿನ್ನ ಮನೆ, ನಿನ್ನ ಆಸ್ತಿ... ನಿನ್ನದೇ ಎಲ್ಲಾ. ಒಂದೊಂದಾಗಿ ಎಲ್ಲವನ್ನೂ ನೀನೇ ವಹಿಸಿಕೊಂಡು ರಾಜನಾಗೆ ಇರು. ಆಗ ಮರ್ಯಾದೆ ತಾನೇ ತಾನಾಗಿ ಬರುತ್ತದೆ. ಆಗ ನೀನು ಯಾರಿಗೂ ಅಂಜಬೇಕಾಗಿಲ್ಲ.''

''ಹೋಗಮ್ಮ... ನನಗೆ ಅದೇ ಸರಿ... ಇಲ್ಲಿ ಬಂದು ಎಲ್ಲರನ್ನೂ ಸರಿ ಮಾಡಿಕೊಂಡು ಇರುಕ್ಕೆ ನನ್ನ ಕೈಲಿ ಆಗುಲ್ಲ.''

''ಹಾಗೆನ್ನಬೇಡ ಕಣೋ... ಬಂದು ಇರುಕ್ಕೆ ಶುರು ಮಾಡು... ಕ್ರಮೇಣ ಎಲ್ಲಾ ತಾನಾಗೇ ಸರಿ ಆಗುತ್ತೆ...''

''ಇಲ್ಲಮ್ಮ... ಈ ತೋಟ ಗೀಟದ ಕೆಲಸ ಎಲ್ಲಾ ನನ್ನ ಕೈಲಿ ಆಗುಲ್ಲ. ಅದಕ್ಕೆಲ್ಲ ಯಾರನ್ನಾದ್ರೂ ಗೊತ್ತು ಮಾಡಿಕೋ... ನನಗೆ ಮಾತ್ರ ಯಾವ ಕೆಲಸವನ್ನು ಹೇಳಬೇಡ. ಇನ್ನು ನಾನು ಇಲ್ಲೇ ಇದ್ದರೆ ನನ್ನ ತಲೆ ಕೆಡಿಸ್ತೀಯ ಅಷ್ಟೇ...'' ಎನ್ನುತ್ತಾ ಹೊರಟೇಹೋದ. ಶಾರದಾ ತಲೆ ತಲೆ ಚಚ್ಚಿಕೊಂಡಳು. ಈ ಪ್ರಾರಬ್ಧಕ್ಕೆ ಯಾವ ಜನ್ಮದಲ್ಲಿ ಬುದ್ಧಿ ಬರುತ್ತೋ ಎಂದು ಬೈದುಕೊಂಡಳು.

ಕಲ್ಯಾಣಿ ತಂಗಿಯೊಡನೆ, ಜಾತ್ರೆಯ ವಿಶೇಷಗಳನ್ನು ಕೇಳಿತಿಳಿದುಕೊಳ್ಳುತಿದ್ದಳು.

''ಕಲ್ಯಾಣಿ ನೀನಾದರೂ ಅವನಿಗೆ ಸ್ವಲ್ಪ ತಿಳುವಳಿಕೆ ಹೇಳುವವರೆಗೂ ಹೇಗೋ ಆಯಿತು. ಈಗ ನಿಮ್ಮ ಅಪ್ಪನೂ ಇಲ್ಲ. ಇವರೂ ಏಳುವ ಹಾಗಿಲ್ಲ. ನನಗಂತೂ ಆತಂಕವಾಗಿದೆ... ಅಲ್ಲದೇ ನಾನು ಇವತ್ತೂ ಬೃಂದಳ ಚಿಕ್ಕಪ್ಪನ ಹತ್ತಿರ ಮಾತನಾಡಿದೀನಿ... ಅವರು ಬೃಂದನ್ನ ನಮ್ಮ ಕೃಷ್ಣಂಗೆ ಕೊಡುಕ್ಕೆ ಒಪ್ಪಿಕೊಂಡಿದಾರೆ...'' ಕಲ್ಯಾಣಿಯ ಮುಖದ ಬಣ್ಣವೇ ಕೆಟ್ಟುಹೋಯಿತು. ಕೃಷ್ಣನಿಗೆ ಮದುವೆ ಎಂದಲ್ಲ. ಕೇಳಿ ಕಂಡರಿಯದ ಹುಡುಗಿಯ ಬಾಳು ಹಾಳಾಗುತ್ತಲ್ಲ ಅಂತ... ಆದರೆ ಮರುಕ್ಷಣವೇ ಅನಿಸಿತು. ಅವನಿಗೆ ಮದುವೆಯಾದರೆ, ಅವನು ತನ್ನ ತಂಟೆಗೇ ಬರುವುದಿಲ್ಲ, ನೆಮ್ಮದಿಯಿಂದ ಉಸಿರಾಡಬಹುದು ಅಂತೆನಿಸಿತು. ಆದರೂ ಬೃಂದಳ ಬಗ್ಗೆ ಮರುಕವುಂಟಾಯಿತು. ಆದರೆ ಕೃಷ್ಣನ್ನ ತಾನೇಕೆ ಒಪ್ಪಿಸಬೇಕು? ಅವನಾಗಿಯೇ ಒಪ್ಪಿ ಮದುವೆಯಾದರೆ ತನಗೆ ಒಳ್ಳೆಯದೇ. ಆದರೆ ತಾನಾಗಿಯೇ ಅವನ ಮದುವೆ ಮಾತನ್ನಾಡುವುದಿಲ್ಲ ಎಂದು ನಿರ್ಧರಿಸಿದಳು.

''ಯಾಕೆ ಕಲ್ಯಾಣಿ, ಮಾತನ್ನೇ ಆಡ್ತಿಲ್ಲ. ನಿನ್ನ ಮದುವೆ ಆದಮೇಲೆ ಅವನ ಮದುವೆ... ನೀನು ಅಸಮಾಧಾನ ಪಟ್ಟುಕೋ ಬೇಡ.''

''ಇಲ್ಲ ಚಿಕ್ಕಮ್ಮ ನಾನು ಮದುವೇನೇ ಮಾಡಿಕೋ ಬಾರದು ಅಂತ

ನಿರ್ಧರಿಸಿದೀನಿ.''

''ಯಾಕೇ ಮಹಾತಾಯಿ? ನಮಗೆ ಅಪವಾದ ಬರಲಿ ಅಂತಲೇನೆ?''

''ನಿಮಗೆ ಅಪವಾದ ಬರದೆ ಹಾಗೆ ನಾನು ನೋಡಿಕೊಳ್ತೀನಿ... ಯಾಕೋ ಈ ಘಟನೆಗಳನ್ನೆಲ್ಲಾ ನನ್ನಿಂದ ಮರೆಯೋಕೇ ಆಗ್ತಿಲ್ಲ. ಎಲ್ಲಾ ಅನಾಹುತಕ್ಕೂ ನಾನೇ ಕಾರಣ ಅಂತನ್ನಿಸ್ತಿದೆ.''

''ಚೆನ್ನಾಯ್ತು. ನೀನೇಕೆ ಕಾರಣ ಆಗ್ತೀಯ! ಅದನ್ನೆಲ್ಲ ಬಿಡು. ನಾನು ನಾಳೇನೇ ಪಂಡಿತರ ಮನೆಗೆ ಹೋಗ್ತೀನಿ. ಯಾವುದಾದರೂ ಒಳ್ಳೆಯವರನ್ನ ಗೊತ್ತು ಮಾಡಿಕೊಡಿ ಅಂತ ಹೇಳಿದ್ದೆ.''

ಚಿಕ್ಕಮ್ಮನೊಡನೆ ಮತ್ತೆ ಮತ್ತೆ ಅದೇ ವಾದ ಮುಂದುವರೆಸಲು ಇಷ್ಟವಾಗದೇ ಸುಮ್ಮನಾದಳು.

ಎಲ್ಲೆಲ್ಲಿಯೋ ತಿರುಗಾಡಿಕೊಂಡು ಮನೆಗೆ ಬಂದ ಕೃಷ್ಣ ಕೊರಡಿನಂತೆ ಬಿದ್ದುಕೊಂಡ, ಮೈಮೇಲೆ ಜ್ಞಾನವಿಲ್ಲದಷ್ಟು ಜ್ವರ. ಶಾರದಾ ಹೆದರಿ ಕಂಗಾಲಾದಳು. ಮನೆದೇವರಿಗೆ ಹರಕೆ ಕಟ್ಟಿಟ್ಟಳು. ಆ ರಾತ್ರಿ ಕಳೆಯಿತು. ಬೆಳಗ್ಗೆ ಕಣ್ಣು ಬಿಟ್ಟ... ಹಿಂದಿನ ದಿನ ತನಗೇನಾಯಿತೆಂದು ನೆನೆಸಿಕೊಂಡ. ಒಂದು ವಾರದ ಕೆಳಗೆ ಅವನ ಸ್ನೇಹಿತರಬ್ಬರು, ಒಂದು ಕಡೆ ಕಳ್ಳತನ ಮಾಡಲು ಹೋಗಿ ಸಿಕ್ಕಿಬಿದ್ದಿದ್ದರು. ಆ ಮನೆಯವರು ಚೆನ್ನಾಗಿ ಒದ್ದು ಕಳಿಸಿದ್ದರು. ಆದರೂ ಯಾರಾದರೂ ತಮ್ಮನ್ನು ಹಿಂಬಾಲಿಸುತ್ತಿದಾರೆಯೇ ಎಂಬ ಅನುಮಾನದ ಭಯದಲ್ಲೇ ಇದ್ದರು. ಅಂತೆಯೇ ಯಾರೋ ಅಪರಿಚಿತರು ಎದುರಾಗಿ, ಈ ಆಸುಪಾಸಿನ ಊರುಗಳಲ್ಲಿ ಕಳ್ಳತನ ನಡೆಯುತ್ತಿದೆ ಎಂದು ಜನ ಆಡಿಕೊಳ್ಳುತ್ತಾರೆ... ನಿಜವೋ ಸುಳ್ಳೋ ಅಂತ ವೀಕ್ಷಿಸಲು ನಾನು ಬಂದಿದೀನಿ. ನನಗೆ ಇಲ್ಲಿ ಇಳಿದುಕೊಳ್ಳಲು ಸರಿಯಾದ ಸ್ಥಳ ಎಲ್ಲಿಯಾದರೂ ಸಿಕ್ಕುತ್ತಾ... ಎಂದು ಅವರುಗಳನ್ನೇ ವಿಚಾರಿಸಿದಾಗ ಅವರುಗಳು ಹೆದರಿದರು.

''ನಾವು ಈ ಊರಿನವರಲ್ಲ. ಬೇರೆ ಊರಿನಿಂದ ಬಂದಿದೀನಿ ನಮಗೇನೂ ವಿಷಯ ತಿಳಿಯದು ಬೇರೆ ಯಾರನ್ನಾದರೂ ವಿಚಾರಿಸಿ'' ಎಂದು ಒಬ್ಬ ನುಡಿದು ತನ್ನ ಪಾಡಿಗೆ ತಾನು ಹೊರಟ. ಅವನನ್ನು ಉಳಿದವರು ಹಿಂಬಾಲಿಸಿದರು. ಆದರೂ ಕೃಷ್ಣನ ಕೈಕಾಲು ನಡುಗತೊಡಗಿತ್ತು.

ಈ ವ್ಯಕ್ತಿ ಯಾರೋ ಏನೋ... ಸಿ.ಐ.ಡಿ. ಆಗಿದ್ದು ಈ ಊರಿನೊಳಗೆ ಸೇರಿಕೊಂಡರೆ ತಮಗೆಲ್ಲಾ ಬಂಧನವೇ... ವಿಚಾರಣೆ ಎಲ್ಲಿಂದೆಲ್ಲಿಗೋ ಹೋಗಿ ಶಿವರಾಮಯ್ಯ, ಅವನ ಹೆಂಡತಿ ಸಾಯಲು ತಾನೇ ಕಾರಣ ಎಂದು ತಿಳಿದರೆ, ತಾನು ಜೀವಮಾನ ಪರ್ಯಂತ ಜೈಲಿನ ಕಂಬಿ ಎಣಿಸುವ ಗತಿ ಬರುತ್ತದೆ ಎನಿಸಿದೊಡನೆಯೇ, ಸತ್ತೆನೋ ಕೆಟ್ಟೆನೋ ಎಂದು ಅಲ್ಲಿ ಇಲ್ಲಿ ತಿರುಗಾಡಿ ಮನೆ ಸೇರಿಕೊಂಡಿದ್ದ.

''ರಾತ್ರಿಯೆಲ್ಲಾ ಜ್ವರದ ತಾಪದಲ್ಲಿ ನರಳುತ್ತಾ ಏನೇನೋ ಕನವರಿಸುತ್ತಿದ್ದೆಯಲ್ಲೋ ಕೃಷ್ಣಾ'' ತಾಯಿ ಕೇಳಿದಾಗ ಮುಖ ತಿರುಗಿಸಿದ.

''ಏನೋಪ್ಪ ನಿನ್ನ ವರ್ತನೆಯೇ ನನಗೆ ಅರ್ಥವಾಗುಲ್ಲ... ಇನ್ನು ಚಿಕ್ಕವನು, ಸುಧಾರಿಸಿಕೊಳ್ಳುವುದನ್ನು ಬಿಟ್ಟು...''

ತಾಯಿಯ ಕಡೆ ಬಿರಿಗಣ್ಣು ಮಾಡಿ ನೋಡಿದ. ''ನೋಡು, ನನಗೀಗ ಜ್ವರ ಏನಿಲ್ಲ. ರಾತ್ರಿಯೂ ಜ್ವರವಿತ್ತೋ ಇಲ್ಲವೋ ಗೊತ್ತಿಲ್ಲ. ನೀನು ಹೀಗೇ ಏನೇನೋ ಮಾತನ್ನಾಡುತ್ತಿದ್ದರೆ ಈಗಲೇ ಎದ್ದು ಹೊರಟುಹೋಗ್ತೀನಿ. ಮತ್ತೆಂದೂ ಈ ಮನೆ ಕಡೆ ತಲೆ ಹಾಕಿ ಸಹ ಮಲಗುವುದಿಲ್ಲ.''

''ಥೂ ಹಾಗೆಲ್ಲಾ ಮಾತನಾಡಬೇಡ. ಮಗನ ಹತ್ತಿರ ಇಷ್ಟು ಮಾತನಾಡುವ ಹಕ್ಕೂ ತಾಯಿಗಿಲ್ಲವೇ? ನಾನು ನಿನಗೆ ಹೇಳೋದೆಲ್ಲಾ ನಿನ್ನ ಒಳ್ಳೇದಕ್ಕೇ... ನೀನು ಮನೇಲಿ ಆರಾಮವಾಗಿರು. ನಾನು ನಿನಗೆ ಏನೂ ಕೊರತೆಯಾಗದಂತೆ ನೋಡಿಕೊಳ್ತೀನಿ.''

''ಕಲ್ಯಾಣಿ ಇದ್ದರೆ, ಅವಳನ್ನು ಕಳಿಸು... ನಾನು ಅವಳ ಹತ್ತಿರ ಮಾತನಾಡಬೇಕು.''

''ಏನು ವಿಷಯ? ಎಂದು ಕೇಳಲಿದ್ದವಳು, ಮಗನ ಕಡೆ ನೋಡಿ ಪ್ರಶ್ನಿಸದೇ ಸುಮ್ಮನಾದಳು... ಹೊರಬಂದು ಕಲ್ಯಾಣಿಗೆ ಕೂಗು ಹಾಕಿದಳು.

''ಚಿಕ್ಕಮ್ಮ ನೀವು ಬನ್ನಿ ನನ್ನ ಜತೆಯಲ್ಲಿ, ನನಗೆ ಅವನೊಡನೆ ಮಾತನಾಡಲು ಹೆದರಿಕೆ...'' ಕೃಷ್ಣ ತಾಯಿ ಒಳಗೆ ಬರದೇ ಹೊರಬಾಗಿಲಿನಲ್ಲೇ ನಿಂತುದನ್ನು ಗಮನಿಸಿದ. ಕಲ್ಯಾಣಿ ಅವನ ಕಡೆತಿರುಗದೇ

''ಏನು ಬೇಕಾಗಿತ್ತು?'' ಚುಟುರಾಗಿ ಕೇಳಿದಳು.

''ಏಯ್ ಕಲ್ಯಾಣಿ... ನಾನೇನು ಹೊಸಬನಾ ನಿನಗೆ? ಈ ಕಡೆ ತಿರುಗು...'' ಎಂದು ನುಡಿದರೂ ಅವಳು ತಿರುಗಲಿಲ್ಲ.

''ಅದೇನು ಹೇಳಬೇಕೋ ಅದನ್ನು ಬೇಗ ಹೇಳಿ ಮುಗಿಸು. ನಾನು ಪೇಟೆಗೆ ಹೋಗಬೇಕು. ಹೊತ್ತಾಗುತ್ತೆ.''

''ಸರಿ. ಹಾಗೇ ವಾಪಸ್ಸು ಬರುವಾಗ ತೋಟದ ಮನೆಗೆ ಹೋಗು... ಯಾರಾದರೂ ನನ್ನನ್ನು ವಿಚಾರಿಸಿಕೊಂಡು ಬಂದರೆ, ಯಾರಿಗೂ ನಾನು ಇಲ್ಲಿ ಇರುವ ವಿಷಯ ಹೇಳಬೇಡ... ನನಗೆ ಅವರುಗಳ ಸಹವಾಸ ಸಾಕಾಗಿ ಹೋಗಿದೆ. ಒಂದಿಷ್ಟು ದಿನ ಅವರುಗಳಿಂದ ದೂರ ಇರ್ತೀನಿ. ಹಾಗೇ ಬರುವಾಗ, ನನಗೆ ಒಂದಿಷ್ಟು ಸಿಗರೇಟು ಪ್ಯಾಕ್ಸ್, ನನ್ನ ಔಷಧಿ ಬಾಟ್ಲು ಎಲ್ಲಾ ತಗೊಂಡು ಬಾ. ಅಮ್ಮನ ಹತ್ತಿರ ಹಣ ಇಸ್ಕೋ...''

ಕಲ್ಯಾಣಿ ಏನನ್ನು ಆಡದೇ ಹೊರಗೆ ಬಂದಳು. ಹೊರಬಾಗಿಲಿನಲ್ಲಿ ನಿಂತಿದ್ದ ಚಿಕ್ಕಮ್ಮ ಎದುರಾದಳು. ಮಗ ಈ ಹೆಣ್ಣು ಹುಡುಗಿಯ ಹತ್ತಿರ ಸಿಗರೇಟು, ಹೆಂಡ ತರಿಸಲು ಹೇಳುತ್ತಾನೆಂದು ಅವಳು ಭಾವಿಸಿರಲಿಲ್ಲ. ಕಲ್ಯಾಣಿಯ ಎದುರು ತಲೆ ತಗ್ಗಿಸುವಂತಾಯಿತು. ಇದರ ಬದಲು ಮಗ ಇದನ್ನೆಲ್ಲಾ ಹೊರಗೆ ಪೂರೈಸಿಕೊಂಡರೆ ಒಳ್ಳೆಯದು ಅಂತ ಸಹ ಅನ್ನಿಸದೇ ಇರಲಿಲ್ಲ.

ಕಲ್ಯಾಣಿಯ ಕೈಗೆ ಒಂದಿಷ್ಟು ನೋಟುಗಳನ್ನು ತುರುಕಿ ನುಡಿದಳು.

''ನನ್ನ ಮಗ ಹೀಗ್ತಾನೆ ಅಂತ ನಾನು ಭಾವಿಸಿರಲಿಲ್ಲ. ಅದಕ್ಕೆ ನಾವೆಲ್ಲರೂ ಹೊಣೆಗಾರರೇ. ಈಗ ಅವನು ಸಿಟ್ಟು ಮಾಡಿಕೊಂಡು ಹರಟುಹೋದರೆ ಮತ್ತೆ ಬರ್ತಾನೋ ಇಲ್ಲವೋ ಅಂತ ಗಾಭರಿ ಆಗುತ್ತೆ. ಇದನ್ನೆಲ್ಲಾ ನೀನು ಮಾಡಬೇಕಾಗಿಲ್ಲ. ತೋಟದ ಆಳು ಒಬ್ಬನ ಕೈಲಿ ಇಲ್ಲಿಗೆ ಕಳಿಸು. ಇದನ್ನೆಲ್ಲಾ ಹೆಂಗಸರು ಯಾರಾದ್ರೂ ಮಾಡ್ತಾರಾ?'' ಚಿಕ್ಕಮ್ಮನ ಕಡೆ ವ್ಯಥೆಯಿಂದ ನೋಡಿದಳು.

ಕೆಲಸಕ್ಕೆ ಅರ್ಜಿಹಾಕಲು ಅವಳು ಪೇಟೆಗೆ ಹೋಗಬೇಕಾಗಿತ್ತು. ಬೆಳಗ್ಗೆ ಏಳುತ್ತಿದ್ದಂತೆಯೇ ಮನಸ್ಸು ಕೆಟ್ಟುಹೋಯಿತು. ಕೋಮಲ ಕಾಲೇಜಿಗೆ ಹೋದ ನಂತರ ತೋಟದ ಮನೆಗೆ ಬಂದಳು. ದಾರಿಯಲ್ಲಿ ಸಿಕ್ಕಿ ಒಬ್ಬ ಆಳಿನ ಕೈಗೆ

ಹಣವನ್ನು ಕೊಟ್ಟು ಸಿಗರೇಟನ್ನು, ಹೆಂಡವನ್ನು ತೆಗೆದುಕೊಂಡು ಮನೆಗೆ ಹೋಗಿ ಕೊಡುವಂತೆ ಹೇಳಿದಾಗ ಅವನು ಕಣ್ಣು ಕಣ್ಣು ಬಿಟ್ಟ... ಕಲ್ಯಾಣಿ ನಗುವನ್ನು ತುಟಿಯ ಅಂಚಿಗೆ ಬರಿಸಿಕೊಂಡಳು.

''ಇದೆಲ್ಲಾ ನಿಮ್ಮ ಚಿಕ್ಕ ಯಜಮಾನರಿಗೆ. ಅವರಿಗೆ ಈ ಅಭ್ಯಾಸವಿದೆ ಅಂತ ನಿಮಗೆಲ್ಲಾ ಗೊತ್ತಿದೆ ಅಲ್ವಾ?''

''ಆದರೂ ಮನೆಯಲ್ಲಿ...''

''ಏನ್ಮಾಡ್ತಾನೆ? ಹೊರಗೆ ಸ್ನೇಹಿತರು ಕೈ ಕೊಟ್ಟರು ಅಂತ ಕಾಣುತ್ತೆ... ಈಗ ಮನೆಯೇ ಗತಿ. ಆದರೆ ಈ ದುರಾಭ್ಯಾಸಗಳನ್ನೆಲ್ಲಾ ಅಂಟಿಸಿಕೊಂಡ ಮೇಲೆ ಬಿಡೋದು ಕಷ್ಟ ಅಲ್ವಾ?...''

''ಅದೆಲ್ಲಾ ನಿಮ್ಮಂಥೋರಿಗೇ ಗೊತ್ತು... ಇನ್ನು ಮುಂದೆ ಈ ಕೆಲಸ ನಿನ್ನದು. ಅವನು ಕೇಳಿದಾಗ ತಂದುಕೊಡಬೇಕು. ಆದರೆ ಬೇರೆ ಯಾರಿಗೂ ತಿಳಿಸಬೇಡ. ಸುಮ್ಮನೇ ನಗೆಪಾಟಲಾಗುತ್ತೆ.''

''ಅಯ್ಯೋ ಬಿಡ್ರವ್ವಾ... ಒಬ್ಬರ ವಿಷಯ ಒಬ್ಬರು ಆಡಿಕೊಂಡು ನಗೋಕೆ ಟೇಮೆಲ್ಲಿದೆ?... ನಮ್ಮ ತಾಪತ್ರಯಗಳೇ ನಮಗೆ ಸಾಕಷ್ಟು ಇರುತ್ತವೆ... ಅಂದ್ಹಂಗೆ ಕಲ್ಯಾಣಮ್ಮ... ನಾನೊಂದು ಮಾತು ಹೇಳ್ತೀನಿ. ಬೇಸರಿಸಬೇಡಿ... ನೀವ್ಯಾಕೆ ಲಗ್ನವಾಗಿಲ್ಲ ಇನ್ನೂ?''

ಕಲ್ಯಾಣಿ ಬೆವೆತು ಹೋದಳು.

ನಿನಗ್ಯಾಕೆ ಅದೆಲ್ಲಾ ಎಂದು ರೇಗುವ ಮನಸ್ಸಾದರೂ ತಡೆದುಕೊಂಡಳು.

''ನಮ್ಮ ಚಿಕ್ಕಪ್ಪನ್ನ ಈ ಸ್ಥಿತೀಲಿ ಬಿಟ್ಟು, ನಾನು ಮದುವೆ ಮಾಡಿಕೊಂಡು ಹೋದರೆ ದೇವರು ಮೆಚ್ತಾನಾ?... ನಾನು ಸುಖವಾಗಿರಲು ಸಾಧ್ಯಾನಾ? ನೀನೇ ಹೇಳು...''

''ಅದೇನೋ ದಿಟ. ಎಂಥಾ ಸ್ಥಿತಿ ಒದಗ್ತಲ್ಲ ಯಜಮಾನ್ರಿಗೆ... ಹಳ್ಳೀ ಕಡೆ ಮದ್ದು ಮಾಡ್ತಾರೆ ಈ ರೋಗಕ್ಕೆ, ಅದನ್ಯಾಕೆ ಮಾಡಿಸಬಾರದು?''

''ಮದ್ದು ಮಾಡೋದು ಯಾರಿದಾರೋ ನಮಗೇನು ಗೊತ್ತು! ನಿನಗೆ ತಿಳಿದವರು ಇದ್ದರೆ ಕರೆದುಕೊಂಡು ಬಾ... ಅದರಿಂದ ವಾಸಿಯಾಗಿ ಚಿಕ್ಕಪ್ಪ

ಮೊದಲಿನಂತಾದ್ರೆ ಸಾಕು...''

''ಹೌದ್ರವ್ವಾ... ಅವರು ನೆಟ್ಟಗಾಗಬೇಕು. ಅದನ್ನೇ ನಾವು ಬೇಡೋದು'' ಎಂದು ಕೈ ಮುಗಿದಾಗ,

''ನೀನಿನ್ನು ಹೋಗು... ನಾನು ತೋಟದ ಮನೆ ಕಡೆ ಹೋಗಿ ಬರ್ತೀನಿ, ಎಷ್ಟೋ ದಿನಗಳಾಯಿತು ಮನೆಗೆ ಬಂದು...''

''ಸ್ವಲ್ಪ ಹುಶಾರಾಗಿರವ್ವಾ... ಆಕಡೆ ಯಾರೋ ಸುಳಿದಾಡುತ್ತಿದ್ದ ಹಾಗಿತ್ತು ಅಂತ ನಮ್ಮೋರು ಆಡ್ಕೋತಿದ್ದರು.''

''ಅವರು ಯಾರು ಅಂತ ವಿಚಾರಿಸಲಿಲ್ವಾ ನೀವುಗಳು?''

''ಇಲ್ರವ್ವಾ... ಸಂಜೆ ಹೊತ್ತು... ಜನ ಓಡಾಡದ ಜಾಗ... ಬಾವಿ ಹತ್ತಿರ ನಮ್ಮ ಜನ ಹೋಗೋಕೇ ಹೆದರ್ತಾರೆ...''

''ಹೆದರಿಕೆ ಯಾಕೆ? ನೀವುಗಳು ವಾಸ ಮಾಡ್ತಿರೋ ಜಾಗವೇ ಇದು ಅಲ್ವಾ?''

''ಹಂಗಲ್ರವ್ವಾ.... ನೀವು... ತಿಳಿದ್ರೆ ಏನಂದ್ಕೊಳ್ತೀರೋ ನಿಮ್ಮನೇಲಿ, ಬಾವಿ ಹತ್ತಿರ ನಡೆದಿದ್ದೆಲ್ಲಾ ದುರ್ಮರಣ ಅಲ್ವಾ?''

ಕಲ್ಯಾಣಿ ಪೆಚ್ಚಾದಳು... ಕಣ್ಣಲ್ಲಿ ನೀರು ತುಂಬಿಕೊಂಡಿತು... ಅದು ದುರ್ಮರಣ ನಿಜ... ಆದರೆ ದೆವ್ವಗಳಾಗಿ ಕೇಡು ಮಾಡುವಂಥ ಕೆಟ್ಟವರಾಗಿರಲಿಲ್ಲ ನಮ್ಮ ಅಪ್ಪ... ಅಮ್ಮ... ಹಾಗಿದ್ದಿದ್ರೆ ಈ ಅನ್ಯಾಯಕ್ಕೆಲ್ಲಾ ಯಾರು ಕಾರಣರೋ ಅವರನ್ನು ಮುಗಿಸದೇ ಬಿಡುತ್ತಿದ್ರಾ ಎಂದು ಹೇಳುವ ಮನಸ್ಸಾದರೂ, ತುಟಿ ಕಚ್ಚಿಕೊಂಡು ಸುಮ್ಮನಾದಳು.

''ತಪ್ಪಾತವ್ವಾ... ನಿಮ್ಮ ಮನಸ್ನ ನೋಯಿಸ್ದೆ'' ಎಂದು ಅವನು ಮತ್ತೆ ನುಡಿದ.'' ಯಜಮಾನ್ರ ಅತ್ತಿಗೆ ಬಾವಿಗೆ ಬಿದ್ದರಂತಲ್ಲ... ಮದುವೆಯಾಗಿ, ಇನ್ನು ಹೊಸದು... ಏನೇನು ಆಸೆಗಳನ್ನಿಟ್ಟುಕೊಂಡಿದ್ದರೋ... ಅವರೇ ಮೋಹಿನಿಯಾಗಿ, ಈ ಸುತ್ತ ಮುತ್ತ ತಿರುಗ್ತಾರೆ ಅಂತ ಇವರೆಲ್ಲಾ ನಂಬ್ತಾರೆ. ಕತ್ತಲೆಯಾದ ಮೇಲೆ ಯಾರೂ ಹೊರಗೆ ಕಾಲಿಡುಲ್ಲ. ಅದರದ್ದೇ ಈ ಆಟ ಅಂತ ಹೇಳ್ತಿದ್ರು...''

''ಇದನ್ನೆಲ್ಲ ನಾವು ನಂಬುಲ್ಲ. ಹೆದರ್‍ತ್ತಾ ಹೋದರೆ ಆಯ್ತು...'' ಎಂದು ಅವನನ್ನು ಅಲ್ಲಿಯೇ ಬಿಟ್ಟು ಮುಂದೆ ನಡೆದಳು. ತೋಟದ ಮನೆಯ ಮುಂಬಾಗಿಲಿಗೆ ಹಾಕಿದ್ದ ಬೀಗವನ್ನು ಯಾರೋ ಮುರಿದಿದ್ದರು. ಆದರೆ ಒಳಗಿನಿಂದ ಚಿಲುಕ ಹಾಕಿರಲಿಲ್ಲ. ಬಾಗಿಲನ್ನು ತಳ್ಳಿದಾಗ ಸುಲಭವಾಗಿ ತೆಗೆದುಕೊಂಡಿತು. ಆದರೆ ಗವ್ವೆಂದು ಕೆಟ್ಟಗಾಳಿ ಮುಖಕ್ಕೆ ಬಡಿಯಿತು. ತಾವು ವಾಸವಾಗಿದ್ದ ಸಮಯದಲ್ಲಿ ಎಷ್ಟು ಶುಭ್ರವಾಗಿತ್ತು... ಆಗೊಮ್ಮೆ ಈಗೊಮ್ಮೆ ಬಂದು ಕ್ಲೀನ್ ಮಾಡಬೇಕೆಂದುಕೊಂಡಳು. ಕಿಟಕಿ ಬಾಗಿಲನ್ನು ತೆಗೆದಳು. ಒಳ್ಳೆಯ ಗಾಳಿ, ಬೆಳಕು, ಮನೆಯೊಳಗೆ ತುಂಬಿಕೊಂಡಿತು. ತನ್ನ ಕೈಲಾದಷ್ಟು ಗುಡಿಸಿ ಧೂಳು ತೆಗೆದು, ಇನ್ನೇನು ಹೊರಡಬೇಕೆನ್ನುವಾಗ, ಯಾರೋ ಇಬ್ಬರು ಮನೆ ಮುಂಬಾಗಿಲಿಗೆ ಬಂದರು.

''ಕೃಷ್ಣ ಇದಾನಾ!'' ಅವರು ಕೇಳಿದಾಗ ಅವಳು ಎಚ್ಚೆತ್ತುಕೊಂಡಳು.

''ಇಲ್ಲ. ಅವನು ಇಲ್ಲಿಲ್ಲ...''

''ಅವನು ಎಲ್ಲಿದಾನೇಂತ ಗೊತ್ತಾ?''

''ಇಲ್ಲ ನನಗೆ ಗೊತ್ತಿಲ್ಲ.''

''ಅವನು ಬಂದ್ರೆ ಅವನ ಸ್ನೇಹಿತರು ಬಂದಿದ್ರು ಅಂತ ಹೇಳಿ, ಅವನ ಹತ್ತಿರ ಮುಖ್ಯವಾದ ವಿಷಯ ಮಾತನಾಡಬೇಕು'' ಅಂತ ನುಡಿದು ಅವರುಗಳು ಹೊರಟುಹೋದರು. ಕಲ್ಯಾಣಿ ಅದನ್ನು ಅಲ್ಲಿಗೇ ಮರೆತಳು.

ಊಟದ ಸಮಯವಾದಾಗ, ಅವಳು ಮತ್ತೆ ಮುಂಬಾಗಿಲಿಗೆ ಬೇರೆ ಬೀಗವನ್ನು ಹುಡುಕಿ ಹಾಕಿ, ಮನೆ ಕಡೆ ನಡೆದಳು. ಮನೆ ತಲುಪಿದಂತೆ ಅವಳಿಗೊಂದು ಆಶ್ಚರ್ಯ ಕಾದಿತ್ತು. ಬೃಂದಾ ಹಾಗೂ ಅವಳ ಚಿಕ್ಕಪ್ಪ ಬಂದು ಕೂತಿದ್ದರು. ಶಾರದಾ ಅವರಿಗೆ ಉಪಚಾರ ನಡೆಸಿದ್ದಳು.

ಇವಳನ್ನು ಕಂಡೊಡನೆ ಬೃಂದಾ ಅವಳೊಡನೆ ಒಳಗಿನ ರೂಮಿಗೆ ಹೋದಳು. ಕುಶಲ ವಿಚಾರಣೆಯ ನಂತರ ಮುಖ್ಯವಾದ ವಿಷಯವನ್ನು ಮಾತನ್ಾಡಿದಳು.

''ಚಿಕ್ಕಪ್ಪ, ನಿಮ್ಮ ತಮ್ಮನೊಡನೆ ನನ್ನ ಮದುವೆ ನಿಷ್ಕರ್ಷೆ ಮಾಡಿದಾರೆ...

ನಿಮಗೂ ಗೊತ್ತಿರಬಹುದು ಅಲ್ವಾ! ಆದರೆ ನನಗೇಕೋ ಭಯ.''

ಈ ವಿಷಯ ಕಲ್ಯಾಣಿಗೆ ತೀರ ಅನಿರೀಕ್ಷಿತವೇನಲ್ಲ ಆದರೂ ತನ್ನ ಮನಸ್ಸಿನಗೊಂದಲವನ್ನು ತೋರಗೊಡದೆ ನುಡಿದಳು.

''ಭಯಕ್ಕೆ ಕಾರಣ...?''

''ನೀವುಗಳು ಶ್ರೀಮಂತರು... ನಮ್ಮ ಚಿಕ್ಕಪ್ಪ ಅನುಕೂಲಸ್ಥರಲ್ಲ... ಯಾವುದೇ ಬೇಡಿಕೆಯನ್ನು ಪೂರೈಸಲಾಗುವುದಿಲ್ಲ... ಅಲ್ಲದೇ ನನ್ನದು ಮೂಲಾ ನಕ್ಷತ್ರ... ಗ್ರಹದೋಷ... ಮುಂದೆ ಏನಾಗುತ್ತೋ ಅಂತ...''

ಇದನ್ನೆಲ್ಲಾ ತಿಳಿದೇ ಚಿಕ್ಕಮ್ಮ ಮುಂದುವರೆದಿರಬೇಕಾದರೆ ತಾನೇಕೆ ಅಡ್ಡ ಬರಬೇಕು... ತಾನೀಗ ಕೃಷ್ಣನ ಬಗ್ಗೆ ಹೇಳಿದರೆ, ಈ ಮದುವೆ ನಿಂತು ಹೋಗಬಹುದು... ಚಿಕ್ಕಮ್ಮನ ಕೋಪಕ್ಕೆ ಗುರಿಯಾಗುವುದು ಖಂಡಿತಾ. ತಾನು ಸುಮ್ಮನಿರುವುದರಿಂದ ತನಗೂ ಕೋಮಲಂಗೂ ಕ್ಷೇಮ ಎಂದು ಕೊಂಡು ಸ್ಮಮಾಧಾನ ಹೇಳಿದಳು.

''ಹಾಗೆಲ್ಲಾ ಏನೂ ತೊಂದರೆ ಬರುಲ್ಲ. ಚಿಕ್ಕಮ್ಮ ಎಲ್ಲಾ ಸರಿಯಾಗಿ ಯೋಚಿಸಿಯೇ ಮುಂದುವರೆದಿರುತ್ತಾರೆ. ಪಂಡಿತರ ಮಾತಿನಲ್ಲಿ ವಿಶ್ವಾಸ ಜಾಸ್ತಿ. ಅವರನ್ನು ಕೇಳಿರುತ್ತಾರೆ. ನಿಮಗೇಕೆ ಆತಂಕ?''

''ನೀವು ನನಗೆ ಅಕ್ಕ ಇದ್ದ ಹಾಗೇ... ನನ್ನನ್ನ ನೀವು ತಾವು ಅಂತ ಕರೀ ಬೇಡಿ... ನನಗೆ ಸಂಕೋಚವಾಗುತ್ತೆ.''

''ಸರಿ. ಹಾಗೇ ಆಗಲಿ. ನನಗೆ ನೀವು ಕೋಮಲ ಇಬ್ಬರೂ ಒಂದೇ ತರಹ. ನಿನಗೆ ನನ್ನಿಂದ ಏನು ಸಹಾಯ ಬೇಕಾದ್ರೂ ಸಂಕೋಚವಿಲ್ಲದೇ ಕೇಳು, ನನ್ನಿಂದಾಗೋ ಸಹಾಯ ಖಂಡಿತಾ ಮಾಡ್ತೀನಿ'' ಎಂದು ವಿಶ್ವಾಸದಿಂದ ಅವಳ ಕೈಯನ್ನು ಹಿಡಿದು ಒತ್ತಿದಳು.

ಬೃಂದಳ ಚಿಕ್ಕಪ್ಪ ಕೃಷ್ಣನನ್ನು ಕಂಡು ಮಾತನಾಡಿಸಬೇಕೆಂದು ಆಶೆ ತೋರಿದಾಗ, ಶಾರದಾ ಅವನನ್ನು ಬಲವಂತವಾಗಿ ಹೊರಕ್ಕೆ ಕರೆದುಕೊಂಡು ಬಂದಳು.

''ಇವರು ನಂಜುಂಡಯ್ಯ ಅಂತ. ಪಕ್ಕದ ಊರಿನವರು. ಅವರದೇ

ಸ್ವಂತವಾದ ಮನೆ, ಬಟ್ಟೆ ಅಂಗಡಿ ಇದೆ. ಇವರ ಮಗಳನ್ನು ನಿನಗೆ ಕೊಟ್ಟು ಮದುವೆ ಮಾಡಲು ಒಪ್ಪಿಕೊಂಡಿದಾರೆ. ಕೃಷ್ಣ... ಇವರಿಗೆ ನಮಸ್ಕಾರ ಮಾಡು... ಎಂದಳು.'' ಕೃಷ್ಣ ಗುರ್ ಎಂದ...

''ಒಂದು ವಾರದಿಂದ ಹುಶಾರಿರಲಿಲ್ಲ. ಈಗ ವಾಸಿಯಾಗಿದೆ. ಸುಸ್ತು ಅಂತ ಮಲಗಿದ್ದ. ಗಡ್ಡ ಮೀಸೆ ಸಹ ಬೋಳಿಸಿಲ್ಲ.'' ಶಾರದೆ ನಗುತ್ತಾ ನುಡಿದಾಗ ಆತ ಪೆಚ್ಚುನಗೆ ನಕ್ಕರು.

''ಪರವಾಗಿಲ್ಲ ಬಿಡಿ... ಈಗ ಹೇಗಿದೀರಪ್ಪಾ...'' ಆತ ವಿಶ್ವಾಸದಿಂದ ಕೇಳಿದಾಗ ಕೃಷ್ಣ ತಬ್ಬಿಬ್ಬಾದ. ಅವನಿಗೆ ಅದೆಲ್ಲ ಹೊಸದು. ಕೈ ಕೈ ಹೊಸೆದು ''ಹೆ... ಹೆ...'' ಎಂತಂದ. ಅಷ್ಟರಲ್ಲಿ ಬೃಂದ ಕಲ್ಯಾಣಿಯೊಡನೆ ಹೊರಗೆ ಬಂದಳು. ಕೃಷ್ಣನಿಗೆ ಅವರಿಬ್ಬರ ಕಡೆ ನೋಡುವ ಧೈರ್ಯ ಸಹ ಬರಲಿಲ್ಲ. ಬೃಂದ ಸಂಕೋಚದಿಂದ ಮುದುರಿ ಕುಳಿತಿದ್ದಳು. ಕಲ್ಯಾಣಿ ಕೃಷ್ಣನ ಕಡೆ ನೋಡಲಿಲ್ಲ.

ಅವರುಗಳು ಅತ್ತ ಹೋದ ಕೊಡಲೇ ಕೃಷ್ಣ ತಾಯಿಯ ಮೇಲೆ ಎಗರಾಡಿದ. ಕಲ್ಯಾಣಿ ತಂಗಿಯನ್ನು ಹೊರಡಿಸಿಕೊಂಡು, ಮನೆಯಿಂದಾಚೆ ಹೊರಟಳು.

''ಬೃಂದನ್ನ ನೋಡಿದ್ಯಾ? ಹೇಗನ್ನಿಸಿದಳು?''

''ನನಗೇನೂ ಅನ್ನಿಸಲಿಲ್ಲ. ನಾನು ಅವಳನ್ನು ನೋಡಲಿಲ್ಲ.''

''ಅವಳನ್ನು ಮದುವೆಯಾಗೋನು ನೀನು. ನೀನೇ ನೋಡದಿದ್ದರೆ ಹೇಗೆ? ಸುಳ್ಳು ಹೇಳ್ತಾ ಇದೀಯ...?''

''ನಾನೇಕೆ ಸುಳ್ಳು ಹೇಳಲಿ? ನನಗೆ ಈ ಮದುವೆ ಗಿದುವೆ ಬೇಡಾಂತ ಅವತ್ತೇ ಹೇಳಲಿಲ್ವಾ?''

''ಯಾಕೇಂತ? ನಾನು ಅವರಿಗೆ ಮಾತು ಕೊಟ್ಟು ಬಿಟ್ಟಿದೀನಿ... ನೀನು ಒಪ್ಪಲೇ ಬೇಕು...''

''ಒಪ್ಪದಿದ್ದರೆ ಏನು ಮಾಡ್ತೀಯಾ? ನನಗೆ ತಿಳಿಸದೇ ಮಾತೇಕೆ ಕೊಟ್ಟೆ?''

''ಉಪವಾಸ ಸತ್ಯಾಗ್ರಹ ಮಾಡಿ, ಪ್ರಾಣ ಬಿಡ್ತೀನಿ. ಸಾಯೋಕೆ ಮುಂಚೆ ಈ ಆಸ್ತೀನೆಲ್ಲಾ ಯಾವುದಾದರೂ ಮಠಕ್ಕೆ ದಾನ ಮಾಡಿಬಿಡ್ತೀನಿ. ಆಗ ನಿನಗೆ ನಾನೂ ಇಲ್ಲಿ; ಬಿಡಿಗಾಸೂ ಇಲ್ಲದೇ ಭಿಕಾರಿಯಾಗ್ತೀಯ...'' ಶಾರದಾ ಕೋಪದಿಂದ ನುಡಿದಾಗ, ಅವನೂ ಕೋಪದಿಂದ ಎದ್ದುಹೋದ.

ಕಲ್ಯಾಣಿ, ಕೋಮಲ ಇಬ್ಬರೂ ವಾಪಸ್ಸಾದರು. ಮನೆಯ ವಾತಾವರಣ ಬಿಗಿಯಾಗಿ ಗಂಭೀರವಾಗಿದೆ ಅಂತೆನ್ನಿಸಿತ್ತು. ಮಾತಾಡಲಾಗದ, ಕೂರಲಾಗದ ನಾರಾಯಣನನ್ನು ದೂರದಿಂದ ಅವರಿಗೆ ಪರಿಚಯಿಸಿ ಕೊಟ್ಟಿದ್ದಕ್ಕೆ ಚಿಕ್ಕಪ್ಪ ಏನಾದರೂ ಗಲಾಟೆ ಮಾಡಿರಬಹುದೇ ಅಂತ ಅಂದುಕೊಂಡು ನಾರಾಯಣ ಮಲಗಿದ್ದ ರೂಮಿಗೆ ಹೋದಳು.

ಕೈ ಸನ್ನೆಯಿಂದ ಅವರಿಬ್ಬರನ್ನು ಒಳಕ್ಕೆ ಕರೆದು ತಮ್ಮ ಪಕ್ಕದಲ್ಲಿ ಕೂರಿಸಿಕೊಂಡು, ತಲೆ ಸವರಿ ಕಣ್ಣೀರು ಸುರಿಸಿದರು.

''ಏನಾಯ್ತು ಚಿಕ್ಕಪ್ಪಾ...?''

''ಏನಿಲ್ಲಮ್ಮಾ... ಏನೇನೋ ನೆನಪಿಗೆ ಬಂತು. ನಿನ್ನ ಚಿಕ್ಕಮ್ಮ ಕೃಷ್ಣನಿಗೆ ಮದುವೆ ಮಾಡಲು ಹೊರಟಿದಾಳೆ'' ಎನ್ನುವುದನ್ನು ಬಹಳ ಕಷ್ಟಪಟ್ಟು ತೊದಲುತ್ತಾ ನುಡಿದಾಗ, ಕಲ್ಯಾಣಿ ಅವರ ನೋವನ್ನು ಅರಿತಳು.

''ಕಲ್ಯಾಣಿ... ನಿನ್ನ ಗತಿ ಏನು?'' ಅವರು ಮತ್ತೆ ಕಷ್ಟ ಪಟ್ಟು ನುಡಿದಾಗ, ಅವಳು ಕಣ್ಣೀರೊರೆಸಿಕೊಂಡಳು.

''ನೀವು ಚಿಂತೆ ಮಾಡಬೇಡಿ... ಈ ಮದುವೆಯಿಂದ ಎಲ್ಲರಿಗೂ ಒಳ್ಳೆಯದೇ ಆಗುತ್ತೆ'' ಎಂದು ನುಡಿದು, ''ಬಾರೇ ಕೋಮಲ ಊಟ ಮಾಡೋಣ... ಚಿಕ್ಕಪ್ಪ ನಿಮ್ಮ ಊಟ ಆಯ್ತಾ?'' ಎಂದು ವಿಚಾರಿಸಿದಳು.

''ಇಲ್ಲಮ್ಮಾ... ಅದ್ಯಾಕೋ ನಿಮ್ಮ ಚಿಕ್ಕಮ್ಮ ಮಧ್ಯಾಹ್ನದಿಂದ ಈ ಕಡೆ ಬಂದೇ ಇಲ್ಲ... ಕೃಷ್ಣಂಗೆ ಹುಶಾರಿಲ್ಲ ಅಂತಿದ್ದಳು. ಈಗ ಹೇಗಿದಾನೆ?'' ಅವರು ಅತಿ ಪ್ರಯಾಸದಿಂದ ನುಡಿಯುವಾಗ ಅವಳು ತಡೆದಳು.

''ನೀವು ಆಯಾಸ ಮಾಡಿಕೋ ಬೇಡಿ... ನಾವು ನೋಡಿಕೊಳ್ತೀನಿ''

ಅಡಿಗೆ ಮನೆಯಲ್ಲಿ ಮಣೆಯನ್ನೇ ತಲೆದಿಂಬನ್ನಾಗಿ ಮಾಡಿಕೊಂಡು ಮಲಗಿದ್ದ ಶಾರದೆ ಇತ್ತ ತಿರುಗಲಿಲ್ಲ.

"ಚಿಕ್ಕಮ್ಮಾ... ಚಿಕ್ಕಪ್ಪಂಗೆ ಊಟ ಬಡಿಸಿಕೊಡ್ತೀರಾ?"

"ನಂಗೆ ತಲೆ ನೋವು ನೀನೇ ಎಲ್ಲರಿಗೂ ಬಡಿಸಿಬಿಡು..." ಚಿಕ್ಕಮ್ಮ ಎಂದೂ ಊಟದ ವಿಷಯಕ್ಕೆ ಹೀಗೆ ಮಾತಾಡಿದವಳಲ್ಲ.

"ಯಾಕೆ ಚಿಕ್ಕಮ್ಮ? ಚಿಕ್ಕಪ್ಪನ ಮೇಲೆ ಕೋಪಾನಾ?"

"ಮಾರಾಯ್ತಿ, ಅವರ ಪಾಡಿಗೆ ಅವರು ಬಿದ್ದುಕೊಂಡಿರ್ತಾರೆ. ಅವರ ಮೇಲೇಕೆ ಕೋಪ ಮಾಡಿಕೊಳ್ಳಲಿ? ಇದಾನಲ್ಲ ನಿನ್ನ ತಮ್ಮ ಅವನ ಮೇಲೆ ಕೋಪ ನನಗೆ... ಅಪರಂಜಿಯಂತಹ ಹುಡುಗಿ ಸಿಕ್ಕಿರುವಾಗ ಮದುವೇನೇ ಬೇಡಾಂತಾನೆ. ಇವನ ಯೋಗ್ಯತೆಗೆ ಆ ಹುಡುಗಿ ಒಪ್ಪಿಕೊಂಡಿರುವುದು ಅವನ ಪುಣ್ಯ. ಅಷ್ಟು ತಿಳೀಬೇಡವಾ ಪೆದ್ದು ಮುಂಡೇದಕ್ಕೆ...?"

ಕಲ್ಯಾಣಿ ಸುಮ್ಮನಾಗಿ ಬಿಟ್ಟಳು.

"ನೋಡಿದ್ಯಾ? ಅವನ ಮದುವೆ ಅಂದರೆ ಯಾರಿಗೂ ಬೇಡ... ನೀನೂ ಸುಮ್ಮನಾಗಿ ಬಿಟ್ಟೆ..." ಹಂಗಿಸಿದಳು.

"ಅಲ್ಲ ಚಿಕ್ಕಮ್ಮ... ಅದು ಅವರವರ ಇಷ್ಟ ಅಲ್ವಾ? ಅವನಿಗೆ ಬೇಡದಿದ್ದರೆ ಬಲವಂತ ಮಾಡುಕ್ಕೆ ಆಗುತ್ತೆ?"

"ಈ ಸಮಯ ಕಳೆದುಹೋದರೆ ಅವನ ಮದುವೆ ಆಗುತ್ತೋ ಇಲ್ಲವೋ... ನನಗೂ ಆಸೆ ಇರುತ್ತೆ? ನಾನೂ ಸತ್ತು ಹೋದರೆ ಅವನ ಗತಿ ಏನು? ಅವನಿಗೆ ಕೂಳು ಬೇಯಿಸಿ ಹಾಕೋರು ಯಾರಿರುತ್ತಾರೆ? ಅಷ್ಟು ತಿಳೀಬೇಡ್ವೆ... ಆದಕ್ಕೇ ಅವನು ಮದುವೆಗೆ ಒಪ್ಪುವವರೆಗೂ ನಾನು ಊಟ ಮಾಡುಲ್ಲ ಉಪವಾಸವಿರ್ತೀನಿ ಅಂತ ಹೇಳಿ ಬಿಟ್ಟಿದೀನಿ..."

"ಇದಕ್ಕೆಲ್ಲಾ ಯಾಕೆ ಉಪವಾಸ ಮಾಡಬೇಕು? ನಾನು ಅವನಿಗೆ ಹೇಳ್ತೀನಿ. ನೀವು ಊಟ ಮಾಡಿ."

"ಮೊದಲು ಅವನು ಹೂಂ ಎನ್ನಲಿ. ಆಮೇಲೆ ಮುಂದಿನ ಮಾತು."

"ಚಿಕ್ಕಮ್ಮಾ ನಿಮಗೂ ಯಾಕೆ ಇಷ್ಟು ಹಠ? ಅವನೂ ನಿಮ್ಮ ಹಾಗೆ ಹಠ ಮಾಡಿದ್ರೆ, ಆಗ ನೀವೇ ಸೋಲಬೇಕಾಗುತ್ತದೆ. ನಾನು ಚಿಕ್ಕಪ್ಪನಿಗೆ ಊಟ ಕಳಿಸಿಕೊಡ್ತೀನಿ. ನೀವು ಊಟ ಮಾಡಿಸಿ. ಅಷ್ಟರಲ್ಲಿ ನಾನು ಕೃಷ್ಣನ್ನ

ಒಪ್ಪಿಸಿರ್ತೀನಿ.'' ಎಂದು ನುಡಿದಾಗ, ಶಾರದಾ ಕಲ್ಯಾಣಿಯನ್ನು ತಬ್ಬಿಕೊಂಡು ಅತ್ತಳು.

''ಕಲ್ಯಾಣಿ... ನೀನು ರತ್ನದಂತಹ ಹುಡುಗಿ ಕಣೇ... ನಾನೇ ಎಷ್ಟೋ ತಪ್ಪು ತಿಳಿದುಕೊಂಡಿದ್ದೆ. ನೀನೂ ಬೃಂದಾ ಇಬ್ಬರೂ ಸೇರಿ ಅವನನ್ನು ಉದ್ಧಾರ ಮಾಡಬೇಕಮ್ಮಾ... ಇಲ್ಲದಿದ್ದರೆ ಅವನು ದಿಕ್ಕಿಲ್ಲರ ಪರದೇಶಿಯಾಗಿ ಬಿಡ್ತಾನೆ.''

ಶಾರದಾ, ನಾರಾಯಣಮೂರ್ತಿಗೆ ಕಲೆಸಿದ ಅನ್ನವನ್ನೂ ತಿನ್ನಿಸುತ್ತಾ, ಕೃಷ್ಣನ ಮದುವೆ ಬಗ್ಗೆ ಮಾತನಾಡಿದಳು. ಆಯಾಸದಿಂದಲೋ, ಬೇಸರದಿಂದಲೋ, ಅಥವಾ ಬೇರೆ ಯಾವ ಕಾರಣದಿಂದಲೋ ಮಾತನ್ನಾಡಲಿಲ್ಲ, ನಾರಾಯಣ.

ಕಲ್ಯಾಣಿ ಸರ ಸರ, ಕೋಮಲಂಗೆ ಬಡಿಸಿ, ತಾನೂ ಒಂದು ತುತ್ತು ತಿಂದ ಶಾಸ್ತ್ರ ಮಾಡಿ, ಶಾರದಂಗೆ, ಕೃಷ್ಣನಿಗೆ ತಟ್ಟೆ ಲೋಟಗಳನ್ನಿಟ್ಟು, ಅಡಿಗೆ ಪದಾರ್ಥಗಳನ್ನು ಕೈಗೆ ಸಿಕ್ಕುವಂತೆ ಇಟ್ಟು ಕೃಷ್ಣನ ಬಳಿಗೆ ಬಂದಳು.

''ಕೃಷ್ಣಾ... ನನಗೆ ಇಷ್ಟವಿಲ್ಲದಿದ್ದರೂ, ನಾನು ಬಂದು ಮಾತು ಹೇಳ್ತಿದೀನಿ. ಚಿಕ್ಕಮ್ಮನ ಮಾತಿಗೆ ಒಪ್ಪಿ ಬೃಂದನ್ನ ಮದುವೆ ಮಾಡಿಕೋ. ಇಲ್ಲದಿದ್ದರೆ ಅವರು ಉಪವಾಸ ಮಾಡಿ ಪ್ರಾಣ ಬಿಡ್ತಾರೆ ಅಷ್ಟೇ...''

''ನೀನೂ ಉಪದೇಶ ಮಾಡೋಕೆ ಬಂದ್ಯಾ?''

''ನಾನೇಕೆ ನಿನಗೆ ಉಪದೇಶ ಮಾಡಲಿ? ನನಗೂ ನಿನಗೂ ಏನು ಸಂಬಂಧ? ಅಕ್ಕನಲ್ಲ, ಹೆಂಡತಿಯಲ್ಲ... ಏನೋ ಚಿಕ್ಕಮ್ಮ ನನಗೆ ತಾಯಿ ಸಮಾನ. ಅವರ ಆಸೆ ನೆರವೇರಲಿ ಅಂತ...''

''ಹಾಗಾದರೆ ನಾನು ಮದುವೆಯಾದರೆ ನಿನಗೆ ಸಂತೋಷಾನಾ!''

''ಸಂತೋಷ, ದುಃಖ ಯಾವುದೂ ಅಲ್ಲ... ನಿನ್ನ ಮದುವೆ ಬೃಂದಳೊಡನೆ ನಡೆದರೆ, ನನಗೆ ನಿನ್ನ ಕಾಟ ತಪ್ಪುತ್ತೆ ಅನ್ನೋ ಆಸೆ ಅಷ್ಟೇ...''

ಕೃಷ್ಣ ಕುಹಕವಾಗಿ ನಕ್ಕ. 'ನಿನ್ನ ಆಸೆಗೆ ನಾನು ಬೆಲೆ ಕೊಡ್ತೀನಿ ಅಂತ ಅಂದ್ಕೊಂಡ್ಯಾ?' ಅಂತ ತನ್ನಲ್ಲೇ ನುಡಿದುಕಂಡು ಬಹಿರಂಗವಾಗಿ ನುಡಿದ.

''ಅಮ್ಮನಿಗೆ ನನ್ನ ಮದುವೆ ಆದರೆ, ತನ್ನ ಮನೆಗೆ ಸೊಸೆ ಬರ್ತಾಳೆ ಅನ್ನೋ

ಆಸೆ... ನಿನಗೆ, ನನ್ನ ಕಾಟ ತಪ್ಪುತ್ತೆ ಅನ್ನೋ ಆಸೆ, ಬೃಂದಂಗೆ ನನ್ನಂತಹ ಒಳ್ಳೆ ಗಂಡ ಸಿಗ್ತಾನೆ ಅನ್ನೋ ಆಸೆ... ಸರಿ... ಎಲ್ಲರ ಆಸೆಗಳಿಗೆ ನಾನೇಕೆ ಅಡ್ಡಿ ಬರಲಿ! ಅಮ್ಮ ಉಪವಾಸ ಮಾಡಿ ಸತ್ತರೆ ಆ ಪಾಪ ನನಗೇ ಸುತ್ತಿಕೊಳ್ಳುತ್ತೆ... ಅಮ್ಮ ಒಬ್ಬಳೇ ನನ್ನ ಕಷ್ಟಗಳನ್ನು ಅರಿತುಕೊಂಡವಳು... ಅವಳಿಗೆ ಕಡೇ ಸಮಯದಲ್ಲಿ ಸೊಸೆಯಿಂದ ಸೇವೆ ಮಾಡಿಸಿಕೊಳ್ಳಬೇಕೆಂಬ ಆಸೆ... ನಾನಂತೂ ಒಳ್ಳೆಯ ಮಗನಾಗಲಿಲ್ಲ. ಒಳ್ಳೆಯ ಸೊಸೆಯಾದರೂ ಸಿಕ್ಕಲಿ. ನಾನು ಒಪ್ಪಿದೀನೀಂತ ಅಮ್ಮನಿಗೆ ಹೇಳಿಬಿಡು.''

''ನೀನೇ ಹೇಳಿಬಿಡು. ಅವರು ನಿನಗಾಗಿ ಕಾಯ್ತಾ ಕೂತಿದಾರೆ'' ಎಂದು ನುಡಿದು ತನ್ನ ಪಾಡಿಗೆ ತಾನು ಮಲಗುವ ಕೋಣೆಗೆ ಹೊರಟುಹೋದಳು. ಆಮೇಲೆ ತಾಯಿ ಮಗನಲ್ಲಿ ಏನು ಮಾತು ನಡೆಯಿತು ಎಂದು ಕೇಳಿ ತಿಳಿದುಕೊಳ್ಳುವ ಕುತೂಹಲ ಸಹ ಅವಳಲ್ಲಿರಲಿಲ್ಲ. ತಂಗಿಯೊಡನೆ ನುಡಿದಳು.

''ನಮ್ಮ ತೋಟದ ಮನೆಯಂತೂ ಧೂಳು ಬಿದ್ದು ಹಾಳಾಗಿ ಹೋಗಿದೆ. ನಾವಿಬ್ಬರೂ ಅಲ್ಲೇ ಹೋಗಿ ಇರೋಣ. ನಮ್ಮ ಚಿಕ್ಕಪ್ಪನ್ನು ನಮ್ಮ ಜೊತೆಯಲ್ಲಿಟ್ಟುಕೊಳ್ಳೋಣ. ಇಲ್ಲಿ ಚಿಕ್ಕಮ್ಮನ ಜೊತೆಗೆ ಕೃಷ್ಣ ಅವನ ಹೆಂಡತಿ ಇರ್ತಾರೆ.''

''ಕೃಷ್ಣ ಕೆಟ್ಟೋನು ಅಂತ ಹೇಳ್ತಾನೇ ಇರ್ತೀಯ. ಅವನಿಗೆ ಮದುವೆ ಆದರೆ ಅವನ ಹೆಂಡತಿಗೆ ಅನ್ಯಾಯವಾಗುಲ್ವೇನೇ ಅಕ್ಕಾ?''

''ಹೌದು. ಅನ್ಯಾಯಾನೇ. ಆದರೆ ಯಾರ್‍ಯಾರ ಹಣೇಲಿ ಏನು ಬರೆದಿದೆಯೋ ಅದನ್ನು ತಪ್ಪಿಸಲು ಯಾರಿಂದಲೂ ಸಾಧ್ಯವಿಲ್ಲ ಅಲ್ವಾ? ಬೃಂದಾ ಸಹ ನಮ್ಮ ಹಾಗೆ ಅನಾಥೆ. ಚಿಕ್ಕಪ್ಪನ ಆರೋಗ್ಯ ಸರಿ ಇಲ್ಲ. ಅವಳಿಗೂ ಒಂದು ಆಸರೆ ಬೇಕು ಅಲ್ಲವೇ... ಚಿಕ್ಕಮ್ಮನ ಮಾತಿಗೆ ಮರುಳಾಗಿ ಅವರು ಈ ಸಂಬಂಧಕ್ಕೆ ಒಪ್ಪಿಕೊಂಡಿದಾರೆ. ಅವರೆಲ್ಲರ ಆಸೆಯಂತೆ, ಕೃಷ್ಣನಿಗೂ ಜವಾಬ್ದಾರಿ ಬಂದು ನಾಲ್ಕು ಜನರಂತೆ ಬಾಳುತ್ತಾನೋ ಏನೋ... ನನಗೆ, ನಿನಗೆ ಏನಾಗಬೇಕು ಹೇಳು... ಪಿ.ಯು.ಸಿ. ಆದಮೇಲೆ, ನೀನು ನರ್ಸಿಂಗ್ ಟ್ರೈನಿಂಗ್ ಕೋರ್ಸ್‌ಗೆ ಹೋಗು, ಗಂಡನ್ನು ನೀನೇ ಆರಿಸಿಕೋ. ನಿನ್ನ ಮದುವೆ ಮಾಡಿಸುವ ಜವಾಬ್ದಾರಿ ನನ್ನದು...''

''ಮೊದಲು ನಿನ್ನ ಮದುವೆ... ಆಮೇಲೆ ನನ್ನದು.''

''ಇಲ್ಲ ಕೋಮಲ... ನಾನು ಮದುವೆಯಾಗಬಾರದು, ಅಂತ ನಿರ್ಧರಿಸಿಬಿಟ್ಟಿದೀನಿ.''

''ಹಾಗಾದರೆ ನಾನೂ ಹಾಗೇ ಇದ್ದು ಬಿಡ್ತೀನಿ ನಿನ್ನ ಜೊತೆಗೆ.'' ಕೋಮಲ ಪ್ರೀತಿಯಿಂದ ಅಕ್ಕನಿಗೆ ಒರಗಿಕೊಂಡಾಗ ಕಲ್ಯಾಣಿಗೆ ದುಃಖವುಕ್ಕಿತು.

''ಇವತ್ಯಾಕೋ ಅಪ್ಪ ಅಮ್ಮನ ನೆನಪು ಬರ್ತಿದೆ ಕಣೇ'' ಎಂದು ತಂಗಿಯನ್ನು ತಬ್ಬಿಕೊಂಡು ಮನಸಾರೆ ಅತ್ತಳು.

ಆ ವರ್ಷ ಕಳೆಯುವುದಕ್ಕೆ ಉಳಿದ ದಿನಗಳನ್ನೂ ಎಣಿಸಿದಳು ಶಾರದಾ. ಸಡಗರದಿಂದ ಪಂಡಿತರ ಮನೆಗೆ ಹೋದಳು. ಕೃಷ್ಣನ ಹಾಗೂ ಬೃಂದಳ ಜಾತಕವನ್ನು ಪರಿಶೀಲಿಸಿ, ಮದುವೆಗೆ ದಿನವನ್ನು ಗೊತ್ತುಮಾಡಿಕೊಡಬೇಕೆಂದು ಕೇಳಿದಳು.

''ಏನ್ತಾಯೀ, ಹುಡುಗೀದು ಮೂಲಾ ನಕ್ಷತ್ರ ಅಂತ ತಿಳಿದೂ, ಈ ಮದುವೆಗೆ ಮುಂದುವರೆದಿದೀರಲ್ಲ.''

''ಮೂಲಾ ಅಲ್ಲ, ಆಶ್ಲೇಷಾ ನಕ್ಷತ್ರವಾಗಿದ್ದರೂ ನಾನು ಈ ಮದುವೆಗೆ ಒಪ್ಪುತ್ತಿದ್ದೆ... ನನಗೀಗ ಸೊಸೆ ಮುಖ್ಯ. ಅವಳ ನಕ್ಷತ್ರ, ಜಾತಕ ಮುಖ್ಯವಲ್ಲ. ಮನೆಯನ್ನೇ ಸೇರದ ನನ್ನ ಮಗ, ನೀವು ಕೊಟ್ಟ ತಾಯಿತದ ಪ್ರಭಾವದಿಂದ ಈಗ ಮನೆಯಲ್ಲೇ ಇದಾನೆ. ಈ ಹುಡುಗಿ ಕೈ ಹಿಡಿದ ಗಳಿಗೆಯಿಂದ ಅವನಿಗೆ ಎಲ್ಲಾ ಒಳ್ಳೆಯದಾದರೆ ಸಾಕು.''

''ಸರಿ ತಾಯೀ. ಸಾವಿರ ಸುಳ್ಳು ಹೇಳಿ ಬಂದು ಲಗ್ನ ಮಾಡು ಅಂತಾರೆ... ನಿಜ ತಿಳಿದೂ ಮದುವೆ ತಯಾರಿ ಮಾಡುತ್ತಿರುವ ನಿಮ್ಮ ಧೈರ್ಯವನ್ನು ಮೆಚ್ಚಬೇಕು. ಭಗವಂತನ ಇಚ್ಛೆ ಹೇಗಿದೆಯೋ ಹಾಗಾಗುತ್ತೆ. ಆಗಲಿ ನೀವು ನಾಳೆ ನಾಡಿದ್ದರಲ್ಲಿ ಬನ್ನಿ, ನಾನು ಪ್ರಶಸ್ತವಾದ ಒಂದು ಮುಹೂರ್ತವನ್ನು ಗೊತ್ತು ಮಾಡಿಕೊಡ್ತೀನಿ.''

''ಅಷ್ಟು ಮಾಡಿ ಪಂಡಿತರೇ... ನೀವೇ ಪ್ರಧಾನ ಪುರೋಹಿತರು. ನೀವೇ ನಿಂತು ಮಂಗಳ ಕಾರ್ಯವನ್ನು ನೆರವೇರಿಸಿಕೊಡಬೇಕು.'' ಎಂದು ಕೈ ಮುಗಿದು

ದಕ್ಷಿಣೆಯನ್ನಿತ್ತು ಅಲ್ಲಿಂದ ಹೊರಟಳು. ಪಂಡಿತರು ಅವಳು ಹೋದ ದಿಕ್ಕನ್ನೇ ನೋಡುತ್ತಾ ಕೂತಿದ್ದರು.

ಕೃಷ್ಣ ಯಾರಿಗೂ ತಿಳಿಸಬಾರದೆಂದು ಹಠ ಮಾಡಿದ್ದರಿಂದ ಹಾಗೇ, ನಾರಾಯಣಮೂರ್ತಿಯ ಅನಾರೋಗ್ಯವನ್ನು ಗಮನಿಸಿ, ಬಹಳ ಸರಳವಾಗಿ, ತಮ್ಮ ಮನೆಯಲ್ಲೇ ಮದುವೆಯ ಕಾರ್ಯವನ್ನು ನೆರವೇರಿಸಿ ಕೊಡಬೇಕೆಂದು ಶಾರದಾ ನಂಜುಂಡಯ್ಯನವರಿಗೆ ಇಳಿಸಿದ್ದಳು. ತಾವೇ ಎಲ್ಲಾ ಸಿದ್ಧತೆಗಳನ್ನು ಮಾಡುವುದಾಗಿ ಹೇಳಿದ್ದಳು. ಮದುವೆಯ ಖರ್ಚಿಗೆ ಎಂದು ಅವರು ಕೊಟ್ಟ ಹಣದಲ್ಲಿ ಐದು ಸಾವಿರ ರೂಪಾಯಿಗಳನ್ನು ಕೃಷ್ಣನ ಕೈಗಿತ್ತಳು.

''ಇದನ್ನು ವರೋಪಚಾರ ಅಂತ ನಿನ್ನ ಮಾವನವರು ಕೊಟ್ಟಿದಾರೆ. ಇದರಲ್ಲಿ ನಿನಗೆ ಏನೇನು ಬೇಕೋ ಅದನ್ನು ತಗೋ...'' ಎಂದು ನುಡಿದಾಗ ಅವನಿಗೆ ಆನಂದವಾಗಿತ್ತು. ತಕ್ಷಣವೇ ಒಂದು ಬೈಕ್‌ನು ಕೊಂಡು, ಸ್ನೇಹಿತರ ಎದುರಿಗೆ ಮೆರೆಯುವ ಆಸೆಯಾಗಿತ್ತು. ಆದರೆ, ಅವರನ್ನು ಮದುವೆಗೆ, ಕರೆಯಬೇಕೋ ಬೇಡವೋ ಎಂದು ಚಿಂತಿಸುತ್ತಿದ್ದ.

''ನಾನೇನೋ, ಯಾವ ನೆಂಟರಿಷ್ಟರನ್ನು ಕರೆಯುವುದಿಲ್ಲ. ಆದರೆ ನಿನಗೆ ನಿನ್ನ ಸೇಹಿತರನ್ನು ಕರೆಯಬೇಕಂತ ಅನ್ನಿಸಿದ್ದರೆ ಕರಿ. ನಿನ್ನ ಮದುವೆಯಿಂದ ಅವರುಗಳಿಗೂ ಜ್ಞಾನೋದಯವಾಗಲಿ'' ತಾಯಿ ನುಡಿದಾಗ ಅವನು ನಕ್ಕಂತೆ ಮಾಡಿ ಅಲ್ಲಿಂದ ಓಡಿದ್ದ.

ನಿಷ್ಕರ್ಷೆ ಮಾಡಿದ ದಿವಸ ಸಮೀಪಿಸಿತು. ಕೃಷ್ಣ ಕಲ್ಯಾಣಿಯೊಡನೆ ಏಕಾಂತದಲ್ಲಿ ಮಾತನಾಡಬೇಕು ಎಂದು ಒದ್ದಾಡಿದ. ಆದರೆ ಕಲ್ಯಾಣಿ ಅವನ ಕಣ್ಣಿಗೆ ಬೀಳದಂತೆ ಓಡಾಡಿಕೊಂಡಿದ್ದಳು. ಎಲ್ಲರೂ ಸೇರಿ ತನಗೇನೋ ಮಾಡುತ್ತಿದ್ದಾರೆಂದು ಪರದಾಡಿದ. ಅಲ್ಲಿಂದ ಎಲ್ಲಿಗಾದರೂ ಓಡಿ ಹೋಗಬೇಕೆಂದು ಅನಿಸುತ್ತಿತ್ತು. ಅವನು ಖಾಯಿಲೆ ಮಲಗಿದ್ದಾಗ, ತಾಯಿ ಬಲವಂತವಾಗಿ ಕಟ್ಟಿದ್ದ ತಾಯಿತ ಅವನನ್ನು ತಡೆಯುತ್ತಿತ್ತು. ಅದನ್ನು ಮೀರಿ ಹೋದರೆ ತನಗೇನಾದರೂ ಕೇಡು ಸಂಭವಿಸಬಹುದು ಎಂಬ ಭಯ ಅವನನ್ನು ಕಾಡುತಿತ್ತು. ಆದರೆ ಅದನ್ನು ತೆಗೆದು ಬಿಸಾಡುವ ಧೈರ್ಯವೂ ಇಲ್ಲ.

ಮನೆ ಮುಂದೆ ಚಪ್ಪರ ಹಾಕಿಸಿದ್ದಾಯಿತು. ಸೊಗಸಾಗಿ ರಂಗವಲ್ಲಿ

ಹಾಕಿಸಿದ್ದಾಯಿತು. ಚಪ್ಪರ ಪೂಜೆ ಮಾಡಿ, ಮನೆ ಮಂದಿಯೆಲ್ಲಾ ಹೋಳಿಗೆ ಊಟ ಮಾಡಿದ್ದಾಯಿತು. ಆ ರಾತ್ರಿಯೇ ನಂಜುಂಡಯ್ಯನವರು ತಮ್ಮ ಹತ್ತಿರದ ಒಂದಿಬ್ಬರು ನೆಂಟರಿಷ್ಟರೊಡನೆ ಈ ಮನೆಗೆ ಬಂದಿಳಿದರು. ಭಾವಿ ಬೀಗರ ಪರಿಚಯದ ನಂತರ ಊಟ ಉಪಚಾರವನ್ನು ಶಾರದಾ ಖುದ್ದಾಗಿ ಮಾಡಿಸಿದಳು.

ಕೃಷ್ಣ ಕಲ್ಯಾಣಿಯನ್ನು ಹುಡುಕಿಕೊಂಡು ಬಂದು, ಪಿಸುದನಿಯಲ್ಲಿ ಹೇಳಿದ. ''ನಾನು ಬೃಂದಳೊಡನೆ ಸ್ವಲ್ಪ ಮಾತನ್ನಾಡಬೇಕು... ಅವಳನ್ನು ಕರೆದುಕೊಂಡು ಬರ್ತೀಯಾ?''

''ನಾಳೆ ನಿನ್ನ ಮದುವೆ... ಈಗ ಏನು ಮಾತಿದೆ! ನಾನು ಕರೆದರೂ ಅವಳು ಬರುಲ್ಲ...''

''ಒಂದು ಸಾರಿ... ಮುಖ್ಯವಾದ ವಿಷಯ ಒಂದನ್ನು ಕೇಳಬೇಕು.''

''ಸರಿ ಕರೀತೀನಿ. ಅವಳು ಬರದಿದ್ದರೆ ನನ್ನನ್ನು ಬೈಯಬೇಡ.'' ಎಂದು ಹೋದವಳು ಕೆಲವೇ ನಿಮಿಷಗಳಲ್ಲಿ ವಾಪಸ್ಸಾದಳು. ಅವಳು ಹೊತ್ತಿಲ್ಲದ ಹೊತ್ತಿನಲ್ಲಿ ಗಂಡನ ಮನೆಗೆ ಕಾಲಿಡಕೂಡದು... ನಾಳೆ ಶುಭಗಳಿಗೆಯವರೆಗೂ ಅವಳು ಎಲ್ಲಿಗೂ ಕಾಲಿಡುವಂತಿಲ್ಲ ಎಂದು ಅವಳ ಸೋದರತ್ತೆ ಖಡಾ ಖಂಡಿತವಾಗಿ ಹೇಳಿಬಿಟ್ಟರು. ಕೃಷ್ಣ ಉರಿದು ಬಿದ್ದ. ತಾಯಿ ಹೇಳಿದ ಮಾತನ್ನು ಮೀರಿ ನಿತ್ಯಕ್ಕಿಂತ ಹೆಚ್ಚು ಕುಡಿದು ಮಲಗಿದ.

ಬೆಳಿಗ್ಗೆ ಓಲಗದ ಸದ್ದು ಅವನನ್ನು ಎಚ್ಚರಿಸಿತು. ಇನ್ನು ಕೆಲವೇ ಗಂಟೆಗಳಲ್ಲಿ ತನ್ನ ಮದುವೆಯಾಗಲಿದೆ ಎನ್ನುವ ವಿಷಯ ಸಹ ಅವನನ್ನು ಮುದಗೊಳಿಸಲಿಲ್ಲ. ''ಇನ್ನು ಎದ್ದಿಲ್ಲವೇನೋ'' ಎನ್ನುತ್ತಾ ಅವನ ಸ್ನೇಹಿತರು ಧಾಳಿ ಇಟ್ಟಾಗ ವಿಧಿ ಇಲ್ಲದೇ ಎದ್ದ.

ರಾತ್ರಿ ನಿತ್ಯಕ್ಕಿಂತ ಹೆಚ್ಚಿಗೆ ಕುಡಿದದ್ದು ನೆನಪಿಗೆ ಬಂತು. ತಾಯಿ ಕರೆಯಲು ಬರುವ ಮೊದಲೇ ಎದ್ದು ಬಚ್ಚಲು ಮನೆಗೆ ಹೋದ. ನಂತರ, ಸ್ನೇಹಿತರ ಮಾತಿಗೆ ಎದುರಾಡದೇ ಅವರು ಹೇಳಿದಂತೆ ಕೇಳುತ್ತಾ ಮದುಮಗನ ವೇಷವನ್ನು ಧರಿಸಿದ. ಹಸೆಮಣೆಯನ್ನು ಹತ್ತಿದ. ಮದುವೆಯ ಕಾರ್ಯಕಲಾಪಗಳು ಪ್ರಾರಂಭವಾದವು.

ಪಕ್ಕದಲ್ಲಿ ಕುಳಿತ ಬೃಂದಳ ಕಡೆ ಕತ್ತೆತ್ತಿ ನೋಡುವ ಸಾಹಸ ಮಾಡಲಿಲ್ಲ.

ಅವಳ ಕೊರಳಿಗೆ ಹಾರ ಹಾಕುವಾಗ, ಅವಳ ಕತ್ತಿಗೆ ಮಾಂಗಲ್ಯ ಕಟ್ಟುವಾಗ ಅವನ ಕೈ ನಡುಗಿತು. ಮೊಟ್ಟ ಮೊದಲ ಬಾರಿಗೆ ತಾನು ತಪ್ಪು ಮಾಡುತ್ತಿದೇನೆ ಅನ್ನುವ ಅನುಭವುಂಟಾಯಿತು. ಸಪ್ತಪದಿ ತುಳಿಯುವಾಗ ಅವಳ ಕೈ ಹಿಡಿದ... ಮಧುರ ಅನುಭವದ ಬದಲು, ಅವಳ ಕೈಯ ಶಾಖ ತನ್ನ ಮೈಯಲ್ಲಿ ಉರಿಯನ್ನುಂಟು ಮಾಡುತ್ತಿದೆ ಅಂದೆನ್ನಿಸಿತ್ತು... ಆದರೆ ಕಾರ್ಯ ಕಲಾಪಗಳೆಲ್ಲ ಮುಗಿದು, ಅವರಿಬ್ಬರೂ ದಂಪತಿಗಳಾಗಿದ್ದರು.

ಕಾರ್ಯಕಲಾಪಗಳೆಲ್ಲ ಚುಟುಕವಾಗಿದ್ದರೂ, ಕೃಷ್ಣ ಬಳಲಿಕೆಯಿಂದ, ತಲೆ ನೋವು ಎಂದು ಮಲಗಿದ. ಸ್ನೇಹಿತರು ಬಲವಂತವಾಗಿ ಎಬ್ಬಿಸಿ ಊಟಕ್ಕೆ ಕರೆ ತಂದಿದ್ದರು. ಅವರ ಹಾಸ್ಯ ಕುಚೋದ್ಯ ಅವನಿಗೆ ಬೇಡವೆನಿಸಿತ್ತು. ಊಟವಾಗುತ್ತಿದ್ದಂತೇ ಮತ್ತೆ ರೂಮನ್ನು ಸೇರಿದ. ಸ್ನೇಹಿತರು ಸುತ್ತುವರೆದರು.

ಆ ರಾತ್ರಿ, ಮದುಮಕ್ಕಳು ತೋಟದ ಮನೆಯಲ್ಲಿ ಏಕಾಂತವಾಗಿರಲು ಸಿದ್ಧ ಮಾಡಿಸಿದಳು ಶಾರದಾ... "ಬೃಂದಾ ಒಬ್ಬಳೇ ಅಲ್ಲಿಗೆ ಹೋಗುವುದು ಬೇಡ... ಕೋಮಲ ಅವಳ ಜೊತೆ ಹೋಗಲಿ. ಕೃಷ್ಣ ಅವನ ಸ್ನೇಹಿತರ ಜೊತೆ ಬರುತ್ತಾನೆ." ಎಂದು ಮುಂದಾಗಿ ಅವರುಗಳನ್ನು ಕಳಿಸಿದಳು. ಆದರೆ ಆ ರಾತ್ರಿ ಕೃಷ್ಣನಿಗಾಗಿ ಕಾದು ಕಾದು ನಿದ್ದೆ ಹೋದಳು ಬೃಂದಾ.

ಸ್ನೇಹಿತರೊಡನೆ ಮಜವಾಗಿ ಕುಡಿದು, ನಿದ್ದೆ ಹೋದ. ಆ ರಾತ್ರಿ ಕಳೆದು ಬೆಳಗಾಯಿತು. ಸ್ನೇಹಿತರು ಹೊರಟುಹೋದರು. ವಿಷಯ ತಿಳಿದ ಶಾರದಾ ಸಿಟ್ಟಾದಳು.

"ನಿನ್ನ ಸ್ನೇಹಿತರು ನಿನಗೆ ಎಂಥಾ ಮೋಸ ಮಾಡಿದರು... ನಿನಗಾದ್ರೂ ಬುದ್ಧಿ ಬೇಡ್ವಾ? ಅಲ್ಲಿ ನಿನಗೋಸ್ಕರ ನಿನ್ನ ಹೆಂಡತಿ ಕಾಯ್ತಾ ಕೂತಿರ್ತಾಳೆ ಅನ್ನೋ ಜ್ಞಾನನಾದ್ರೂ ಬೇಡ್ವಾ?"

"ನನ್ನ ಸ್ನೇಹಿತರನ್ನ ಬೈಯಬೇಡಮ್ಮ. ಅವರದ್ದೇನೂ ತಪ್ಪಿಲ್ಲ. ನಾನೇ ಅವರುಗಳನ್ನು ಉಳಿಸಿಕೊಂಡೆ. ನಾನು ಬೇಕೂಂತ ಅಲ್ಲಿಗೆ ಹೋಗಲಿಲ್ಲ... ಯಾಕೆ ಗೊತ್ತಾ? ನಿನಗೆ ಸೊಸೆ ಬೇಕಾಗಿತ್ತು... ನಾನು ಮದುವೆ ಮಾಡಿಕೊಂಡೆ. ಇನ್ನು ನೀನುಂಟು... ಅವಳುಂಟು."

"ಸ್ವಲ್ಪ ಮೆಲ್ಲಗೆ ಮಾತಾಡೋ... ಅವಳ ಚಿಕ್ಕಪ್ಪಂಗೆ ಕೇಳಿಸಿದ್ರೆ

ಏನಂದುಕೊಂಡಾರು?''

''ಅವರು ಏನಾದ್ರೂ ಅಂದುಕೊಳ್ಳಲಿ. ಈ ವಿಷಯದಲ್ಲಿ ನೀನು ಬಲವಂತ ಮಾಡಬೇಡ''

ಶಾರದಾಳ ತಲೆಯಲ್ಲಿ ನಾನಾ ಕೆಟ್ಟ ಆಲೋಚನೆಗಳು ಓಡಾಡಿದವು. ಮಗ ಆರೋಗ್ಯವಂತ ನಾಗಿಲ್ಲದೇ ಇದ್ದರೆ, ತಾನು ಮಗನಿಗೆ ಮದುವೆ ಮಾಡಿ ಏನು ಪ್ರಯೋಜನ? ಈ ವಂಶ ಬೆಳೆಯಬೇಡವೇ?... ಇವನೇಕೆ ಹೀಗೆ ಮಾಡಿದ?

ಇವನು ನನಗೆ ಬುದ್ಧಿ ಕಲಿಸಲು ನೋಡಿದ್ದರೆ, ನಾನೂ ಇವನಿಗೆ ಬುದ್ಧಿ ಕಲಿಸದೇ ಬಿಡುವುದಿಲ್ಲ. ಆದರೆ ಮೊದಲು ಬೀಗರು ಹೊರಡಲಿ ಎಂದು ತನ್ನಲ್ಲೇ ಹೇಳಿಕೊಂಡು, ನಗುಮುಖ ಹಾಕಿಕೊಂಡು ಸರಭರನೆ ಓಡಾಡಿದಳು.

ಆ ದಿನ ತೋಟದ ಆಳು ಕಾಳುಗಳಿಗೆಲ್ಲಾ ಊಟ ಹಾಕಿಸಿ ಉಡುಗೊರೆ ಕೊಟ್ಟಿದ್ದಾಯಿತು. ಬೃಂದಳನ್ನು ಅಲ್ಲಿಯೇ ಉಳಿಸಿಕೊಂಡು, ಕಲ್ಯಾಣಿಯನ್ನು ಕೋಮಲಳನ್ನು ತೋಟದ ಮನೆಗೆ ಕಳಿಸಿದಳು ಶಾರದಾ.

''ನೀನು ನಿನ್ನ ಗಂಡನ ಜತೇಲೇ ಇರು. ಅವನನ್ನು ಬಿಟ್ಟು ಹೊರಗೆ ಬರಬೇಡ.'' ಎಂದು ಬಲವಂತವಾಗಿ ಬೃಂದಳನ್ನು ರೂಮಿಗೆ ಕಳಿಸಿದಳು. ಅವಳು ಒಳಗೆ ಬಂದೊಡನೆ ಮಲಗಿದ್ದವನು ಎದ್ದು ಕಿಟಕಿಯ ಬಳಿ ನಿಂತ.

ಹಿಂದಿನ ದಿನದಿಂದಲೂ ಬಿಗುಮಾನದಿಂದಲೇ ಇದ್ದ ಗಂಡನನ್ನು ಗಮನಿಸಿದಳು. ತನ್ನಿಂದ ಏನಾದರೂ ಪಚಾರವಾಗಿರಬಹುದೇ... ಮದುವೆಯಾದ ರಾತ್ರಿಯನ್ನು ಹೆಂಡತಿಯೊಡನೆ ಕಳೆಯದಿರಬೇಕಾದರೆ, ಏನೋ ಭಾರಿ ಅಸಮಾಧಾನವಿರಬೇಕೆಂದು ಭಾವಿಸಿದಳು. ಕಾರಣವೇನೆಂದು ಕೇಳಿ ತಿಳಿದುಕೊಳ್ಳುವ ಬಯಕೆಯಾದರೂ, ಸಂಕೋಚ ಲಜ್ಜೆ ಅವಳನ್ನು ತಡೆದವು. ಅವನಾಗಿಯೇ ಏನ್ನದರೂ ಆಡುವನೋ ಎಂದು ಕಾದಳು. ಕಿಟಕಿಯ ಕಡೆಯಿಂದ ಮುಖವನ್ನು ಈ ಕಡೆ ತಿರುಗಿಸದೇ ಹಾಗೇ ನಿಂತವನನ್ನು ಕಂಡು ಒಂದು ರೀತಿಯ ಜಿಗುಪ್ಸೆ ಮೂಡಿತು. ಇವನಿಗೆ ಬಲವಂತದ ಮದುವೆ ಇರಬಹುದು, ನಾನು ಬೇಡವಾದ ಹೆಂಡತಿ... ಒಂದೆರಡು ದಿನಗಳ ನಂತರ ಸರಿ ಹೋಗುತ್ತಾನೆಂದು ತನ್ನಲ್ಲೇ ಹೇಳಿಕೊಂಡು, ಹಾಗೇ ಕುಳಿತಲ್ಲೇ ನಿದ್ದೆ ಹೋದಳು.

ಎಲ್ಲರೂ ಮಲಗಿಯಾದಮೇಲೆ, ಆ ಕತ್ತಲೆಯಲ್ಲೇ ಕೃಷ್ಣ ಹೊರಗೆ ಹೊರಟುಹೋದ... ಸೀದಾ ತೋಟದ ಮನೆಗೆ ಬಂದ. ಮುಂಬಾಗಿಲನ್ನು ಬಡಿಯದೇ ಎಂದಿನಂತೆ ಮಾಡದ ಹೆಂಚನ್ನು ತೆಗೆದು ಬಚ್ಚಲು ಮನೆಯ ಕಟ್ಟೆಯ ಮೇಲೆ ಧುಮುಕಿದ. ಧಡ್ ಎಂಬ ಸದ್ದಿಗೆ ಕಲ್ಯಾಣಿಗೆ ಎಚ್ಚರವಾಯಿತು. ತನ್ನ ಮನೆಯಲ್ಲಿ ಏನಿದೆ ಅಂತ ಕಳ್ಳರು ಬಂದಿರುತ್ತಾರೆ... ಬೆಕ್ಕಿರಬಹುದು ಎಂದು ಮಗ್ಗುಲು ಬದಲಾಯಿಸಿ ಮಲಗಿದವಳಿಗೆ ಯಾರೋ ಪಿಸುದನಿಯಲ್ಲಿ ''ಕಲ್ಯಾಣಿ... ಕಲ್ಯಾಣೀ...'' ಎಂದು ಕರೆದಂತಾಯಿತು... ತಾನು ಮಾತನಾಡಿದರೆ ಕೋಮಲಂಗೆ ಎಚ್ಚರವಾದೀತೆಂದು ಹೆದರಿ, ಹಾಗೇ ಉಸಿರು ಬಿಗಿಹಿಡಿದೂ ಮಲಗಿದಳು. ಮತ್ತು ಒಂದೆರಡು ಬಾರಿ ಆ ಧ್ವನಿ ಕೇಳಿದಾಗ, ಅದು ಕೃಷ್ಣನ ಧ್ವನಿಯೆಂದು ತಿಳಿಯಿತು. ಇಷ್ಟು ಹೊತ್ತಿನಲ್ಲಿ ಇಲ್ಲಿ ಏನು ಮಾಡುತ್ತಿದಾನೆಂದು ಬೇಸರಿಸಿಕೊಂಡು, ಕೈಯಲ್ಲಿ ಟಾರ್ಚನ್ನು ಹಿಡಿದು, ರೂಮಿನಿಂದ ಹೊರಗೆ ಬಂದಳು. ಕೋಮಲಂಗೆ ಎಚ್ಚರವಾದರೂ ಅವಳು ಹೊರಗೆ ಬರದಿರಲಿ ಎಂದು, ರೂಮಿನ ಬಾಗಿಲನ್ನು ಹೊರಗಿನಿಂದ ಭದ್ರಪಡಿಸಿದಳು. ಕತ್ತಲೆಯಲ್ಲಿ ನಿಂತಿದ್ದ ಕೃಷ್ಣ, ಹಿಂದಿನಿಂದ ಅವಳನ್ನು ಬಲವಾಗಿ ಹಿಡಿದ. ಕೊಸರಿಕೊಳ್ಳಲು ಪ್ರಯತ್ನಿಸಿದಳು.

''ನಿನ್ನನ್ನು ಬಿಟ್ಟು ಇರುಕ್ಕೆ ಆಗುಲ್ಲ ಕಲ್ಯಾಣೀ... ಅದಕ್ಕೇ ನಾನು ಬಂದು ಬಿಟ್ಟೆ...''

''ನೀನು ತಪ್ಪು ಮಾಡ್ತಿದೀಯ ಕೃಷ್ಣ... ಈಗ ನಿನ್ನ ಮದುವೆಯಾಗಿದೆ. ಇದನ್ನೆಲ್ಲಾ ಸಾಕು ಮಾಡು... ನೀನು ಹೇಳಿದಂತೆ ನಾನು ಇನ್ನು ಮೇಲೆ ಕೇಳೋಲ್ಲ. ಹೊರಟು ಹೋಗು...'' ದೂರತಳ್ಳಲು ಪ್ರಯತ್ನಿಸಿದಷ್ಟು ಅವನ ಹಿಡಿತ ಬಿಗಿಯಾಯ್ತು.

''ನಾನು ನಿನ್ನ ಹೆಂಡತಿಗೆ ಹೇಳ್ತೀನಿ...'' ಹೆದರಿಸಿದಳು.

''ನೀನು ಯಾರಿಗೂ ಹೇಳುಲ್ಲ. ನಂಗೆ ಗೊತ್ತು... ನಾನು ಬರಲಿ ಅಂತ ನಿನಗೂ ಆಸೆ ಆಗ್ತಾ ಇತ್ತು ಅಲ್ವಾ? ನಿಜ ಹೇಳು...!

''ಥೂ... ನೀಚ... ಹೊರಟು ಹೋಗು... ನನ್ನ ಬಾಳನ್ನೇ ಹಾಳು ಮಾಡಿದವ ನೀನು... ನಿನಗೋಸ್ಕರ ನಾನು ಕಾಯ್ತೀನಾ? ಖಂಡಿತಾ ಇಲ್ಲ.''

''ಹೋಗಲಿ ಬಿಡು... ಕೋಮಲಂಗೆ ಹೆದರಿ, ನನ್ನವಳಂತೂ ಆಗ್ತೀಯಲ್ಲ. ನನಗೆ ಅಷ್ಟೇ ಸಾಕು...'' ಎನ್ನುತ್ತಾ ತನ್ನ ಆಸೆಯನ್ನು ಪೂರೈಸಿಕೊಂಡ. ಈಗ ಕಲ್ಯಾಣಿಯ ಸಮಸ್ಯೆ ಹೆಚ್ಚಿತ್ತು. ತನ್ನಿಂದ ಬೃಂದಳಿಗೆ ಅನ್ಯಾಯವಾಗಬಾರದು. ತಾನು ಈ ಮನೆಯಲ್ಲಿದ್ದರೆ, ಅವರುಗಳಿಗೆ ತಿಳಿಯದಂತೆ ಬಂದೇ ಬರುತ್ತಾನೆ. ತಾನೇ ಇಲ್ಲಿರಬಾರದು ಅಂತ ನಿಶ್ಚಯಿಸಿಕೊಂಡಳು. ಕತ್ತೆಯಂತೆ ಬಿದ್ದುಕೊಂಡಿದ್ದನನ್ನು ಎಬ್ಬಿಸಿದಳು.

''ಈಗ ನೀನು ದಯವಿಟ್ಟು ಇಲ್ಲಿಂದ ಹೊರಟುಹೋಗು ಯಾರಿಗಾದರೂ ತಿಳಿದರೆ ಅಪವಾದ ಬರುತ್ತೆ...''

''ಏಯ್ ಹೋಗೇ... ಇದು ನನ್ನ ಮನೆ. ನಾನು ಇಲ್ಲೇ ಇರ್ತೀನಿ.''

''ನಿನಗೆ ಗೊತ್ತಿಲ್ಲ. ಇಲ್ಲಿ ಸುತ್ತ ಮುತ್ತ ಪೋಲಿಸ್ನೋರು ತಿರುಗ್ತಾ ಇರ್ತಾರೆ ಅಂತ ತೋಟದ ಆಳುಗಳು ಹೇಳ್ತಾ ಇರ್ತಾರೆ. ನೀನೀಗ ಹೋಗೋದೇ ಒಳ್ಳೇದು... ಅವರ ಕೈಗೆ ಸಿಕ್ಕಿ ಬಿದ್ದರೆ ಹಗರಣವಾಗುತ್ತೆ.''

ಪೋಲಿಸರ ಹೆಸರು ಕೇಳಿ ಅವನು ಎಚ್ಚರಗೊಂಡ. ''ನಾನೀಗ ಹೋಗ್ತೀನಿ. ಆದರೆ ನನಗೆ ನೀನು ಬೇಕೆನಿಸಿದಾಗ ಮತ್ತೆ ಬರ್ತೀನಿ'' ಎಂದ.

''ಒಂದ್ಮಾತು ಹೇಳು ನೀನು... ಆ ಹುಡುಗಿಯ ಬಾಳನ್ನು ಯಾಕೆ ಹಾಳು ಮಾಡ್ತಿದೀಯ! ಅವಳು ನಿನಗೆ ಏನು ಅನ್ಯಾಯ ಮಾಡಿದ್ದಳು?''

''ಅಮ್ಮನಿಗೋಸ್ಕರ ಅವಳನ್ನು ಮದುವೆಯಾದೆ. ಅಮ್ಮನ ಜೊತೆ ಬಿದ್ದಿರಲಿ... ನನಗೆ ನೀನು ಸಾಕು ಕಲ್ಯಾಣೀ...'' ಕಲ್ಯಾಣಿ ಮುಂಬಾಗಿಲನ್ನು ತೆಗೆದಳು... ಅವನು ಕತ್ತಲಲ್ಲಿ ಮರೆಯಾಗಿ ಹೋದ. ಬಾಗಿಲನ್ನು ಭದ್ರಪಡಿಸಿ, ಇವನಿಂದ ತಪ್ಪಿಸಿಕೊಳ್ಳಲು ಏನು ಉಪಾಯವಿದೆ ಎಂದು ಚಿಂತಿಸುತ್ತಾ ಮಲಗಿದಳು.

''ಈ ಕೋಮಲ ಒಬ್ಬಳು ಇಲ್ಲದೇ ಇದ್ದಿದ್ದರೆ ಅವನಿಗೆ ಸರಿಯಾಗಿ ಬುದ್ಧಿ ಕಲಿಸುತ್ತಿದ್ದೆ'' ಎಂದು ಕೊಂಡು ತಂಗಿಯ ಕಡೆ ನೋಡಿದಳು.

ತನ್ನ ಮಗ, ತನ್ನ ಹೆಂಡತಿಯೊಡನೆ ಪ್ರೀತಿಯಿಂದ ಇಲ್ಲ ಎನ್ನುವುದನ್ನು ಶಾರದಾ ಕಂಡು ಕೊಂಡಳು. ಬೃಂದಾ ಏನೂ ಹೇಳದಿದ್ದರೂ ಅವಳ ಉದಾಸೀನದ ಮುಖದಿಂದ ಎಲ್ಲಾ ಅರ್ಥವಾಗಿತ್ತು... ಆದರೆ ಬಾಯಿ ಬಿಟ್ಟು

ಕೇಳಲು ಅಂಜಿದಳು.

''ಚಿಕ್ಕಪ್ಪನ್ನ ನೋಡಬೇಕೆನಿಸಿದ್ದರೆ ಒಂದೆರಡು ದಿನಗಳ ಮಟ್ಟಿಗೆ ಹೋಗಿ ಬಾ... ಪಾಪ ಈಗ ಅವರೂ ಒಬ್ಬರೇ...'' ಎಂದು ನುಡಿದಳು.

ಬೃಂದಾ ಕಣ್ಣೀರು ಸುರಿಸಿದಾಗ, ಸಮಾಧಾನಗೊಳಿಸಿ, ಗಾಡಿ ಕಟ್ಟಿಸಿ, ಅವಳನ್ನು ತವರು ಮನೆಗೆ ಕಳಿಸಿದಳು. ''ಅವರನ್ನು ನೋಡಿಕೊಂಡು ಬೇಗ ಬಂದು ಬಿಡು... ನೀನು ರಾತ್ರಿ ಅಲ್ಲೇ ಉಳಿದುಕೊಂಡರೆ, ಕೃಷ್ಣ ಏನಂತಾನೋ'' ಅಂತ ಮಾತು ಸೇರಿಸಿದಳು. ಬೃಂದಳ ಜೊತೆ ಕೋಮಲಳನ್ನು ಕಳಿಸಿದಳು. ಎಲ್ಲವನ್ನು ತುಟಿಪಿಟಕೆನ್ನದೇ ಕೃಷ್ಣ ಗಮನಿಸುತ್ತಿದ್ದ. ಗಾಡಿ ಅತ್ತ ಹೊರಟ ಕೂಡಲೇ ಶಾರದಾ ಮಗನನ್ನು ತರಾಟೆಗೆ ತೆಗೆದುಕೊಂಡಳು.

''ನಿನ್ನ ಹೆಂಡತಿಯ ಮನಸ್ಸನ್ನು ನೋಯಿಸಬೇಡವೋ ಮೂದೇವಿ... ಅವಳು ಸಾಕ್ಷಾತ್ ದೇವಿ... ನಿನ್ನನ್ನು ಉದ್ಧಾರ ಮಾಡುಕ್ಕೆ ನಿನ್ನ ಕೈ ಹಿಡಿದಿರೋದು''

''ದೇವಿ ಆದರೆ ಅವಳನ್ನು ದೇವರ ಮನೇಲಿಟ್ಟು ಪೂಜೆ ಮಾಡು. ನನಗೆ ದೇವಿ ಸಹವಾಸ ಬೇಕಿಲ್ಲ.''

''ಅವಳ ಸಹವಾಸ ಬೇಡಾಂದ್ರೆ ಹೇಗೆ? ಅವಳು ನಿನ್ನ ಹೆಂಡತಿ. ಅವಳ ಬಿಸಿ ಉಸಿರು ನಿನಗೆ ತಾಗಿದರೂ, ನೀನು ಸುಟ್ಟು ಭಸ್ಮವಾಗಿ ಹೋಗ್ತೀಯ...''

''ಅವಳನ್ನು ಮುಟ್ಟಿದರೂ ಸುಟ್ಟು ಭಸ್ಮವಾಗಿ ಹೋಗ್ತೀನಿ... ಅವಳ ಮೈ ಶಾಖಕ್ಕೆ ಹೆದರಿಕೆ ಆಗುತ್ತೆ. ನನಗೆ ಅವಳ ಹತ್ತಿರ ಹೋಗೋಕೆ ಆಗುಲ್ಲ.'' ಅವನು ಕೆಟ್ಟದಾಗಿ ನಕ್ಕಾಗ ಶಾರದಾ ಹೆದರಿದಳು.

ಇದೆಂಥಾ ವಿಚಿತ್ರ...? ಮಡದಿಯ ಮೈಮುಟ್ಟಲು ಇವನು ಹೆದರಬೇಕಾದರೆ, ಅವರಿಬ್ಬರ ನಡುವೆ ಏನೋ ವಿಚಿತ್ರ ಅನುಭವ ನಡೆದಿರಬೇಕು. ಇಲ್ಲದಿದ್ದರೆ ಅವಳಿಂದ ದೂರ ದೂರವೇ ಏಕಿರುತ್ತಾನೆ! ಏನಿರಬಹುದು? ಇದು ಗ್ರಹದೋಷವೇ...? ಪ್ರೇತ ಪಿಶಾಚಿಗಳ ಕಾಟವೇ? ತಾನು ಇವತ್ತೇ ಹೋಗಿ ಪಂಡಿತರನ್ನು ಕಂಡು, ಪರಿಹಾರವನ್ನು ಮಾಡಿಸಬೇಕು ಎಂದುಕೊಂಡು ಸರಸರನೆ ಮನೆ ಕೆಲಸ ಮಾಡತೊಡಗಿದಳು. ಕೃಷ್ಣ ತನ್ನ ಸ್ನೇಹಿತರನ್ನು ಹುಡುಕಿಕೊಂಡು ಹೊರಟ.

ಪಂಡಿತರ ಮುಂದೆ ದಾನ ದಕ್ಷಿಣೆಗಳನ್ನಿಟ್ಟು ಕೈಮುಗಿದು ನುಡಿದಳು.

''ನನ್ನ ಮಗ ಒಂದು ನೆಲೆಗೆ ಬರಲಿ ಅಂತ ಅವನ ಮದುವೆ ಮಾಡಿಸಿದೆ. ಆದರೆ ಈಗ ಆ ಹುಡುಗಿಗೆ ದ್ರೋಹ ಮಾಡಿದೆನೇನೋ ಅಂತನ್ನಿಸುತ್ತಿದೆ.''

''ಎಲ್ಲಾ ದೈವೇಚ್ಛೆ... ತಪ್ಪು ಸರಿ ಎಲ್ಲವನ್ನು ದೈವ ನಮ್ಮ ಬೆನ್ನ ಹಿಂದೆ ನಿಂತು ನಮ್ಮಿಂದ ಮಾಡಿಸುತ್ತೆ. ನಮ್ಮ ಕೈಲಿ ಏನಿಲ್ಲ...''

''ಸೊಸೆಯ ಕೈಗೆ ಎಲ್ಲಾ ಜವಾಬ್ದಾರಿ ವಹಿಸಿ, ನಿಶ್ಚಿಂತೆಯಾಗಿರೋಣ ಅಂತ ಅಂದುಕೊಂಡಿದ್ದೆ. ಆದರೆ ಅವರಿಬ್ಬರಲ್ಲಿ ಅನ್ಯೋನ್ಯತೆ ಇಲ್ಲ ಅಂತನ್ನಿಸುತ್ತೆ. ಅವನೇಕೋ ಅವಳನ್ನು ದೂರವೇ ಇಟ್ಟಿದಾನೆ.''

''ಏನೋ ಅಸಮಾಧಾನವಿರಬಹುದು. ಅದು ಅವರವರಲ್ಲೇ ಸರಿ ಹೋಗುತ್ತೆ. ಅದಕ್ಕೆ ನೀವೇಕೆ ತಲೆಕೆಡಿಸಿಕೊಳ್ತೀರಿ.'' ಪಂಡಿತರು ನಕ್ಕರು.

''ಹಾಗಲ್ಲ ಪಂಡಿತರೇ... ಅವಳನ್ನು ನೋಡಿದರೆ ಹೆಂಡತಿ ಅನ್ನೋ ಭಾವನೇನೇ ಬರುವುದಿಲ್ಲ... ಅವಳ ಬಳಿ ಇದ್ದರೆ ಸುಟ್ಟು ಭಸ್ಮವಾಗಿ ಹೋಗ್ತೀನಿ ಅಂತ ಏನೇನೋ ಹೇಳ್ತಾನೆ. ಇದು ಯಾವುದಾದರೂ ಮೋಹಿನಿಯ ಕಾಟವಿರಬಹುದೇ ಅಂತ ನನಗೆ ಅನಮಾನ.''

''ಇದ್ದರೂ ಇರಬಹುದು. ನಿಮ್ಮ ವಾರಗಿತ್ತಿ ಚಿಕ್ಕಪ್ರಾಯದಲ್ಲೇ ದುರ್ಮರಣಕ್ಕೀಡಾದರಲ್ಲವೇ... ನೀವು ಆ ಹುಡುಗಿಯ ಕೈಯಲ್ಲಿ ಪೂಜೆ ವ್ರತ ಮಾಡಿಸಿ, ಆ ಹುಡುಗಿಯ ದೈವಭಕ್ತಿಯ ಮುಂದೆ ಯಾವ ದುಷ್ಟ ಶಕ್ತಿಯೂ ನಿಲ್ಲುವುದಿಲ್ಲ. ಎಲ್ಲಾ ಸರಿ ಹೋಗುತ್ತದೆ. ಒಂದೆರಡು ತಿಂಗಳು ನಿಮ್ಮ ಮಗ ದೂರವಿರುವುದೇ ಒಳ್ಳೆಯದು. ನೀವು ಭಯಪಡಬೇಡಿ. ಖಂಡಿತಾ ಎಲ್ಲಾ ಸರಿ ಹೋಗುತ್ತೆ.'' ಆಶ್ವಾಸನೆ ಇತ್ತು ಆಶೀರ್ವದಿಸಿ ಕಳಿಸಿದರು.

ಸಂಜೆಯ ಹೊತ್ತಿಗೆ ಬೃಂದಾ ವಾಪಸ್ಸಾದಳು. ಜೊತೆಯಲ್ಲಿ ಚಿಕ್ಕಪ್ಪನೂ ಬಂದಿದ್ದರು. ಶಾರದಾ ವಿಶ್ವಾಸದಿಂದ ಮಾತನಾಡಿಸಿದಳು. ನಂಜುಂಡಯ್ಯ ನಾರಾಯಣಮೂರ್ತಿಗೆ ದೂರದಿಂದಲೇ ಕೈ ಮುಗಿದು ನಮಸ್ಕರಿಸಿ ಕುಶಲವನ್ನು ವಿಚಾರಿಸಿದರು. ಅವರ ಎದುರಿನಿಂದಲೇ ಕೃಷ್ಣ ಮನೆಯಿಂದ ಹೊರಗೆ ಹೊರಟ. ವರ ಕಡೆ ತಿರುಗಿ ಸಹ ನೋಡಲಿಲ್ಲ. ಅವರಿಗೆ ಅವಮಾನವಾದಂತಾಯಿತು. ಆದರೂ ಎಷ್ಟಾಗಲೀ ಅಳಿಯನಲ್ಲವೇ ಎಂದು ಸಹಿಸಿಕೊಂಡರು. ಸ್ವಲ್ಪ ಹೊತ್ತು

ಇದ್ದು ಅವರು ವಾಪಸ್ಸು ಹೊರಟುಹೋದರು.

ಕೃಷ್ಣ ಎಷ್ಟು ಹೊತ್ತಾದರೂ, ಮನೆಗೆ ಬರದಿದ್ದಾಗ, ಹಳೇ ಚಾಳಿ ಎಂದು ಬೈದುಕೊಂಡು, ಸೊಸೆಯನ್ನು ನಯವಾಗಿ ದೂಷಿಸಿದಳು. ''ಅವನ ಅಸಮಾಧಾನಕ್ಕೆ ಏನು ಕಾರಣ ಅಂತ ನೀನು ತಿಳಿದುಕೊಂಡು ಅದನ್ನು ಸರಿಪಡಿಸಬೇಕು. ಅವನ ಸ್ನೇಹಿತರು ಅವನ ತಲೆ ತುಂಬುತ್ತಾರೆ. ಆದಷ್ಟು ಸ್ನೇಹಿತರ ಬಳಿಗೆ ಹೋಗದಂತೆ, ನೀನು ಅವನನ್ನು ನಿನ್ನ ಕಡೆ ಮಾಡಿಕೋಬೇಕು. ಅವನೋ ನಾಸ್ತಿಕ, ಅಂದ್ರೆ ನಾಸ್ತಿಕ... ಅದಕ್ಕೇ ಅವನಿಗೆ ಹೆದರಿಕೆ. ಆದರೆ ನೀನು ಮಾತ್ರ ಈ ಪೂಜೆ ಪುನಸ್ಕಾರ ಒಂದನ್ನು ಬಿಡಬೇಡ. ಎಲ್ಲಾ ನಿನ್ನ ಗಂಡನ ಒಳಿತಿಗಾಗಿಯೇ ತಾನೇ? ನೀನು ಸಾಕ್ಷಾತ್ ದೇವಿ ಇದ್ದ ಹಾಗಿದೀಯ ಅಂತ ಪಂಡಿತರೂ ಹೇಳಿದರು. ನಿನ್ನ ಗಂಡ ನಿನ್ನ ಬಳಿಗೆ ಬಂದೇ ಬರುತ್ತಾನೆ. ಅದು ನನ್ನ ನಂಬಿಕೆ... ವಿಶ್ವಾಸ... ನೀನು ಮಾತ್ರ ಅವನ ಕೈ ಬಿಡಬಾರದು... ನಿನ್ನಿಂದ ನಮ್ಮ ವಂಶ ಬೆಳೆಯಬೇಕು...'' ಎಂದು ಅವಳ ಕೈ ಹಿಡಿದು ಕೇಳಿಕೊಂಡಾಗ ಬೃಂದಳಿಗೂ ವ್ಯಥೆಯಾಯಿತು.

''ಆಗಲಿ ಅತ್ತೇ... ನೀವು ಹೇಳಿದಂತೇ ಮಾಡುತ್ತೇನೆ. ನನ್ನ ಗ್ರಹಚಾರ ಚೆನ್ನಾಗಿಲ್ಲ ಅಂತ ಸದಾ ಚಿಕ್ಕಪ್ಪ ಹೇಳ್ತಾನೇ ಇರ್ತಾರೆ... ಆದರೆ ನಿಮ್ಮಂತಹ ಅತ್ತೆ ಸಿಕ್ಕಿರುವಾಗ, ನನ್ನ ಗ್ರಹಚಾರವಾದರೂ ಸ್ವಲ್ಪ ಚೆನ್ನಾಗಿರಲೇಬೇಕು. ನಾನೂ ನನ್ನ ಗಂಡನನ್ನು ಒಲಿಸಿಕೊಳ್ಳಲು ಪ್ರಯತ್ನಿಸುತ್ತೇನೆ. ನಾನು ನಂಬಿರುವ ದೇವಿ ನನಗೆ ಖಂಡಿತಾ ಸಹಾಯ ಮಾಡ್ತಾಳೆ ಅನ್ನೋ ವಿಶ್ವಾಸ ನನಗಿದೆ. ನೀವು ಚಿಂತಿಸಬೇಡಿ'' ಎಂದಾಗ, ಶಾರದೆಗೆ ಸಮಾಧಾನವಾಯಿತು. ''ಕೋಮಲ ನೀನು ಇವತ್ತು ಇಲ್ಲೇ ಇರು... ಅತ್ತಿಗೆ ಒಬ್ಬಳಿಗೇ ಬೇಜಾರಾಗುತ್ತೆ... ಕಲ್ಯಾಣಿಗೂ ಹೇಳಿ ಕಳಿಸ್ತೀನಿ...'' ಎಂದಳು.

ಆದರೆ, ಆ ರಾತ್ರಿ ಕಲ್ಯಾಣಿಯೂ ಬರಲಿಲ್ಲ. ಕೃಷ್ಣನೂ ಬರಲಿಲ್ಲ. ಹೇಳಿ ಕಳಿಸಿದರೂ, ಕಲ್ಯಾಣಿ ಬರಲಿಲ್ಲ ಅನ್ನೋ ಅಸಮಾಧಾನವೇನೂ ಇರಲಿಲ್ಲ. ಕೃಷ್ಣನ ಚಿಂತೆಯೇ ಅಧಿಕ. ಎಲ್ಲಿ ಹೋದ... ಎಲ್ಲಿಗೆ ಹೋಗಿರಬಹುದು? ಇವನು ಬದಲಾಗಲು ಸಾಧ್ಯವೇ? ಇವನೇಕೆ ನನ್ನನ್ನು ಹೀಗೇ ಸತಾಯಿಸುತ್ತಾನೆ! ಇದೇ ಚಿಂತೆಯಲ್ಲಿ ಆ ರಾತ್ರಿ ಕಳೆಯಿತು.

ಪಕ್ಕದಲ್ಲಿ ಮಲಗಿದ್ದ ಕೋಮಲ ನಿರಾಳವಾಗಿ ನಿದ್ರಿಸುತ್ತಿದ್ದುದನ್ನು ಕಂಡು ಬೃಂದ ಅಸೂಯೆಗೊಂಡಳು. ನಾನೂ ಹೀಗೇ ನಿರಾಂತಕವಾಗಿದ್ದೆ. ಚಿಕ್ಕಪ್ಪನ ಮಾತಿಗೆ ಒಪ್ಪಿ ಇವನನ್ನು ಮದುವೆಯಾಗಬಾರದಾಗಿತ್ತು ಅಂತ ಅನ್ನಿಸಿದರೂ, ಮರುಗಳಿಗೆಯೇ, ಇದರಲ್ಲಿ ಚಿಕ್ಕಪ್ಪನ ತಪ್ಪೇನು? ನನ್ನ ಜಾತಕವೇ ಸರಿ ಇಲ್ಲ. ಅನಾಥೆಯಾಗಿದ್ದ ತನ್ನನ್ನು ಬೆಳೆಸಿ, ಪೋಷಿಸಿದ ಚಿಕ್ಕಪ್ಪನ ಮಾತನ್ನು ಮೀರುವ ಧೈರ್ಯವಿರಲಿಲ್ಲ... ಮದುವೆಯ ನಂತರ, ಅವಳನ್ನು ಬಿಟ್ಟು ಹೋಗುವಾಗ, ತಲೆಯ ಮೇಲೆ ಕೈ ಇಟ್ಟು ನುಡಿದಿದ್ದರು.

''ನನ್ನ ಕರ್ತವ್ಯವನ್ನು ನಿರ್ವಹಿಸಿ ಜವಾಬ್ದಾರಿಯನ್ನು ಕಳೆದುಕೊಂಡಿದೀನಿ. ಇನ್ನು ಮುಂದೆ ಈ ಮನೆ ನಿನ್ನದು. ನನ್ನ ಮನೆಯವರಿಂದ ಯಾವುದೇ ರೀತಿಯ ಆಕ್ಷೇಪಣೆ ಬರದಂತೆ ನಡೆದುಕೊಳ್ಳಬೇಕು. ನಿನ್ನ ಅತ್ತೆ ಹೇಳಿದಂತೆ ಕೇಳಿಬಿಡು. ಯಾವ ತೊಂದರೆಯೂ ಬರುವುದಿಲ್ಲ. ಇನ್ನೂ ಮುಂದೆ ಅವರೇ ನಿನ್ನ ತಂದೆ, ತಾಯಿ, ಚಿಕ್ಕಪ್ಪ ಎಲ್ಲಾ ಅಂತ ತಿಳಕೋ'' ಮುಂದೆ ಮಾತನಾಡಲಾಗದೇ ಗಂಟಲುಬ್ಬಿಬಂದಿತ್ತು. ಕಣ್ಣೀರ ಹನಿ ಅವಳ ತಲೆಯ ಮೇಲೆ ಉದುರಿತ್ತು.

ಇದನ್ನು ಅವಳು ಮರೆಯುವಂತೆಯೇ ಇಲ್ಲ. ಚಿಕ್ಕಪ್ಪ ನನ್ನನ್ನು ಈ ಮನೆಗೆ ಕಳಿಸಿಕೊಟ್ಟಿದ್ದಾರೆ. ಅವರಿಗೆ ಬೇಸರವಾಗದಂತೆ ತಾನು ನಡೆದುಕೊಳ್ಳಬೇಕು... ತನಗೆ ಬೇಸರವಾದರೂ, ತಾನು ಹೋಗಿ ಚಿಕ್ಕಪ್ಪನಿಗೆ ಹೊರೆಯಾಗಿ ಇರಲಾರೆ. ಈ ಮನೆಗೆ ಬಂದು ಸೇರಿದ್ದಾಯಿತು.... ಇಲ್ಲಿಯ ಜೀವನಕ್ಕೆ ಹೊಂದಿಕೊಳ್ಳಬೇಕು. ದೇವಿ ನಡೆಸಿದಂತೆ ನಡೆಯುತ್ತೇನೆ ಎಂದು ಮನದಲ್ಲೇ ದೇವಿಗೆ ಕೈ ಮುಗಿದು ಮಗ್ಗುಲು ಬದಲಾಯಿಸಿದಳು.

ಆ ರಾತ್ರಿ ಕೃಷ್ಣ ಕಲ್ಯಾಣಿಯ ಜತೆ ಚೆನ್ನಾಗಿ ಜಗಳ ಆಡಿದ. ''ಕೈಯಲ್ಲಿ ಹಣವಿಲ್ಲ; ಕಾಸಿಲ್ಲ... ಎಲ್ಲಾದಕ್ಕೂ ಅಮ್ಮನ ಮುಂದೆ ಕೈ ಒಡ್ಡಬೇಕು. ಸಾಕಾಗಿ ಹೋಗಿದೆ. ಅಪ್ಪ ನಿನ್ನ ಮಾತು ಕೇಳ್ತಾರೆ. ಈ ತೋಟ ಜಮೀನು ಎಲ್ಲಾ ಮಾರಿಬಿಡೋಣ ಅಂತ ಹೇಳು. ಆ ಮೇಲೆ ಬಿಸಿನೆಸ್ ಮಾಡೋಣ. ಕೈ ತುಂಬಾ ಹಣ ಬರುತ್ತೆ.''

''ಅದನ್ನೆಲ್ಲಾ ನೀನೇ ಮಾತ್ನಾಡು. ನನಗೆ ಏನೂ ಬೇಕಿಲ್ಲ.''

''ಯಾಕೆ ಬೇಕಿಲ್ಲ...! ಅರ್ಧ ಆಸ್ತೀನೆಲ್ಲಾ ತಾತ ನಿಮ್ಮಪ್ಪನಿಗೆ ಕೊಟ್ಟಿದ್ದರಂತಲ್ಲ. ಅದೆಲ್ಲಾ ಈಗ ನಿನ್ನ ಹೆಸರಿಗೇ ಆಗಿರಬೇಕು ಅಲ್ವಾ!''

''ಇರಬಹುದು... ಅದನ್ಯಾಕೆ ಮಾರಬೇಕು?''

''ಹಾಗಾದರೆ ಇಲ್ಲೇ ಬಿದ್ದು ಕೊಳೀತೀಯಾ ಅನ್ನು.''

''ಕೋಳೀತೀನೋ, ಹಾಳಾಗ್ತೀನೋ ಅದೆಲ್ಲ ನಿನಗೇಕೆ!''

'ಏಯ್ ಕಲ್ಯಾಣೀ... ನಾನು ನಿನ್ನನ್ನು ಪ್ರೀತಿಸ್ತೀನಿ ಕಣೇ... ನಿನಗೆಷ್ಟು ಸುಖ ಕೊಟ್ಟಿಲ್ವಾ?'' ಕುಹಕ ನಗೆ ನಕ್ಕ.

ತಿರಸ್ಕಾರದಿಂದ ಕಲ್ಯಾಣಿ ನುಡಿದಳು. ಇದನ್ನು ಪ್ರೀತಿ ಅಂತಾರಾ? ದ್ರೋಹ ಅಂತಾರೆ. ನೀನು ಮಾಡಿರುವುದು ದ್ರೋಹ. ನಿನಗೆ ಈ ಜನ್ಮದಲ್ಲಿ ಕ್ಷಮೆ ಇಲ್ಲ.''

''ನಿನ್ನನ್ನ ಕ್ಷಮಿಸು ಅಂತ ನಾನೇನೂ ಕೇಳಿಕೊಳ್ಳಲಿಲ್ಲ ಸುಮ್ನಿರು.''

''ನನ್ನ ಮೇಲೆ ಜೋರು ಮಾಡಬೇಡ. ನಾನು ಬೃಂದಾ ಅಲ್ಲ. ನಿನ್ನ ಹೆಂಡತಿ ಮೇಲೆ ನಿನ್ನ ದರ್ಪ ಚಲಾಯಿಸು..'' ಬೃಂದಾಳ ಮಾತು ಬಂದ ಕೂಡಲೇ ಕೃಷ್ಣ ಪೆಚ್ಚಾದ...

''ಒಂದ್ಮಾತು ಹೇಳ್ಲಾ ಕಲ್ಯಾಣೀ... ಅವಳನ್ಯಾಕೋ ನನ್ನ ಹೆಂಡತಿ ಅಂತ ಒಪ್ಪಿಕೊಳ್ಳೋಕೇ ಮನಸ್ಸಾಗ್ತಿಲ್ಲ... ಅವಳ ಬಳಿ ಹೋಗೋಕೆ ಆಗುಲ್ಲ. ಅವಳನ್ನು ಕತ್ತೆತ್ತಿ ನೋಡೋಕೆ ಆಗುಲ್ಲ.''

''ಇದನ್ನೆಲ್ಲ ನನ್ನ ಹತ್ರ ಯಾಕೆ ಹೇಳ್ತೀಯಾ! ಯಾರಾದರೂ ಡಾಕ್ಟರ ಹತ್ತಿರ ಹೋಗಿ ನಿನಗೇನಾಗಿದೆ ಅಂತ ಕೇಳಿ ತಿಳಕೋ... ಇಲ್ಲದಿದ್ದರೆ ಯಾರಾದ್ರೂ ಮಂತ್ರವಾದಿಯ ಹತ್ತಿರ ಹೋಗು.''

''ಇದೇ... ಇದೇ... ಬೇಜಾರಾಗೋದು. ನನಗೆ ಆಪ್ತರು ಯಾರೂ ಇಲ್ಲ. ನಾನು ಮೊದಲ್ನಿಂದ ಯಾರಿಗೂ ಬೇಕಿಲ್ಲ.''

''ಇದಾರಲ್ಲ ನಿನ್ನ ಸ್ನೇಹಿತರು. ಅವರು ಆಪ್ತರು ತಾನೇ... ಅವರ ಹತ್ತಿರ ಹೋಗಿ ನಿನ್ನ ಪುರಾಣಾನೆಲ್ಲಾ ಹೇಳ್ಕೋ...''

''ಕರೆಕ್ಟ್... ನನಗೆ ಅವರೇ ಸರಿ... ನನಗೋಸ್ಕರ ಏನು ಬೇಕಾದ್ರೂ

ಮಾಡ್ತಾರೆ. ನೀವೆಲ್ಲಾ ಯಾತಕ್ಕೂ ಉಪಯೋಗವಿಲ್ಲ'' ಎಂದು ಎದ್ದ. ಅವನು ಹೋಗುವುದನ್ನೇ ಕಾದಿದ್ದು ಧಡಾರನೇ ಬಾಗಿಲನ್ನು ಮುಚ್ಚಿಕೊಂಡಳು.

''ನನ್ನ ಬಾಳನ್ನು ಹಾಳು ಮಾಡಿದ್ದಾಯಿತು. ಇನ್ನು ಬೃಂದಳ ಸರದಿ... ಇಂಥಾ ನೀಚರು ಯಾಕೆ ಹುಟ್ತಾರೋ'' ಎಂದು ಬೈದುಕೊಂಡು ಬಚ್ಚಲು ಮನೆಯ ಕಡೆಗೆ ತಿರುಗಿದಳು. ಯಾರೋ ದಟ ದಡನೆ ಬಾಗಿಲನ್ನು ಬಡಿದಂತಾಯಿತು.

''ಮತ್ತೆ ಬಂದನೇನೋ... ಪಿಶಾಚಿ'' ಎಂದು ಸಿಡುಕುತ್ತಾ ಬಾಗಿಲನ್ನು ತೆಗೆದಳು. ಬಾಗಿಲಾಚೆ ಇಬ್ಬರು ಪೋಲಿಸರು ನಿಂತಿದ್ದರು. ಇವಳ ಎದೆ ನಡುಗಿದಂತಾಯಿತು... ''ಕೃಷ್ಣನ್ನ ಕರೀರಿ...'' ಒಬ್ಬ ಹೇಳಿದ.

''ಇಲ್ಲ... ಅವನಿಲ್ಲಲ್ಲ...''

''ಯಾಕಮ್ಮಾ ಸುಳ್ಳು ಹೇಳ್ತೀರಾ... ಒಳಗೆ ಹೋಗಿ, ಕರೆದುಕೊಂಡು ಬನ್ನಿ.''

''ಇಲ್ಲಾ... ಅವನಿಲ್ಲ ಇಲ್ಲಿ ಅಂತ ಹೇಳಿದ್ನಲ್ಲ. ಬೇಕಾದರೆ ನೀವೇ ನೋಡಿಕೊಳ್ಳಿ...'' ಎನ್ನುತ್ತಾ ಪಕ್ಕಕ್ಕೆ ಸರಿದು ಜಾಗಬಿಟ್ಟಳು. ಅವರು ಒಳಗೆಲ್ಲಾ ಓಡಾಡಿ ನೋಡಿ ಬಂದರು.

''ಸುಳ್ಳು ಹೇಳಿದ್ರೆ... ನಿಮ್ಮನ್ನು ಅರೆಸ್ಟ್ ಮಾಡಬೇಕಾಗುತ್ತೆ... ಅವನನ್ನು ಎಲ್ಲಿ ಅಡಗಿಸಿಟ್ಟಿದೀರಿ ಹೇಳಿ...''

''ನಾನೇಕೆ ಸುಳ್ಳು ಹೇಳಲಿ! ಅವನು ಇಲ್ಲಿಗೇ ಬಂದೇ ಇಲ್ಲ ಅಂತ ಹೇಳ್ತಾ ಇಲ್ವಾ?''

''ನೋಡಮ್ಮಾ... ಅವನು ರಾತ್ರಿ ಹೊತ್ತು ಇಲ್ಲಿಗೆ ಬರುತ್ತಾನೆ ಅನ್ನೋ ಸುಳಿವು ನಮಗೆ ಸಿಕ್ಕಿದೆ. ಅವನೆಲ್ಲಿ ಅಂತ ನೀವು ಹೇಳಿದ್ರೆ... ನಮಗೇ ತೊಂದರೆ ಇಲ್ಲ... ನಿನ್ನೆ ರಾತ್ರಿ ಇಲ್ಲಿಗೆ ಬಂದಿದ್ನೋ ಇಲ್ವೋ...?'' ಗದರಿಸಿದ.

''ಬಂದಿದ್ದ... ಸ್ವಲ್ಪ ಹೊತ್ನಲ್ಲೇ ವಾಪಸ್ಸು ಹೊರಟುಹೋದ. ಎಲ್ಲಿಗೆ ಹೋದ್ನೋ... ನನಗೆ ತಿಳೀದು.''

''ನಿಮಗೂ ಅವನಿಗೂ ಏನು ಸಂಬಂಧ?''

''ಅವನು ನನ್ನ ತಮ್ಮ...'' ಅವಳ ಗಂಟಲು ತಡೆಯಿತು.

''ಇಲ್ಲಿ ಇನ್ನು ಯಾರ್‍ಯಾರು ಇದೀರಿ...?''

''ಯಾರೂ ಇಲ್ಲ ನಾನೊಬ್ಬಳೇ ಇರುವುದು...''

''ನೀವು ಸುಳ್ಳು ಹೇಳ್ತಿದೀರಿ ಅಂತ ನಿಮ್ಮ ಮಾತಿನಿಂದ ಗೊತ್ತಾಗ್ತಾ ಇದೆ. ಇರಲಿ ಮೊದಲು ಅವನನ್ನು ಹಿಡಿಯಬೇಕು... ನಂತರ ನಿಮ್ಮನ್ನು ವಿಚಾರಿಸಿಕೊಳ್ತೀನಿ...'' ಅವರುಗಳು ಹೊರಟು ಕಲ್ಯಾಣಿ ಉಗುಳು ನುಂಗಿದಳು.

ಆ ನಂತರ, ಎರಡು ಮೂರು ದಿನಗಳಾದರೂ, ಕೃಷ್ಣ ಬರದಿದ್ದಾಗ, ಪೋಲಿಸರಿಗೆ ಹೆದರಿ, ಅಡಗಿ ಕುಳಿತಿರಬಹುದು... ಅಥವಾ... ಪೋಲಿಸರ ಕೈಗೆ ಸಿಕ್ಕಿಬಿದ್ದಿರಬಹುದೆಂದು ಭಾವಿಸಿದಳು. ಪೋಲಿಸರ ಕೈಗೆ ಸಿಕ್ಕಿಬಿದ್ದರೆ ಏನೇನಾಗುತ್ತದೋ, ಅವರುಗಳು ಬಂದು ತನ್ನನ್ನು ವಿಚಾರಿಸಿದರೆ ತಾನು ಏನು ಹೇಳಬೇಕು? ಈ ತೊಳಲಾಟದಲ್ಲಿ ಬಳಲಿಹೋದಳು. ಆದರೆ ಅವರುಗಳು ಯಾರೂ ಬರಲಿಲ್ಲ.

ಆತಂಕಗೊಂಡಿದ್ದ ಶಾರದಾ ಕಲ್ಯಾಣಿಯ ಬಳಿ ಬಂದು ವಿಚಾರಿಸಿದಳು. ''ಕೃಷ್ಣ ಮನೆಗೂ ಬರದೇ ಎಲ್ಲಿ ತಿರುಗಾಡಿಕೊಂಡಿದಾನೋ..'' ಇಲ್ಲಿ ಸುತ್ತ ಮುತ್ತ ಪೋಲಿಸ್ನೋರು ತಿರುಗಾಡ್ತಾ ಇರ್ತಾರೆ ಅಂತ, ತೋಟದ ಆಳುಗಳು ಹೇಳಿದ್ರು. ಅವರ್‍ಯಾಕೆ ಕೃಷ್ಣನ್ನ ಹುಡುಕುತ್ತಿದಾರೆ...? ಮತ್ತೇನು ಅಪರಾಧ ಮಾಡಿರಬಹುದು?''

''ನಂಗೊತ್ತಿಲ್ಲ ಚಿಕ್ಕಮ್ಮ... ಅವನಂತೂ ಇಲ್ಲಿಗೆ ಬಂದಿಲ್ಲ.''

''ಅವನು ಬಂದರೆ, ಮನೆಯಿಂದಾಚೆ ಕಳಿಸಲೇಬೇಡ. ನಂಗೊತ್ತು ನಿನಗೂ ಅವನಿಗೂ ಮನಸ್ತಾಪ ಅಂತ. ಆದರೂ... ಅವನು ಬಂದು ಅಡಗಿಕೊಂಡರೆ ಯಾರಿಗೂ ತಿಳಿಸಬೇಡ...'' ಹೂಂ ಎನ್ನುವಂತೆ ತಲೆ ಆಡಿಸಿದಳು.

ಮತ್ತೆ ನಾಲ್ಕು ದಿನ ಕಳೆದರೂಕೃಷ್ಣ ಬರಲೇ ಇಲ್ಲ. ಆದರೆ, ಕೃಷ್ಣನದು ಹೊಸದಲ್ಲ... ಇಂದಲ್ಲ ನಾಳೆ ಬಂದೇ ಬರುತ್ತಾನೆ ಎಂದು ಶಾರದಾ ದೃಢ ಮಾಡಿಕೊಂಡರೂ, ಬೃಂದ ಕೇಳಿದರೆ ಏನು ಉತ್ತರ ಹೇಳುವುದೆಂದು ಹೊಳೆಯುತ್ತಿಲ್ಲಿ.

ಮದುವೆಯ ರಾತ್ರಿಯೇ ತನ್ನ ಬಳಿಗೆ ಬರುವ, ಅಥವಾ ಮಾತನಾಡಿಸುವ

ಇಚ್ಛೆಯೇ ಇಲ್ಲದವನ ಬಗ್ಗೆ ಏನು ಕೇಳಿಯಾಳು? ಆದರೂ ಅವನು ತನ್ನ ಪತಿ... ಅವನ ಬಗ್ಗೆ ತನಗೆ ತಿಳಿಸಬೇಡವೇ... ತಾನೇ ಕೇಳುವುದಾದರೂ ಹೇಗೆ? ಮದುವೆಯಾಗಿ ಕೇವಲ ಕೆಲವೇ ದಿನಗಳು ಕಳೆದಿವೆ.

ಚಿಕ್ಕಪ್ಪ, ಮಗಳನ್ನು ನೋಡಿ ಮಾತನಾಡಿಸಿಕೊಂಡು ಹೋಗಲೆಂದು ಬಂದರು. ಶಾರದಾ ನಗು ಮುಖದಿಂದ ಮಾತನಾಡಿಸಿದರೂ, ಆತಂಕ ಅವಳ ಮುಖದಲ್ಲಿ ಗೋಚರಿಸುತ್ತಿತ್ತು.

''ನಾರಾಯಣಮೂರ್ತಿಗಳು ಹುಶಾರಾಗಿದಾರೆ ತಾನೇ... ಯಾಕೋ ಎಲ್ಲರೂ ಗಾಭರಿಗೊಂಡಿರುವಂತಿದೆ.''

''ಹಾಗೇನಿಲ್ಲ, ಹುಶಾರಾಗಿದಾರೆ. ನನ್ನ ಮಗ ಯಾಕೋ ನಾಲ್ಕು ದಿನಗಳಿಂದ ಮನೆಗೆ ಬಂದೇ ಇಲ್ಲ. ಎಲ್ಲಿಗೆ ಹೋದ, ಯಾಕೆ ಬಂದಿಲ್ಲ ಅಂತ ತಿಳೀದೇ ಚಿಂತೆ ಆಗ್ತಿದೆ...''

''ಪೋಲಿಸ್ ಕಂಪ್ಲೆಂಟ್ ಕೊಡಬೇಕಾಗಿತ್ತು... ಇಷ್ಟು ದಿನ ಆದ್ರೂ ಯಾಕೆ ಸುಮ್ಮನಿದೀರಿ...? ನಿಷ್ಠೂರದ ಧ್ವನಿಯಲ್ಲಿ ಕೇಳಿದರು.

''ನನಗೇ ಅದೆಲ್ಲಾ ತಿಳಿಯುಲ್ಲ... ನಮ್ಮ ಯಜಮಾನರ ಸ್ಥಿತಿ ನಿಮಗೆ ಗೊತ್ತೇ ಇದೆ.'' ಚಿಕ್ಕಪ್ಪ ಬೃಂದಳ ಕಡೆ ನೋಡಿದರು.

''ನನಗೆ ಹೇಳಿ ಕಳಿಸಬಾರದಾಗಿತ್ತೇ ನಮ್ಮ... ಮದುವೆ ಆದ ಮೇಲೆ ಚಿಕ್ಕಪ್ಪನ್ನ ಮರೆತು ಬಿಟ್ಟೇನಮ್ಮ?''

''ಪಾಪ... ಅವಳಿಗೆ ತಾನೇ ಹೇಗೆ ತಿಳಿಯಬೇಕು? ಇನ್ನು ಹೊಸದಾಗಿ ಬಂದಿರೋಳು...'' ಅತ್ತೆ ಸೊಸೆಯ ಪರ ವಹಿಸಿ ನುಡಿದಳು.

''ಸರಿ ನಾನೀಗಲೇ ಪೋಲಿಸ್ ಸ್ಟೇಷನ್‌ಗೆ ಹೋಗ್ತೀನಿ. ನನಗೆ ಅಳಿಯಂದಿರ ಪೋಟೋ ಇದ್ದರೆ ಕೊಡಿ.'' ಶಾರದಾ ಪೆಟ್ಟಾದಳು. ಮಗನ ಪೋಟೋ ಇಲ್ಲವೆಂದು ಹೇಳಲು ತಡವರಿಸಿದಳು.

''ಹೋಗಲಿ ಬಿಡಿ... ನಾನೀಗಲೇ ಹೋಗಿ ವಿಚಾರಿಸ್ತೀನಿ.'' ಎಂದು ಹೊರಟರು. ಶಾರದಳ ತಲೆ ಹೀನಾಯದಿಂದ ಬಗ್ಗಿದ್ದರೆ, ಬೃಂದಾಳ ಕಣ್ಣುಗಳು ಹನಿಗೂಡಿದ್ದವು.

''ಹೆದರಬೇಡಮ್ಮ... ನಿನ್ನ ಗಂಡಂಗೆ ಏನೂ ಆಗಿರೊಲ್ಲ. ಭಯ ಪಡಬೇಡ. ಅವನು ಸುರಕ್ಷಿತವಾಗಿ ಮನೆಗೆ ವಾಪಸ್ಸು ಬರುತ್ತಾನೆ'' ಬೃಂದಳ ತಲೆ ಸವರಿ ಸಮಾಧಾನ ಹೇಳಿದರು.

ಪೋಲಿಸ್ ಸ್ಟೇಷನ್‌ನಲ್ಲಿ ವಿಚಾರಿಸಿದಾಗ, ಕೃಷ್ಣ ಅರೆಸ್ಟ್ ಆಗಿ ಅಲ್ಲಿರುವ ವಿಚಾರ ತಿಳಿದು ಕಂಗಾಲಾದರು. ಹಾಗೆ ಅಳಿಯನ ಕುರುಡು ಬೆಳಗಾದ ಮೇಲೆ ಎನ್ನುವಂತೆ, ಕೃಷ್ಣನ ಗುಣಗಳ ಪರಿಚಯವೂ ಆಯಿತು. ಎಂಥಾ ಕೆಲಸವಾಗಿ ಹೋಯ್ತು... ಶಾರದಮ್ಮನ ಮಾತಿಗೆ ಮರುಳಾಗಿ, ಬೃಂದಳ ಬಾಳು ಹಾಳಾಗಿ ಹೋಗಲು ಕಾರಣನಾದೆನಲ್ಲ ಎಂದು ಮರುಗಿದರು... ಆದರೆ ಅವನನ್ನು ಕಂಡು ಮಾತನಾಡುವ ಮನಸ್ಸಾಗಲಿಲ್ಲ. ಹಾಗೇ ಹಿಂತಿರುಗಿದರು. ಸೀದಾ ತೋಟದ ಮನೆಗೆ ಬಂದರು. ಕಲ್ಯಾಣಿಯೂ ಗಾಭರಿಗೊಂಡಳು.

''ಎಲ್ಲಾ ಗೊತ್ತಿದ್ದೂ ನೀನು ಹೀಗೆ ಮಾಡಬಹುದೇನಮ್ಮಾ?'' ಅವಳನ್ನು ಆಕ್ಷೇಪಣೆ ಮಾಡಿದರು.

''ಕೃಷ್ಣ ಜೈಲಿನಲ್ಲಿದಾನೆ... ಅವನ ವಿಷಯವೆಲ್ಲಾ ತಿಳಿದಿದ್ದೂ... ನೀನು ಒಂದು.. ಒಂದ್ಮಾತು ತಿಳಿಸಿದ್ದರೆ ಬೃಂದನ ಬಾಳು ಹಾಳಾಗುತ್ತಿರಲಿಲ್ಲ.''

''ಏನಾಯ್ತು ಈಗ? ಅವನೇಕೆ ಜೈಲಿನಲ್ಲಿದಾನೆ! ನಿಮಗೆ ಹೇಗೆ ತಿಳೀತು...?'' ಉಗುಳು ನುಂಗುತ್ತಾ ಕೇಳಿದಳು.

''ಅವನು ಒಂದು ವಾರದಿಂದ ಮನೆಗೆ ಬರದಿದ್ದರೂ, ನೀವುಗಳೆಲ್ಲ ಸುಮ್ಮನಿದೀರಲ್ಲ... ಅದ್ಯಾಕೆ ಅಂತ...'' ಕಲ್ಯಾಣಿ ತಲೆ ತಗ್ಗಿಸಿದಳು. ಈ ತೋಟದ ಬಳಿಯೇ ಅವನನ್ನು ಅರೆಸ್ಟ್ ಮಾಡಿದಾರೆ. ನಿನಗೂ ಗೊತ್ತಾಗಿಲ್ಲ ಅಂದರೆ ಆಶ್ಚರ್ಯವಾಗುತ್ತೆ...'' ಕಲ್ಯಾಣಿ ಮಾತಾಡಲಿಲ್ಲ.

''ನೀವೆಲ್ಲಾ ಏನೋ ಮುಚ್ಚಿಡ್ತಿದೀರಿ... ನಾನು ಪೋಲಿಸರ ಹತ್ತಿರ ನನ್ನ ಅನುಮಾನ ತಿಳಿಸಿದರೆ... ನೀವು ಎಲ್ಲಾ ಏನೇನಾಗ್ತೀರೋ...?''

''ನಾವ್ಯಾರೂ ಅಂಥದ್ದೇನೂ ಮಾಡಿಲ್ಲ. ಅವನು ಏನು ಮಾಡಿದಾನೋ ನನಗೆ ತಿಳೀದು. ಇದನ್ನೆಲ್ಲ ನನಗ್ಯಾಕೆ ಹೇಳ್ತೀದೀರಿ...?''

''ನೀನೂ ಒಬ್ಬ ಹೆಣ್ಣು ಹುಡುಗಿ. ನಿನಗೂ ಹೀಗೇ ಅನ್ಯಾಯವಾಗಿದರೆ... ಆಗ ಏನು ಮಾಡ್ತಿದ್ದೆ?''

ಕಲ್ಯಾಣಿ ವ್ಯಂಗ್ಯನಗೆ ನಕ್ಕಳು... ಎಷ್ಟು ಸುಲಭವಾಗಿ ಆಕ್ಷೇಪಣೆ ಮಾಡ್ತಿದೀರಿ. ನನಗೇನೂ ಅನ್ಯಾಯವಾಗಿಲ್ಲ ಅಂತ ಹೇಗೆ ಅಂದ್ಕೋತೀರಿ! ಎಂದು ಕೇಳಬೇಕೆಂದುಕೊಂಡಳು. ಆದರೆ ಅದು ಸರಿಯಾದ ಸಮಯವಲ್ಲ ಅಂದುಕೊಂಡು ಸುಮ್ಮನಾದಳು.

''ಈಗ ಈ ವಿಷಯವನ್ನು ನಾನಾಗಿಯೇ ನನ್ನ ಮಗಳಿಗೆ ಹೇಗೆ ಹೇಳಲಿ! ಅವನ ಅಪರಾಧ ಏನು? ಅದಕ್ಕೆ ಸಾಕ್ಷಿಗಳು ಏನು! ಏನು ಶಿಕ್ಷೆಯಾಗುತ್ತದೆ... ಇದೆಲ್ಲಾ ತೀರ್ಮಾನವಾಗಲು ಎಷ್ಟು ದಿನಗಳು ಬೇಕಾಗುತ್ತದೋ? ಸುಳ್ಳು ಹೇಳುಕ್ಕಂತೂ ಆಗುಲ್ಲ.'' ಅವರು ಎದ್ದು ಹೊರಟಾಗ, ಕಲ್ಯಾಣಿ ತಾನೂ ಅವರ ಜೊತೆ ಹೊರಟಳು.

ನಂಜುಂಡಯ್ಯ ವಿಷಯವನ್ನು ತಿಳಿಸಿದಾಗ ಶಾರದಾ ಕುಸಿದು ಕುಳಿತು, ತಲೆಯ ಮೇಲೆ ಕೈ ಹೊತ್ತಳು. ಬೃಂದಾಳ ಮುಖ ಚಿಕ್ಕದಾದರೂ ಧೃತಿಗೆಡಲಿಲ್ಲ.

''ನೀವು ಹೀಗೆ ನಮಗೆ ಮೋಸ ಮಾಡಬಹುದಾ? ನಿಮ್ಮ ಮಗನ ದುರ್ನಡತೆಗಳನ್ನು ಮುಚ್ಚಿಡಬಹುದಾ? ಈಗ ನಮ್ಮ ಮಗಳ ಗತಿಯೇನು!''

''ನಮ್ಮ ಮಗನಿಗೆ ಯಾರೋ ಆಗದವರು ಏನೋ ಕಿತಾಪತಿ ಮಾಡಿ ಸಿಕ್ಕಿ ಹಾಕಿಸಿದಾರೆ. ಅವನಿಗೆ ಸ್ವಲ್ಪ ಜವಾಬ್ದಾರಿ ಕಡಿಮೆ... ಮದುವೆ ಆದರೆ ಎಲ್ಲಾ ಸರಿ ಹೋಗುತ್ತೆ ಅಂತ ಅಂದುಕೊಂಡೆ... ಅದು ತಪ್ಪಾ? ಬೃಂದಾ, ನಿಮ್ಮಿಬ್ಬರಲ್ಲಿ ಏನಾದ್ರೂ ಮಾತುಕತೆ ನಡೀತಾ! ನಿನಗೇನಾದ್ರೂ ಹೇಳಿದ್ನಾ?'' ಬೃಂದಾ ಗೊಂದಲಕೊಳಗಾದವಳಂತೆ ಮುಖ ಮಾಡಿದಾಗ, ಕಲ್ಯಾಣಿ ನುಡಿದಳು.

''ಹೋಗಲಿ ಬಿಡಿ ಚಿಕ್ಕಮ್ಮ... ಬೃಂದಾ ಮೊದಲೇ ಗಾಭರಿಯಾಗಿದಾಳೆ. ಕೃಷ್ಣನ್ನ ಜೈಲಿನಿಂದ ಆದಷ್ಟು ಬೇಗ ಬಿಡಿಸಿಕೊಂಡು ಬರುವ ಪ್ರಯತ್ನ ಮಾಡೋಣ. ಮೊದಲನೇದಾಗಿ ಅವನ ಅಪರಾಧ ಏನೂಂತ ಗೊತ್ತಾಗಲಿ... ಮೊದಲು ಯಾರಾದರೂ ಲಾಯರನ್ನು ನೋಡಬೇಕು... ಆಮೇಲೆ ಮುಂದಿನ ಮಾತು...''

''ಇದನ್ನೆಲ್ಲಾ ಯಾರು ಮಾಡ್ತಾರೆ ತಾಯೀ? ನನ್ನ ಕೈಲಾಗುತ್ತೆ?''

''ನಾನು ಮಾಡ್ತೀನಿ.'' ಕಲ್ಯಾಣಿ ನುಡಿದಾಗ ಎಲ್ಲರೂ ಅವಳನ್ನೇ

ನೋಡಿದರು. ನಂಜುಂಡಯ್ಯ ಎದ್ದರು.

''ನಡೀ ಬೃಂದಾ... ನಮ್ಮ ಮನೆಗೆ; ಇನ್ನು ಇಲ್ಲಿರುವುದು ಬೇಡ ನೀನು.''

''ಇಲ್ಲ ಚಿಕ್ಕಪ್ಪ... ನಾನು ಎಲ್ಲಿಗೂ ಬರುವುದಿಲ್ಲ'' ಎಂದು ಅವಳು ನುಡಿದಾಗ ಚಿಕ್ಕಪ್ಪ ಬೆರಗಾದರು. ಶಾರದ ನಿರಾಳವಾಗಿ ಉಸಿರು ಬಿಟ್ಟಳು.

''ಯಾಕಮ್ಮಾ ಮದುವೆಯಾದ ಮಾತ್ರಕ್ಕೆ ನೀನು, ಎಲ್ಲಾ ನೀನೇ ನಿರ್ಧರಿಸುವಷ್ಟು ದೊಡ್ಡೋಳಾಗಿ ಬಿಟ್ಯಾ?'' ವ್ಯಥೆಯಿಂದ ಕೇಳಿದರು.

''ಈ ಮನೆ ನಿನ್ನದು... ಇಲ್ಲಿಯ ಕಷ್ಟ ಸುಖ ನಿನ್ನದು ಎಂದು ಆಶೀರ್ವದಿಸಿ ಇಲ್ಲಿ ಬಿಟ್ಟು ಹೋದಿರಿ... ಈಗ ಒದಗಿರುವ ಸಮಸ್ಯೆಗೆ ಹೆದರಿ, ನಾನು ಬರೀ ನನ್ನ ಚಿಂತೆ ಮಾಡಲಾರೆ... ನಿಮಗೆ ಮತ್ತೆ ಭಾರವಾಗಲಾರೆ.''

''ನನಗೆ, ನಿನ್ನ ಚಿಂತೆ ಮುಖ ಬೃಂದಾ... ನೀನು ನನಗೆ ಭಾರವಲ್ಲ.''

''ಇಲ್ಲ ಚಿಕ್ಕಪ್ಪಾ... ನಾನು ಬರುವುದಿಲ್ಲ. ನಾನು ಇಲ್ಲಿದ್ದುಕೊಂಡು, ಅವರ ಬಿಡುಗಡೆಗೆ ಪ್ರಾರ್ಥಿಸುತ್ತೀನಿ. ಅವರಿಗಾಗಿ ಕಾಯ್ತೀನಿ.''

''ಒಳ್ಳೇ ಪತಿವ್ರತೆ ತರಹ ಆಡ್ತೀಯಲ್ಲಮ್ಮಾ... ಅವನು ಅದಕ್ಕೆ ಅರ್ಹನಲ್ಲ...'' ನಂಜುಂಡಯ್ಯ ಶಾರದಳ ಕಡೆ ತಿರುಗಿ ನುಡಿದರು. ಅವಳು ದೃಷ್ಟಿ ಕೆಳಗೆ ಮಾಡಿದಳು. ಮತ್ತೆ ಮತ್ತೆ ಕರೆದರೂ, ಬೃಂದಾ ಅವಳೊಡನೆ ಹೊರಡದಿದ್ದಾಗ ಅವರು ಕೋಪಿಸಿಕೊಂಡು ಹೊರಟು ಹೋದರು. ಬೃಂದಳಿಗೆ ದುಃಖವುಕ್ಕಿತು. ಅವರತ್ತ ಹೋದ ಕೊಡಲೇ ಶಾರದಾ ಸೊಸೆಗೆ ಸಮಾಧಾನ ಹೇಳಿದಳು.

''ಅಳಬೇಡ ಬೃಂದಾ... ನನ್ನ ಮಗನಿಗೆ ಜೈಲು ಶಿಕ್ಷೆಯಾಗುವಷ್ಟು ಅಪರಾಧಿ ಅವನಲ್ಲ. ಏನೋ ಅವನ ಸ್ನೇಹಿತರು ಸರಿ ಇಲ್ಲ. ಅವರು ಏನೋ ಮಾಡಿ ಸಿಕ್ಕಿಬಿದ್ದಾಗ, ಇವನನ್ನು ಹಿಡಿದಿರಬಹುದು. ಕಲ್ಯಾಣಿ ಅವನ ಬಿಡುಗಡೆಗೆ ಪ್ರಯತ್ನ ಮಾಡ್ತೀನಿ ಅಂತ ಹೇಳಿದಾಳಲ್ಲ. ನೀನೂ ಅವಳಿಗೆ ಸಹಾಯ ಮಾಡಬೇಕು. ಆದರೆ ನಾನು ನಿನಗೆ ಬಲವಂತ ಮಾಡುವುದಿಲ್ಲ. ನಿಮ್ಮ ಚಿಕ್ಕಪ್ಪ ಹೇಳಿದಂತೆ ನಿನ್ನ ಗಂಡನಾಗುವ ಅರ್ಹತೆ ಅವನಿಗಿಲ್ಲದಿರಬಹುದು... ಆದರೆ

ಅವನು ನನ್ನ ಮಗ... ಅವನನ್ನು ಹೊತ್ತು ಹೆತ್ತು ಸಾಕಿ ಸಲಹಿದವಳು ನಾನು. ಏನೋ ಅವನ ದುರಾದೃಷ್ಟ, ವಿದ್ಯಾವಂತನಾಗಿಲಿಲ್ಲ. ಜವಾಬ್ದಾರಿ ಇಲ್ಲದವನಾಗಿ ಬೆಳೆದ. ಹಾಗಂತ ನಾನೂ ಅವನ ಕೈ ಬಿಟ್ಟು ಬಿಡುಕ್ಕೆ ಆಗುತ್ತಾ? ಕೈ ಹಿಡಿದೋಳು ನೀನೂ ಕೈ ಬಿಡುಕ್ಕೆ ಆಗುತ್ತಾ?'' ಬೃಂದಾ ಏನೂ ಉತ್ತರಿಸಲಿಲ್ಲ.

''ಪಂಡಿತರ ಮನೆಗೆ ಹೋಗಿ ಬರ್ತೀನಿ. ಒಂದು ಸಲವಾದರೂ, ಜಪ ತಪ, ಶಾಂತಿ ಹೋಮ ಯಾವುದನ್ನು ಮಾಡಿಸಲಾಗಲಿಲ್ಲ. ಈಗ ಮಾಡಿಸೋಣ. ಏನೇ ತೊಂದರೆಗಳಿದ್ದರೂ ಖಂಡಿತಾ ನಿವಾರಣೆ ಆಗುತ್ತೆ. ಕಲ್ಯಾಣಿ ನೀನು ಇವಳ ಜೊತೆಗೆ ಇರು. ನಾನು ಈಗಲೇ ಹೋಗಿ ಬರ್ತೀನಿ'' ಎನ್ನುತ್ತಾ ಹೊರಟಳು. ಆದರೆ ಕೆಲವೇ ಸಮಯದಲ್ಲಿ ವಾಪಸ್ಸಾದಳು. ಪಂಡಿತರು ಊರಿನಲ್ಲಿರಲಿಲ್ಲ.

''ನಮ್ಮ ಕಷ್ಟಕ್ಕೆ ಯಾರೂ ಸಹಾಯಕ್ಕೆ ಒದಗುವುದಿಲ್ಲ. ಪಂಡಿತರು ಈಗಲೇ ಊರಿಗೆ ಹೋಗಬೇಕೆ?'' ಎಂದು ಗೊಣಗುತ್ತಾ ಬಂದಳು. ''ಕಲ್ಯಾಣಿ ನಾವು ಈಗಲೇ ಪೋಲಿಸ್ ಸ್ಟೇಷನ್‌ಗೆ ಹೋಗೋಣ. ಏನು ನಡೆದಿದೆ ಅಂತ ಸಹ ತಿಳಿಯದು ನಮಗೆ, ಕಾರಣವಿಲ್ಲದೇ ಜೈಲಿಗೆ ಹೇಗೆ ಹಾಕ್ತಾರೆ ಅಂತ ವಿಚಾರಿಸೋಣ.''

''ನಾನೂ ಬರ್ತೀನಿ'' ಎಂದು ಬೃಂದಾ ನುಡಿದಾಗ ಬೇಡ ಎನ್ನುವಂತೆ ತಲೆ ಆಡಿಸಿದಳು. ''ಮೂರು ಜನ ಹೋಗೋದು ಬೇಡ... ಇಲ್ಲಿ ಮಾವನವರು ಒಬ್ಬರೇ ಇರುತ್ತಾರೆ. ಮನೆಗೆ ಬೀಗ ಹಾಕುವುದು ಸರಿಯಲ್ಲ... ಯಾರಾದರೂ ಬಂದರೇ...? ಯಾರಾದರೂ ಬಂದು ವಿಚಾರಿಸಿದರೆ, ನಿಂಗೇನೂ ಗೊತ್ತಿಲ್ಲ ಅಂತ ಹೇಳು''... ಎಂದು ಒತ್ತಿ ನುಡಿದಳು.

ಪೋಲಿಸ್ ಸ್ಟೇಷನ್‌ನ್ನು ನೋಡಿಯೇ ಶಾರದಾಳ ತಲೆ ಸುತ್ತಿ ಬಂದಂತಾಯಿತು. ''ಕಲ್ಯಾಣೀ ಯಾಕೋ ಭಯವಾಗ್ತಿದೆ ಕಣೇ'' ಎಂದು ಅವಳ ಕೈ ಹಿಡಿದಳು. ಅಲ್ಲಿ ಇವರಂತೆಯೇ ಕೆಲವು ಸಮಸ್ಯೆಗಳೊಂದಿಗೆ ಇನ್ನೊಂದಿಬ್ಬರು ಕಾಯುತ್ತಾ ಕುಳಿತ್ತಿದ್ದರು. ಮೊದಲು, ಆಫೀಸರನೊಂದಿಗೆ ಮಾತನಾಡಬೇಕೆಂದು ತಿಳಿಸಿದಾಗ, ಆಗುವುದಿಲ್ಲವೆಂದರು. ಕಂಪ್ಲೆಂಟ್ ಕೊಡೋಕೆ ಅಂತ ಬಂದಿದ್ದರೆ, ಬರೆಸಿ ಹೋಗಿ. ನಾವು ವಿಚಾರಣೆ ನಡೆಸ್ತೀವಿ ಅಂತಂದರು ಕಲ್ಯಾಣಿ ನುಡಿದಳು:

''ನಾವು, ಹೆಂಗಸರೇ ಬಂದು ಮಾತನಾಡಿದರೆ, ಯಾರೂ ನಮಗೆ ಸಹಾಯ

ಮಾಡುವುದಿಲ್ಲ ಚಿಕ್ಕಮ್ಮಾ, ಯಾರಾದರೂ ಲಾಯರನ್ನು ಜೊತೆಗೆ ಕರೆದುಕೊಂಡು ಬರೋಣ.'' ಎಂದು ಹೊರಗೆ ಬಂದರು.

''ಕರೀ ಕೋಟು ಧರಿಸಿದ್ದ ವ್ಯಕ್ತಿಯೊಬ್ಬ ಇವರ ಎದುರಿಗೆ ಬಂದ. ಅವರ ಜೊತೆ ಇನ್ನೊಂದಿಬ್ಬರು ಇದ್ದರು. ಕಲ್ಯಾಣಿ ಕೈ ಮುಗಿದು, ತಾನು ಮಾತನಾಡಬೇಕೆಂದು ಹೇಳಿದಳು.

''ಈಗ ನನಗೆ ಬಿಡುವಿಲ್ಲ... ನೀವು ನಾಳೆ ಬನ್ನಿ'' ಎಂದು ಹೇಳಿ ತನ್ನ ಹೆಸರನ್ನು, ಆಫೀಸಿರುವ ವಿಳಾಸವನ್ನು ತಿಳಿಸಿ, ಒಳಗೆ ಹೊರಟು ಹೋದ.

''ಇವನೊಬ್ಬನೇನಾ ವಕೀಲ? ಇನ್ನು ಯಾರಾದರೂ ಸಿಕ್ತಾರೆ ನೋಡೋಣ ನಡೀ'' ಎಂದು ಶಾರದಾ ಬಲವಂತ ಮಾಡಿದಳು.

''ಇಲ್ಲಿ ನಮಗೆ ಪರಿಚಯದವರ್‍ಯಾರೂ ಇಲ್ಲ. ಇವೆಲ್ಲಾ ನಮಗೆ ತಿಳಿಯದ ವಿಷಯ. ಅಲ್ಲದೇ ಎಲ್ಲಾ ಬೇಗ ಬೇಗ ಆಗುವುದೂ ಇಲ್ಲ. ನಾಳೆ ಮತ್ತೆ ಅವರ ಆಫೀಸಿಗೇ ಬರೋಣ'' ಎಂದು ಕಲ್ಯಾಣಿ ನುಡಿದಳು.

''ನನ್ನ ದುಃಖ ನಿಮಗ್ಯಾರಿಗೂ ಅರ್ಥವಾಗುಲ್ಲ. ಇಲ್ಲಿ ನನ್ನ ಮಗ ಎಲ್ಲಿದಾನೋ, ಹೇಗಿದಾನೋ ಮುಖ ನೋಡಿ ಮಾತನಾಡುಕ್ಕೆ ಸಹ ಆಗುವುದಿಲ್ಲ.'' ಎನ್ನುತ್ತಾ ಮೆಟ್ಟಲಿಳಿದರು. ಎದುರಿಗೆ ನಂಜುಂಡಯ್ಯ ಬಂದರು. ಶಾರದಳಿಗೆ ಸ್ವಲ್ಪ ಗೆಲವು ಮೂಡಿದಂತಾಯ್ತು.

''ಸಧ್ಯ! ನೀವು ಒಂದದ್ದು ಒಳ್ಳೇದಾಯ್ತು. ಇಲ್ಲಿ ನಮಗೆ ಸರಿಯಾಗಿ ಏನೂಂತ ವಿಚಾರಿಸಿ ಸಲಹೆ ಕೊಡೋರು ಸಹ ಯಾರಿಲ್ಲ...''

''ಮತ್ತೇನಮ್ಮ ಮಾಡಲಿ? ಮಗಳ ಕಷ್ಟಕ್ಕೆ ನಾನು ಒದಗದಿದ್ದರೆ, ನಾನು ಅವಳಿಗೆ ವಂಚನೆ ಮಾಡಿದಂತಾಗುತ್ತದೆ. ನೀವು ಬರೀ ಹೆಂಗಸರು, ಎಲ್ಲಾ ಹೇಗೆ ನಿಭಾಯಿಸುಕ್ಕೆ ಆಗುತ್ತೆ? ನಾನೂ ಮನುಷ್ಯ ಕಣಮ್ಮಾ...''

''ಇನ್ನು ನಮಗೆ ಭಯವಿಲ್ಲ ಬಿಡಿ...''

''ನೀವುಗಳು ಮನೆಗೆ ಹೋಗಿ. ನಾನು ಎಲ್ಲಾ ವಿಚಾರಿಸಿಕೊಂಡು ಬಂದು ಹೇಳ್ತೀನಿ.''

ದರೋಡೆ, ಕಳ್ಳತನ, ಸುಲಿಗೆ, ಆ ಆಸುಪಾಸಿನಲ್ಲಿ ಆಗಾಗ್ಗೆ ನಡೆಯುತ್ತಿದೆ

ಎಂದು ಕಂಪ್ಲೆಂಟ್ ಬರುತ್ತಿದ್ದುದರಿಂದ ವಿಶೇಷ ಪೋಲಿಸ್ ಪಡೆಯವರು, ಗುಮಾನಿ ಬಂದವರನ್ನೆಲ್ಲಾ ಅರೆಸ್ಟ್ ಮಾಡಿ, ವಿಚಾರಣೆ ನಡೆಸುತ್ತಿದ್ದರು. ಇದೇ ಸಮಯದಲ್ಲಿ ಸಮೀಪದ ಹಳ್ಳಿಯ ಹುಡುಗಿಯೊಬ್ಬಳನ್ನು ಯಾರೋ ಅಪಹರಿಸಿದ್ದರು. ಕೆಲವು ದಿನಗಳ ನಂತರ ಅವಳ ಶವ ಒಂದು ಕೆರೆಯ ಬಳಿ ಬಿದ್ದಿತ್ತು. ಅದು ಕೊಲೆಯೋ, ಆತ್ಮಹತ್ಯೆಯೋ ಎಂಬ ವಿಚಾರಣೆ ನಡೆಸುತ್ತಿದ್ದರು. ಆ ಕೆರೆ ಕೃಷ್ಣನ ಮನೆಯವರ ತೋಟಕ್ಕೆ ಸಮೀಪದಲ್ಲಿ ಇಲ್ಲದಿದ್ದರೂ, ಅನುಮಾನ, ಎಲ್ಲಿಂದೆಲ್ಲಿಗೋ ಹರಡಿ ಕೃಷ್ಣನ ಅರೆಸ್ಟ್ ತನಕ ಬಂದಿತ್ತು. ಕೃಷ್ಣನ ಸ್ನೇಹಿತರ ಪೈಕಿ ಒಬ್ಬ ನಾಪತ್ತೆಯಾಗಿದ್ದ. ಅವನು ಸಿಗುವವರೆಗೂ ಇವರುಗಳನ್ನು ಬಿಡಲಾಗುವುದಿಲ್ಲ ಎಂದು ಪೋಲಿಸರು ತಿಳಿಸಿದ್ದರಿಂದ ಲಾಯರ್ರು ಸಹ ಏನೂ ಮಾಡುವಂತಿರಲಿಲ್ಲ. ಅದಕ್ಕೂ ಇದಕ್ಕೂ ಏನು ಸಂಬಂಧ ಎಂದು ತಿಳಿಯುವಂತಿರಲಿಲ್ಲವಾದರೂ, ಯಾರಿಗೆ ಯಾರೂ ಒತ್ತಡ ಹಾಕುವಂತಿರಲಿಲ್ಲ. ಆದರೂ ಲಾಯರ್ರು ತಾನು ಎಲ್ಲಾ ರೀತಿಯಿಂದಲೂ ಸಹಾಯ ಮಾಡುವುದಾಗಿಯೂ, ತನ್ನ ಫೀಸು ಎಷ್ಟಾಗುತ್ತದೆಂದು ತಿಳಿಸಿದ.

ಈ ವಿಷಯಗಳನ್ನು ತಿಳಿದ ಶಾರದಾ ಮಂಕಾದಳು. ಎಷ್ಟು ಹಣ ಅಂತಸ್ತು ಇದ್ದರೇನು? ಅದರಿಂದ ತನ್ನ ಮಗನನ್ನು ಬಿಡಿಸಲಾಗದಿದ್ದ ಮೇಲೆ ಎಂದೆನಿಸಿತು. ಕೈಲಾಗದ ಗಂಡನ ಮೇಲೆ ಕೋಪ ಬಂತು. ಅವನಿಗೆ ಏನನ್ನು ತಿಳಿಸುವ ಸಹನೆ ಇಲ್ಲದಿದ್ದರೂ, ಕಲ್ಯಾಣಿಯನ್ನು ಕೂರಿಸಿಕೊಂಡು ಮಾತನಾಡಿದಳು. ''ಈಗ ನಮ್ಮ ಹಿತಚಿಂತಕರಾಗಿ ನಂಜುಂಡಯ್ಯನವರು ನಮಗೆ ಸಹಾಯ ಮಾಡುತ್ತಾರೆ. ಹಣ ಕಾಸಿನ ವ್ಯವಹಾರವನ್ನೆಲ್ಲಾ ಅವರಿಗೆ ವಹಿಸಿಕೊಟ್ಟು ಬಿಡೋಣ.''

ನಾರಾಯಣಮೂರ್ತಿ ನಿಟ್ಟುಸಿರುಬಿಟ್ಟ. ಈಗ ತನ್ನ ಕೈಲಿ ಏನೂ ಆಗುತ್ತಿಲ್ಲ. ಕೃಷ್ಣನೋ ಜೈಲಿನಲ್ಲಿದಾನೆ ಅಂತ ಇವಳು ಹೇಳ್ತಾಳೆ. ಮಗನೇ ಕೈ ತಪ್ಪಿ ಹೋದ ಮೇಲೆ, ಹೊರಗಿನೋರನ್ನ ನಂಬೋದು ಹೇಗೆ ಅಂತನ್ನಿಸಿದರೂ, ಕಲ್ಯಾಣಿಯ ಕಡೆ ನೋಡಿದರು.

''ಏನಮ್ಮಾ... ನೀನು ಏನು ಹೇಳ್ತೀಯಾ?'' ಎನ್ನುವಂತೆ ಸಂಜ್ಞೆ ಮಾಡಿ ಪ್ರಶ್ನಿಸಿದರು.

''ನಾನು ಎಲ್ಲಾ ನೋಡ್ಕೋತೀನಿ ಚಿಕ್ಕಪ್ಪಾ... ಆದರೆ, ಸಹಾಯಕರಾಗಿ

ಒಬ್ಬರು ಬೇಕು... ಬೃಂದಳ ಚಿಕ್ಕಪ್ಪ ಒಳ್ಳೆಯವರು... ಚಿಕ್ಕಮ್ಮ ಹೇಳಿದಂತೆ ಅವರೂ ಕೆಲವು ಜವಾಬ್ದಾರಿಗಳನ್ನು ವಹಿಸಿಕೊಳ್ಳಲಿ...''

''ಯಾರು ಒಳ್ಳೆಯವರೋ... ಯಾರು ಕೆಟ್ಟವರೋ... ನೀನು ಗಂಡು ಮಗನಾಗಿ ಹುಟ್ಟಬೇಕಾಗಿತ್ತು ಕಲ್ಯಾಣೀ...'' ತೊದಲುತ್ತಾ ನುಡಿದರು.

''ನನ್ನನ್ನಾ ನಿಮ್ಮ ಹಿರೀ ಮಗ ಅಂತಲೇ ತಿಳಿದುಕೊಳ್ಳಿ... ನಾನು ಈ ಮನೆ ಬಿಟ್ಟು ಎಲ್ಲಿಯೂ ಹೋಗುಲ್ಲ.'' ಎಂದು ಚಿಕ್ಕಪ್ಪನಿಗೆ ಆಶ್ವಾಸನೆ ನೀಡಿದಳು. ಶಾರದಳಿಗೆ ಇದರಿಂದ ಸಂತಸವಾಗಲಿಲ್ಲ. ಈ ಕಲ್ಯಾಣಿಯಿಂದಲೇ ನಮ್ಮ ಮನೆಯಲ್ಲಿ ಈ ತೊಂದರೆಗಳು. ಆದಷ್ಟು ಬೇಗ ಅವಳಿಗೆಮದುವೆ ಮಾಡಿ ಕಳಿಸಬಿಡಬೇಕು. ಒಂದು ಸಾರಿ ಕೃಷ್ಣ ಮನೆಗೆ ಬಂದು ಬಿಡಲಿ... ಅಲ್ಲೀವರೆಗೂ ತಾನು ಏನೂ ಮಾತನ್ನಾಡಬಾರದು ಎಂದುಕೊಂಡಳು.

ಆದರೆ, ನಿಜವಾಗಿ ಕೊಲೆ ಮಾಡಿದ್ದವರು, ಸಿಕ್ಕಿ ಬೀಳದೇ, ಇವರುಗಳೇ ಕೊಲೆಗೆ ಕಾರಣರು ಎಂದು ಸಾಬೀತು ಮಾಡಲು ಪ್ರಯತ್ನಿಸಿದ್ದರು. ಸರಿಯಾದ ಸಾಬೀತು, ಸಾಕ್ಷ್ಯಾಧಾರಗಳಿಲ್ಲದೇ, ವಿಚಾರಣೆ ಮುಂದೆ ಮುಂದೆ ಹೋಯಿತು. ಈ ಮಧ್ಯೆ ಇವರುಗಳು ಪೋಲಿಸರ ಹೊಡೆತವನ್ನು ಸಹಿಸಲಾರದೇ ತಾವು ಅಲ್ಲಿ ಇಲ್ಲಿ ಸಣ್ಣ ಪುಟ್ಟ ಕಳ್ಳತನವನ್ನು ಮಾಡಿರುವುದಾಗಿ ಒಪ್ಪಿಕೊಂಡಿದ್ದರು.

ನಂಜುಂಡಯ್ಯನವರು, ಯುವತಿಯ ಕೊಲೆಯಾದ ದಿನ ಕೃಷ್ಣನ ಮದುವೆ ನಡೆದಿತ್ತಾದ್ದರಿಂದ, ಅವನು ಅಪರಾಧಿಯಾಗಲು ಸಾಧ್ಯವೇ ಇಲ್ಲ ಎಂಬ ಸಾಕ್ಷ್ಯಾಧಾರಗಳನ್ನು ಒದಗಿಸಿದರು. ಅವನ ಸ್ನೇಹಿತರೂ ಸಹ ಮದುವೆಯ ಸಮಾರಂಭದಲ್ಲಿ ಪಾಲ್ಗೊಂಡಿದ್ದರು ಎಂದು ತಿಳಿಸಿದರು. ಆದರೂ, ಮದುವೆಯ ರಾತ್ರಿ ಅವನ ಸ್ನೇಹಿತರೆಲ್ಲಾ ಅಲ್ಲೇ ಇದ್ದರೇ, ಇಲ್ಲವೇ ಎಂದು ತಿಳಿಸಲು ಯಾವ ಸಾಕ್ಷಿಗಳಿರಲಿಲ್ಲ. ಅಲ್ಲದೇ ಅವನೂ ಸಹ ಆ ರಾತ್ರಿ ಮನೆಯಲ್ಲೇ ಇದ್ದು ತೋಟದ ಮನೆಯಲ್ಲಿ ತನಗಾಗಿ ಕಾಯುತ್ತಿದ್ದವಳನ್ನು ಅಲಕ್ಷ್ಯಿಸಿ; ಒಂದು ಹೊತ್ತಿನಲ್ಲಿ ಅಲ್ಲಿಯೇ ಇದ್ದ ಕಲ್ಯಾಣಿಯನ್ನು ಬಲವಂತವಾಗಿ ತನ್ನ ಬಳಿಗೆ ಎಳೆದುಕೊಂಡು ಹೋಗಿದ್ದ, ಯಾರಿಗೂ ತಿಳಿಯದಂತೆ ಈ ಪ್ರಸ್ತಾಪ ಬಂದಾಗ ಕಲ್ಯಾಣಿ ನಿರುತ್ತರಳಾದಳು. ಅವನು ಆ ರಾತ್ರಿಯನ್ನು ತನ್ನೊಡನೆ ಕಳೆದ ಅಂತ ಒಪ್ಪಿಕೊಳ್ಳುವ ಇಚ್ಛೆ ಇಲ್ಲ... ಇದರಿಂದ ಎಲ್ಲರ ಮನಸ್ಸಿಗೂ

ಆಘಾತವಾಗುತ್ತದೆ. ಆದರೆ ಒಪ್ಪಿಕೊಳ್ಳದಿದ್ದರೆ, ಕೃಷ್ಣನೂ ಅಪರಾಧಿಯಾಗಿ ಅವನಿಗೆ ಜೈಲು ಶಿಕ್ಷೆಯಾಗಬಹುದು... ಜೈಲು ಶಿಕ್ಷೆಗೆ ಅವನು ಅರ್ಹನೇ. ಆದರೆ ತಾನೇ ಬೃಂದಳಿಗೆ ದ್ರೋಹ ಮಾಡಿದಂತಾಗುತ್ತದೆ. ಒಂದು ದ್ರೋಹವಂತೂ ನಡೆದುಹೋಗಿದೆ. ಇನ್ನು ಮುಂದೆಯಾದರೂ, ತಾನು ಅದನ್ನು ಸರಿಪಡಿಸಬೇಕು ಎಂದುಕೊಂಡು ತಾನು ಕೃಷ್ಣನೊಡನೆ ಮಾತನಾಡಬೇಕು, ಎಂದುಕೊಂಡಳು.

ಆದರೆ, ಕೃಷ್ಣ ಅವಳನ್ನು ಭೇಟಿಯಾಗಲು ಒಪ್ಪಲಿಲ್ಲ. ಬಹುಶಃ ಅವಳೇ ತನ್ನ ಸುಳಿವನ್ನು ಪೋಲಿಸರಿಗೆ ತಿಳಿಸಿರಬೇಕು ಎಂಬ ಅನುಮಾನ, ಅವನಿಗೆ. ತನ್ನ ಮೇಲೆ ಪ್ರತೀಕಾರ ತೆಗೆದುಕೊಳ್ಳಲು ಸಮಯ ಕಾಯುತ್ತಿದ್ದಳು. ತಾನೊಂದು ಸಾರಿ ಅಪರಾಧಿ ಎಂದು ಜೈಲು ಸೇರಿಬಿಟ್ಟರೆ ಅವಳು ನಿಶ್ಚಿಂತೆಯಾಗಿರಬಹುದು ಎಂದು ಅವಳು ಭಾವಿಸಿರಬಹುದು. ಆದರೆ ತಾನು ಹಾಗಾಗಲು ಬಿಡುವುದಿಲ್ಲ. ತನ್ನ ಸಣ್ಣ ಪುಟ್ಟ ಕಳ್ಳತನಕ್ಕೆ ಒಂದೆರಡು ತಿಂಗಳ ಶಿಕ್ಷೆಯಾಗಬಹುದು. ಅದನ್ನು ಅನುಭವಿಸಿ, ಬಿಡುಗಡೆಯಾಗಿ ಹೋದ ನಂತರ, ಅವಳ ಮೇಲೆ ನಿಜವಾದ ಪ್ರತೀಕಾರ ತೆಗೆದುಕೊಳ್ಳುತ್ತೇನೆ ಎಂದು ತನ್ನಲ್ಲೇ ನಿರ್ಧರಿಸಿದ.

ಅವನು, ಅವಳನ್ನು ಭೇಟಿಯಾಗಿ ಮಾತನಾಡಲು ನಿರಾಕರಿಸಿದ್ದನ್ನು ಕಂಡು ಕಲ್ಯಾಣಿ; ಅವನಿಗೆ ತನ್ನ ಮೇಲೆ ಕೋಪ ಎಂದು ಭಾವಿಸಿದಳು. ಈ ಕೋಪದಿಂದ ಅವನು ಕೋಮಲಳಿಗೆ ಏನುಮಾಡಿಬಿಡುತ್ತಾನೋ ಎಂದು ಹೆದರಿ, ಕೋಮಲಳನ್ನು ಬಲವಂತವಾಗಿ, ಪೇಟೆಯಲ್ಲಿನ ಒಂದು ಹಾಸ್ಟೆಲ್ಲಿಗೆ ಸೇರಿಸಿದಳು.

"ಇಲ್ಲಿ ಏನೇನೋ ನಡೆಯುತ್ತಿದೆ. ನಿನ್ನ ಓದಿಗೆ ಅಡ್ಡಿ ಬರುತ್ತೆ. ಈಗ ಸದಾ ನಿನ್ನ ಜೊತೆಯೇ ಇರಲು ನನಗೆ ಬಿಡುವಿಲ್ಲ. ನೀನು ಹುಡುಗಿಯರ ಹಾಸ್ಟೆಲ್ಲಿನಲ್ಲಿದ್ದುಕೊಂಡು ಕಾಲೇಜಿಗೆ ಹೋಗು ಎಂದು ಬಲವಂತದಿಂದ ಒಪ್ಪಿಸಿದ್ದಳು.

ಸುಮಾರು ಒಂದೆರಡು ತಿಂಗಳುಗಳು ಕಳೆದ ನಂತರ, ಕೃಷ್ಣ ಹಾಗೂ ಅವನ ಸಂಗಡಿಗರ ಬಿಡುಗಡೆಯಾಗಿತ್ತು. ಆ ಯುವತಿಯ ಮರಣ, ಕೊಲೆಯಲ್ಲ ಆತ್ಮಹತ್ಯೆ ಎಂದು ಸಾಬೀತಾಗಿತ್ತು. ಆದರೂ, ಅದಕ್ಕೆ ಕಾರಣ ಯಾರು? ಯಾರ ಕೈವಾಡವಿದೆ ಎಂದು ತಿಳಿಯಲು ವಿಚಾರಣೆ ಮುಂದುವರೆದಿತ್ತು.

ಕೃಷ್ಣ ಸೀದಾ ತೋಟದ ಮನೆಗೆ ಬಂದ. ತಾಯಿಯನ್ನಾಗಲೀ, ಹೆಂಡತಿಯನ್ನಾಗಲೀ, ನೋಡಲು ಅವನಿಗೆ ಹೀನಾಯವಾಗಿರಬಹುದು, ಅದಕ್ಕೆ ಬಂದಿಲ್ಲ ಎಂದು ಭಾವಿಸಿ, ಎಲ್ಲರೂ ತಾವುಗಳೇ ತೋಟದ ಮನೆಗೆ ಬಂದರು. ಆದರೆ ಕೃಷ್ಣ ಯಾರಿಗೂ ತನ್ನ ಮುಖವನ್ನು ತೋರಿಸಲಿಲ್ಲ. ಮಾತನಾಡಲೂ ಇಲ್ಲ. ರೂಮಿನ ಬಾಗಿಲನ್ನು ಹಾಕಿಕೊಂಡು ಕುಳಿತುಬಿಟ್ಟ. ಸಿಟ್ಟು ಅವಮಾನಗಳಿಂದ, ಮಗ ರೂಮಿನೊಳಗೆ ತನಗೆ ತಾನೇ ಏನಾದೂ ಅಪಾಯ ಮಾಡಿಕೊಂಡರೇ ಎಂದು ಶಾರದಾ ಭಯಗೊಂಡಳು.

''ಚಿಕ್ಕಮ್ಮಾ... ಅವನ ಮನಸ್ಸಿಗೆ ತುಂಬಾ ಬೇಜಾರಾಗಿರಬಹುದು. ಒಂದೆರಡು ದಿನಗಳು ಅವನು ಇಲ್ಲಿರಲಿ. ಸ್ವಲ್ಪ ಮನಸ್ಸು ಹಗುರವಾಗಲಿ ಅವನಾಗಿಯೇ ಬರ್ತಾನೆ'' ಎಂದು ಕಲ್ಯಾಣಿ ನುಡಿದಳು.

ನಂಜುಂಡಯ್ಯ ಬೃಂದಳ ಕಡೆ ನೋಡಿದರು. ಅವಳು ತಲೆ ತಗ್ಗಿಸಿದಳು. ಶಾರದಾ ದುಃಖಗೊಂಡಿದ್ದರೂ ನುಡಿದಳು.

''ತೋಟದ ಮನೇತನಕ ಬಂದೋನು ನಮ್ಮ ಮನೆಗೆ ಬರದೇ ಇರ್ತಾನ್ಯೆ? ಕಲ್ಯಾಣಿ ತುಂಬಾ ಜಾಣೆ... ಅವನಿಗೆ ಸಮಾಧಾನ ಹೇಳಿ ಕರೆದುಕೊಂಡು ಬರ್ತಾಳೆ. ಇದೆಲ್ಲಾ ನಿನ್ನ ದೇವಿಯ ಮಹಿಮೆ; ಬಿಡುಗಡೆಯಾಯ್ತಲ್ಲ. ನಿನ್ನ ಗಂಡನನ್ನು ನಿನ್ನ ಬಳಿಗೆ ಕಳಿಸೇ ಕಳಿಸ್ತಾಳೆ. ಆ ನಂಬಿಕೆ ನನಗಿದೆ'' ಎಂದಳು. ಮತ್ತು ಸ್ವಲ್ಪ ಹೊತ್ತು ಅವನು ಹೊರಗೆ ಬರಬಹುದೆಂದು ಕಾದು ಕುಳಿತಿದ್ದರು. ನಂತರ ಎಲ್ಲರೂ ಹೊರಟು ಹೋದರು.

ಕಲ್ಯಾಣಿ ಅವನಿಗಾಗಿ ಬಿಸಿ ಬಿಸಿ ಅಡಿಗೆ ಮಾಡಿ ಅವನನ್ನು ಹೊರಕ್ಕೆ ಬರುವಂತೆ ಕರೆದಳು. ಹೊರಗೆ ಬಂದವನ ಮುಖ ಧುಮು ಧುಮು ಗುಟ್ಟುತ್ತಿತ್ತು. ಹೆಂಡದ ವಾಸನೆ ಮೂಗಿಗೆ ಬಡಿಯುತ್ತಿತ್ತು.

''ಕೃಷ್ಣಾ, ಮೊದಲು ಹೋಗಿ ಚೆನ್ನಾಗಿ ಸ್ನಾನ ಮಾಡಿ ಬಾ...'' ಅವಳು ಅನುನಯದಿಂದ ನುಡಿದಳು. ಆದರೆ ಅವನು ಬರಟಾಗಿ ಅವಳ ಭುಜಗಳನ್ನು ಒತ್ತಿ ಕೇಳಿದ.

''ಕೋಮಲ ಎಲ್ಲಿ? ಅವಳನ್ನು ಎಲ್ಲಿ ಬಚ್ಚಿಟ್ಟಿದೀಯಾ?''

''ನಾನೇಕೆ ಬಚ್ಚಿಡಲಿ? ಅವಳು ಹಾಸ್ಟೆಲ್ಲಿನಲ್ಲಿದಾಳೆ.''

''ನಂಗೊತ್ತು ಇದೆಲ್ಲಾ ನಿನ್ನದೇ ಉಪಾಯ... ಅವಳನ್ನು ಕರೆಸು. ನನಗೆ ಅವಳು ಬೇಕು.''

''ಛಿ ಇದೆಂತಹ ಹುಚ್ಚಾಟ...? ನೀನಿನ್ನು ಈಗ್ತಾನೇ ಜೈಲಿನಿಂದ ಬರ್ತಿದೀಯ... ನಿನಗೆ ನಾಚಿಕೆ ಬೇಡ್ವಾ?''

''ನಾಚಿಕೆ ಏಕೆ? ಒಂದು ಸಾರಿ ಜೈಲಿಗೆ ಹೋದವನು ಇನ್ನೊಂದು ಸಾರಿ ಹೋಗಬಾರದು ಅಂತೇನಿಲ್ಲ. ಆದರೆ ಜೈಲಿಗೆ ಹೋಗೋಕ್ಮುಂಚೆ ನಿನ್ನ ಅಹಂಕಾರ ಇಳಿಸಲೇಬೇಕು ನಾನು. ನಿನಗೆ ಬುದ್ಧಿ ಕಲಿಸಲೇಬೇಕು.'' ಅವಳು ಮಾತನಾಡದೇ ದಿಗ್ಭ್ರಾಂತಳಾಗಿ ಹಾಗೇ ನಿಂತಿದ್ದಳು.

''ಯಾಕೆ ಹಾಗೆ ನಿಂತಿದೀಯ? ಹೆದರಿಬಿಟ್ಯಾ?'' ಕುಹಕ ನಗೆ ನಕ್ಕ.

''ನಿನ್ನ ಬಗ್ಗೆನನಗೆಅಯ್ಯೋ ಅಂತ ಅನ್ನಿಸ್ತಿದೆ...ನಿನ್ನ ತಟ್ಟು ಹೋಗಿದೆ. ಅಕ್ಕನ ಸಮಾನಳಾದ ನನ್ನನ್ನು ಕೆಡಿಸಿದೆ. ನಾನು ಸಹಿಸಿಕೊಂಡೆ, ಅದೂ ನನ್ನ ಚಿಕ್ಕಪ್ಪನಿಗಾಗಿ... ಈಗ ಬೃಂದಳಿಗೆ ಅನ್ಯಾಯ ಮಾಡ್ತಿದೀಯ ಪಾಪ, ಅವಳೂ ಅವಳ ಚಿಕ್ಕಪ್ಪನಿಗಾಗಿ ಎಲ್ಲಾ ಸಹಿಸಿಕೊಂಡಿದಾಳೆ. ನಾನು ಇದುವರೆಗೂ ಯಾರಿಗೂ ನಮ್ಮಿಬ್ಬರ ಸಂಬಂಧದ ವಿಷಯ ತಿಳಿಸಿಲ್ಲ. ನೀನು ಈಗ ಬದಲಾಗದಿದ್ದರೆ ನಾನು ಎಲ್ಲರಿಗೂ ತಿಳಿಸಿಬಿಡ್ತೀನಿ.''

''ನೀನೇನು ತಿಳಿಸೋದು? ನಾನೇ ತಿಳಿಸ್ತೀನಿ. ನನಗೇನು ಹೆದರಿಕೆ? ನೀನಿರೋದು ನನ್ನ ಹಂಗಿನಲ್ಲಿ. ಅವಳು ಬಿದ್ದಿರೋದು ನನ್ನ ಹಂಗಿನಲ್ಲೇ... ನಿಮ್ಮೆಲ್ಲರ ಎದುರಿನಲ್ಲೇ ಕೋಮಲಳ ಮೇಲೆ ಬಲತ್ಕಾರ ಮಾಡ್ತೀನಿ.... ನಾನು ಯಾರಿಗೂ ಹೆದರುಲ್ಲ... ಹೆದರುಲ್ಲಾ'' ಎಂದು ತೂರಾಡುತ್ತಾ ಗೋಡೆಗೆ ಡಿಕ್ಕಿ ಹೊಡೆದು, ಅಲ್ಲಿಯೇ ದೊಪ್ಪನೆ ಬಿದ್ದ.

ಕುಡಿತದ ಅಮಲಿನಲ್ಲಿ ಬಿದ್ದವನನ್ನು ಕಂಡು ಅಸಹ್ಯವೆನಿಸಿದರೂ ಅವನನ್ನು ರೂಮಿನೊಳಕ್ಕೆ ಎಳೆದುಕೊಂಡು ಬಂದು ಮಲಗಿಸಿದಳು. ಈ ಮುಂಚೆ ಅವನೇ ತಂದಿಟ್ಟಿದ್ದ ಬಾಜಲಿಗಳು ಖಾಲಿಯಾಗಿ ಬಿದ್ದಿದ್ದವು.

ಕೃಷ್ಣ ಜೈಲಿನಿಂದ ಬಿಡುಗಡೆಯಾಗಿ, ಬಂದು, ತೋಟದ ಮನೆಯಲ್ಲಿದ್ದಾನೆಂದು ತೋಟದ ಹತ್ತಿರ ವಾಸವಾಗಿದ್ದ ಕೆಲವರಿಗೆ

ತಿಳಿಯಿತು.ಕೆಲವರು ಕಲ್ಯಾಣಿಯನ್ನು ವಿಚಾರಿಸಿದರು. ''ಅವನಿಗೆ ಆರೋಗ್ಯ ಚೆನ್ನಾಗಿಲ್ಲ... ಚೇತರಿಸಿಕೊಳ್ಳುತ್ತಿದಾನೆ. ಆಮೇಲೆ ನೋಡೋರಂತೆ'' ಅಂತ ಹೇಳಿ ಕಳಿಸಿ, ಒಬ್ಬ ನಂಬಿಕಸ್ಥ ಆಳಿನ ಕೈಯಲ್ಲಿ ಅವನಿಗಾಗಿ ಕುಡಿತದ ಬಾಟಲಿಗಳನ್ನು ತರಿಸಿದಳು. ಅವನು ಇವಳ ಕಡೆ ನೋಡಿದಾಗ ನಕ್ಕಳು.

''ಇದನ್ನೆಲ್ಲ ಒಂದು ಸಲ ಅಭ್ಯಾಸ ಮಾಡಿಕೊಂಡಮೇಲೆ ಬಿಡೋದು ಕಷ್ಟ ಅಲ್ವಾ! ಅದಕ್ಕೇ ತಿಳಿದೋರು ಹೇಳೋದು, ಕುಡಿತದ ದಾಸರಾಗಬೇಡಿ ಅಂತ... ಅದು ನಿಮ್ಮನ್ನು ಪ್ರಯೋಜನಕ್ಕೆ ಬಾರದಂತೆ ಮಾಡಿಬಿಡುತ್ತದೆ.''

''ಅದಲ್ಲಮ್ಮಾ... ಇದನ್ನೆಲ್ಲ ನೀವ್ಯಾಕೆ ಮಾಡಬೇಕಂತ...? ಅವರೇ ಮಾಡಿಕೊಳ್ಳಲಿ! ನಾನೆಲ್ಲೂ ಕಂಡಿರಲಿಲ್ಲ ಇಂಥಾ ವಿಚಿತ್ರಾನಾ...''

''ಕುಡಿಯೋಕ್ಕೆ, ಸಿಗದಿದ್ದರೆ, ಆಗೋ ರಂಪರಾದ್ಧಾಂತ ನಿಮಗೇನೂ ಹೊಸದಲ್ಲ. ಅವನೀಗ ಎದ್ದು ಎಲ್ಲಿಗೂ ಹೋಗೋ ಸ್ಥಿತಿಯಲ್ಲಿಲ್ಲ. ಆದರೆ ಇದ್ದಲ್ಲೇ ಇದು ಸಿಗದಿದ್ದರೆ ಕೋಪ ಮಾಡಿಕೊಳ್ತಾನೆ... ಗಲಾಟೆ ರಂಪ ಮಾಡ್ತಾನೆ.''

''ಆದರೆ ಇದು ತಪ್ಪಲ್ವಾ? ಅಮ್ಮಾವ್ರೇ... ನಮಗೆ ತಿಳುವಳಿಕೆ ಹೇಳಬೇಕಾದವರು ನೀವು...'' ''ನೀನು ಹೇಳೋದು ನಿಜ. ಆದರೆ ಕೆಲವು ಸಲ ಪರಿಸ್ಥಿತಿ ಹೇಗೆ ಬಂದುಬಿಡುತ್ತೆ ಅಂತಂದ್ರೆ... ಅದೆಲ್ಲ ನಿನಗೆ ಅರ್ಥವಾಗುಲ್ಲ... ಈಗ ನೀನು ಬೇಗ ಹೋಗಿ ಬಂದು ಬಿಡು'' ಎಂದು ಅವನ ಕೈಗೆ ಹಣ ವಿತ್ತಳು. ಅವಳು ಒಳಕ್ಕೆ ಬರುತ್ತಿದ್ದಂತೆ, ಕೃಷ್ಣ ಬರಟಾಗಿ ಅವಳನ್ನು ತನ್ನೆಡೆಗೆ ಎಳೆದುಕೊಂಡ.

''ಯಾರ ಹತ್ರ ಮಾತನಾಡ್ತಿದ್ದೆ? ಬೊಗಳು...'' ಎಂದ.

''ನಿನಗ್ಯಾಕೆ?'' ಎಂದಳು ಅವಳು ಒರಟಾಗಿ.

''ಒಂದು ಸಾರಿ ಪೋಲಿಸರಿಗೆ ಸುಳಿವು ಕೊಟ್ಟು ನನ್ನನ್ನು ಅವರು ಹಿಡಿಯುವಂತೆ ಮಾಡಿದ್ದೆ... ಆದರೆ ಪ್ರತೀ ಬಾರಿಯೂ ಹಾಗಾಗಲು ಸಾಧ್ಯವಿಲ್ಲ. ಯಾರ ಹತ್ರ ಮಾತನಾಡ್ತಿದ್ದೆ ನಿಜ ಹೇಳು...'' ಬಲವಾಗಿ ಅಲುಗಾಡಿಸಿದ.

''ಯಾರೋ ನಿನಗ್ಯಾಕೆ? ಹಾಗಾದ್ರೆ ಪೋಲಿಸರಿಗೆ ಹೆದರಿ ಕೂತಿದೀಯಾ ಅಂತನ್ನು...'' ಅವಳೂ ಹಂಗಿಸಿದಳು.

"ಅವನ್ಯಾರು! ನಿಜ ಬೊಗಳು... ಅವನಿಗೂ ನಿನಗೂ ಏನು ಸಂಬಂಧ? ಸರಸ ಆಡ್ತಿದ್ಯಾ? ನಾನಿಲ್ಲದಾಗ ಅವನ ಸಹವಾಸ ಬೇಕಾಯ್ತಾ ನಿನಗೆ?... ಇದೆಲ್ಲಾ ನನಗೆ ತಿಳಿಯದು ಅಂತ ಅಂದ್ಕೊಂಡ್ಯಾ?"

ಕಲ್ಯಾಣಿ ಕೈ ಎತ್ತಿ ಅವನ ಕಪಾಲಕ್ಕೆ ಬಿಗಿದಳು. ಆ ಏಟಿಗೆ ಅವನು ತತ್ತರಿಸಿ ಬಿದ್ದ.

"ನಾಚಿಕೆ ಆಗೋಲ್ಲ ನಿನಗೆ, ನನ್ನ ಮೇಲೆ ಇಂಥಾ ಅಪವಾದ ಹೊರಿಸೋಕೆ? ಎಲ್ಲಾ ನಿನ್ನ ಹಾಗೇ ಲುಚ್ಚಾ ಜನ ಅಂತ ತಿಳಕೋಬೇಡ. ಅವರುಗಳು ನಿನಗಿಂತ ವಾಸಿ; ನಿನ್ನ ಹಾಗಲ್ಲ. ನನ್ನ ಬಗ್ಗೆ ಮರ್ಯಾದೆ ಗೌರವ ಇಟ್ಟುಕೊಂಡಿದಾರೆ."

ಬಿದ್ದವನು ಚೇತರಿಸಿಕೊಂಡು ಎದ್ದ. "ಅಹಹಾ... ಮರ್‍ಯಾದೆ ಅಂತ ಮರ್‍ಯಾದೆ! ನಿಮ್ಮಿಬ್ಬರ ಮರ್‍ಯಾದೆಯನ್ನು ಬೀದಿ ಪಾಲು ಮಾಡದಿದ್ದರೆ ನನ್ನ ಹೆಸರು ಕೃಷ್ಣನೇ ಅಲ್ಲ..." ಎನ್ನುತ್ತಾ ಎದುರಿಗೆ ನಿಂತವಳನ್ನು ಪಕ್ಕಕ್ಕೆ ತಳ್ಳಿ ಬಾಗಿಲ ಕಡೆಗೆ ಹೊರಟವನನ್ನು ಅವಳು ಹಿಂದಕ್ಕೆ ಎಳೆದು ಹಿಡಿದು ನಿಲ್ಲಿಸಿದಳು. ಅವನ ಕಡೆ ಕ್ರೂರವಾಗಿ ನೋಡುತ್ತಾ,

"ನಿಲ್ಲೋಕೆ ಶಕ್ತಿ ಇಲ್ಲ; ಓಡಾಡೋಕೆ ತಾಕತ್ತಿಲ್ಲ... ನೀನೇನು ಕಳೀತೀಯೋ ನಮ್ಮ ಮರ್‍ಯಾದೇನ? ಮೊದಲು, ನಿನಗೆ ಎಷ್ಟು ಮರ್‍ಯಾದೆ ಇದೆ ಅಂತ ನಿನಗೆ ಗೊತ್ತಾ? ಹುಚ್ಚು ಹುಚ್ಚಾಗಿ ಆಡಬೇಡ. ಈಗಲಾದರೂ ನಿನ್ನನ್ನು ಸುಧಾರಿಸಿಕೋ. ನಾನು ನಿನಗೆ ಸಹಾಯ ಮಾಡ್ತೀನಿ" ಎನ್ನಾತ್ತಾ ಅವನನ್ನು ರೂಮಿನೊಳಕ್ಕೆ ತಳ್ಳಿ ಹೊರಗಿನಿಂದ ಬಾಗಿಲನ್ನು ಭದ್ರ ಪಡಿಸಿದಳು ಎಷ್ಟೋ ಹೊತ್ತಿನ ತನಕ, ಕೃಷ್ಣ ಅವಾಚ್ಯ ಶಬ್ಧಗಳಿಂದ ಅವಳನ್ನು ಬೈಯುತ್ತಲೇ ಇದ್ದ. ಹೊರಗೆ ಕುಳಿತಿದ್ದ ಕಲ್ಯಾಣಿ, ಕಿವಿಗಳಿಗೆ ಅಡ್ಡವಾಗಿ ಕೈಯನ್ನಿಟ್ಟುಕೊಂಡು ಚಿಂತೆಯಲ್ಲಿ ಮುಳುಗಿಹೋಗಿದ್ದಳು. ಅಷ್ಟರಲ್ಲಿ ಬೃಂದಳ ಚಿಕ್ಕಪ್ಪ ಬಂದು, ಕೃಷ್ಣ ಹೇಗಿದಾನೆಂದು ವಿಚಾರಿಸಿದರು. ಅವಳು ಉತ್ತರಿಸದೇ ಸುಮ್ಮನೇ ಅವರನ್ನೇ ನೋಡಿದಳು.

"ಅವನಿಗೆ ಯಾರೊಡನೆಯೂ ಬೆರೆಯುವುದು ಬೇಕಿಲ್ಲದಿರಬಹುದು. ಆದರೆ, ಎಷ್ಟು ದಿನ ಹೀಗೆ ಒಳಗೇ ಕೂತಿರುಕ್ಕೆ ಆಗುತ್ತೆ... ಬಂದು ಹತ್ತು ದಿನಗಳ

ಆಯಿತು. ಇನ್ನಾದರೂ ಅವನು ಸುಧಾರಿಸಬೇಕಲ್ವಾ? ನೀನು ಅವನಿಗೆ ಸರಿಯಾಗಿ ತಿಳುವಳಿಕೆ ಹೇಳಿ ಅವನು ಮನೆಯಿಂದ ಹೊರಕ್ಕೆ ಬಂದು, ತೋಟದ ಕೆಲಸ ಕಾರ್ಯಗಳಲ್ಲಿ ಆಸಕ್ತಿ ತೋರುವಂತೆ ಮಾಡಬೇಕಮ್ಮಾ...''

''ಅದು ನನ್ನಿಂದಾಗುವುದಿಲ್ಲ. ಅವನೆಂದೂ ನನ್ನ ಮಾತನ್ನು ಕೇಳಿದವನೇ ಅಲ್ಲ. ಆದರೆ, ಈಗಂತೂ ದಿನದಿನಕ್ಕೂ ಅವನ ವರ್ತನೆ ನನ್ನನ್ನು ಹೆದರಿಸುತ್ತಿದೆ. ಏನೇನೋ ಮಾತನಾಡ್ತಾನೆ. ಹೇಗ್ಹೇಗೋ ಆಡ್ತಾನೆ. ಅವನ ತಲೆ ಸರಿಯಾಗಿದೆಯೋ ಇಲ್ಲವೋ ಎಂಬ ಅನುಮಾನ ನನಗೆ ಬರುತ್ತಿದೆ.''

ನಂಜುಂಡಯ್ಯನ ಮುಖ ಕಳಾಹೀನವಾಯಿತು. ಮೊದಲೇ ಸರಿ ಇರಲಿಲ್ಲ. ಈಗ ಹುಚ್ಚನೆಂಬ ಬಿರುದೂ ಸಿಕ್ಕಿ ಬಿಟ್ಟರೇ ಆಯ್ತು... ನಮ್ಮ ಬೃಂದಳ ಪುಣ್ಯಕ್ಕೆ ಎಣೆಯೇ ಇಲ್ಲ... ಪೋಲಿಸರು ಏನೇನು ಹಿಂಸೆ ಕೊಟ್ಟರೋ... ಬಂಧಿಯಾಗಿ ಎಷ್ಟು ಮಾನಸಿಕ ಹಿಂಸೆ ಅನುಭವಿಸಿದ್ದಾನೋ...! ಎಂದುಕೊಂಡು,

''ಹೇಗಾದರಾಗಲೀ, ಅವನನ್ನು ಬೆಂಗಳೂರಿನ ಮೆಂಜಲ್ ಆಸ್ಪತ್ರೆಗೆ ಕರೆದುಕೊಂಡು ಹೋಗಿ, ಡಾಕ್ಟರರಿಗೆ ತೋರಿಸಬೇಕೂಂತ ನನಗನ್ನಿಸುತ್ತಿತ್ತು. ಈಗ ಹಾಗೆ ಮಾಡದೇ ವಿಧಿಇಲ್ಲ. ಅಲ್ಲಿ ವಿದ್ಯಾವಂತ, ಹೆಸರಾಂತ ಡಾಕ್ಟರುಗಳಿರುತ್ತಾರಂತೆ... ನಮ್ಮ ಬೃಂದಾ ಇನ್ನು ಏನೇನು ಎದುರಿಸಬೇಕಾಗಿದೆಯೋ, ಅವಳ ನಿಷ್ಠೆ ಅವನನ್ನು ಈ ಸಂಕಷ್ಟಗಳಿಂದ ಪಾರು ಮಾಡಬೇಕು... ಆ ದೇವಿ ಬೃಂದಾಳ ಮೇಲೆ ಕರುಣೆ ತೋರಬೇಕು...'' ಕೈ ಮೇಲೆತ್ತಿ ನುಡಿದರು.

''ಬೆಂಗಳೂರು ತುಂಬಾ ದೂರ ಅಲ್ವಾ ಚಿಕ್ಕಪ್ಪಾ? ಇಲ್ಲೇ ಹತ್ತಿರ ಹತ್ತಿರ ಯಾವ ಆಸ್ಪತ್ರೆಗಳಿಲ್ಲವಾ?''

''ಇಲ್ಲಿ ಎಲ್ಲಿದೆ? ಅಲ್ಲದೇ ಇಲ್ಲಿ ಜನಗಳು ನೂರೆಂಟು ತರಹ ಮಾತನಾಡಿ, ಹತ್ತಾರು ಸಲಹೆಗಳನ್ನು ಕೊಡ್ತಾರೆ. ಭೂತ, ಪ್ರೇತ, ಮಾಟಮಂತ್ರವನ್ನು ನಂಬೋ ಜನ ಇವರುಗಳು... ಅಂಥಾದ್ದೆಲ್ಲ ನಮಗಲ್ಲಮ್ಮ.''

''ಅವನು ಅಲ್ಲಿ ಎಷ್ಟು ದಿನ ಇರಬೇಕಾಗುತ್ತೋ... ಅವನ ಜತೆಗೆ ಯಾರು ಇರಬೇಕಾಗುತ್ತೋ...''

''ಅದನ್ನೆಲ್ಲಾ ಈಗಲಿಂದ ಯಾಕೆ ಯೋಚಿಸಬೇಕು. ಅದಕ್ಕೂ ಏನಾದರೂ ಒಂದು ಮಾರ್ಗವಿದ್ದೇ ಇರುತ್ತೆ. ಮೊದಲು ನೀನು ಅವನ ಹತ್ತಿರ ನಯವಾಗಿ ಮಾತನಾಡಿ ಒಪ್ಪಿಸು. ನಾಳೇನೇ ಬೆಂಗಳೂರಿಗೆ ಹೊರಟು ಬಿಡೋಣ.''

ಬಾಗಿಲಿಗೆ ಕಿವಿಕೊಟ್ಟು ಅವರಿಬ್ಬರ ಸಂಭಾಷಣೆಗಳನ್ನು ಕೇಳಿಸಿಕೊಂಡ ಕೃಷ್ಣ ಹಲ್ಲು ಕಡಿದ. ದಬದಬನೆ ಬಾಗಿಲನ್ನು ಬಡಿದ. ''ನಾನು ಬರ್ತೀನಿ'' ಎಂದು ಸಂಜ್ಞೆಯಿಂದ ಹೇಳಿ, ನಂಜುಂಡಯ್ಯ ಹೊರಟುಹೋದರು. ಮತ್ತೆ ಮತ್ತೆ ಕೃಷ್ಣ ಬಾಗಿಲು ಬಡಿದಾಗ ಕಲ್ಯಾಣಿ ಬಾಗಿಲನ್ನು ತೆಗೆದಳು. ಬುಸ್ ಎನ್ನುತ್ತಾ ಗೂಳಿಯಂತೆ ಹೊರಬಂದ.

''ನನ್ನನ್ಯಾಕೆ ಕೂಡಿ ಹಾತಿದ್ದೆ! ಯಾರು ಬಂದಿದ್ರು! ಅವರ ಹತ್ತಿರ ಅದೇನು ಮಾತನಾಡ್ತಿದ್ದೆ?'' ಕಲ್ಯಾಣಿ ಅವನ ಆರ್ಭಟಕ್ಕೆ ಹೆದರಲಿಲ್ಲ.

''ನಿನ್ನ ಮಾವ ಬಂದಿದ್ರು... ನಿನ್ನನ್ನ ಒಂದು ಸಾರಿ, ಬೆಂಗಳೂರಿನ ಆಸ್ಪತ್ರೆಗೆ ಕರೆದುಕೊಂಡು ಹೋಗಿ ತೋರಿಸಿಕೊಂಡು ಬರಬೇಕೂಂತ ಹೇಳಿದ್ರು...''

''ಯಾಕಂತೆ! ಏನಾಗಿದೆ ನನಗೆ? ಅವರಿಗೆ ತಲೆ ಇಲ್ಲ.''

''ಇಲ್ಲ. ಅವರು ಹೇಳಿದ್ದರಲ್ಲಿ ಏನೂ ತಪ್ಪಿಲ್ಲ. ನೀನೇ ಸರಿಯಾಗಿಲ್ಲ. ಪೋಲಿಸರು, ನಿನ್ನನ್ನು ಮುಖ ಮೈ ನೋಡದೇ ಹೊಡೆದು ಬಡಿದು ಚಿತ್ರ ಹಿಂಸೆ ಕೊಟ್ಟಿರಬಹುದು ಅಲ್ವಾ! ನಿನ್ನ ತಲೆಗೆ ಪೆಟ್ಟು ಬಿದ್ದು, ನಿನ್ನ ತಲೆ ಸರಿಯಾಗಿ ಕೆಲಸ ಮಾಡುತ್ತಿಲ್ಲ. ಒಂದು ಸಾರಿ ಹೋಗಿ ಬಂದರೆ ಏನೀಗ?''

''ಓ... ನನ್ನನ್ನ ಹುಚ್ಚ ಅಂತ ಬೇರೆ ಸಾಬೀತು ಮಾಡ್ತಿದೀರಾ? ನನಗಲ್ಲ ಹುಚ್ಚು... ಅವನಿಗೇ ಹುಚ್ಚು... ಅವನ್ಯಾರು ಅದನ್ನೆಲ್ಲ ಆಡೋಕೆ? ನಾನು ಇಲ್ಲಿದ್ದ ಮಾತ್ರಕ್ಕೆ ನನ್ನ ಹಿಂದೆ ಪಿತೂರಿ ನಡೆಸಿ ನನ್ನನ್ನ ಹುಚ್ಚಾಸ್ಪತ್ರೆಗೆ ಸೇರಿಸೋಕೆ ನೋಡ್ತಿದೀರಾ? ಮೊದಲು ನೀನು. ಪೋಲೀಸರಿಗೆ ಸುಳಿವು ಕೊಟ್ಟು ನನ್ನನ್ನ ಪೋಲಿಸರಿಗೆ ಹಿಡಿಸಿಕೊಟ್ಟೆ... ಎರಡೂವರೆ ತಿಂಗಳು ಜೈಲಿನಲ್ಲಿದ್ದು ಬಂದಿದೀನಿ. ನನ್ನ ರೋಷ ಏನೂಂತ ನಿಮಗ್ಯಾರಿಗೂ ತಿಳೀದು... ನನ್ನ ತಂಟೆಗೆ ಬಂದವರಿಗೆಲ್ಲಾ ಬುದ್ಧಿ ಕಲಿಸದೇ ಬಿಡುವುವನಲ್ಲ ನಾನು... ಜೈಲಿಗೆ ಕಳಿಸೋರು

ಒಬ್ಬರು... ಹುಚ್ಚಾಸ್ಪತ್ರೆಗೆ ಸೇರಿಸೋರು ಒಬ್ಬರು... ಆ ಮೇಲೆ ಈ ಆಸ್ತಿ ಪಾಸ್ತಿನೆಲ್ಲಾ ನಿಮ್ಮ ವಶ ಮಾಡಿಕೊಂಡು ಮಜ ಮಾಡೋ ಆಸೆ ನಿಮಗೆ... ಒಬ್ಬರಿಗೊಬ್ಬರು ಶಾಮೀಲು... ನಾನು ನಿಮ್ಮಿಬ್ಬರನ್ನು ಸುಮ್ಮನೇ ಬಿಡುಲ್ಲ... ಮೊದಲು ನಿಮ್ಮಿಬ್ಬರಿಗೂ ಒಂದು ಗತಿ ಕಾಣಿಸಲೇಬೇಕು... ಆದರೆ ಅದಕ್ಕೆ ಮುಂಚೆ ಒಂದು ಸಾರಿ... ಆದೇ ನನಗೆ ನೆಮ್ಮದಿ... ನೆಮ್ಮದಿ...'' ಹುಚ್ಚನಂತೆ ಕೂಗಾಡಿದ. ಕಲ್ಯಾಣಿ ಮಾತನಾಡಲಿಲ್ಲ. ಅವಳು ಆತಂಕಗೊಂಡಳು. ಅವನಿಗೆ ತಿಳುವಳಿಕೆ ಹೇಗೆ ಹೇಳುವುದೆಂದು ತಿಳಿಯಲಿಲ್ಲ. ಹೊರಗೆ ಹೋಗಲು ಧೈರ್ಯವಿಲ್ಲದೆ ಅವನು ಮತ್ತೆ ರೂಮಿನಲ್ಲಿ ಬಿದ್ದುಕೊಂಡ.

ಕಲ್ಯಾಣಿ ಅಡಿಗೆ ಮಾಡಿ, ಅವನಿಗೆ ಬಡಿಸಿದಳು... ಅವಳಿಗೆ ಊಟ ಸೇರಲಿಲ್ಲ. ಇನ್ನು ಎಷ್ಟು ದಿನ ಇವನ ಕಾಟವನ್ನು ಸಹಿಸಬೇಕೋ ಎಂದು ಚಿಂತಿಸುತ್ತಿದ್ದಳು... ಕೃಷ್ಣ ಕೈಯಲ್ಲಿ ಒಂದು ಸಣ್ಣ ಕಾಗದವನ್ನು ಹಿಡಿದು ಅವಳ ಎದುರಿಗೆ ನಿಂತ. ನಿಲ್ಲಲು ಆಗದಂತೆ ತೂರಾಡುತ್ತಿದ್ದ. ಸಿಕ್ಕಾಪಟ್ಟೆ ಕುಡಿದಿದ್ದ.

''ಇದರಲ್ಲಿ ಕೋಮಲ ಯಾವ ಹಾಸ್ಟೆಲ್ಲಿನಲ್ಲಿದಾಳೆ ಅನ್ನೋ ವಿಳಾಸವಿದೆ. ನಾನೀಗಲೇ ಹೋಗಿ ಅವಳನ್ನು ಕರೆದುಕೊಂಡು ಬರ್ತೀನಿ... ಈ ರಾತ್ರಿ ನಿಮ್ಮಿಬ್ಬರಿಗೂ ಸಜಾ... ನನಗೆ ಮಜಾ... ಎನ್ನುತ್ತಾ ಹೊರಟವನನ್ನು ಅವಳು ತಡೆದಳು. ''ಕೃಷ್ಣಾ... ನಿನಗೆ ಕೈ ಮುಗಿದು ಕೇಳಿಕೊಳ್ತೀನಿ. ಕೋಮಲಳ ತಂಟೆಗೆ ಹೋಗಬೇಡ... ನನಗೆ ಎಷ್ಟೆ ಹಿಂಸೆ ಕೊಟ್ಟರೂ ಸಹಿಸಿಕೊಳ್ತೀನಿ''

''ನಿನಗೆ ಹಿಂಸೆ ಕೊಡಬೇಕೂಂತಲೇ, ನಾನು ಕೋಮಲಳ ತಂಟೆಗೆ ಹೋಗ್ತಾ ಇರೋದು'' ಎಂದು ಕೆಟ್ಟದಾಗಿ ನಕ್ಕವನ ಕೆನ್ನೆಗೆ ಬಾರಿಸಿದಳು.

''ನನ್ನನ್ನ ಹೊಡೆದ್ರೆ ಬಿಟ್ಟುಬಿಡ್ತೀನಿ ಅಂತ ಅಂದ್ಕೊಂಡ್ಯಾ?...'' ಎಂದು ಅವಳನ್ನು ತಳ್ಳಿದ. ಅವಳು ಬಿದ್ದಳು. ಅವಳು ಸಾವರಿಸಿಕೊಂಡು ಏಳುವಷ್ಟರಲ್ಲಿ ಅವನು ಮನೆಯಿಂದಾಚೆ ನಡೆದಿದ್ದ. ಕತ್ತಲಿನಲ್ಲಿ ಅವನು ಯಾವ ದಿಕ್ಕಿಗೆ ಹೋದ ಎಂದು ತಿಳಿಯದೇ, ಮನೆಯ ಸುತ್ತ ಮೂರು ರೌಂಡ್ ಹಾಕಿದಳು. ಆದರೆ ಅವನು ಕಾಣಲಿಲ್ಲ. ತೂರಾಡುತ್ತಾ ಬಾವಿಯ ಕಡೆ ಹೋಗಿರಬಹುದೇ ಎಂಬ ಅನುಮಾನ ಇಣುಕಿದಾಗ ಹೆದರಿದಳು. ಬಾವಿಯಲ್ಲಿ ಇಣುಕಿ ನೋಡಿದಳು. ಏನೂ ಕಾಣಲಲಿಲ. ಅಲ್ಲೇ ಸ್ವಲ್ಪ ಹೊತ್ತು ಕೂತಿದ್ದಳು. ದೂರದಲ್ಲೆಲ್ಲೋ ನಾಯಿ

ಬೊಗುಳಿದ ಸದ್ದು ಕೇಳಿದಾಗ ಎದ್ದಳು. ಮನೆಯೊಳಗೆ ಕುಳಿತರೂ ನೆಮ್ಮದಿ ಇಲ್ಲ. ಏನೋ ಚಡಪಡಿಕೆ. ದೂರದಲ್ಲೆಲ್ಲೋ ನಾಯಿ ಬೊಗಳುತ್ತಿದ್ದುದು ಕೇಳಿಸುತ್ತಲೇ ಇತ್ತು. ಎಷ್ಟೋ ಹೊತ್ತಿನ ನಂತರ, ಮನೆಯ ಹಿಂಭಾಗದಲ್ಲೆಲ್ಲೋ ಒಣಗಿದ ಎಲೆಗಳ ಮೇಲೆ ಯಾರೋ ನಡೆದ ಸದ್ದು ಚರಪರ ಅಂತ ಕೇಳಿದಾಗ, ಕೃಷ್ಣನೇ ಮತ್ತೆ ವಾಪಸ್ಸು ಬರುತ್ತಿರಬಹುದು ಎಂದು ಭಾವಿಸಿದಳು. ಆದರೆ ಆ ಸದ್ದು ದೂರ ದೂರ ಸರಿದು ಕ್ಷೀಣವಾದಾಗ, ಕೈಯಲ್ಲಿ ಟಾರ್ಚು ಹಿಡಿದು, ಕತ್ತಲೆಯಲ್ಲಿ ಕೃಷ್ಣನನ್ನು ಅರಸುತ್ತಾ ನಡೆದಳು.

ತೋಟದ ಮನೆಯ ಹಿಂಭಾಗದಿಂದ ಒಂದು ಕಾಲು ದಾರಿ, ಹೆದ್ದಾರಿಗೆ ಸೇರುತ್ತಿತ್ತು. ಹಿಂದೆಂದೋ, ಜಮೀನಾಗಿದ್ದ ಆ ಪ್ರದೇಶ, ಈಗ ಕಾಡಿನಂತಾಗಿತ್ತು. ಆ ಜಮೀನು ಹೆದ್ದಾರಿಗೆ ಸೇರುವ ಕಡೆ ಒಂದು ದೊಡ್ಡ ಗೇಟನ್ನು ಹಾಕಿದ್ದರು. ಅಲ್ಲಿ ಈಗ ಯಾರೂ ಹೆಚ್ಚಿಗೆ ಓಡಾಡುತ್ತಿರಲಿಲ್ಲ. ಕಳ್ಳರು ಆ ದಾರಿಯಲ್ಲೇ ಓಡಾಡುತ್ತಾರೆಂದು ಹೆದರಿ, ಯಾರೂ ಆ ದಿಕ್ಕಿಗೆ ಹೋಗುತ್ತಿರಲಿಲ್ಲ. ಆದರೆ ಆ ದಾರಿಯನ್ನೇ ಕೃಷ್ಣ ತಾನು ಹೋಗಿ ಬರಲು ಉಪಯೋಗಿಸುತ್ತೇನೆಂದು ಕಲ್ಯಾಣಿಗೆ ಒಮ್ಮೆ ತಮಾಷೆಯಾಗಿ ಹೇಳಿದ್ದ. ಆದರೆ ಅವಳು ನಂಬಿರಲಿಲ್ಲ. ''ಅಲ್ಲಿ ಕಳ್ಳರನ್ನು ಹಿಡಿಯಲು ಪೋಲಿಸರೂ ಓಡಾಡುತ್ತಿರುತ್ತಾರೆ... ನಿನಗೆಲ್ಲಿದೆ ಧೈರ್ಯ, ಆ ರಸ್ತೆಯಲ್ಲಿ ಹೋಗೋಕೆ?'' ಎಂದು ಹಂಗಿಸಿದ್ದಳು. ಈಗ ಆ ಮಾತು ನೆನಪಿಗೆ ಬಂತು. ಹೇಗಾದರೂ ಸರಿ, ಕೃಷ್ಣ ಆ ಹೆದ್ದಾರಿ ಸೇರದಂತೆ ತಡೆಯಬೇಕು ಎಂದು ಕೊಂಡು, ನಿರ್ಜನವಾದ ಆ ಜಾಗದಲ್ಲಿ ಗಿಡಮರಗಳ ಸಂದಿನಲ್ಲಿ, ಟಾರ್ಚಿನ ಬೆಳಕಿನಲ್ಲಿ ಕಂಭಕ್ಕೆ ಕಟ್ಟಿದ್ದ ವ್ಯಕ್ತಿಯನ್ನು ಕಂಡಳು. ಅವನನ್ನೇ ಕೃಷ್ಣನೆಂದು ಭಾವಿಸಿ, ಅವಸವಸರವಾಗಿ ಕಟ್ಟುಗಳನ್ನು ಬಿಚ್ಚಿದಳು... ಕೃಷ್ಣನಂತೆಯೇ ಕಾಣುತ್ತಿದ್ದ ವಾಸುವನ್ನು ಅವಳು ಕೃಷ್ಣನೆಂದೇ ಭಾವಿಸಿದಳು.

ತುಳಸೀ ಕಟ್ಟೆಯ ಸುತ್ತ ಪ್ರದಕ್ಷಿಣೆ ಹಾಕಿ, ತುಳಸೀದಳದ ನೀರನ್ನು ತೀರ್ಥವನ್ನಾಗಿ ಕುಡಿದು, ತಲೆಯ ಮೇಲೆ ಪ್ರೋಕ್ಷಿಸಿಕೊಂಡು, ಮತ್ತೊಮ್ಮೆ ಕೈ ಮುಗಿದು, ಅರಿಶಿನ ಕುಂಕುಮದ ತಟ್ಟೆಯೊಂದಿಗೆ ಮನೆಯೊಳಗೆ ನಡೆದಳು ಬೃಂದಾ. ಬಾಗಿಲೆದುರಿಗೆ ಪೆಚ್ಚು ಮೋರೆ ಹಾಕಿಕೊಂಡು ಕುಳಿತಿದ್ದ ಶಾರದಾ ಸೊಸೆಯನ್ನು ಕೇಳಿದಳು.

''ನಿಮ್ಮ ಚಿಕ್ಕಪ್ಪ ಎಲ್ಲಿ? ನೆನ್ನೆಯಿಂದ ಮನೆಗೇ ಬಂದಿಲ್ಲ.''

''ಏನೋ ನಂಗೊತ್ತಿಲ್ಲ. ನನಗೂ ಹೇಳಿಲ್ಲ.''

''ದೊಡ್ಡೋರು, ಇವರೂ ಹೀಗೆ ಮಾಡಿದ್ರೆ ಹೇಗೆ ಹೇಳು... ಕೃಷ್ಣ ಹೇಗಿದಾನೋ ಏನೋ. ಅವನಿಗೂ ಕಲ್ಯಾಣಿಗೂ ಮೊದಲ್ನಿಂದ ಎಣ್ಣೆ ಸೀಗೇಕಾಯಿ. ಅಂಥಾದ್ರಲ್ಲಿ ಸೀದಾ ಇಲ್ಲಿಗೆ ಬರೋದು ಬಿಟ್ಟು, ಆ ಮನೇಲಿ ಅವಿತಿಟ್ಟುಕೊಂಡು ಕೂತಿದಾನೆ. ಜೈಲಿನಲ್ಲಿದ್ರೇನಾಯ್ತು. ಬಿಡುಗಡೆ ಯಾಗಿದ್ಯಲ್ಲ. ಬಂದು ಹತ್ತು ಹದಿನೈದು ದಿನಗಳ ಮೇಲಾಗಿದೆ ಇನ್ನಾದ್ರೂ ತನ್ನ ಮನೆಗೆ ಬರಬಾರದಾ?''

''ಬೃಂದಾ ಉತ್ತರಿಸಲಿಲ್ಲ. ಏದುಸಿರು ಬಿಡುತ್ತಾ ಚಿಕ್ಕಪ್ಪ ಬಂದರು. ಕೈಯಲ್ಲಿ, ಒಂದು ದಿನ ಪತ್ರಿಕೆ ಇತ್ತು. ಮುಖದಲ್ಲಿ ಗಾಭರಿ ತುಂಬಿಕೊಂಡಿತ್ತು.

''ತೋಟದ ಮನೆಯ ಪಕ್ಕದ ಎಸ್ಟೇಟ್‌ನಲ್ಲಿ ಎರಡು ಕೊಲೆ ನಡೆದಿದೆ. ಚಂದನ ಎಸ್ಟೇಟ್‌ನ ಹಳೆಯ ಭಾವಿಯಲ್ಲಿ ಒಂದು ಗಂಡಸಿನ ಒಂದು ಹೆಂಗಸಿನ ಹೆಣಗಳು ಸಿಕ್ಕಿವೆಯಂತೆ.''

ಶಾರದಾ ಭಯದಿಂದ ಕಣ್ಣರಳಿಸಿದಳು. ''ನಾನು ಈಗಲೇ ಹೋಗಿ ಕೃಷ್ಣನ್ನ ಕಂಡು ಮಾತನಾಡಿಸಬೇಕು. ಏನಾದರೂ ಕಾರಣದಿಂದ ಪೋಲಿಸರು ಮತ್ತೆ ಅವನನ್ನು ಅರೆಸ್ಟ್ ಮಾಡುವ ಮೊದಲು, ಅವನನ್ನು ಈ ಮನೆಗೆ ಕರೆ ತರುವಂತೆ ಕಲ್ಯಾಣಿಗೆ ಹೇಳಬೇಕು.'' ಏದುಸಿರು ಬಿಡುತ್ತಾ ನುಡಿದಳು.

''ನಾನು ಹೀಗಂತೀನಿ ಅಂತ ಬೇಜಾರು ಮಾಡ್ಕೋ ಬೇಡಿ ಶಾರದಮ್ಮ... ನಿಮ್ಮ ಮಗನದು ಮೊಂಡು ಜಾತಿ. ಆ ಹುಡುಗೀನ ಎಷ್ಟು ಗೋಳು ಹೊಯ್ದುಕೊಳ್ಳುತ್ತಿದಾನೆ ಗೊತ್ತೇ? ಆ ಹುಡುಗಿ ಆಗೋ ಹೊತ್ತಿಗೆ ಅವನ ಹಿಂಸೆಗಳನ್ನು ಸಹಿಸಿಕೊಳ್ಳುತ್ತಿದ್ದಾಳೆ... ತಲೆ ಕೆಟ್ಟವನ ತರಹ ಆಡ್ತಾನಂತೆ. ಅದಕ್ಕೇ ಯಾರಾದರೂ ಸರಿಯಾದ ಡಾಕ್ಟರ ಹತ್ತಿರ ತೋರಿಸಿ ಬರೋಣ ಅಂತ. ಮನುಷ್ಯ ಹೊರಗೇ ಬರುಲ್ಲ. ಮಾತೇ ಆಡುಲ್ಲ... ಅದೇನು ಅಂತ?''

''ಯಾಕೆ ಹೀಗಾಡ್ತಾನೋ? ಯಾವುದೋ ದೆವ್ವದ ಕಾಟವಿರಬೇಕು. ಮೊದಲೇ ಅಲ್ಲಂತೂ ಒಂದಾದ ಮೇಲೆ ಒಂದು ದುರ್ಮರಣಗಳು ನಡೆದಿವೆ.

ಮೊದಲು ಅವನನ್ನು ಈ ಮನೆಗೆ ಕರೆತಂದು, ಆಂಜನೇಯ ಸ್ವಾಮಿಯ ರಕ್ಷಾಯಂತ್ರವನ್ನು ಕಟ್ಟಿಸಬೇಕು.''

''ಯಂತ್ರ, ಮಂತ್ರಕ್ಕೆ ನಿಮ್ಮ ಮಗ ಬಗ್ಗಲ್ಲ. ನಾಲ್ಕಾರು ಶಾಕ್ ಕೊಡಿಸಿದರೆ ಸರಿಹೋಗ್ತಾನೆ.'

''ನೋಡಿ, ನೀವು ನನ್ನ ಮಗನ್ನ, ನನ್ನ ಎದುರಿಗೇ ಹೀಗೆಲ್ಲಾ ಅನ್ನಬೇಡಿ. ನನ್ನದು ಹೆತ್ತಕರುಳು. ನಿಮಗೇನು ಅರ್ಥವಾಗುತ್ತೆ...?''

''ಇರಬಹುದು. ಆದರೆ ನನ್ನ ಮಗಳಿಗೆ ಎಂತಹ ಕಷ್ಟ ಒದಗಿದೆ ಅನ್ನೋದು ನಿಮಗೆ ಅರ್ಥವಾಗುತ್ತೋ ಇಲ್ಲವೋ?''

''ಯಾಕೆ ಅರ್ಥವಾಗುಲ್ಲ? ನಾನೂ ಹೆಂಗಸೇ... ನನ್ನ ಯಜಮಾನರು ಒಂದು ವರ್ಷದಿಂದ ಕೈಕಾಲು ಬಾಯಿ ಸ್ವಾಧೀನ ಕಳೆದುಕೊಂಡು ಪ್ರಯೋಜನವಿಲ್ಲದೇ ಬಿದ್ದಿದಾರೆ. ಹಾಗಂತ ನಾನು ಅವರನ್ನು ಕಡೆಗಣಿಸಿ ಬಿಟ್ಟಿದೀನಾ? ನನ್ನ ಗಂಡನ ಅನಾರೋಗ್ಯ, ನನ್ನ ಮಗನ ಚಿಂತೆ ನನ್ನನ್ನು ಕಾಡಿ ತಿನ್ನುತ್ತಿವೆ. ನಿಮ್ಮ ಮಗಳಿಗಾದರೆ, ಸಮಾಧಾನ ಹೇಳೋಕೆ ನಾವುಗಳಿದೀವಿ. ನನಗ್ಯಾರಿದಾರೆ?'' ಶಾರದಾ ಅಳು ಪ್ರಾರಂಭಿಸುವ ಮೊದಲೇ ನಂಜುಂಡಯ್ಯ ಹೊರಟುನಿಂತರು.

''ನೀವು ಸುಮ್ಮನಿರಿ, ಮಾತು ಮಾತಿಗೆ ಅಳಬೇಡಿ. ನಾನೀಗಲೇ ಹೋಗಿ ನೋಡಿಕೊಂಡು ಬರುತ್ತೀನಿ. ಅವನು ಕಲ್ಯಾಣಿಯ ಮಾತಿಗೆ ಒಪ್ಪಿ ಬೆಂಗಳೂರಿಗೆ ಬರುವುದಾದರೆ ನಾನು ಅವನ ಜೊತೆಗಿದ್ದು ಅವನ ಯೋಗಕ್ಷೇಮ ನೋಡಿಕೊಳ್ತೀನಿ.'' ಎನ್ನುತ್ತಾ ಉತ್ತರಕ್ಕೆ ಕಾಯಾದೇ ಹೊಸ್ತಿಲು ಹಾಟಿದರು.

ಚಿಕ್ಕಪ್ಪ ಒಂದು ಲೋಟ ನೀರನ್ನು ಸಹ ಕುಡಿಯದೇ ಬರುತ್ತಿದ್ದ ಹಾಗೇ ಹೊರಟುಬಿಟ್ಟರಲ್ಲಾ ಅಂತಂದುಕೊಂಡಳು ಬೃಂದಾ.

ನಂಜುಂಡಯ್ಯನನ್ನು ಕಂಡೊಡನೆ ಕಲ್ಯಾಣಿ, ವಾಸುಗೆ ಸ್ನಾನ ಮಾಡಿ ರೂಮಿನೊಳಕ್ಕೆ ಹೋಗುವಂತೆ ಹೇಳಿದಳು. ಅತ್ತಿತ್ತ ಅನುಮಾನಾಸ್ಪದವಾಗಿ ನೋಡುತ್ತಾ ಮನೆಯೊಳಕ್ಕೆ ಕಾಲಿಟ್ಟರು. ಕಲ್ಯಾಣಿ ನಗೆಮುಖದಿಂದ ಸ್ವಾಗತಿಸಿದಾಗ ಅವರಿಗೆ ಅಚ್ಚರಿ. ಏನು ವಿಷಯ ಎನ್ನುವಂತೆ ಕಣ್ಣಿನಲ್ಲೇ ಪ್ರಶ್ನಿಸಿದರು.

''ಮೊದಲು ಕೂತ್ಕೊಳ್ಳಿ... ನಿಧಾನವಾಗಿ ಮಾತನಾಡ್ಬೋಣ.'' ಎಂದಳು.

ಅವರು ಅಲ್ಲಿದ್ದ ಕುರ್ಚಿಯ ಮೇಲೆ ಕುಲಿತು ಹೊದ್ದ ಶಲ್ಯದಿಂದ ಗಾಳಿ ಬೀಸಿಕೊಂಡರು.

''ಪಾನಕ ಮಾಡಿಕೊಡ್ತೀನಿ'' ಎಂದು ಅವಳು ಒಳಗೆ ಹೋದ ಕೂಡಲೇ, ಕೂತಿದ್ದವರು ಎದ್ದು, ರೂಮಿನೊಳಗೆ ಇಣುಕಿ ನೋಡಿದರು. ಮಂಚದ ಮೇಲೆ ಕುಳಿತು ಹೊರಗೆ ಕಿಟಕಿಯಿಂದಾಚೆ ನೋಡುತ್ತಿದ್ದ ವಾಸು ಇತ್ತ ತಿರುಗಿದ. ಇವರು ಸರ್ರನೆ ಇತ್ತ ತಿರುಗಿ, ಮತ್ತೆ ಹಿಂದೆ ಬಂದು, ಕುರ್ಚಿಯ ಮೇಲೆ ಕುಳಿತರು... ಕೆಲವೇ ನಿಮಿಷಗಳಲ್ಲಿ ಕಲ್ಯಾಣಿ ಎರಡು ದೊಡ್ಡ ಲೋಟಗಳಲ್ಲಿ ಪಾನಕವನ್ನು ತಂದು, ಒಂದನ್ನು ಅವರ ಕೈಗಿತ್ತು ಇನ್ನೊಂದನ್ನು ರೂಮಿನಲ್ಲಿದ್ದ ವಾಸುಗೆ ಕೊಟ್ಟು ಹೊರಕ್ಕೆ ಬಂದಳು.

''ಏನಮ್ಮಾ... ಏನು ವಿಷಯ? ನಿನ್ನ ಕೃಷ್ಣ ಪಾನಕ ಕುಡೀತಾನಾ?'' ಎಂದು ಪಿಸುದನಿಯಲ್ಲಿ ಕೇಳಿ, ''ಈಗ ಹೇಗಿದಾನೆ? ಏನಂತಾನೆ?'' ಅಂತ ವಿಚಾರಿಸಿದರು.

''ಅವತ್ತು ನೀವು ಬಂದು ಹೋದಮೇಲೆ, ನಾನು ಅವನೊಡನೆ ಮಾತನಾಡಿದೆ. ಮೊದಲಿಗೆ ಒಪ್ಪಲಿಲ್ಲ... ಕೂಗಾಡಿದ. ಆದರೆ ಆ ರಾತ್ರಿ ಅವನಿಗೆ ಏನಾಯ್ತು ಅಂತ ಗೊತ್ತಿಲ್ಲ... ಇದ್ದಕ್ಕಿದ್ದ ಹಾಗೆ, ನಾನು ಕೃಷ್ಣ ಅಲ್ಲ, ವಾಸು ಅಂತ ಕನವರಿಸಿಕೊಂಡ. ಆಗಿನಿಂದ, ನಾನು ವಾಸು ಎಂದೇ ಹೇಳಿಕೊಳ್ಳುತ್ತಿದಾನೆ. ಅವನನ್ನು ಹೊರಕ್ಕೆ ಕರೀಲಾ? ಮಾತನಾಡ್ತೀರಾ?''

''ಬೇಡಮ್ಮಾ... ಬೇಡ. ಕೃಷ್ಣನಾದರೇನು? ವಾಸು ಆದರೇನು? ನನಗೆ ಎಲ್ಲಾ ಒಂದೆ... ಬೆಂಗಳೂರಿಗೆ ಹೋಗಿ ಬರುವ ವಿಷಯ ಏನು ಮಾಡಿದೆ?''

''ಒಪ್ಪಿಕೊಂಡಿದಾನೆ... ಆದರೆ ನಿಮ್ಮ ಜೊತೆ ಬರುಲ್ಲವಂತೆ... ನಾವಿಬ್ಬರೇ ಹೋಗೋಣ ಅಂತಂದ...''

''ದೊಡ್ಡ ಷಹರು... ನಿನಗೇನಮ್ಮ ಗೊತ್ತಾಗುತ್ತೆ?''

''ನೀವೂ ಬನ್ನಿ... ನಾನು ಅವನನ್ನು ಒಪ್ಪಿಸ್ತೀನಿ.''

''ಅದೇನಮ್ಮ? ಇದ್ದಕ್ಕಿದ್ದ ಹಾಗೆ ಏನು ಜಾದು ಮಾಡಿದೆ! ನೀನು ಹೇಳಿದ ಹಾಗೆ ಕೇಳ್ತಿದಾನಲ್ಲ.''

''ಇದೆಲ್ಲಾ ನಿಮ್ಮ ಬೃಂದಾಳ ಪೂಜಾಫಲ. ಅಂಥಾ ಮುಗ್ಧ ಹುಡುಗಿಗೆ ಅನ್ಯಾಯವಾಗದಂತೆ ಅವಳು ನಂಬಿರುವ ದೇವಿ ಕೃಷ್ಣನನ್ನು ವಾಸುವನ್ನಾಗಿ ಮಾಡಿ ಕಳಿಸಿದಾಳೆ...''

''ಏನೋ ಒಂದು ಒಟ್ಟಿನಲ್ಲಿ ಕೃಷ್ಣ ನೆಟ್ಟಗಾದರೆ ಸಾಕು... ಅವನ ಭ್ರಮೆ ಕಳೆದು ಅವನು ಮನುಷ್ಯನಾದರೆ ಸಾಕು.''

''ಆ ದಿನವೂ ಬಹಳ ಬೇಗ ಬರುತ್ತೆ, ಚಿಕ್ಕಪ್ಪ... ನೀವು ನಿಶ್ಚಿಂತೆಯಾಗಿರಿ.'' ಅವಳು ಗೆಲವಿನಿಂದ ನುಡಿದಾಗ ಅವರು ಹಾರೈಸಿದರು.

''ನಿನ್ನ ಹಾರೈಕೆಯಿಂದ ಹಾಗೇ ಆಗಲಿ ತಾಯೀ. ಬೃಂದಾಳ ಜೀವನವನ್ನು ಸುಗಮವನ್ನಾಗಿ ಮಾಡಿದ ಪುಣ್ಯ ನಿನಗೆ ಸಿಗುತ್ತೆ.''

''ನಾನು ಪುಣ್ಯವಂತೆ ಅಲ್ಲ... ನಾನು ಪಾಪಿ...'' ಎಂದು ಹೇಳಿ ಎಲ್ಲವನ್ನು ಹೇಳಿಕೊಂಡು ಅತ್ತು ಬಿಡುವ ಮನಸ್ಸಾಯಿತು. ಆದರೂ ತಡೆದುಕೊಂಡಳು.

ಅವರು ಅತ್ತ ಹೋದ ಕೂಡಲೇ, ವಾಸು ಹೊರಗೆ ಬಂದ.

''ಕಲ್ಯಾಣಿಯವರೇ, ನೀವು ನನ್ನನ್ನು ಇಕ್ಕಟ್ಟಿಗೆ ಸಿಕ್ಕಿಸ್ತಿದೀರಿ... ನಾನು ಕೃಷ್ಣನಾಗಲಾರೆ. ಇದೆಲ್ಲಾ ಏನು?''

''ಕೃಷ್ಣನಾಗಬೇಡಿ. ವಾಸುವಾಗಿಯೇ ಇರಿ... ಕೃಷ್ಣನಾದರೇನು ವಾಸುವಾದರೇನು? ಎಂದು ಈಗ ತಾನೇ ನಿಮ್ಮ ಮಾವ ಹೇಳಲಿಲ್ವಾ!''

''ಅವರು ನಮ್ಮ ಮಾವನಲ್ಲ...'' ಮುನಿಸಿನಿಂದ ನುಡಿದ

''ಸರಿ. ನಿಮ್ಮ ಇಷ್ಟ. ಸರಿಯಾಗಿ ಯೋಚಿಸಿ ಒಂದು ತೀರ್ಮಾನಕ್ಕೆ ಬನ್ನಿ. ಹೇಗೂ ಬೆಂಗಳೂರಿಗೆ ಹೋಗಿ ಬರುವ ಅವಕಾಶ ಸಿಕ್ಕಿದೆ. ಸಾಕಷ್ಟು ಸಮಯ ವಿರುತ್ತೆ. ನಿಧಾನವಾಗಿ ಎಲ್ಲವನ್ನು ನಿರ್ಧರಿಸೋಣ.'' ವಾಸು ಸಪ್ಪೆ ಮುಖ ಮಾಡಿದ.

''ಈಗಲಿಂದ ಧೈರ್ಯಗೆಟ್ಟರೆ ಹೇಗೆ? ಮೊದಲು ಬೆಂಗಳೂರಿಗೆ ಹೋಗಿ ಬರುವ ತಯಾರಿ ಮಾಡಿಕೊಳ್ಳೋಣ'' ಎಂದಳು.

ಮಗ ಬೆಂಗಳೂರಿಗೆ ಹೊರಡುವ ಮೊದಲು, ತಾನೊಮ್ಮೆ ಅವನನ್ನು ನೋಡಿ ಮಾತನಾಡಿಸಬೇಕೆಂದು ಬಯಸಿದಳು. ಶಾರದಾ ಸೊಸೆಯೊಂದಿಗೆ

ತೋಟದ ಮನೆಗೆ ಬಂದಳು. ರೂಮಿನಿಂದ ಅವನು ಹೊರಕ್ಕೆ ಬಂದಿರಲಿಲ್ಲ. ಇವಳೇ ರೂಮಿನ ಬಾಗಿಲಲ್ಲಿ ನಿಂತು ಕೃಷ್ಣಾ ಎಂದು ಕರೆದಳು. ಅವನು ತಿರುಗಿ ನೋಡಲಿಲ್ಲ... ''ನನ್ನ ಮೇಲೆ ಕೋಪವೇನೊ?'' ಎಂದು ಹೇಳಿದಳು. ಅವನು ಅದಕ್ಕೆ ಉತ್ತರಿಸಲಿಲ್ಲ.

''ಸರಿಯಪ್ಪಾ... ಭಗವಂತ ಏನೇನೋ ಆಟ ಆಡಿಸ್ತಿದಾನೆ... ಬಂದಿದ್ದನ್ನು ಎದುರಿಸುವ ಶಕ್ತಿಯನ್ನು ಅವನೇ ಕೊಡಬೇಕು. ಬೆಂಗಳೂರು ದೊಡ್ಡ ಶಹರು. ನಿನಗೆ ಗೊತ್ತಿಲ್ಲದ ಜಾಗ. ಒಬ್ಬೊಬ್ಬನೇ ತಿರುಗಬೇಡ. ನಿನ್ನ ಮಾವ ಕಲ್ಯಾಣಿ ಅವರ ಜೊತೆ ಜೊತೇಲೇ ಇರು...''

''ಹೋಗೇ ಬೃಂದಾ... ನಿನ್ನ ಗಂಡನಿಗೆ ನಾಲ್ಕು ಧೈರ್ಯದ ಮಾತನ್ನು ಹೇಳಿ ಬಾ...'' ಬೃಂದಾ ಹೊರಬಾಗಿಲಿನಲ್ಲಿ ನಿಂತು, ತನ್ನ ಕಡೆಗೆ ಬೆನ್ನುಮಾಡಿ ಕೂತಿದ್ದವನನ್ನೇ ನೋಡಿದಳು. ಅವನು ತನ್ನ ಗಂಡನೆಂಬ ಯಾವ ಭಾವನೆಯೂ ಅವಳಲ್ಲಿ ಉಂಟಾಗಲಿಲ್ಲ. ಮದುವೆಯಾಗಿ ನಾಲ್ಕೈದು ತಿಂಗಳಾಗುತ್ತಾ ಬಂತು. ಒಂದೇ ಒಂದು ದಿನವೂ ತಾನು ಗಂಡನೊಡನೆ ಮಾತನಾಡಿಲ್ಲ... ಈಗ ಏನು ಮಾತನಾಡುವುದು? ಅವನೇ ಮಾತನಾಡಿಸಿದ್ದರೆ? ಎಂದುಕೊಂಡು ಹಾಗೇ ಹಿಂತಿರುಗಿದಳು. ವಾಸು ನಿರಾಳವಾದ ಉಸಿರನ್ನು ಬಿಟ್ಟ.

ಅವರುಗಳು ಅತ್ತ ಹೋಗುತ್ತಿದ್ದಂತೇ, ವಾಸು ಹೊರಕ್ಕೆ ಬಂದ. ''ನನಗೆ ಈ ನಾಟಕ ಆಡೋಕೆ ಕಷ್ಟ ಆಗ್ತಿದೆ'' ಎಂದ.

''ಕ್ರಮೇಣ ಎಲ್ಲಾ ಸರಿಹೋಗುತ್ತೆ. ಈಗ ನಿಮ್ಮ ಜೊತೆಗೆ ನಾನು ನಾಟಕ ಆಡ್ತಿಲ್ಲವೇ?'' ಎಂದಳು ನಗುತ್ತಾ. ಅವನು ನಕ್ಕಂತೆ ಮುಖ ಮಾಡಿದ. ನಿಧಾನವಾಗಿ ನುಡಿದ.

''ನೀವೂ ಸರಿಯಾಗಿ ನಾಟಕ ಆಡ್ತಿಲ್ಲ... ನಾನು ಕೃಷ್ಣನಾಗಬೇಕಾದರೆ, ನನ್ನನ್ನು ಏಕವಚನದಲ್ಲಿ ಮಾತಾಡಿಸಬೇಕು ಅಲ್ಲವೇ?''

''ಹೌದು... ಹೌದು... ನೀವು... ಅಲ್ಲ ನೀನೂ ಏಕವಚನದಲ್ಲಿ ನನ್ನನ್ನೂ ಕಲ್ಯಾಣಿ ಅಂತ ಕರೀಬೇಕು. ಆಗ ಸಹಜತೆ ಇರುತ್ತೆ...'' ಹೌದು ಎನ್ನುವಂತೆ ತಲೆ ಆಡಿಸಿದ.

ಬಸ್ಸಿನಲ್ಲಿ ಕಿಟಕಿಯ ಬಳಿಯ ಸೀಟಿನಲ್ಲಿ ಕೂತಿದ್ದ ವಾಸು ಇತ್ತ ತಿರುಗಿರಲಿಲ್ಲ. ಆಗಾಗ್ಗೆ, ಮುಂದಿನ ಸೀಟಿನಲ್ಲಿ ಕೂತಿದ್ದ, ನಂಜುಂಡಯ್ಯ ಅವನ ಕಡೆ ತಿರುಗಿ ನೋಡುತ್ತಿದ್ದರು. ಪ್ರತಿಯೊಂದು ಸಲವೂ ಅವರ ಮುಖದಲ್ಲಿ ಏನೋ ಅನುಮಾನದ ಛಾಯೆಯನ್ನು ಕಲ್ಯಾಣಿ ಗುರುತಿಸುತ್ತಿದ್ದಳು.

ಆಸ್ಪತ್ರೆಯಲ್ಲಿ ಡಾಕ್ಟರಿಗಾಗಿ ಕಾದು ಕುಳಿತಿದ್ದಾಗ, ವಾಸು ಚಡಪಡಿಸುತ್ತಿದ್ದ. ಅವನ ಸರದಿ ಬಂದಾಗ, ಅವನು ಕಲ್ಯಾಣಿಯೊಡನೆ ಒಳಗಿನ ಕೋಣೆಗೆ ಹೋದ. ಅಲ್ಲಿ ಅವರು ಡಾಕ್ಟರ ಹತ್ತಿರ ಏನು ಮಾತಾಡಿದರೋ, ಅವರು ಏನು ಸಲಹೆ ಕೊಟ್ಟರೋ ನಂಜುಂಡಯ್ಯನಿಗೆ ತಿಳಿಯಲಿಲ್ಲ. ಕಲ್ಯಾಣಿ ತಾನೇ ಆಮೇಲೆ ಅವರಿಗೆ ಹೇಳಿದಳು.

''ಅಂಥಾ ಗಂಭೀರವಾದ ಪರಿಸ್ಥಿತಿ ಏನೂ ಇಲ್ಲ ಅಂತ ಹೇಳಿದರು. ಬೇಕಾದರೆ ಹದಿನೈದು ದಿನ ನಮ್ಮ ಆಸ್ಪತ್ರೆಯಲ್ಲಿರಲಿ ಎಂದರು. ಆದರೆ ಕೃಷ್ಣ, ಏನೇ ಆದರು ತಾನು ಇಲ್ಲಿ ಇರುವುದಿಲ್ಲ... ಬಲವಂತವಾಗಿ ಬಿಟ್ಟುಹೋದರೆ, ತಪ್ಪಿಸಿಕೊಂಡು ಓಡಿ ಹೋಗ್ತೀನಿ ಅಂತ ಹೆದರಿಸಿದಾನೆ.''

''ಸರಿ. ಈಗ ಏನು ಮಾಡೋಣ?''

''ಊರಿಗೆ ಕರೆದುಕೊಂಡು ಹೋಗಿ... ಕೆಲವಾರು ತಿಂಗಳು ಈ ಮಾತ್ರೆಗಳನ್ನು ಕೊಡಿ. ಕ್ರಮೇಣ ಸರಿಹೋಗ್ತಾರೆ. ತೊಂದರೆ ಏನಾದರೂ ಹೆಚ್ಚಾದರೆ ಕರೆದುಕೊಂಡು ಬನ್ನಿ, ಬಲವಂತ ಮಾತ್ರ ಮಾಡಬೇಡಿ'' ಅಂತಂದರು.

''ಸರಿ. ಮತ್ತಿನ್ನೇನು? ಅವರು ಹೇಳಿದಂತೆ ಕೇಳಿದ್ರಾಯ್ತು.''

''ಚಿಕ್ಕಪ್ಪಾ... ನೀವು ಊರಿಗೆ ವಾಪಸ್ಸು ಹೋಗಿ. ನಾವಿಬ್ಬರೂ ಒಂದು ವಾರದ ನಂತರ ಬರ್ತೀವಿ.'' ಚಿಕ್ಕಪ್ಪ ಸಂಶಯದಿಂದ ವಾಸು ಕಡೆ ತಿರುಗಿದಾಗ ಅವನು ಮುಖ ಅತ್ತ ತಿರುಗಿಸಿದ... ಅವರು ತಮ್ಮಲ್ಲಿದ್ದ ಹಣವನ್ನು ಕಲ್ಯಾಣಿಯ ಕೈಗಿತ್ತು, ''ಆದಷ್ಟು ಬೇಗ ಬಂದು ಬಿಡಿ'' ಎಂದು ಹೇಳಿ ಬಸ್ ಸ್ಟಾಂಡ್‌ಗೆ ನಡೆದರು. ದಾರಿಯುದ್ದಕ್ಕೂ ಅವರಿಗೆ ಒಂದೇ ಯೋಚನೆ. ಅನುಮಾನ.

''ನೋಡೋದಕ್ಕೆ ಕೃಷ್ಣನ ಹಾಗೇ ಇದಾನೆ ಸರಿ. ಆದರೆ ಏನೋ ಸಂದೇಹ! ಆದರೆ ಕೃಷ್ಣನ್ನ ತಾನೇ ಸರಿಯಾಗಿ ಎಲ್ಲಿ ನೋಡಿದೀವಿ? ನಾನು ಕೃಷ್ಣ ಅಲ್ಲ, ವಾಸು ಅಂತ ಅಂತಾನಂತೆ... ಇವನನ್ನು ಪೂರ್ತಿಯಾಗಿ ನಂಬೋದು ಹೇಗೆ?

ಆಗಲಿ ಊರಿಗೆ ವಾಪಸ್ಸು ಬರಲಿ. ಹೆದರಿಸಿ ಬೆದರಿಸಿ ನಿಜ ಏನೊಂತ ಬಾಯಿ ಬಿಡಿಸ್ತೀನಿ.'' ಎಂದುಕೊಂಡು ಬಸ್ಸು ಹತ್ತಿದರು.

ಒಬ್ಬರೇ ಬಂದ ನಂಜುಂಡಯ್ಯನನ್ನು ಶಾರದಾ ಹತ್ತಾರು ಪ್ರಶ್ನೆಗಳನ್ನು ಕೇಳಿ ಕೇಳಿ ಬೇಸರವನ್ನುಂಟುಮಾಡಿದಳು. ''ನಮ್ಮ ಊರಿನಲ್ಲಿ ನನಗೆ ಸ್ವಲ್ಪ ಕೆಲಸವಿದೆ. ಮುಂದಿನ ವಾರ ಬರ್ತೀನಿ'' ಎಂದು ಹೇಳಿ ಅವರು ಮರು ಬಸ್ಸನ್ನು ಹತ್ತಿದರು.

ಎಂಟು ದಿನಗಳ ನಂತರ ಕಲ್ಯಾಣಿ, ವಾಸು ಮತ್ತೆ ತಮ್ಮ ಊರಿನ ಕಡೆ ಹೊರಟರು. ಕೃಷ್ಣನ ನಡೆ, ನುಡಿ ಮಾತು ಕತೆಗಳನ್ನು ಅವನ ವರ್ತನೆಯನ್ನು ಮತ್ತೆ ಮತ್ತೆ ತಿಳಿಸಿ, ಕಲ್ಯಾಣಿ ನುಡಿದಿದ್ದಳು.

''ನೀನು ಅವನಂತೆಯೇ ಇರಬೇಕೆಂದೇನಿಲ್ಲ. ಹಾಗಿದ್ದರೆ, ನೀನು ಯಾರ ಮನವನ್ನು ಗೆಲ್ಲಲು ಸಾಧ್ಯವಿಲ್ಲ. ನೀನು ನೀನಾಗಿಯೇ ಇದ್ದರೆ, ಅವರುಗಳಿಗೆ ಅನುಮಾನ ಬರಬಹುದು. ಅದಕ್ಕೋಸ್ಕರ ಸ್ವಲ್ಪ ಮಟ್ಟಿಗೆ ನಡೆ ನುಡಿಯಲ್ಲಿ ಬದಲಾವಣೆಗೆ ಬರಬೇಕು... ಕ್ರಮೇಣ ಎಲ್ಲಾ ಸರಿಹೋಗುತ್ತೆ.''

''ನನಗೆ ಎಂಥಾ ಸ್ಥಿತಿ ಬಂತಲ್ಲ ಅಂತ! ನಾನು ಸತ್ತಿಲ್ಲ ಬದುಕಿದೀನಿ ಅಂತ ಹೇಳುವಂತಿಲ್ಲ. ನಾನು ಕೃಷ್ಣ ಅಲ್ಲ... ವಾಸು ಅಂತ ಹೇಳುವಂತಿಲ್ಲ. ಒಂದು ವೇಳೆ ನಿಜ ತಿಳಿದು, ನಾನು ಮೋಸಗಾರ ಅಂತ ನನ್ನನ್ನ ಜೈಲಿಗೆ ಹಾಕಿಸಿದರೇ... ನಾನು ಬದುಕಿದ್ದೂ ಸತ್ತಂತಾಗುತ್ತೇನೆ.''

''ಹಾಗೇನೂ ಆಗುಲ್ಲ. ಅಂಥಾ ಸ್ಥಿತಿ ಬಂದಾಗ ನಿಜವನ್ನೇ ಹೇಳೋಣ. ಆಗ ಎಲ್ಲರೂ ಒಪ್ಪಿಕೊಳ್ತಾರೆ. ಈಗ ಮಾತ್ರ ಏನೂ ಹೇಳೋದು ಬೇಡ''

''ನಿಜ ಹೇಳು ಕಲ್ಯಾಣೀ... ನಾನು ಕೃಷ್ಣನ ಹಾಗಿದೇನಾ? ಯಾರಿಗೂ ಖಂಡಿತಾ ಅನುಮಾನ ಬರುಲ್ವಾ! ನಾನೇಕೆ ಅವನ ಹಾಗೇ ಇದೀನೋ...''

''ಅನುಮಾನ ಬರೋಹಾಗಿದ್ದಿದ್ರೆ, ಇಷ್ಟು ಹೊತ್ತಿಗೇ ಎಲ್ಲಾ ಬಯಲಾಗುತ್ತಿತ್ತು. ಚಿಕ್ಕಪ್ಪಂಗೆ ಅನುಮಾನ ಬಂದ್ರೂ, ಅವರು ಮಾತನಾಡುವ ಸ್ಥಿತಿಯಲ್ಲಿಲ್ಲ. ಚಿಕ್ಕಮ್ಮನೋ... ಮಗನ ಮೇಲಿನ ಕುರುಡು ವ್ಯಾಮೋಹ, ಅವರ ಕಣ್ಣಿಗೆ ಪರದೆಯನ್ನು ಹಾಕಿರುತ್ತೆ. ಇನ್ನು ಬೃಂದಾ... ಅವಳು ಗಂಡನ ಮುಖವನ್ನು

ಸರಿಯಾಗಿ ನೋಡಿದ್ದಾಳೋ ಇಲ್ಲವೋ... ಆದರೆ, ನಂಜುಂಡಯ್ಯನ ಮೇಲೇ ನನಗೆ ಸಂಶಯ. ಅವರಿಗೆ ಏನೋ ಅನುಮಾನ ಬಂದಿದೆ ಅಂತ ನನಗನ್ನಿಸುತ್ತೆ. ಹಾಗೇನಾದರೂ ರಹಸ್ಯವನ್ನು ಬಯಲು ಮಾಡುವ ಸಮಯ ಬಂದಾಗ ನಿಜವನ್ನೇ ಹೇಳಿ ಬಿಡೋಣ... ಬೃಂದಳ ಒಳಿತಿಗಾಗಿ ಅವರು ಖಂಡಿತಾ ಒಪ್ಪಿಕೊಳ್ತಾರೆ... ಆ ವಿಶ್ವಾಸ ನನಗಿದೆ.''

''ಆದರೂ ನನಗೆ ಭಯವೇ... ಏನೇನೋ ಆಗಿಹೋದರೆ?''

''ನಿನಗೆ ಭಯವಾದಾಗ, ಸೀದಾ ತೋಟದ ಮನೆಗೆ ಬಂದು ಬಿಡು; ನಾನು ಧೈರ್ಯ ತುಂಬಿ ಕಳಿಸ್ತೀನಿ. ತೋಟದ ಆಳು ಕಾಳುಗಳಿಗೆ ಯಾವ ಅನುಮಾನವೂ ಬರುಲ್ಲ. ಬಂದರೂ ಕೇಳುವ ಧೈರ್ಯವಿಲ್ಲ. ಅಲ್ಲದೇ ಎಲ್ಲರೂ ತುಂಬಾ ಒಳ್ಳೆಯವರು; ಸೀದಾ ತೋಟದ ಮನೆಗೇ ಬಂದಿಳಿದರು. ಬರುವ ಹೊತ್ತಿಗೆ ಇಬ್ಬರು ಪೋಲಿಸರು ಇವರಿಗಾಗಿ ಕಾದು ಕೂತಿದ್ದರು. ವಾಸು ಬೆವೆತ. ಕಲ್ಯಾಣಿಹ ಹೆದರಿದಳು. ''ನಾವು ದಿನಾ ನಿಮಗಾಗಿ ಬಂದು ಕಾಯುತ್ತಿದೇನೆ. ಎಲ್ಲಿಗೆ ಹೋಗಿದ್ರಿ? ಇಬ್ಬರೂ... ಕೃಷ್ಣ ಅನ್ನೋರು ಎಲ್ಲಿ?''

''ಇವನೇ ನನ್ನ ತಮ್ಮ ಕೃಷ್ಣ. ಇವನ ಆರೋಗ್ಯ ಸರಿ ಇರಲಿಲ್ಲ. ಬೆಂಗಳೂರಿನ ಆಸ್ಪತ್ರೆಗೆ ಕರೆದುಕೊಂಡು ಹೋದಿದ್ದೆವು...

''ಆಸ್ಪತ್ರೆಗೇ ಹೋಗಿದ್ದಿರ್ರಿ ಎನ್ನೋದಕ್ಕೆ ಏನಾದರೂ ಪ್ರೂಫ್ ಇದೆಯಾ?'' ವಾಸು ಬೆವತಿದ್ದ. ಕಲ್ಯಾಣಿ ಡಾಕ್ಟರು ಬರೆದುಕೊಟ್ಟ ಚೀಟಿಯನ್ನು ತೋರಿಸಿದಳು... ಪೋಲಿಸರು ಕೂಲಂಕಷವಾಗಿ ನೋಡಿದರು.

''ಈಚೆಗೆ, ನಿಮ್ಮ ತೋಟದ ಹಿಂದೆ ಇರುವ ಹಾಳು ಬಾವಿಯಲ್ಲಿ ಎರಡು ದೇಹಗಳು ಸಿಕ್ಕಿರುವ ವಿಚಾರ ನಿಮಗೆ ಗೊತ್ತಿರಬಹುದು. ಅದರ ಬಗ್ಗೆ ತಪಾಸಣೆ ನಡೆಸಲು ನಾವು ಬಂದಿದ್ದೆವು... ನಿಮ್ಮ ಮನೆಯಿಂದ ಸೀದಾ ಒಂದು ಕಾಲು ದಾರಿ ಹೆದ್ದಾರಿಗೆ ಹೋಗುತ್ತೆ. ಆ ದಾರಿಯಲ್ಲಿ ಈ ಕೃಷ್ಣ ಓಡಾಡುತ್ತಿದ್ದ ಅಂತ ನಮ್ಮ ಅನುಮಾನ. ಈ ಮುಂಚೆ, ಜೈಲು ಶಿಕ್ಷೆಯಾದಾಗ ಸಿಕ್ಕಿಬಿದ್ದದ್ದು ಅಲ್ಲೇ ತಾನೇ...'' ವಾಸು ತಲೆ ತಗ್ಗಿಸಿದ.

''ಇರಬಹುದು... ಈ ಕೇಸಿಗೂ ಕೃಷ್ಣನಿಗೂ ಏನು ಸಂಬಂಧ?''

''ಸಂಬಂಧವಿದೆಯೋ ಇಲ್ಲವೋ, ವಿಚಾರಿಸಿದರೆ ತಾನೇ

ತಿಳಿಯುವುದು... ನಾವು ಇವರ ಹತ್ತಿರ ಮಾತನಾಡಬೇಕು...'' ಅಪ್ಪಣೆಯಂತೆ ನುಡಿದ.

''ಅವನ ಆರೋಗ್ಯ ಸರಿ ಇಲ್ಲ. ಮಾನಸಿಕ ಸ್ಥಿತಿಯೇ ಸರಿ ಇಲ್ಲ. ಏನು ಕೇಳಿದರೂ ಉತ್ತರಿಸುವ ಸ್ಥಿತಿಯಲ್ಲಿಲ್ಲ. ಅವನ ಪಾಡಿಗೆ ಅವನನ್ನು ಬಿಡಿ''

''ಯಾಕೆ ಹೀಗಾಯ್ತು!...'' ಅನುಮಾನದಿಂದ ಪ್ರಶ್ನಿಸಿದ ಒಬ್ಬ.

''ಯಾಕೆ ಹೀಗಾಯ್ತು ಅಂತ ಕೇಳ್ತೀರಲ್ಲ... ಕಸ್ಟಡೀಲಿದ್ದಾಗ ಸಿಕ್ಕಾಪಟ್ಟೆ ಹೊಡೆದು ಗಾಯಗೊಳಿಸಿದ್ದಾರೆ. ಅವನಿನ್ನು ಚೇತರಿಸಿಕೊಂಡಿಲ್ಲ... ಮುಖದ ಗಾಯಗಳ ಕಲೆಗಳು ಎದ್ದು ಕಾಣುತ್ತಿವೆ. ಗಡ್ಡ ಮೀಸೆಗಳ ಮರೆಯಲ್ಲಿ ಅವನ ಚಹರೆಯೇ ಬದಲಾಗಿದೆ. ಅವನನ್ನೇನು ಕೇಳ್ತೀರಿ! ನನ್ನನ್ನು ಕೇಳಿ. ನನಗೆ ಗೊತ್ತಿರುವ ವಿಷಯ ಹೇಳ್ತೀನಿ...'' ಸ್ವಲ್ಪ ಜೋರಾಗಿ ನುಡಿದಳು.

''ಸರಿ. ಮತ್ತೆ ಎಂದಾದ್ರೂ ಬರ್ತೀವಿ. ಈಗ ಒಂದು ಲೋಟ ತಣ್ಣಗೆ ನೀರು ಕೊಡಿ.'' ಲೋಟಗಳಲ್ಲಿ ನೀರನ್ನು ತಂದಿತ್ತು ನುಡಿದಳು.

''ಈಗ್ಲೇ ಊರ್ನಿಂದ ಬರ್ತಿದೀವಿ. ಇಲ್ಲದಿದ್ದರೆ ಸೊಗಸಾದ ಶರಬತ್ತು ಮಾಡಿಕೊಡ್ತಿದ್ದೆ...'' ವಾಸು ಕಹಿ ಮುಖ ಮಾಡಿದ.

''ಪರವಾಗಿಲ್ಲ ಬಿಡಮ್ಮಾ... ನಾವು ಒಂದು ಸಾರಿ ಮನೆಯನ್ನೆಲ್ಲಾ ನೋಡಬಹುದಾ?''

''ಓ... ಧಾರಾಳವಾಗಿ ನೋಡಿ'' ಎಂದು ಒಳಗೆ ಕರೆದುಕೊಂಡು ಹೋದಳು. ಅವ್ಯಕ್ತ ಭಯದಿಂದ ನಡಗುತ್ತಾ ವಾಸು ಕುಳಿತಿದ್ದ.

''ನಿಮ್ಮನ್ನು ಕಂಡರೇ, ಅವನಿಗೆ ನಡುಕ... ಅಷ್ಟೇ ಹೆದರಿಸ್ತೀರಿ ನೀವು ಜನಗಳನ್ನು'' ಎಂದು ಹೇಳಿ ವಾಸುವನ್ನು ರೂಮಿಗೆ ಕರೆದುಕೊಂಡು ಹೋಗಿ ಹೊದಿಕೆ ಹೊದ್ದು ಮಲಗುವಂತೆ ಹೇಳಿದಳು. ಪೋಲಿಸರು ಮನೆಯ ಒಳಗೆ ಅಲ್ಲಲ್ಲಿ ನೋಡಿದಂತೆ ಮಾಡಿ, ಹೊರಟುಹೋದರು.

''ನೀನು ಇವತ್ತು ರಾತ್ರೀನೇ ಆ ಮನೆಗೆ ಹೊರಟುಹೋಗು. ಪೋಲಿಸರನ್ನು ಕಂಡರೆ ನಿನ್ನ ಭಯ ಹೆಚ್ಚುತ್ತೆ... ಗುಟ್ಟು ಹೊರಬೀಳುತ್ತೆ, ಅಷ್ಟೇ.''

ಆ ರಾತ್ರಿ ಊಟದ ಹೊತ್ತಿಗೆ ಕಲ್ಯಾಣಿ ವಾಸುವನ್ನು ಕರೆದುಕೊಂಡು ಆ

ಮನೆಗೆ ಹೋದಳು. ಈ ಮೊದಲೇ ಆ ಮನೆಯಲ್ಲಿ ಎಲ್ಲೆಲ್ಲಿ ಏನೇನಿದೆ ಅಂತ ಅವಳು ತಿಳಿಸಿದ್ದರಿಂದ, ಅವನಿಗೆ ಗಲಿಬಿಲಿ ಉಂಟಾಗಲಿಲ್ಲ.

ಶಾರದಾ, ಮೇಲಿನಿಂದ ಕೆಳಗೆ ಮಗನನ್ನೇ ನೋಡಿದಳು. ''ಇವನು ತನ್ನ ಮಗನಲ್ಲ ಎಂದು ಅವಳ ಕರುಳು ನುಡಿಯಿತು. ಆದರೆ ಕಣ್ಣುಗಳು ಮತ್ತೆ ಮತ್ತೆ ಅವನ ಮೇಲೆ ಹರಿದಾಡಿದಾಗ, ಮನಸ್ಸು ಅವನನ್ನು ಮಗನೆಂದು ಒಪ್ಪಿಕೊಳ್ಳಲು ಪ್ರಯತ್ನಿಸಿತ್ತು.

''ಕೃಷ್ಣಾ, ಬಂದ್ಯಾಪ್ಪಾ...'' ಎಂದು ಅವಳು ಅವನನ್ನು ತಬ್ಬಿಕೊಳ್ಳಲು ಮುಂದೆ ಹೆಜ್ಜೆ ಇಟ್ಟಾಗ ಅವನು ಹಿಂದೆ ಸರಿದ. ಅವಳು ಪೆಚ್ಚಾಗಿ ಹಾಗೇ ನಿಂತಳು.

''ಕೃಷ್ಣ ಯಾರೊಂದಿಗೂ ಮಾತನಾಡದೇ ತನ್ನ ರೂಮಿಗೆ ಹೊರಟು ಹೋದ.'' ಏನೇ ಕಲ್ಯಾಣೀ ಡಾಕ್ಟರು ಏನಂದ್ರೆ? ಇವನ್ಯಾಕೆ ಇಷ್ಟು ಪೆಚ್ಚಾಗಿದಾನೆ? ಆ ಗಡ್ಡವೋ ಮೀಸೆಯೋ... ನೋಡಿದ್ರೆ ಒಳ್ಳೆ ರೋಗಿಯ ಹಾಗಿದಾನೆ.''

''ರೋಗಿ, ರೋಗಿ ಅಂತ ಸದಾ ಅವನ ಎದುರಿಗೆ ಹಾಗೆ ಅನ್ನಬೇಡಿ. ಇನ್ನೊಂದೆರಡು ತಿಂಗಳಿನಲ್ಲಿ ಸರಿ ಹೋಗ್ತಾನೆ ಅಂತ ಡಾಕ್ಟರು ಹೇಳಿದಾರೆ. ಒಂದಿಷ್ಟು ಮಾತ್ರೆಗಳನ್ನು ದಿನಕ್ಕೆ ಎರಡು ಹೊತ್ತು ನುಂಗಿದರೆ ಸಾಕು...''

''ಶಾಕ್ ಕೊಟ್ಟರೇನೆ? ಇಷ್ಟು ಮಂಕಾಗಿದಾನಲ್ಲ.'' ಎಂದು ಕೇಳುವ ಮನಸ್ಸಾದರೂ ಹೆದರಿ ಸುಮ್ಮನಾದಳು. ಕಲ್ಯಾಣಿ, ಬೃಂದಳ ಬಳಿಗೆ ಬಂದು ಹೇಳಿದಳು.

''ನಿನ್ನ ಗಂಡನ್ನ ನಿನ್ನ ಅಧೀನಕ್ಕೆ ಕರೆತಂದು ಬಿಟ್ಟಿದೀನಿ. ಇನ್ನೂ ಅವನ ಜವಾಬ್ದಾರಿ ನಿನ್ನದು. ಅವನೀಗ ತುಂಬಾ ಸೂಕ್ಷ್ಮವಾಗಿ ಬಿಟ್ಟಿದಾನೆ. ಮೊದಲಿನಂತೆ ಒರಟನಲ್ಲ. ನಿಧಾನವಾಗಿ ಅವನನ್ನು ಒಲಿಸಿಕೊಳ್ಳುವ ಕೆಲಸ ನಿನ್ನದು... ನಿನಗೆ ಏನೇ ಸಹಾಯ ಬೇಕಿದ್ರೂ, ಸಂಕೋಚವಿಲ್ಲದೇ ನನ್ನನ್ನು ಕೇಳು.''

ಶಾರದಾ ಕಲ್ಯಾಣಿಯ ಮಾತನ್ನೇ ಗಮನಿಸುತ್ತಿದ್ದಳು. ಈಚೆಗೆ ಕಲ್ಯಾಣಿ ಇಷ್ಟೊಂದು ಮಾತುಗಳನ್ನಾಡುತ್ತಲೇ ಇರಲಿಲ್ಲ. ಒರಟಾಗಿದ್ದರೂ ಕೃಷ್ಣನಿಗೆ ಹೆದರುತ್ತಿದ್ದಳು. ಈಗ ನೋಡಿದರೆ, ಅವನೇ ಇವಳಿಗೆ ಹೆದರುವಂತಿದೆ. ಇವಳೋ ವಿಪರೀತ ಮಾತನಾಡುತ್ತಿದಾಳೆ. ಈ ಬದಲಾವಣೆಗೆ ನಿಜವಾದ ಕಾರಣವೇನು? ಏನೋ... ನನಗೆ ಮಗನಾಗಿ, ನನ್ನ ಸೊಸೆಗೆ ಗಂಡನಾಗಿ

ಚೆನ್ನಾಗಿದ್ರೆ ಸಾಕು ಎಂದುಕೊಂಡಳು.

''ಬೃಂದಾ, ಅಡಿಗೆ ಆಗಿದ್ರೆ, ಕೃಷ್ಣಂಗೆ ಬಡಿಸಿಬಿಡು, ಅವನಿಗೆ ಬೇಗ ಮಲಗಿ ಅಭ್ಯಾಸ. ಅಲ್ಲದೇ ಮಾತ್ರೆಗಳನ್ನು ನುಂಗಬೇಕು'' ಎಂದು ಕಲ್ಯಾಣಿ ನುಡಿದಾಗ, ಬೃಂದಾ ಸರ ಸರನೆ ಅಡಿಗೆಗಳನ್ನು ಬಿಸಿ ಮಾಡಿ ಕಲೆಸಿ ತಂದಿತ್ತಳು.

''ನೀನು ಇದನ್ನು ಕೃಷ್ಣಂಗೆ ತಿನ್ನಿಸು... ನಾನು ಚಿಕ್ಕಪ್ಪನ್ನ ನೋಡಿಕೊಂಡು ಮಾತನಾಡಿಸಿಕೊಂಡು ಬರ್ತೀನಿ.'' ಎಂದಾಗ ಬೃಂದ ಹಿಂಜರಿದಳು.

''ಅವನೇನು ಭೂತ ಅಲ್ಲ; ಮನುಷ್ಯನೇ... ಅವನಿಗೂ ಎಲ್ಲಾ ಸರಿ ಹೋಗಲು ಸಮಯಬೇಕಾಗುತ್ತೆ. ಅವನೇನಾದರೂ ಅಂದು ಆಡಿ ಮಾಡಿದರೆ ಬೇಜಾರು ಮಾಡಿಕೋಬೇಡ'' ಎಂದರೂ, ಬೃಂದ ಅವಳ ಕೈ ಹಿಡಿದಳು.

''ಅಯ್ಯೋ ಹುಡುಗಿ... ನಿನ್ನ ಗಂಡನಮೇಲೆ ನಿನಗೆ ಹೆದರಿಕೇನಾ?'' ಎನ್ನಾತ್ತಾ ತಟ್ಟೆಗಳನ್ನು ಕೈಗೆತ್ತಿಕೊಂಡಳು.

''ಮತ್ತಿನ್ನೇನು! ಕೃಷ್ಣ ಎಲ್ಲರನ್ನು ಹಾಗೆ ಹೆದರಿಸಿಟ್ಟಿದ್ದ. ನೀನೂ ಅಷ್ಟೇ ಅವನ ಎದುರಿಗೆ ಮಾತೇ ಆಡುತ್ತಿರಲಿಲ್ಲ. ಈಗ ನೋಡು ಒಳ್ಳೆ ಅರಳು ಹುರಿದಂತೆ ಪಟಪಟನೆ ಮಾತನಾಡ್ತೀಯಲ್ಲ'' ಶಾರದೆ ನುಡಿದಾಗ ಕಲ್ಯಾಣಿ ತುಟಿಗಳನ್ನು ಕಚ್ಚಿಕೊಂಡಳು... ತಾನು ಅತಿಯಾಗಿ ನಟಿಸುತ್ತಿದ್ದೇನೇನೋ ಎಂದೆನಿಸಿತ್ತು.

''ಬೃಂದಾ, ಮಾವನವರಿಗೂ ಊಟ ತಿನ್ನಿಸಿ ಬಾಮ್ಮಾ... ಯಾಕೋ ನನ್ನ ಕೈಲಿ ಆಗುತ್ತಿಲ್ಲ'' ಎಂದು ಶಾರದಾ ಅಲ್ಲೇ ಮಲಗಿದಳು.

ವಾಸು, ಕಲೆಸಿದ ಅನ್ನವನ್ನು ಚಮಚದಲ್ಲಿ ತಿನ್ನುತ್ತಾ ನುಡಿದ.

''ಕಲ್ಯಾಣೀ... ನೀನೂ ಇಲ್ಲೇ ಇದ್ದು ಬಿಡು. ನನಗೆ ಯಾಕೋ ಗಾಭರಿಯಾಗ್ತಿದೆ... ಇವತ್ತೊಂದು ರಾತ್ರಿ...''

''ಯಾಕೆ ಬೃಂದಂಗೆ ಹೆದರ್ತೀಯಾ?'' ಮುಗುಳ್ನಕ್ಕಳು.

''ಏನಾದ್ರೂ ಮಾತು ಗೀತು ಬಂದು, ರಹಸ್ಯ ಗೊತ್ತಾದ್ರೇ... ಅಂತ''

''ಸರಿ... ಇವತ್ತು ರಾತ್ರಿ, ಇಲ್ಲೇ ನಿನಗೋಸ್ಕರ ಇರ್ತೀನಿ... ಬೃಂದನ ಹತ್ತಿರ ಮಾತನಾಡಬೇಕೂಂತ ಇದ್ರೆ, ಹೇಳು. ನಾನು ಅವಳಿಗೆ ಹೇಳ್ತೀನಿ.''

''ಇಲ್ಲ... ಇಲ್ಲ...'' ಎಂದು ತಲೆ ಕೊಡವಿದಾಗ ಅವಳಿಗೆ ನಗುಬಂತು.

''ನಿನಗೆ ಎಷ್ಟು ವರ್ಷ?'' ಇದ್ದಕ್ಕಿದ್ದಂತೆ ಕೇಳಿದಳು...

''ಇಪ್ಪತ್ತೆಂಟು...'' ಎಂದ.

''ಕೃಷ್ಣ ನಿನಗಿಂತ ಚಿಕ್ಕವನಾಗಿದ್ದ... ಆದರೆ ವಯಸ್ಸಿಗೆ ಮೀರಿದ ಬುದ್ಧಿ ಓಡಿಸುತ್ತಿದ್ದ. ನೀನು ಹಾಗಲ್ಲ... ನೀನು ಹೆಚ್ಚು ಕಡಿಮೆ ನನ್ನ ವಯಸ್ಸಿನವನು...'' ಎಂದು ಆತ್ಮೀಯತೆಯಿಂದ ಅವನ ತಲೆ ಸವರಿದಳು.

ವಾಸುಗೆ ತನ್ನ ಅಕ್ಕನ ನೆನಪಾಯಿತು. ತುತ್ತು ಗಂಟಲಿನಲ್ಲಿ ಇಳಿಯಲಿಲ್ಲ. ಅಕ್ಕ ಕಲ್ಯಾಣಿ ಇಬ್ಬರೂ ಸ್ವಾರ್ಥಿಗಳೇ. ಆದರೆ ಇಬ್ಬರ ಉದ್ದೇಶದಲ್ಲಿ ಕಹಿ-ಸಿಹಿಯಷ್ಟೆ ವ್ಯತ್ಯಾಸ ಅಂತೆನಿಸಿತು...

''ನಂಗ್ಯಾಕೋ ಊಟ ಸೇರುತ್ತಿಲ್ಲ ಸಾಕು...'' ಎನ್ನುತ್ತಾ ತಟ್ಟೆಯನ್ನು ಬದಿಗಿಟ್ಟ.

''ಯಾಕೋ ಅಮ್ಮನ ನೆನಪು ಬಂತಾ?''

''ಹೂಂ ಅವಳನ್ನೊಮ್ಮೆ ನೋಡಬೇಕೆನ್ನಿಸಿದೆ...''

''ನನಗೆ ನಿಮ್ಮೂರಿನ ಅಡ್ರೆಸ್ ಕೊಡು. ನಾನು ಹೋಗಿ ನೋಡಿಕೊಂಡು ಬರ್ತೀನಿ''... ಆ ಮೇಲೆ ನೀನು ಹೋಗಿ ಬರುವೆಯಂತೆ'' ವಾಸು ನೀರು ಕುಡಿದು ಮಾತ್ರೆ ನುಂಗಿ, ಕಿಟಕಿಯ ಬಳಿ ನಿಂತು, ಹೊರಗಿನ ಕತ್ತಲೆಯಲ್ಲಿ ಮಿನುಗುತ್ತಿರುವ ನಕ್ಷತ್ರಗಳನ್ನು ನೋಡಿದ.

ಈ ನಕ್ಷತ್ರಗಳು ರಾತ್ರಿಯ ಹೊತ್ತು ಮಾತ್ರ ಮಿನುಗುತ್ತವೆ. ಗಾಡಾಂಧಕಾರದಲ್ಲೂ ಬೆಳಕು ಚೆಲ್ಲಿ, ತಮ್ಮ ಇರುವನ್ನು ಸೂಚಿಸಿ, ಮಾರ್ಗವನ್ನು ತೋರುತ್ತವೆ... ಹಾಗೇ ಈ ಕಲ್ಯಾಣಿ... ತಾನು ಇರುವುದು ಅಂಧಕಾರದಲ್ಲೇ... ಆದರೆ ನನ್ನನ್ನು ಮಾತ್ರ ಅಂಧಕಾರದಲ್ಲಿರಲು ಬಿಡದೇ, ನನಗೆ ಮಾರ್ಗದರ್ಶನ ನೀಡಿದಳು... ಅವಳ ಮಾತನ್ನು ಕೇಳದೇ ನಾನು ಪೋಲಿಸರ ಬಳಿಗೆ ಹೋಗಿದ್ದರೇ... ಈ ದಿನ ನನ್ನ ಗತಿ ಏನಾಗುತ್ತಿತ್ತೋ ಏನೋ... ಅಥವಾ ಆ ದುಷ್ಕರ್ಮಿಗಳ ಕೈಗೆ ಸಿಕ್ಕಿ ನಾನು ಜೀವಂತನಾಗಿರುತ್ತಿದ್ದೆನೋ ಇಲ್ಲವೋ... ಆದರೆ ಆಟೋ ಡ್ರೈವರನೂ ಏಕೆ ಸತ್ತ ಎಂಬ ಅನುಮಾನ ಅವರಿಗೆ ಬಂದಿಲ್ಲವೇ?...

ಅವರುಗಳು ಯಾರು? ಆ ಯುವತಿಯ ಕೊಲೆಯನ್ನು ಏಕೆ ಮಾಡಿದರು? ಇದನ್ನು ಪೋಲಿಸರು ನಿಜವಾಗಿಯೂ ಪತ್ತೆ ಹಚ್ಚಬಲ್ಲರೇ...? ನಿಜವಾದ ಅಪರಾಧಿಗಳಿಗೆ ಶಿಕ್ಷೆ ಸಿಗುತ್ತದೆಯೇ? ನಾನು ನಿಜವಾಗಿಯೂ ನಿರಪರಾಧಿ. ಆದರೆ ಈಗ ಅಪರಾಧಿಯಂತೆ ತಲೆ ಮರೆಸಿಕೊಂಡಿದೀನಲ್ಲ... ಇದೂ ಒಂದು ತರಹ ತನ್ನ ಅಪರಾಧಕ್ಕೆ ಶಿಕ್ಷೆಯೇ...'' ಎಂದುಕೊಂಡ.

. ಯಾರೋ ರೂಮಿಗೆ ಬಂದಂತೆ ಹೆಜ್ಜೆ ಸದ್ದಾಯಿತು. ಸರ್ರನೆ ಹಿಂತಿರುಗಿ ನೋಡಿದ. ಬೃಂದಾ ಹಾಸಿಗೆಯನ್ನು ಸರಿ ಮಾಡುತ್ತಿದ್ದಳು. ಏನೋ ಒಂದು ರೀತಿಯ ಮುಜುಗರವುಂಟಾಯಿತು. ಸರ್ರನೆ ಮುಖ ತಿರುಗಿಸಿದ. ಅವಳು ಹೊರಕ್ಕೆ ಹೋದರೆ ಸಾಕು ಎನ್ನುವಂತೆ ಚಡಪಡಿಸಿದ. ಅವಳು ತಟ್ಟೆ ಬಟ್ಟಲುಗಳನ್ನೆತ್ತಿಕೊಂಡು, ಹಳೆಯ ಮಗ್ಗುಲು ಹಾಸುಗಳನ್ನು ಎತ್ತಿಕೊಂಡು ಹೊರಟುಹೋದಳು. ಅವಳು ಹೋದ ಕೂಡಲೇ ಅವನು ಬಾಗಿಲನ್ನು ಭದ್ರಪಡಿಸಿ, ಮಂಚದ ಮೇಲೆ ಕೂತ. ಇದು ಮಾತ್ರ ತನ್ನಿಂದ ಸಾಧ್ಯವಿಲ್ಲ ಬೃಂದ ತನ್ನ ಹೆಂಡತಿಯಲ್ಲ. ಅವಳನ್ನು ಹೆಂಡತಿಯಂತೆ ನೋಡಲು ತನ್ನಿಂದ ಸಾಧ್ಯವಿಲ್ಲ. ತನಗೆ ತಾನೇ ಹತ್ತಾರು ಬಾರಿ ಹೇಳಿಕೊಂಡ. ನಿದ್ದೆಯ ಜೋಪು ಹತ್ತಿದಾಗ, ಹಾಗೇ ಹಾಸಿಗೆ ಮೇಲೆ ಉರುಳಿದ.

ಬೆಳಿಗ್ಗೆ ಬಾಗಿಲು ಬಡಿದ ಸದ್ದು ಆದಾಗ, ಎಚ್ಚರವಾಯಿತು. ಒಂದು ಗಳಿಗೆ ತಾನು ಎಲ್ಲಿದ್ದೇನೆಂಬ ಅರಿವೇ ಆಗಲಿಲ್ಲ. ಮತ್ತೆ ಮತ್ತೆ ಬಾಗಿಲು ಬಡಿದಂತಾದಾಗ ಎದ್ದು ಬಾಗಿಲನ್ನು ತೆಗೆದ. ಹೊರಗೆ ಕಲ್ಯಾಣಿ ನಿಂತಿದ್ದಳು.

''ಚೆನ್ನಾಗಿ ನಿದ್ದೆ ಬಂತಾ?'' ಮುಗುಳ್ನಗುತ್ತಾ ಕೇಳಿದಳು.

''ಹೂಂ'' ಎಂದ ತಲೆ ಆಡಿಸಿ.

''ಬೇಗ ಮುಖ ತೊಳೆದುಕೊಂಡು ಬಾ... ಕಾಫಿ ಕುಡಿಯೂವಂತೆ, ನಾನೀಗ ತೋಟದ ಮನೆಗೆ ಹೋಗ್ತಾ ಇದೀನಿ. ನೀನೂ ಬರೂವಂತೆ''

''ಸರಿ.'' ಎನ್ನುತ್ತಾ ಸರಸರನೆ, ಸಿದ್ಧನಾದ. ಕಲ್ಯಾಣಿಯೊಡನೆ ಹೊರಟು ನಿಂತವನನ್ನು ಶಾರದಾ ತಡೆದಳು.

''ಇವತ್ತೇ ಮತ್ತೇಕೆ ಹೋಗಬೇಕು? ನೆನ್ನೆ ತಾನೇ ಬಂದಿದೀಯಾ... ಒಂದೆರಡು ದಿನ ಸುಧಾರಿಸ್ಕೋ...'' ವಾಸು ಕಲ್ಯಾಣಿಯ ಮುಖ ನೋಡಿದ.

''ಅವಳ ಮುಖ ಏನು ನೋಡ್ತೀಯಾ? ನಾನು ನಿನ್ನ ತಾಯಿ ಹೇಳ್ತಾ ಇದೀನಿ. ತೀರಾ ಪೆದ್ದನಂತೆ ಆಡಬೇಡ. ನನ್ನ ಹೊಟ್ಟೆ ಉರಿದುಹೋಗುತ್ತೆ''

''ಇಲ್ಲ ಚಿಕ್ಕಮ್ಮಾ... ತೋಟದಲ್ಲಿ ತಿರುಗಾಡಿದರೆ ಅವನ ಮನಸ್ಸು ಮೈ ಹಗುರವಾಗುತ್ತೆ. ನಿಧಾನವಾಗಿ ಎಲ್ಲಾ ತಿಳಿದುಕೊಳ್ಳಲೂ ಸಹಾಯಕವಾಗುತ್ತೆ. ಎಲ್ಲಾದಕ್ಕೂ ನೀವೇಕೆ ಬೇಡ ಅಂತೀರೋ...? ಅವನು ಸ್ವಲ್ಪ ಮಟ್ಟಿಗೆ ಬದಲಾದ ಮಾತ್ರಕ್ಕೆ ನೀವು ಹೇಳಿದ ಹಾಗೆ ಕೇಳಿಬಿಡ್ತಾನಾ?''

''ಮತ್ತೆ... ನೀನು ಹೇಳಿ ಹೇಳಿದ ಹಾಗೆಲ್ಲಾ ಕೇಳ್ತಾನಲ್ಲ'' ಕಲ್ಯಾಣಿ ಪೆಚ್ಚಾದಳು... ಆದರೂ ಸಾವರಿಸಿಕೊಂಡು ನುಡಿದಳು.

''ಜೈಲಿನಿಂದ ಬಿಡುಗಡೆಯಾದವನು ಸೀದಾ ತೋಟದ ಮನೆಗೆ ಬಂದ ಅಲ್ಲವಾ? ಅವನಿಗೆ ರಕ್ಷಣೆ ಕೊಟ್ಟವಳುನಾನು. ಹೀನಾಯ, ಸಂಕೋಚ, ಸೇಡು, ಎಲ್ಲಾ ಭಾವನೆಗಳಿಂದ ಒಳಗೊಳಗೇ ಕೊರಗುತ್ತಿದ್ದ. ನಾನು ಅವನನ್ನು ಮನೆಯಿಂದಾಚೆ ತಳ್ಳಿದ್ದರೆ, ಅವನು ಖಂಡಿತಾ ಈ ಮನೆಗೆ ಮಾತ್ರ ಬರುತ್ತಿರಲಿಲ್ಲ.''

''ನಿನಗೆ ಹೇಗೆ ಗೊತ್ತು! ಹಣ ಬೇಕಾದಾಗಲೆಲ್ಲಾ ಓಡಿ ಬರುತ್ತಿದ್ದುದು ನನ್ನ ಹತ್ತಿರವೇ ತಾನೇ...?''

''ಈಗ ಹಣ ಮುಖ್ಯ ಅಲ್ಲ ಅನ್ನವುದು ಅವನ ತಿಳುವಳಿಕೆಗೆ ಬಂದಿದೆ. ವನು ನನ್ನನ್ನು ಒಂದು ಕಾಸೂ ಕೇಳಿಲ್ಲ...''

''ಏನೋಮ್ಮ ನಿನ್ನ ಮಾತೇ ನನಗರ್ಥವಾಗುಲ್ಲ. ಹುಟ್ಟುಗುಣ ಸುಟ್ಟರೂ ಹೋಗದು ಅಂತಾರೆ. ಅಂಥಾದ್ದರಲ್ಲಿ ಇವನು ಇಷ್ಟು ಬದಲಾಗ ಬೇಕಾದರೆ, ಯಾರೋ ಏನೋ ಮಾಟ ಮಾಡಿಸಿರಲೇ ಬೇಕು.''

''ಯಾರೇಕೆ ಅವನಿಗೆ ಮಾಟ ಮಾಡಿಸುತ್ತಾರೆ! ಚೆನ್ನಾಗಿದೆ.''

''ಯಾರೋ ನಮಗಾಗದವರು...''

''ಬಿಡಿ ಚಿಕ್ಕಮ್ಮ... ನೀವು ಯಾವುದೋ ಕಾಲದಲ್ಲಿದೀರಿ! ಈ ಕಾಲದಲ್ಲಿ ಮಾಟ ಮದ್ದಿಗೆ ಹೆದರಲೇಬೇಕಾಗಿಲ್ಲ... ನಿಮಗ್ಯಾಕೆ ಭಯ? ಕ್ರಮೇಣ ಅವನು ಸರಿಹೋಗ್ತಾನೆ ಅನ್ನೋ ನಂಬಿಕೆ ನನಗಿದೆ. ಅವನು ಮೊದಲಿನ ಕೃಷ್ಣನಂತಾದರೆ

ಸಾಕು ತಾನೇ ನಿಮಗೆ?''

''ಮೊದಲಿ ನಂತಾಗುವುದು ಬೇಡ ತಾಯೀ... ಅದೇ ಚಾಳಿ ಹಿಡಿದರೆ, ಮತ್ತೆ ಏನೇನು ಅನಾಹುತಗಳಾಗುತ್ತವೋ... ಆದರೆ ಏಕೋ ಏನೋ ಇವನು ನನ್ನ ಮಗನೇ ಅಲ್ಲ ಅನ್ನೇ ಅನುಮಾನ ಬರುತ್ತೆ... ನನಗೆ ದಿಕ್ಕು ತೋಚದ ಹಾಗಾಗುತ್ತೆ''

ವಾಸು, ಕಲ್ಯಾಣಿ ಮುಖ ಮುಖ ನೋಡಿಕೊಂಡರು. ಇನ್ನು ಮಾತು ಮುಂದುವರೆಯಲು ಅವಕಾಶ ಕೊಡಬಾರದೆಂದು ಕೊಂಡು,

''ಇವತ್ತು ನೀವುಗಳೆಲ್ಲರೂ ತೋಟದ ಮನೆಗೇ ಊಟಕ್ಕೆ ಬನ್ನಿ... ನಾನು ಕೃಷ್ಣನಿಗೆ ಇಷ್ಟವಾದ ಅಡಿಗೆ ಮಾಡಿ ಬಿಡಿಸ್ತೀನಿ.. ಹೇಳಿ ಏನಿಷ್ಟ ಅಂತ''

''ಅವನಿಗೆ ಏನು ಇಷ್ಟ, ಏನು ಇಷ್ಟ ಅಲ್ಲ ಅನ್ನೋದೇ ಮರೆತು ಹೋಗಿದೆ. ವನೆಂದು ಸರಿಯಾಗಿ ಮನೇಲಿ ಊಟ ಮಾಡಿದ್ದ!... ಈಗ ನಿನ್ನ ಕೈನ ಅಡಿಗೆಯೇ ರುಚಿಸಬಹುದು... ನಾನು ಬರುಲ್ಲ... ಬೃಂದನ್ನ ಕಳಿಸ್ತೀನಿ. ಅವರು ಇಲ್ಲಿ ಒಬ್ಬರೇ ಆಗ್ತಾರೆ...''

''ಹೋಗೋ ಕೃಷ್ಣ, ಅಪ್ಪನ್ನ ನೋಡಿಕೊಂಡು ಮಾತನಾಡಿಸಿಕೊಂಡು ಬಾ... ಅವರಿಗೆ ನಿನ್ನಮುಖ ಹೇಗಿದೆ ಅನ್ನೋದೇ ಮರೆತು ಹೋಗಿರಬಹುದು'' ಎಂದು ಕಲ್ಯಾಣಿ ನುಡಿದಾಗ, ಅವನು ವಿಧೇಯನಂತೆ ಒಳಗಿನ ಕೋಣೆಗೆ ಹೋರಟಾಗ, ಶಾರದಾ ಆಶ್ಚರ್ಯದಿಂದ ಮೂಗಿನ ಮೇಲೆ ಬೆರಳನ್ನಿಟ್ಟುಕೊಂಡಳು.

ಕೃಷ್ಣಾ, ತಂದೆಯ ಯೋಗಕ್ಷೇಮ ವಿಚಾರಿಸಲು ಹೋಗುವುದೆಂದರೇ?

ಕೋಣೆಯ ಹೊರಬಾಗಿಲಿನಲ್ಲಿ ನಿಂತು, ವಾಸು, ಹಾಸಿಗೆಯ ಮೇಲೆ ಮಲಗಿದ್ದ ನಾರಾಯಣಮೂರ್ತಿಯ ಕಡೆ ನೋಡಿದ... ಮನಸ್ಸಿಗೆ ವ್ಯಥೆಯಾಯಿತು. ಆ ಕ್ಷಣದಲ್ಲಿ ತನ್ನ ತಂದೆಯ ನೆನಪಾಗಿತ್ತು. ನಾರಾಯಣ ಮೂರ್ತಿ ತಿರುಗಿ ನೋಡಿ, ಸುಮ್ಮನೆ ಅತ್ತ ತಿರುಗಿದ... ಕರೆದು ಮಾತನಾಡಿಸಬಹುದು ಎಂದೇನೂ ನಿರೀಕ್ಷಿಸಿರಲಿಲ್ಲವಾದ್ದರಿಂದ, ಸುಮ್ಮನಾದ. ಮರುಕ್ಷಣದಲ್ಲೇ ಹಿಂತಿರುಗಿದವನು ಮುಂಬಾಗಿಲಿಗೆ ಹೋಗಿನಿಂತ. ಕೆಲವೇ ಕ್ಷಣಗಳಲ್ಲಿ ಸಿದ್ಧಳಾದ ಬೃಂದಳೂ ಅವರೊಡನೆ ಹೊರಟಳು. ನಾಲ್ಕು ಹೆಜ್ಜೆ

ನಡೆಯುವಷ್ಟರಲ್ಲಿ ನಂಜುಂಡಯ್ಯ ಎದುರಾದರು. ವಾಸು ಅವರನ್ನು ದಾಟಿ ಮುಂದೆ ಮುಂದೆ ನಡೆದ.

''ಏನಮ್ಮಾ ಬೃಂದಾ ಎಲ್ಲಿಗೋ ಹೊರಟಿರುವಂತಿದೆ'' ಎಂದರು.

''ತೋಟದ ಮನೆಗೆ ಹೋಗ್ತಾ ಇದೀವಿ'' ಅವಳ ಮುಖದಲ್ಲಿ ಗೆಲುವಿನ ಛಾಯೆಯನ್ನು ಕಂಡರು. ಈ ಮಗೂ ಸದಾ ಹೀಗೇ ಗೆಲುವಿನ ನಗೆ ನಗುತ್ತಿರಲಿ'' ಎಂದು ಮನದಲ್ಲೇ ಹಾರೈಸಿ, ತಾವೂ ಅವರೊಡನೆ ಹೆಜ್ಜೆ ಹಾಕಿದರು.

''ನಾನು ಸ್ವಲ್ಪ ಕೃಷ್ಣನೊಡನೆ ಮಾತನಾಡಬೇಕು'' ಎಂದರು, ಕಲ್ಯಾಣಿಯ ಕಡೆ ತಿರುಗಿ ''ಈಗ ಹೇಗಿದಾನೆ ಅವನು?''

''ನೆನ್ನೆ ರಾತ್ರಿ ನಾವಿಬ್ಬರೂ ಇಲ್ಲೇ ಇದ್ದೆವು. ಇವತ್ತು ಅವನೊಬ್ಬನೇ ಬರ್ತಾನೆ... ಕ್ರಮೇಣ ಸರಿಹೋಗ್ತಾನೆ.''

''ಅವನ ಮನೆ, ಅವನ ಜನ... ಅವನಿಗೇಕೆ ಹಿಂಜರಿಕೆ? ನನಗೆ ಕಂಡಂತೆ, ಅವನು ನಿನ್ನನ್ನು ದ್ವೇಷಿಸುತ್ತಿದ್ದ ಅಲ್ವಾ!'' ಕಲ್ಯಾಣಿ ಉಸಿರು ಬಿಗಿ ಬಿಡಿದಳು. ಈ ಚಿಕ್ಕಪ್ಪ ತುಂಬಾ ಚಾಣಾಕ್ಷ.... ಇವರ ಬಗ್ಗೆ ಹುಶಾರಾಗಿರಬೇಕು ಎಂದುಕೊಂಡು,

''ನನಗೂ ಅದೇ ಆಶ್ಚರ್ಯ. ದಿಢೀರನೇ ಅವನಲ್ಲಾದ ಬದಲಾವಣೆ, ನನಗೂ ಭಯವನ್ನುಂಟು ಮಾಡಿದೆ. ಮತ್ತೆಂದು ನನ್ನ ಮೇಲೆ ತಿರುಗಿ ಬೀಳ್ತಾನೋ...?''

''ಅದಕ್ಕೂಂಚೆ, ಅವನನ್ನು ಒತ್ತಾಯ ಮಾಡಿ, ಈ ಮನೆಗೆ ಕಳಿಸು. ಬೃಂದಾ ತಾನೇ ಎಷ್ಟು ದಿನಾಂತ ಒಂಟಿಯಾಗಿರುತ್ತಾಳೆ. ನೋಡಿದ ಜನ ಏನನ್ನುತ್ತಾರೆ? ಈಗಾಗಲೇ ಸಾಕಷ್ಟು ನಗೆಪಾಟಲಾಗಿದೆ.''

''ನಾನೂ ಅದನ್ನೇ ಯೋಚಿಸುತ್ತಿದ್ದೆ. ಆದರೆ, ಡಾಕ್ಟರು ಹೇಳಿದಾರೆ, ಯಾವುದೇ ವಿಷಯಕ್ಕೂ ಅವನಿಗೆ ಒತ್ತಾಯ ಮಾಡಬೇಡಿ ಅಂತ...''

ಮುಂದೆ ಮುಂದೆ ಹೋಗುತ್ತಿದ್ದ ವಾಸುವಿನ್ನ ಕಿವಿಗೆ ಈ ಮಾತುಗಳ್ಯಾವುವೂ ಬೀಳಲಿಲ್ಲ. ಅವನ ಮನಸ್ಸಿನಲ್ಲೂ ಸಾಕಷ್ಟು ಮಂಥನ ನಡೆದಿತ್ತು.

ಕಲ್ಯಾಣಿ, ಬೃಂದಳ ಸಹಾಯದಿಂದ ಸೊಗಸಾದ ಅಡಿಗೆಯನ್ನು ಮಾಡಿದಳು. ಅಡಿಗೆ ಕೆಲಸ ಮುಗಿಯುವ ಹೊತ್ತಿಗೆ ಕೋಮಲಳೂ ಬಂದಳು.

ವಾಸು ರೂಮಿನಿಂದ ಹೊರಗೆ ಬಂದಿರಲಿಲ್ಲ. ನಂಜುಂಡಯ್ಯ ತೋಟದಲ್ಲಿ ಸುತ್ತಾಡಿ ಬಂದು ದಣಿವಾರಿಸಿಕೊಳ್ಳುತ್ತಿದ್ದರು.

ಕಲ್ಯಾಣಿಯೇ ತಟ್ಟೆ ಲೋಟಗಳನ್ನಿಟ್ಟು, ಊಟದ ಚಾಪೆಯನ್ನು ಹಾಸಿ, ಎಲ್ಲರನ್ನು ಕೂರಿಸಿ ಬಡಿಸಿದಳು. ಮೌನವಾಗಿ ಊಟ ಜರುಗಿತು. ಯಾರಿಗೂ ಮಾತನಾಡಲು ಏನೋ ಮುಜುಗರ. ಕೋಮಲಂಗೆ, ಕೃಷ್ಣನಲ್ಲಿ ಸಲುಗೆ ಇರಲಿಲ್ಲವಾದ್ದರಿಂದ ಅವನೆದುರಿಗೆ ಮಾತನಾಡಲು ಹಿಂಜರಿಕೆ. ನಂಜುಂಡಯ್ಯ ಆಗ ಈಗ ಕೃಷ್ಣನ ಕಡೆ ನೋಡುತ್ತಾ ತಮ್ಮಲ್ಲೇ ಏನೋ ಲೆಖ್ಖಾಚಾರ ಹಾಕುವಂತಿತ್ತು. ಬೃಂದಾ, ವಾಸು ಇಬ್ಬರೂ ತಲೆ ಎತ್ತದೇ, ಕೈಗೆ, ಬಾಯಿಗೆ ಕೆಲಸ ಕೊಟ್ಟಿದ್ದರು. ಕಲ್ಯಾಣಿ ನಗುತ್ತಾ ನುಡಿದಳು.

''ನಿಮ್ಮಿಬ್ಬರಿಗೂ, ನೆನ್ನೆ ಮೊನ್ನೆ ಮದುವೆ ಆಗಿಲ್ಲ... ತಿಂಗಳುಗಳೇ ಕಳೆದಿವೆ. ಇನ್ನೂ ಮದುಮಕ್ಕಳಂತೆ ನಾಚಿಕೇನಾ?''

ಬೃಂದಾ ಮತ್ತೂ ತಲೆ ತಗ್ಗಿಸಿದಳು. ನಂಜುಂಡಯ್ಯ ತಕ್ಷಣ ನುಡಿದರು. ''ನೀನೂ ಸರಿಯಾಗಿದೀಯಾ! ಮದುವೆ ಆದರೂ ಒಟ್ಟಿಗೆ ಎಲ್ಲಿ ಎಂದು ಇದಾರೆ ನೀನೇ ಹೇಳು... ನಾಚಿಕೆ ಕಳಚಿ, ಸಲುಗೆ ಬೆಳೆಯಲು ಅವಕಾಶವೇ ಆಗಿಲ್ಲವಲ್ಲ. ಎಲ್ಲಾ ಹೊಸ ಹೊಸದೇ ಇದ್ದ ಹಾಗಿದಾರೆ.''

ಕೋಮಲ ಅಕ್ಕನ ಕಡೆ ನೋಡಿದಳು. ವಾಸು, ತಟ್ಟನೆ, ತಟ್ಟೆಯಲ್ಲೇ ಕೈ ತೊಳೆದು, ಎದ್ದು ತನ್ನ ರೂಮಿಗೆ ಹೊರಟು ಹೋದ. ನಂಜುಂಡಯ್ಯ ಪೆಚ್ಚಾದರು... ಅವರೂ ಸರಸರನೆ ಊಟ ಮುಗಿಸಿ ಅಲ್ಲೇ ಇದ್ದ ಮಂದಲಿಗೆಯನ್ನು ಹಾಸಿಕೊಂಡು, ಮಲಗಿದರು. ಕಲ್ಯಾಣಿಯ ಊಟ ಮುಗಿಯುವವರೆಗೂ ಬೃಂದಾ, ಕೋಮಲ ಅಲ್ಲಿಯೇ ಕುಳಿತಿದ್ದರು.

ಅಡಿಗೆ ಪಾತ್ರೆಗಳನ್ನು ತೆಗೆದಿಟ್ಟು, ಗೋಮಯದಿಂದ ನೆಲವನ್ನು ಸಾರಿಸಿ, ಒರೆಸಿ, ಮೂವರೂ ಮುಂದಿನ ಜಗುಲಿಯ ಮೇಲೆ ಬಂದು ಕುಳಿತರು. ಬೃಂದಾ, ಅಕ್ಕ ತಂಗಿಯರ ಸಂಭಾಷಣೆಗಳನ್ನು ಆಲಿಸುತ್ತಿದ್ದರೂ, ಮಧ್ಯೆ ಮಧ್ಯೆ, ಒಳಗೆ ಮಲಗಿದ್ದ ಕೃಷ್ಣನ ಚಿಂತೆ ಬರುತ್ತಿತ್ತು. ಅವನಿಗೆ ತನ್ನೊಡನೆ ಸಲುಗೆ ಇಲ್ಲ, ಅವನು ಎಷ್ಟು ದಿನ ಬೇಕಾದರೂ ಇಲ್ಲಿಯೇ ಇರಲಿ ಅಂತ ಒಂದು ಸಾರಿ ಅನ್ನಿಸಿದರೆ, ಮರುಗಳಿಗೆಯೇ, ಹೀಗೇ ಎಷ್ಟು ದಿನ ನಡೆಯಲು ಸಾಧ್ಯ! ಮದುವೆಯಾಗಿಯೂ

ನಾನು ಗಂಡನಿಲ್ಲದ ಬಾಳು ಬಾಳಬೇಕೆ? ಹೀಗನ್ನಿಸಿದಾಗ, ಗಂಟಲು ಉಬ್ಬಿ ಬಂದಂತಾಯಿತು. ಕಲ್ಯಾಣಿ ಕಾಫಿ ಮಾಡಲೆಂದು ಎದ್ದಾಗ ಬೃಂದಾ ತಡೆದಳು.

''ನೀವು ಇಬ್ಬರೂ ಮಾತನಾಡ್ತಾ ಇರಿ. ನಾನು ಕಾಫಿ ಮಾಡ್ತೀನಿ.''

''ನಿನಗೆ ಎಲ್ಲೆಲ್ಲಿ ಏನೇನಿದೆ ಅಂತ ಗೊತ್ತಾ?''

''ಗೊತ್ತಾಗ್ದೆ ಇದ್ರೆ ಹುಡುಕ್ತೀನಿ. ಸಿಗದಿದ್ರೆ ನಿಮ್ಮನ್ನೇ ಕೇಳ್ತೀನಿ'' ಎಂದಳು ಮುಗುಳ್ನಗುತ್ತಾ. ಅವಳು ಅತ್ತ ಹೋದ ಕೂಡಲೇ, ಕೋಮಲ ಕೇಳಿದಳು. ''ಮದುವೆಯಾದ್ರೂ, ಕೃಷ್ಣ ಏಕೆ ಬೃಂದಳ ಜೊತೆಯಲ್ಲಿಲ್ಲ...?''

''ನಿನಗ್ಯಾಕೆ ಅದೆಲ್ಲಾ? ನೀನಿನ್ನು ಚಿಕ್ಕವಳು...''

''ನಾನು ಚಿಕ್ಕವಳೇನಲ್ಲ. ಕಾಲೇಜಿನಲ್ಲಿ ಓದ್ತಾ ಇದೀನಿ. ನಂಗೆ ಇನ್ನು ಒಂದು ಸಂಶಯ... ಕೃಷ್ಣನ್ನ ಕಂಡರೆ ನಿನಗೂ ಆಗ್ತಿರಲಿಲ್ಲ... ಈಗೇಕೆ ಅವನು ಇಲ್ಲೇ ಇದಾನೆ? ನೀನು ಸುಮ್ಮನೇ ಇದೀಯಲ್ಲ''

''ಜೈಲಿನಲ್ಲಿ ಆದ ಆಘಾತದಿಂದ ಅವನ ಮನಸ್ಸಿಗೆ ಮಂಕು ಕವಿದು ಬಿಟ್ಟಿದೆ... ಮುಂಚಿನ ತರಹವೇ ಆಗಿದ್ದಿದ್ರೆ ಅವನೇ ಇಲ್ಲಿರುತ್ತಿರಲಿಲ್ಲ. ಈಗ ಅವನನ್ನು ನೋಡಿದ್ರೆ ನನಗೆ ಅಯ್ಯೋ ಅಂತನ್ನಿಸುತ್ತೆ''

''ನನಗೆ ಬೃಂದನ್ನ ನೋಡಿದ್ರೆ ಅಯ್ಯೋ ಅಂತನ್ನಿಸುತ್ತೆ... ಒಂದು ವೇಳೆ ನಿನಗೇ ಇಂಥಾ ಗಂಡ ಸಿಕ್ಕಿದ್ರೆ ಏನು ಮಾಡ್ತಿದ್ದೆ...?''

ಕಲ್ಯಾಣಿ ತಕ್ಷಣ ಉತ್ತರಿಸಲಿಲ್ಲ. ''ನನ್ನ ವಿಷಯ ಬಿಡು... ನಿನಗೆ ಇಂಥಾ ಗಂಡ ಸಿಕ್ಕರೆ ಏನು ಮಾಡ್ತೀಯಾ?''

''ನಾನು ಅವನನ್ನು ಬಿಟ್ಟು ಬೇರೆ ಮದುವೆಯಾಗ್ತೀನಿ...''

''ಛೀ... ಇದನ್ನೆಲ್ಲಾ ನಿನಗೆ ಯಾರು ಹೇಳಿ ಕೊಡ್ತಾರ್ರೆ?''

''ಯಾರೇಕೆ ಹೇಳಿ ಕೊಡ್ತಾರೆ? ನನಗೇ ಗೊತ್ತಾಗುತ್ತೆ... ಬೃಂದಾನೂ ಹಾಗೇ ಮಾಡೋದು ಒಳ್ಳೆಯದು. ಇಂಥಾ ಕೆಟ್ಟೋನ ಜತೆ ಹೇಗಿರುತ್ತಾಳೆ? ಇವನನ್ನು ಬಿಟ್ಟು ಬೇರೆ ಮದುವೆಯಾದ್ರೆ, ಸುಖವಾಗಿರಬಹುದು''

''ಅದೆಲ್ಲ ಅಷ್ಟು ಸುಲಭವಲ್ಲ ಕೋಮಲ. ಅಲ್ಲದೇ ಬೃಂದಳ ಸ್ವಭಾವಾನೇ ಬೇರೆ ತರಹ. ಹಿಂದಿನ ಕಾಲದ ಪುರಾಣ ಕಾಲದ ಸ್ತ್ರೀಯರ ತರಹ,

ಪೂಜೆ, ವ್ರತಗಳಿಂದ, ಗಂಡನನ್ನು ಒಲಿಸಿಕೊಳ್ಳುವ ಆಸೆ ಅವಳಿಗೆ ಅವನಿಗೆ ಸುದ್ಬುದ್ಧಿಯನ್ನು ಕೊಟ್ಟು, ಅವನನ್ನು ಒಬ್ಬ ಮನುಷ್ಯನನ್ನಾಗಿ ಮಾಡಿ ಮನೆಗೆ ವಾಪಸ್ಸು ಬರುವಂತೆ ಮಾಡು ಎಂದು ದೇವರಲ್ಲಿ ಭಕ್ತಿಯಿಂದ ಪ್ರಾರ್ಥಿಸಿರಬಹುದು... ನೋಡು ಈಗ ಆ ಪ್ರಾರ್ಥನೆ ನೆರವೇರುತ್ತಿದೆ. ಕೃಷ್ಣ ಹಿಂದಿನಂತಿಲ್ಲ. ಸ್ವಲ್ಪ ಬದಲಾಗಿದಾನೆ, ನಿನಗೆ ಹಾಗೆನ್ನಿಸಲಿಲ್ವಾ!''

''ನನಗೆ ಅವನು ನಾಟಕ ಆಡುತ್ತಿರಬಹುದು ಅಂತನ್ನಿಸುತ್ತಿದೆ... ಯಾವುದೋ ಸಮಯಕ್ಕಾಗಿ ಕಾಯುತ್ತಿರಬಹುದು ಅಂತನ್ನಿಸುತ್ತೆ.''

''ಒಂದು ಕಾಲ ಹಾಗಿತ್ತು ಕೋಮಲ... ನಾನು ಅವನಿಗೆ ಹೆದರುತ್ತಿದ್ದೆ ನೀನು ಅವನ ಕಣ್ಣಿಗೆ ಬೀಳದಿರಲಿ ಅಂತ. ನಿನಗೂ ಅವನಿಂದ ದೂರ ದೂರವಿರುವಂತೆ ತಿಳಿಸುತ್ತಿದ್ದೆ. ಈಗ ಆ ಭಯವೇ ಇಲ್ಲ.''

''ಅದ್ಹೇಗೆ ಹೇಳ್ತೀಯಾ?... ನಾಯಿ ಬಾಲ ಡೊಂಕು... ಅದನ್ನ ನೆಟ್ಟಗೆ ಮಾಡಲು ಸಾಧ್ಯವಿಲ್ಲ ಅಂತ ನೀನೇ ಹೇಳ್ತಿದ್ದೆ...''

''ಇಲ್ಲ... ಈಗ ಆ ಬಾಲವೇ ಇಲ್ಲ. ಡೊಂಕು ಬಾಲವನ್ನು ಕತ್ತರಿಸಿ ಹಾಕಿ ಬಿಟ್ಟಿದಾರೆ ಪೋಲಿಸರು'' ಎಂದು ಅವಳು ನುಡಿದಾಗ, ಕೋಮಲ ನಕ್ಕಳು. ಕಲ್ಯಾಣಿ ನಗಲಿಲ್ಲ. ಅವಳಿಗೆ ತಂಗಿಯ ಪ್ರಶ್ನೆಗಳಿಗೆ ಉತ್ತರಿಸಲು ಕಷ್ಟವೆನಿಸುತ್ತಿತ್ತು... ಉದ್ವೇಗದಲ್ಲಿ ತಾನು ರಹಸ್ಯವನ್ನು ಹೊರಗೆಡವಿ ಬಿಟ್ಟರೇ...? ಅಷ್ಟರಲ್ಲಿ ಬೃಂದಾ ಕಾಫಿ ಬಟ್ಟಲುಗಳೊಂದಿಗೆ ಬಂದಳು. ಘಮ ಘಮವೆನಿಸುವ ಕಾಫಿಯ ಬಟ್ಟಲನ್ನು ಕಂಡೊಡನೆ ಕೋಮಲ ಚುರುಕಾದಳು.

''ಕೆಲಸಕ್ಕೆ ಬಾರದ ಮಾತನ್ನಾಡಿ ತಲೆ ಚಿಟಿ ಚಿಟಿ ಅನ್ನುತ್ತಿತ್ತು... ಕಾಫಿಯ ಅಗತ್ಯವಿತ್ತು'' ಎನ್ನುತ್ತಾ ಸವಿಯಾದ ಕಾಫಿಯನ್ನು ಹೀರತೊಡಗಿದಳು.

''ನಿನ್ನ ಗಂಡಂಗೆ, ಚಿಕ್ಕಪ್ಪಂಗೆ ಕೊಟ್ಯಾ?''

''ಇಲ್ಲ. ಇಬ್ಬರೂ ಮಲಗಿದಾರೆ... ಎದ್ದ ಮೇಲೆ ಕೊಡ್ತೀನಿ'' ಎನ್ನುತ್ತಾ ಅವಳೂ ಅಲ್ಲೇ ಕುಳಿತು ಕಾಫಿ ಬಟ್ಟಲನ್ನು ಕೈಗೆತ್ತಿಕೊಂಡಳು.

ಚಿಕ್ಕಪ್ಪ ಎದ್ದ ನಂತರ ಅವರಿಗೆ ಬಿಸಿ ಕಾಫಿಯನ್ನು ತಂದುಕೊಟ್ಟಳು. ತಾನು ಹೋಗಲು ಇಷ್ಟಪಡದೇ, ಕೋಮಲಳ ಕೈಯಲ್ಲಿ ಕೃಷ್ಣನಿಗೆ ಕಾಫಿಯನ್ನು

ಕಳಿಸಿದಳು. ಕೋಮಲ ಅಂಜುತ್ತಾ ರೂಮಿನೊಳಗೆ ಕಾಲಿಟ್ಟಳು. ಅವನು ನಿದ್ರಿಸುತ್ತಿರಬಹುದೆನಿಸಿತ್ತು. ಸದ್ದಾಗದಂತೆ ಒಳನಡೆದು, ಅಲ್ಲಿದ್ದ ಟೇಬಲ್ಲಿನ ಮೇಲೆ ಕಾಫಿಯ ಬಟ್ಟಲನ್ನಿಟ್ಟಳು... ಹಾಗೇ ಸದ್ದಾಗದಂತೆ ಹಿಂತಿರುಗುತ್ತಿರುವಂತೆ, ವಾಸು ಮೆಲ್ಲನೇ ''ಕಲ್ಯಾಣೀ...'' ಎಂದು ಕರೆದ.

''ನಾನು ಕಲ್ಯಾಣಿ ಯಲ್ಲ... ಕೋಮಲ...'' ಎಂದಳು ಗಡುಸಾಗಿ.

''ಓ...'' ಎನ್ನುತ್ತಾ ಎದ್ದು ಕೂತ.

''ಅಕ್ಕನ್ನ ಕರೀಲಾ...?''

''ಬೇಡ ಪರವಾಗಿಲ್ಲ'' ಎಂದ. ಅವನ ಧ್ವನಿ ಕೃಷ್ಣನ ಧ್ವನಿಯಂತಿಲ್ಲ ಎನ್ನುವುದನ್ನು ಗಮನಿಸಿದಳು.

ಅಕ್ಕ ತಂಗಿಯರ ಸಂಭಾಷಣೆ ವಾಸುವಿಗೆ ಕೇಳಿಸಿತ್ತು. ಕೋಮಲ, ತನ್ನನ್ನು ನಾಟಕವಾಡುತ್ತಿದಾನೆ ಎಂದಿದ್ದು ನೆನಪಿಗೆ ಬಂತು.

''ಕೋಮಲಾ... ನಾನು ಕೃಷ್ಣನೇ ಅಲ್ಲ ಅನ್ನೋ ಸಂಶಯ ನಿನಗೆ ಬಂದಿಲ್ಲ ಅಲ್ವಾ! ಯಾಕೆ ಅಂತ ಕೇಳ ಬಹುದಾ?...'' ಅವನು ನಯವಾಗಿ ಮಾತನಾಡಿದರೂ ಕೋಮಲ ಹೆದರಿದಳು... ಅಕ್ಕ, ಸದಾ ಕೃಷ್ಣನಿಂದ ದೂರ ಇರು ಅಂತ ಹೇಳುತ್ತಿದ್ದಳು. ಈಗ ಇವನ ಎದುರಿಗೇ ನಿಂತಿದ್ದರೆ, ಅಕ್ಕ ಬೈಯುತ್ತಾಳೆ ಎಂದುಕೊಂಡರೂ, ತಕ್ಷಣವೇ ನೆನಪಿಗೆ ಬಂತು. ಈಗ ಕೃಷ್ಣ ಬದಲಾಗಿದಾನೆ... ಅವನ ಡೊಂಕು ಬಾಲವನ್ನು ಕತ್ತರಿಸಿ ಹಾಕಿದ್ದಾರೆ ಎಂಬ ಮಾತು ನೆನಪಿಗೆ ಬಂತು. ಬಾಗಿಲಲ್ಲಿ ನಿಂತು ನುಡಿದಳು.

''ನೀನು ಎಂದೂ ಹೀಗೆ ನಯವಾಗಿ ಮಾತನಾಡಿದವನೇ ಅಲ್ಲ... ನಿನ್ನ ನಾಲಗೆಗೆ ಮೃದುತನ ಹೇಗೆ ಬಂತು ಅಂತ ಯೋಚಿಸ್ತಿದ್ದೆ...''

''ಓ... ಅದಾ...? ಪೋಲಿಸ್ನೋರು ನನ್ನ ಬಾಲ ಕತ್ತರಿಸಿದ್ದರ ಜೊತೆಗೆ, ನನ್ನ ನಾಲಿಗೆಯ ಮೇಲೂ ಕತ್ತರಿ ಆಡಿಸಿದರು... ಆಗಿನಿಂದ ನನ್ನ ನಾಲಿಗೆಗೆ ಮೃದುತ್ವ ಬಂತು'' ಎಂದ ಮುಗುಳ್ನಗುತ್ತಾ.

''ಹೀಗೇ ನೀನು ನಗುನಗುತ್ತಾ ಮಾತಾಡುತ್ತಾ ಇದ್ದರೆ ಎಷ್ಟು ಚೆನ್ನಾಗಿ ಇರುತ್ತೆ ಗೊತ್ತಾ!'' ಎಂದಳು ಸಂತಸದಿಂದ.

''ನಂಗೂ ಗೊತ್ತು... ಅದಕ್ಕೇ ನಾನು ನನ್ನ ಹೆಸರನ್ನು ಬದಲಾಯಿಸಿಕೊಂಡಿದೀನಿ... ಕೃಷ್ಣ ಎನ್ನುವ ಹೆಸರು ನನಗೆ ಇಷ್ಟವಿಲ್ಲ. ನನ್ನ ಹೆಸರನ್ನು ನಾನು ವಾಸು ಅಂತ ಬದಲಾಯಿಸಿಕೊಂಡಿದೀನಿ''

''ಸರಿಯಪ್ಪಾ... ನಿನ್ನ ಇಷ್ಟ. ನಾನಿನ್ನು ಬರ್ಲಾ...'' ಎನ್ನುತ್ತಾ ಹೊರಟೇ ಹೋದಳು. ವಾಸುಗೆ ತನ್ನ ಅಕ್ಕನ ನೆನಪಾಗಿತ್ತು.

''ನೋಡೇ ಕೋಮಲ... ನಿನ್ನ ಅಣ್ಣ ನಿಮ್ಮಿಬ್ಬರ ಹತ್ತಿರ ಮಾತ್ರ ಮಾತನಾಡುತ್ತಾರೆ. ನನ್ನ ಹತ್ತಿರ ಮಾತನ್ನೇ ಆಡಲ್ಲ'' ಬೃಂದ ಮೂತಿ ಊದಿಸಿ ನುಡಿದಾಗ, ಕೋಮಲ ಕಲ್ಯಾಣಿಯ ಕಡೆ ನೋಡಿದಳು.

''ಅವನಿಗೆ ನಾವಿಬ್ಬರೂ ತುಂಬಾ ಹಳಬರು, ನೀನು ಇನ್ನು ಹೊಸಬಳು. ಇನ್ನು ಸ್ವಲ್ಪ ದಿನ ನೋಡ್ತಿರು. ಅವನು ನಿನ್ನೊಡನೆ ಮಾತನಾಡುಕ್ಕೆ ಶುರು ಮಾಡಿದ ಮೇಲೆ ನಮ್ಮಿಬ್ಬರನ್ನು ಮರತೇಬಿಡ್ತಾನೆ ಖಂಡಿತಾ'' ಎಂದು ಹೇಳಿ ನಕ್ಕಳು. ಅವರಿಬ್ಬರೂ ನಕ್ಕರು. ಅವರುಗಳ ಮಾತನ್ನು ಆಲಿಸಿದ್ದ ನಂಜುಂಡಯ್ಯ ಕೃಷ್ಣನ ಬಗ್ಗೆಯೇ ಚಿಂತಿಸುತ್ತಿದ್ದರು.

ವಾಸುವನ್ನು ಬಲವಂತವಾಗಿ ಅವರೊಡನೆ ಹೊರಡಿಸಿದಳು ಕಲ್ಯಾಣಿ.

''ನೀನು ಈಗ ಹೋಗದಿದ್ದರೆ, ಏನೇನೋ ಊಹಾಪೋಹಗಳು ಹುಟ್ಟಿಕೊಳ್ಳುತ್ತವೆ. ಮೊದಲೇ ನಿನ್ನ ಮಾವನಿಗೆ ಸಂಶಯ ಬಂದಿರುವಂತಿದೆ. ಮುಂದೆ ಹೆಜ್ಜೆ ಇಟ್ಟವನು ದೃಢವಾಗಿ ಹೆಜ್ಜೆ ಹಾಕು. ತಡವರಿಸಿದರೆ, ಅವರ ಅನುಮಾನ ಹೆಚ್ಚುತ್ತೆ. ನಮ್ಮ ಉಪಾಯ ಕೆಡುತ್ತೆ...''

''ಈಗಲೂ ನನಗೆ ಅನ್ನಿಸೋದು, ನಾನೇಕೆ ಬದಲಾಗಬೇಕೂಂತ?...''

''ಸರಿ. ನಿನ್ನ ಇಷ್ಟ. ನಾಳೇನೇ ನೀನು ನಿನ್ನ ಊರಿಗೆ ಹೊರಟುಹೋಗು. ನನ್ನ ಕಣ್ಣೆದುರಿಗೆ ಮಾತ್ರ ಇರಬೇಡ'' ಎಂದು ಕಲ್ಯಾಣಿ ರೇಗಿದಾಗ, ಬೇಸರಗೊಂಡ ವಾಸು ಎದ್ದು ಆಚೆಗೆ ಬಂದ.

ಬೃಂದಾ, ಅವಳ ಚಿಕ್ಕಪ್ಪ ಹೊರಟುನಿಂತಿದ್ದರು. ವಾಸು ಅವರನ್ನು ಹಿಂಬಾಲಿಸಿದ. ಮುಂದೆ ಹೆಜ್ಜೆ ಇಡುತ್ತಿದ್ದ ಅವರುಗಳನ್ನೇ ಆಗಾಗ್ಗೆ ಗಮನಿಸುತ್ತಿದ್ದ. ಆಗಾಗ, ನಂಜುಂಡಯ್ಯ ಹಿಂತಿರುಗಿ ನೋಡಿದಾಗ ಇವನು ತಲೆ

ತಗ್ಗಿಸುತ್ತಿದ್ದ. ಮನೆಯನ್ನು ಹೊಕ್ಕೊಡನೆ ತನ್ನ ರೂಮಿಗೆ ಹೋಗಿ ಸೇರಿಕೊಂಡ.

ಅಂದಿನಿಂದ ಅವನ ದಿನಚರಿ ಈ ಮನೆಯಲ್ಲಿ ಪ್ರಾರಂಭವಾಯಿತು. ಬೃಂದಳಿಗೆ ಮನೆಕೆಲಸದಲ್ಲಿ ಸಹಾಯ ಮಾಡಲು, ಒಬ್ಬ ಹುಡುಗನನ್ನು ಗೊತ್ತು ಮಾಡಿದರು ನಂಜುಂಡಯ್ಯ. ಇದರಿಂದ ವಾಸುಗೆ ಅನುಕೂಲವಾಯಿತು.

''ಭೀಮ, ನಾನು ಸ್ನಾನ ಮಾಡಬೇಕು ಭೀಮ ನನಗೆ ಊಟಕ್ಕೆ ಬಡಿಸುವಂತೆ ಹೇಳು...'' ಎಂದು ಅವನ ಮುಖಾಂತರ ತನ್ನ ಬೇಕು ಬೇಡಗಳನ್ನು ಪೂರೈಸಿಕೊಳ್ಳುತ್ತಿದ್ದ.

ಹನ್ನೆರಡು ಹದಿಮೂರು ವರ್ಷದ ಭೀಮನಿಗೆ ಅಚ್ಚರಿ. ಅಣ್ಣಂಗೂ ಅಕ್ಕಂಗೂ ಏನೋ ಮನಸ್ತಾಪ. ಮಾತು ಬಿಟ್ಟಿದಾರೆ ಎಂದೇ ಭಾವಿಸಿದ. ರಾತ್ರಿ ತನ್ನ ರೂಮಿನಲ್ಲಿ ಭೀಮನಿಗೆ ಮಲಗುವಂತೆ ಹೇಳುತ್ತಿದ್ದ. ಅವನೆಲ್ಲಿ ಸಿಟ್ಟು ಮಾಡಿಕೊಂಡು ಮನೆ ಬಿಟ್ಟು ಹೋಗಿಬಿಡುವನೋ ಎಂದು ಹೆದರಿಕೊಂಡು ಎಲ್ಲರೂ ಸುಮ್ಮನಿದ್ದರು. ಆದರೆ ಶಾರದಂಗೆ ಸಮಾಧಾನವಿಲ್ಲ. ಎಷ್ಟು ದಿನ ಗಂಡ ಹೆಂಡತಿ ಹೀಗೆ ದೂರ ದೂರವಿರಬೇಕು! ಈಗ ಇವನ ಆರೋಗ್ಯ ಸುಧಾರಿಸಿದೆ. ಮನೆಗೆ ಬಂದು ಇರಲು ಪ್ರಾರಂಭಿಸಿದಾನೆ. ಭೀಮನ ಹತ್ತಿರ ಮಾತ್ರ ಮಾತಾಡ್ತಾನೆ. ಇನ್ನಾದರೂ ಹೆಂಡತಿಯ ಜೊತೆ ಬೇಡವೇ?... ಇವನಿಗೇನಾಗಿದೆ! ಯಾವುದಾದರೂ ಬೇರೆ ಹೆಂಗಸಿನ ಸಹವಾಸವಿರಬಹುದೇ ಅಂತೆನ್ನಿಸಿದಾಗ ಎದೆ ನಡುಗಿತು. ಇರಬಹುದು... ಅದಕ್ಕೇ ತೋಟದ ಮನೆ, ತೋಟದ ಮನೆ ಅಂತ ಅಲ್ಲೇ ಬಿದ್ದು ಒದ್ದಾಡ್ತಾನೆ... ಯಾವಳೋ ಎಂಥವಳೋ ಅವಳ ಸಹವಾಸ ತಪ್ಪುವಂತೆ ಮಾಡಬೇಕು. ಇದಕ್ಕೆಲ್ಲ ಪಂಡಿತರೇ ಸರಿ. ಅವರು ಕೊಟ್ಟ ತಾಯಿತದಿಂದ ಕೃಷ್ಣ ಇಷ್ಟರ ಮಟ್ಟಿಗೆ ಬದಲಾಗಿದ್ದಾನೆ. ಇನ್ನು ಹೆಂಡತಿಯನ್ನು ಚೆನ್ನಾಗಿಟ್ಟುಕೊಂಡು ಮನೆ ತುಂಬಾ ಮಕ್ಕಳಾದರೆ, ನನಗೆ ಅಷ್ಟೆ ಸಾಕು... ಎಂದುಕೊಂಡು ಬೃಂದಳನ್ನು ಕರೆದಳು.

''ಬೇಗ ಅಡಿಗೆ ಕೆಲಸ ಪೂರೈಸು. ನಾವಿಬ್ಬರೂ ಪಂಡಿತರ ಮನೆಗೆ ಹೋಗಿ ಬರೋಣ. ನಿನ್ನ ಚಿಕ್ಕಪ್ಪಂಗೆ ಮನೇಲೇ ಇರುವಂತೆ ಹೇಳು... ಕೃಷ್ಣ ತೋಟಕ್ಕೆ ಹೋಗೋದಾದ್ರೆ, ಭೀಮನ ಜತೇಲಿ ಹೋಗಲಿ, ಅವನ ಜತೇಲೇ ಬಂದು ಬಿಡಲಿ.'' ಅವಳ ಧ್ವನಿ ಇದ್ದಕ್ಕಿದ್ದಂತೆ ಗಡುಸಾಗಿದೆಯೆನ್ನಿಸಿತು.

ಎಲ್ಲರ ಊಟವಾದ ನಂತರ, ಇಬ್ಬರೂ ಪಂಡಿತರ ಮನೆಗೆ ಹೊರಟರು... ಪಂಡಿತರು ಎಲ್ಲರ ಕುಶಲವನ್ನು ವಿಚಾರಿಸಿದರು. ಶಾರದಾ ನಿಧಾನವಾಗಿ ಮಾತಿಗೆ ಪ್ರಾರಂಭಿಸಿದಳು.

''ನಮ್ಮ ಮನೆಯ ವಿಷಯ ನಿಮಗೆ ತಿಳಿಯದ್ದು ಏನಿದೆ ಪಂಡಿತರೇ...? ನನ್ನ ಮಗ ಎಲ್ಲಾ ಗಂಡಾಂತರಗಳನ್ನು ದಾಟಿ ಈಗ ಮನೆಗೆ ಬಂದಿದಾನೆ. ಆದರೆ ಏಕೋ ಏನೋ ಹೆಂಡತಿಯ ವಿಷಯದಲ್ಲಿ ಅಸಾಸಕ್ತಿ, ಏನು ಹೇಳಲಿ, ನಮ್ಮ ವಂಶ ಬೆಳೀಲಿ, ನಾಲ್ಕಾರು ಮಕ್ಕಳಾಗಲಿ ಅಂತ ನನಗೂ ಆಸೆ ಇರುಲ್ವೇ...?''

ಪಂಡಿತರು ನಕ್ಕು ಬೃಂದಾಳ ಕಡೆ ನೋಡಿದರು. ಅವಳು ನಾಚಿಕೆಯಿಂದ ತಲೆ ತಗ್ಗಿಸಿದಳು.

''ಅವನಿಗೇನಾಗಿದೆಯೋ ನನಗೆ ತಿಳೀದು... ಸದಾ ತೋಟದ ಮನೆ, ತೋಟದ ಮನೆ ಅಂತ ಅಲ್ಲೇ ಬಿದ್ದಿರ್ತಾನೆ. ಅವನಿಗೆ ಸಿಗರೇಟು, ಕುಡಿತದ ಹವ್ಯಾಸ ಸಹ ಇದೆ... ಆದರೆ ಈಚೆಗೆ ತೀರಾ ಮಂಕಾಗಿಬಿಟ್ಟಿದಾನೆ. ತೋಟದಲ್ಲಿರುವ ಯಾವುದಾದರೂ ಹೆಣ್ಣಾಳಿನ ಸಹವಾಸವಿರಬಹುದೇ ಅಂತ... ಹಾಗೇನಾದ್ರೂ ಇದ್ದರೆ ಅದನ್ನು ಬಿಡಿಸುವ ಉಪಾಯವಿದ್ದರೆ ತಿಳಿಸಿ...'' ಎಂದು ಕೈ ಮುಗಿದಳು.

''ಆಗಲಿ... ನೋಡ್ತೀನಿ... ಕೃಷ್ಣನ ಹಾಗೂ ಈ ಹುಡುಗಿಯ ಜಾತಕವಿದ್ದರೆ ಕೊಡಿ. ಕೂಲಂಕಷವಾಗಿ ಪರಿಶೀಲಿಸಿ ನೋಡಬೇಕು. ಹಿಂದೆ ನಾನು ಕೊಟ್ಟಿದ್ದ ರಕ್ಷಾಯಂತ್ರ ನಿಮ್ಮಲ್ಲಿದೆಯಲ್ಲ, ಅದನ್ನು ಅವನು ಮಲಗುವ ಹಾಸಿಗೆಯ ದಿಂಬಿನಡಿ ಇಡಿ... ಅವನು ಎಲ್ಲಿಗೂ ಹೋಗದೇ ಮನೆಯಲ್ಲೇ ಇರುವ ಸದ್ಬುದ್ಧಿ ಅವನಿಗೆ ಬರುತ್ತದೆ.''

ಶಾರದಾ ತನ್ನ ಬಳಿಯಿದ್ದ ಜಾತಕದ ಪ್ರತಿಗಳನ್ನು ಅವರ ಮುಂದೆ ಇಟ್ಟಳು. ''ನಾಳೆ ಇಷ್ಟು ಹೊತ್ತಿಗೇ, ನಿಮ್ಮ ಸೊಸೇನ ಕಳಿಸಿ ಸಾಕು. ನೀವು ಬರಬೇಕಾಗಿಲ್ಲ. ನಾನು ಎಲ್ಲಾ ನೋಡಿ, ಏನು ಮಾಡಬೇಕೂಂತ ವಿವರವಾಗಿ ತಿಳಿಸ್ತೀನಿ. ನೀವು ಆತಂಕಪಟ್ಕೋಬೇಡಿ... ಈಗ ನಾರಾಯಣ ಮೂರ್ತಿಗಳು ಹೇಗಿದಾರೆ? ಅವರನ್ನು ನೋಡಿಕೊಳ್ಳಲು ನೀವು ಸರಿಯಾಗಿರಬೇಕು ತಾನೇ?''

''ಅವರು ಯಥಾಪ್ರಕಾರ ಎಲ್ಲಾ ಮಲಗಿದ್ದಲ್ಲೇ... ನೀವು ಅವರ ಆರೋಗ್ಯ ಸುಧಾರಿಸುಕ್ಕೆ ಏನೂ ಮಾಡಿಕೊಡಲಿಲ್ಲ.'' ಆಕ್ಷೇಪಣೆ ಮಾಡಿದಳು.

"ನೀವು ಕೇಳಲಿಲ್ಲ, ನಾನು ಕೊಡಲಿಲ್ಲ. ಅಲ್ಲದೇ ನಿಮಗೆ ನಿಮ್ಮ ಯಜಮಾನರಿಗಿಂತ ನಿಮ್ಮ ಮಗನ ಚಿಂತೆಯೇ ಜಾಸ್ತಿ."

"ಹೌದು, ಪಂಡಿತರೇ... ಮಗನ ವಿಷಯದಲ್ಲಿ ನಾನು ತುಂಬಾ ಸ್ವಾರ್ಥಿ; ಮೊದಲೂ ಅಷ್ಟೇ ಅವನಿಗಾಗಿ ನಾನು ನನ್ನ ಯಜಮಾನರೊಂದಿಗೆ ಜಗಳ ಮಾಡುತ್ತಿದ್ದುದೇ ಜಾಸ್ತಿ... ಈಗ ಅವರ ಹತ್ತಿರ ಜಗಳವಾಡುವಂತೆಯೇ ಇಲ್ಲ. ಅವರೇನು ಅನ್ನುತ್ತಾರೋ ನನಗೆ ಅರ್ಥವೇ ಆಗಲ್ಲ. ಔಷಧಿ ಪಥ್ಯ ನಡೆಯುತ್ತಲೇ ಇದೆ. ಆದರೆ ಆರೋಗ್ಯವಂತೂ ಸುಧಾರಿಸಿಲ್ಲ."

"ಅವರ ಮನಸ್ಸಿಗೂ ನೆಮ್ಮದಿ ಇಲ್ಲ. ಆತಂಕವೇ ಜಾಸ್ತಿ. ಅವರನ್ನು ತೋಟದ ಮನೆಗೆ ಕಳಿಸಿ. ಕಲ್ಯಾಣಿ ಅವರ ಶುಶ್ರೂಷೆ ಮಾಡಲಿ. ಈ ಇಂಗ್ಲಿಷ್ ಔಷಧಿಗಳಿಗಿಂತ, ಹಳ್ಳಿ ವೈದ್ಯರು ಕೊಡುವ ನಾಟೀ ಔಷಧಿ ಪಾರ್ಶ್ವವಾಯುಗೆ ರಾಮಬಾಣ... ಈಗಾಗಲೇ ಖಾಯಿಲೆ ಸಾಕಷ್ಟು ಹಳೆಯದಾಗಿದೆ. ಆದಷ್ಟು ಬೇಗ ಕರೆದುಕೊಂಡು ಹೋಗಿ..."

"ಹಾಗೇ ಆಗಲಿ ಪಂಡಿತರೇ... ನನ್ನ ಮನಸ್ಸಿಗೆ ಏನು ಮಂಕು ಬಡಿಯಿತೋ... ಸದಾ ಇವನ ಚಿಂತೆಯೇ... ಅವನ ಚಿಂತೇಲಿ ನಾನು ಅರ್ಧವಾಗಿ ಬಿಟ್ಟಿದೀನಿ."

"ಅದು ಹಾಗೇ... ಸಂಸಾರ ಎಂದರೆ ಇನ್ನೇನು? ಸಮಸ್ಯೆಯೇ ಜಾಸ್ತಿ. ಅದನ್ನೆಲ್ಲಾ ಎದುರಿಸಲೇಬೇಕಾಗುತ್ತೆ. ಅಷ್ಟಾದರೂ ಸವೆಯುವುದಿಲ್ಲ"

"ದಿಟ... ಪಂಡಿತರೇ... ನೀವು ಹೇಳೋದು ನೂರಕ್ಕೆ ನೂರು ದಿಟವಾದದ್ದು... ನಾನಿನ್ನು ಬರಲೇ?" ಎಂದು ಕೈ ಮುಗಿದಳು.

ಮಾರನೇದಿನ, ಪಂಡಿತರು ತಿಳಿಸಿದ್ದ ಸಮಯಕ್ಕೆ ಸರಿಯಾಗಿ ಬೃಂದ ಟೀಮುವೊಡನೆ ಪಂಡಿತರ ಮನೆಗೆ ಹೊರಟಳು. ಆ ಸಮಯಕ್ಕೆ ಕಾದಿದ್ದವನಂತೆ, ವಾಸು, ತೋಟದ ಮನೆಯ ಕಡೆ ಹೊರಟ. ನಂಜುಂಡಯ್ಯ ಅವನಿಗೆ ತಿಳಿಯದಂತೆ ಅವನನ್ನು ಹಿಂಬಾಲಿಸಿದರು. ಅವನು ಸೀದಾ ತೋಟದ ಮನೆಯನ್ನು ಹೊಕ್ಕಿದ್ದನ್ನು ಕಂಡು ಅವರೂ ಪಂಡಿತರ ಮನೆಯ ದಾರಿ ಹಿಡಿದರು. ಪಂಡಿತರು ಬೃಂದಳೊಡನೆ ಮಾತನಾಡುತ್ತಿದ್ದರು.

"ನಿನ್ನ ಗಂಡನ ಗಂಡಾಂತರದ ದಿನಗಳು ಕಳೆದುಹೋಗಿವೆ. ಗ್ರಹಗಳು

ಒಂದಕ್ಕಿಂತ ಒಂದು ಕ್ರೂರವಾಗಿದ್ದವು. ಅದರ ಪರಿಣಾಮ ಇನ್ನೂ ಪೂರ್ಣವಾಗಿ ಮಾಸಿಲ್ಲ... ಅದರಿಂದ ಅವನು, ಈ ಪ್ರಪಂಚದಲ್ಲೇ ಇಲ್ಲದೇ ತನ್ನದೇ ಆದ ಬೇರೆ ಲೋಕದಲ್ಲಿದ್ದಾನೆ. ಅದಕ್ಕೇ ಅವನಿಗೆ ಇದ್ಯಾವುದೂ ಬೇಡ ಅಂತ ಅನ್ನಿಸುತ್ತಿರಬಹುದು ಏನಾಯ್ತು? ಯಾಕೆ ಹೀಗಾಯ್ತು ಅನ್ನೋದು ಮರೆತು ಹೋಗಿರಬಹುದು... ನಾನೊಮ್ಮೆ ಅವನನ್ನು ಕಂಡು ಮಾತನಾಡಬೇಕು. ಆದಷ್ಟು ಬೇಗ ಕಳಿಸು... ನೀವ್ಯಾರೂ ಅವನ ಜೊತೆಯಲ್ಲಿ ಬರುವುದು ಬೇಡ. ನಿಮ್ಮಗಳ ಎದುರಿಗೆ ಬಾಯಿಬಿಟ್ಟು ಮಾತನಾಡಲು ಅವನಿಂದ ಆಗದಿರಬಹುದು. ದೇವಿಯ ಎದುರಿಗೆ ಅವನು ಖಂಡಿತಾ ಮಾತನಾಡಿಯೇ ಆಡ್ತಾನೆ. ಆ ನಂಬಿಕೆ ನನಗಿದೆ'' ಎಂದು ಹೇಳಿ, ಕುಂಕುಮ ಹೂವು ಪ್ರಸಾದವನ್ನು ಅವಳ ಕೈಗಿತ್ತು ಆಶೀರ್ವದಿಸಿದರು.

ಅವಳಿಗಾಗಿ ಕಾಯುತ್ತಾ ನಿಂತಿದ್ದ ನಂಜುಂಡಯ್ಯ ಅವಳ ಜೊತೆಗೆ ಹೆಜ್ಜೆ ಹಾಕಿದರು.

''ನಿನಗೆ, ನಿನ್ನ ಅತ್ತೆಗೆ ಪಂಡಿತರು ಹೇಳಿದ್ದೇ ವೇದವಾಕ್ಯ. ಬೆಂಗಳೂರಿನ ದೊಡ್ಡ ಡಾಕ್ಟರು ಹೇಳಿದ್ದಾರಲ್ಲ ಎಲ್ಲಾ ಸರಿಹೋಗುತ್ತೆ ಅಂತ. ಮತ್ಯಾಕೆ ಒದ್ದಾಡ್ತೀರಿ?''

''ಹಾಗಲ್ಲ ಚಿಕ್ಕಪ್ಪಾ... ಆ ಡಾಕ್ಟರು ಏನು ಹೇಳಿದಾರೋ, ಕಲ್ಯಾಣಿ ನನಗೆ ಏನೂ ಹೇಳಿಲ್ಲ. ನೀವೇ ಹೇಳ್ತಿದ್ರಿ, ಗ್ರಹಗತಿ ಸರಿಯಾಗಿಲ್ಲದಿದ್ರೆ ಅನಾಹುತಗಳಾಗುತ್ತವೆ ಅಂತ. ಅಂತಹ ಗ್ರಹಗಳ ವಿಚಾರ ಈ ಪಂಡಿತರಿಗೆ ಚೆನ್ನಾಗಿ ತಿಳಿಯುತ್ತೆ. ಇದು ಏನು ಹೇಳುತ್ತೆ ಅಂತ ಅದನ್ನು ತಿಳಿದುಕೊಳ್ಳೋಣ. ಅದರಲ್ಲಿ ತಪ್ಪೇನು?''

''ತಪ್ಪೇನೂ ಇಲ್ಲಮ್ಮಾ... ಆದರೆ ಅದಕ್ಕೂ ಒಂದು ಮಿತಿ ಇರಲ್ವ. ಮೊದಲೆಲ್ಲಾ ಉಪವಾಸ, ವನವಾಸ, ವ್ರತ ಅದೂ ಇದು ಅಂತ ನಿನ್ನ ಅತ್ತೆಯ ಮಾತನ್ನು ಕೇಳಿ ಮಾಡಿದ್ದಾಯ್ತು. ಆಗ ನಿನ್ನ ಗಂಡ ಜೈಲಿಗೆ ಹೋದ. ಅಲ್ಲಿಂದ ಬಂದವನು ಬೇರೆ ಹೊಸಾ ಸಮಸ್ಯೆನೇ ತಂದಿದಾನೆ... ಇದನ್ನೆಲ್ಲಾ ಕಾಲವೇ ಸರಿ ಮಾಡಬೇಕು... ಪಂಡಿತರ ಸಲಹೆಯಲ್ಲ.''

''ನೀವು ನಾಸ್ತಿಕರಲ್ಲ ಚಿಕ್ಕಪ್ಪ. ನಿಮಗೂ ದೇವರಲ್ಲಿ ನಂಬಿಕೆ ನನಗಿಂತ

ಜಾಸ್ತಿ ಇತ್ತು. ಮತ್ತೆ ಈಗ್ಯಾಕೆ ಹೀಗಾಡ್ತೀರಿ?

''ಏನೋಮ್ಮ... ನನಗೂ ದಿಕ್ಕು ತೋಚದ ಹಾಗಾಗಿದೆ. ನಿನ್ನ ಅತ್ತೆಯ ಮಾತಿಗೆ ಮರುಳಾಗಿ, ನಿನ್ನದು ಮೂಲಾ ನಕ್ಷತ್ರವಾದರೂ ಮಾವನಿದ್ದ ಮನೆಗೆ ನಿನ್ನನ್ನು ಕೊಟ್ಟೆ... ನೋಡು ಈಗ, ಯಾವುದೂ ಸರಿಹೋಗಲಿಲ್ಲ... ಈಗಲೂ ನನ್ನ ಮಾತನ್ನು ಕೇಳು... ಇವರ ಪಾಡೇ ಬೇಡ. ಬಿಟ್ಟುಬಿಡು... ಮತ್ತೆ ನಿನ್ನ ಮದುವೆ ಮಾಡ್ತೀನಿ. ನಿನಗೆ ತಕ್ಕ ವರನನ್ನು ಹುಡುಕ್ತೀನಿ.''

''ನನಗೆ ಮತ್ತೆ ಮರು ಮದುವೆ ಮಾಡ್ತೀರಾ? ನನ್ನಂಥೋಳನ್ನ ಯಾರು ಮದುವೆಯಾಗ್ತಾರೆ? ಅಲ್ಲದೇ, ಒಂದು ಮದುವೆಯಿಂದೇ ನನಗೆ ಸಾಕಷ್ಟು ಅನುಭವಗಳಾಗಿವೆ. ನಾನು ಜನ್ಮವೆಲ್ಲಾ ಒಂಟಿಯಾಗಿದ್ರೂ ಪರವಾಗಿಲ್ಲ, ನಾನು ಮಾತ್ರ ಮತ್ತೆ ಮದುವೆ ಆಗುಲ್ಲ. ಆ ಆಸೆಗಳೆಲ್ಲಾ ಮದುವೆಯ ರಾತ್ರಿಯೇ ಸುಟ್ಟು ಭಸ್ಮವಾಗಿ ಹೋದವು.''

''ಹೀಗೆಲ್ಲಾ ಮಾತನಾಡಿ ನನ್ನನ್ನು ನೋಯಿಸಬೇಡಮ್ಮಾ... ನಾನು ನಿನ್ನನ್ನು ಸಾಕಿ ಬೆಳೆಸಿ, ಮದುವೆ ಮಾಡಿದ್ದು, ನೀನು ಒಂಟಿಯಾಗಿರಲಿ ಅಂತ ಅಲ್ಲ.''

''ನಾನೆಲ್ಲಿ ಒಂಟಿಯಾಗಿದೀನಿ... ನೀವೆಲ್ಲಾ ನನ್ನ ಜತೆಗಿದೀರಲ್ಲ.''

''ನಾವೆಲ್ಲಾ ಜತೆಗಿದ್ರೆ, ನಿನ್ನ ಎಲ್ಲಾ ಆಸೆಗಳೂ ಬಯಕೆಗಳೂ ಪೂರೈಸುವುದಿಲ್ಲ... ಪತಿಯ ಸಹವಾಸವೂ ಬೇಕು ಅಲ್ವಾ?''

''ನನಗೆ ಇನ್ನೊಂದು ಮದುವೆ ಆದರೆ ನನಗೆ ನನ್ನ ಗಂಡನ ಸಹವಾಸ ಸಿಕ್ಕುತ್ತೆ ಅಂತ ಹೇಗೆ ಹೇಳ್ತೀರಿ?... ಮತ್ತೆಂದೂ ನೀವು ನನ್ನ ಮರು ಮದುವೆಯ ಮಾತನ್ನಾಡಬಾರದು...'' ಉಗುಳು ನುಂಗಿದಳು.

''ಗಂಡನಿದ್ದೂ ವಿಧವೆಯಂತೆ ನೀನು ಬಾಳುತ್ತಿರುವುದನ್ನು ನಾನು ನೋಡಲಾರೆ... ನಿನ್ನ ಅಪ್ಪನ, ಅಮ್ಮನ ಆತ್ಮಕ್ಕೆ ನಾನು ಏನು ಹೇಳಲಿ?''

''ಹೀಗೆಲ್ಲಾ ಮಾತನಾಡಬೇಡಿ... ನನ್ನ ಮುತ್ತೈದೆತನವೊಂದೇ ನನಗೆ ಸಾಕು... ಈ ಒಂದು ಬಲದಿಂದ ನಾನು ಜೀವಮಾನವೆಲ್ಲಾ ಹಾಯಾಗಿರಬಲ್ಲೆ. ನನ್ನ ಪತಿ ನನ್ನ ಕಣ್ಣೆದುರಿಗೆ ಇಲ್ಲದಿದ್ದರೂ ಪರವಾಗಿಲ್ಲ. ಅವರು ಎಲ್ಲಿ ಯಾದರೂ ಸುಖವಾಗಿದ್ದರೆ ಸಾಕು.'' ತಲೆ ಎತ್ತದೇ ನುಡಿದಳು.

''ಸಾಕು... ಸಾಕು... ಇದನ್ನು ಮೂಢತನ ಅಂತ ಅಂತಾರೆ. ಪುರಾಣ ಕಾಲದ ಪತಿವ್ರತೆಯರು ಸಹ ಹೀಗೆ ಮಾತನಾಡಿಲ್ಲ... ನಿನಗೆ ಹೇಗೆ ಹೇಳಲಿ! ಈಗ ಕಾಲ ಬದಲಾಗಿದೆ. ಹಳೇ ರೀತಿ ನೀತಿಗೆ ಅಂಟಿಕೊಂಡು ಬಾಳುಕ್ಕಾಗುಲ್ಲ.''

''ಹೌದು ಚಿಕ್ಕಪ್ಪಾ... ನನಗೆ ನಿಮ್ಮ ಮಾತು ಅರ್ಥವಾಗುತ್ತೆ. ಆದರೆ ನನ್ನದೇ ಆದ ಕೆಲವು ಭಾವನೆಗಳಿವೆ. ಆ ಭಾವನೆಗಳಿಗೆ ಧಕ್ಕೆ ಬಂದ ದಿನ ನಾನು ಖಂಡಿತಾ ಬದುಕಿರಲ್ಲ. ಆತ್ಮಹತ್ಯೆ ಮಾಡಿಕೊಳ್ತೀನಿ. ಯಾರಿಗೂ ಭಾರವಾಗಿ ಬದುಕಿರೋಕೆ ನಾನು ಇಷ್ಟಪಡುಲ್ಲ.''

ನಂಜುಂಡಯ್ಯ ಸುಮ್ಮನಾದರು. ಇನ್ನು ಇವಳ ಮಾತಿಗೆ ಮಾತು ಬೆಳೆಸುವುದರಲ್ಲಿ ಅರ್ಥವಿಲ್ಲ ಅಂತಂದುಕೊಂಡು,

''ಹೋಗಲಿ, ಪಂಡಿತರು ಏನು ಹೇಳಿದರು?'' ಅಂತ ಕೇಳಿದರು.

''ನಾಳೆ ನನ್ನ ಗಂಡನನ್ನು ಒಬ್ಬನನ್ನೇ ಕಳಿಸಬೇಕಂತೆ, ನಾನು ಅವರ ಹತ್ತಿರ ಪ್ರತ್ಯೇಕವಾಗಿ ಮಾತನಾಡಬೇಕು ಅಂತ ಹೇಳಿದ್ರು...''

''ನೀನು ಹೇಳಿದರೆ ಅವನು ಬಂದುಬಿಡ್ತಾನಾ?''

''ಕಲ್ಯಾಣಿ ಹೇಳಿದರೆ ಅವರು ಒಪ್ತಾರೆ... ಅಲ್ವಾ ಚಿಕ್ಕಪ್ಪಾ...?''

''ಕಲ್ಯಾಣೀ... ಕಲ್ಯಾಣೀ... ಎಲ್ಲಾದಕ್ಕೂ ಕಲ್ಯಾಣೀ... ಅವನೇಕೆ ಅವಳ ಸೆರಗು ಹಿಡಿದು ತಿರುಗ್ತಾನೋ ನನಗೆ ಅರ್ಥವಾಗ್ತಿಲ್ಲ. ಒಂದೊಂದು ಸಲ ನನಗೆ ಅನುಮಾನ ಬರುತ್ತೆ... ನೀವಿಬ್ಬರೂ ಹತ್ತಿರ ಬರದ ಹಾಗೆ ಕಲ್ಯಾಣಿ ಅಡ್ಡಿ ಮಾಡ್ತಿದಾಳೆ ಅಂತನ್ನಿಸುತ್ತೆ. ನಿನಗೆ ಗೊತ್ತಾಗ್ತಿಲ್ಲ ಅಷ್ಟೇ...''

''ನನಗೇನೂ ಹಾಗೆನ್ನಿಸುಲ್ಲ ಚಿಕ್ಕಪ್ಪಾ...''

''ಮತ್ತೇಕೆ ಅವನು ತೋಟದ ಮನೇಲೇ ಬಿದ್ದು ಒದ್ದಾಡ್ತಾನೆ.? ಕೆಲಸ ಇಲ್ಲ, ಕಾರ್ಯ ಇಲ್ಲ, ಅನಾರೋಗ್ಯದ ನೆವ ಹಾಕಿಕೊಂಡು ಅಲ್ಲೇ ಇರ್ತಾನಲ್ಲ. ಅದಕ್ಕೆ ಏನು ಅರ್ಥ?'' ನಂಜುಂಡಯ್ಯ ಎತ್ತರದ ಧ್ವನಿಯಲ್ಲಿ ಮಾತನಾಡಿದಾಗ ಬೃಂದ ಬೆದರಿದಳು.

''ಇದು ರಸ್ತೆ... ಮನೆಯಲ್ಲ, ಅಲ್ಲದೇ ನೀವೇಕೆ ಹೀಗೆ ಉದ್ವೇಗ ಗೊಳ್ತೀರೋ ನನಗೆ ಅರ್ಥವಾಗುಲ್ಲ... ಕಲ್ಯಾಣಿ ಅಂಥೋರಲ್ಲ''

"ನಿನ್ನಷ್ಟು ಸಹನೆ ನನಗಿಲ್ಲ ಬೃಂದಾ. ನನಗೂ ವಯಸ್ಸಾಯಿತು. ನನಗೆ ನೀನು ನೆಮ್ಮದಿಯಿಂದ ಇರುವುದು ಮುಖ್ಯ. ನನಗೆ ಇನ್ನೇನಾಗಬೇಕು?" ಅವರ ಧ್ವನಿಯಲ್ಲಿ ಅಸಹನೆಯನ್ನು ಗುರುತಿಸಿದಳು.

ಪಂಡಿತರು ಹೇಳಿದ್ದನ್ನು ಅತ್ತೆಗೆ ವರದಿ ಒಪ್ಪಿಸಿದಳು.

"ಅತ್ತೆ... ಅವರಿಗೆ ನೀವೇ ಹೇಳಿ. ನಾಳೆ ಹೋಗಿಬರಲಿ..."

"ನಾನು ಹೇಳಲ್ಲ ಕಣೇ ತಾಯಿ. ನೀನೇ ಹೇಳು..."

"ನನ್ನ ಹತ್ತಿರ ಅವರು ಮಾತನ್ನೇ ಆಡುಲ್ಲವಲ್ಲ ಅತ್ತೇ..."

"ಅವನು ಆಡದಿದ್ದರೇನಾಯ್ತು? ನೀನು ಹೇಳು. ಅವನು ನಿನ್ನ ಮಾತಿಗೆ ಒಪ್ಪಿ ಹೋಗದಿದ್ದರೆ ಕಲ್ಯಾಣಿಯ ಹತ್ತಿರ ಹೇಳಿಸೋಣ."

ಅವರಿಬ್ಬರ ಮಾತನ್ನು ಆಲಿಸಿದ ನಂಜುಂಡಯ್ಯ ಸೀದಾ ತೋಟದ ಮನೆಗೆ ಬಂದರು. ಬಾವಿಯ ಕಟ್ಟೆ ಬಳಿ ಕುಳಿತಿದ್ದ ಕಲ್ಯಾಣಿ ಅವರನ್ನು ಕಂಡು ಎದ್ದು ಬಂದಳು. ಆತಂಕದಿಂದ ವಿಚಾರಿಸಿದಳು.

"ಚಿಕ್ಕಪ್ಪಾ... ಆತುರಾತುರವಾಗಿ ಬರ್ತಿೀದೀರಲ್ಲ. ಏನು ವಿಷಯ? ಚಿಕ್ಕಪ್ಪ ಹುಶಾರಾಗಿದಾರೆ ತಾನೇ...?"

"ಕೃಷ್ಣ ಇಲ್ಲಿದಾನೆ?" ಅವಳ ಪ್ರಶ್ನೆಗೆ, ಮರು ಪ್ರಶ್ನೆ ಹಾಕಿದರು.

"ಇಲ್ಲ ಇಲ್ಲಿಗೆ ಬಂದಿಲ್ಲ. ಯಾಕೆ ಮನೇಲಿಲ್ವಾ!" ಅವಳೂ ಗಾಭರಿಯಿಂದ ಕೇಳಿದಳು... ಎದೆ ಹೊಡೆದುಕೊಳ್ಳತೊಡಗಿತ್ತು.

"ಎಲ್ಲಿ ಹೋದ್ನೋ... ನಿಮ್ಮ ಚಿಕ್ಕಮ್ಮಂಗೆ, ನಮ್ಮ ಬೃಂದಂಗೆ ಮಾತ್ರ ಬುದ್ಧಿ ಬರಲಿಲ್ಲ ಇನ್ನೂ."

"ಯಾಕೆ ಏನಾಯ್ತು? ಮನೇಲಿ ಏನಾದ್ರೂ ಮಾತುಕತೆ ನಡೀತಾ?"

"ಪಂಡಿತರು, ಅವನ ಹತ್ತಿರ ಮಾತ್ನಾಡಬೇಕೂಂತ ಅಂದ್ರಂತೆ... ಅದನ್ನೂ ಅವನಿಗೆ ತಿಳಿಸೋಣ ಅಂತ ಬಂದೆ. ಅವನು ಇಲ್ಲಿಲ್ಲ."

"ಮನೇಲೇ ಇದ್ದನೋ ಏನೋ... ನೀವು ಸರಿಯಾಗಿ ನೋಡಿದ್ರಾ?"

"ಏನಮ್ಮಾ... ನನ್ನನ್ನೇ ಹೀಗೆ ಕೇಳ್ತೀಯಾ? ನಾನೇನು ಮಡ್ಡಿಯೇ."

''ಛೆ... ಹಾಗಲ್ಲ ಚಿಕ್ಕಪ್ಪ... ಅವನು ಇಲ್ಲಿಲ್ಲ. ಅಲ್ಲಿಯೂ ಇಲ್ಲ ಅಂತಂದ್ರೆ... ಗಾಭರಿಯಾಗುಲ್ವಾ? ಅವನನ್ನು ಎಲ್ಲೀಂತ ಹುಡುಕೋದು?''

''ಹುಡುಕೋದು ಏನೂ ಬೇಡ. ಕತ್ತಲಾಗುತ್ತಿದ್ದ ಹಾಗೆ ಇಲ್ಲಿಗೆ ಬರ್ತಾನೆ. ಅವನಿಗೆ ಆ ಮನೆಗಿಂತ ಈ ಮನೆ ಹೆಚ್ಚು. ಬೃಂದಂಗಿಂತ ನೀನು ಹೆಚ್ಚು. ನನಗೆಲ್ಲಾ ಗೊತ್ತು... ನನಗೆಲ್ಲಾ ಗೊತ್ತು...''

''ಚಿಕ್ಕಪ್ಪಾ... ಏನು ಮಾತಾಡ್ತಿದೀರ ನೀವು! ಮೈಮೇಲೆ ಎಚ್ಚರವಿದೆ ತಾನೇ'' ಕಲ್ಯಾಣಿಗೆ ಅವರ ಸಂಶಯ ಅರಿವಾಗಿತ್ತು.

''ಹೂಂನಮ್ಮಾ... ಈಗ ಚೆನ್ನಾಗಿ ಎಚ್ಚರವಾಗಿದೀನಿ. ಈ ಮುಂಚೆ ಎಚ್ಚರವಿಲ್ಲದೇ ದುಡುಕಿ ಬಿಟ್ಟೆ. ನಾನೇ ಕೈಯಾರ ನನ್ನ ಮಗಳ ಬಾಳನ್ನು ಹಾಳು ಮಾಡಿಬಿಟ್ಟೆ. 'ಅಳಿಯನ ಕುರುಡು ಬೆಳಗಾದ ಮೇಲೆ' ಅನ್ನೋ ಹಾಗೆ, ಒಂದೊಂದೂ ಅವಗುಣಗಳೂ ಬಯಲಿಗೆ ಬಂದವು. ಇಷ್ಟಾದರೂ, ಅವಳಿಗೆ ಗಂಡನ ಮೇಲೆ ಭಕ್ತಿ. ಪತಿವ್ರತೆತರಹ ಆಡ್ತಾಳೆ. ನಾನು ಎಷ್ಟೋ ಹೇಳಿದೆ... ಇದೆಲ್ಲಾ ಬೇಡ. ಬಿಟ್ಟು ಬಂದು ಬಿಡು. ಒಳ್ಳೆ ವರನನ್ನು ಹುಡುಕಿ ಮತ್ತೆ ಮದುವೆ ಮಾಡ್ತೀನಿ ಅಂತ. ನನ್ನ ಮಾತಿಗೆ ಬೆಲೆಯೇ ಇಲ್ಲ. ಅಲ್ಲಿ ಅವಳು ಇವನಿಗೋಸ್ಕರ ವ್ರತ ಕತೆ, ಜಪತಪ ಮಾಡಿ, ದಿನ ಕಳೆಯೋದು. ಅವನು ಇಲ್ಲಿ ಬಂದು ನಿನ್ನ ತಮ್ಮನ ಸಮಾನ ಅಂತ ಹೇಳಿಕೊಂಡು ತಿರುಗೋದು ಮಾಡೋದು... ಅನಾಚಾರದ ಕೆಲಸ... ಚೆನ್ನಾಗಿದೆ.''

ಕಲ್ಯಾಣಿ ಮೂಕಳಂತೆ ಕೂತಳು. ಕಣ್ಣಿನಿಂದ ನೀರು ಧಾರಕಾರವಾಗಿ ಹರಿಯಿತು.

''ಏಕಮ್ಮಾ ಸುಮ್ಮನಾಗಿಬಿಟ್ಟೆ! ರಹಸ್ಯ ಬಯಲಾಯಿತು ಅಂತ ದುಃಖವಾಗುತ್ತಿದೆಯೇ...?'' ಎಂದು ಹಂಗಿಸಿ ನುಡಿದಾಗ ಬಿಕ್ಕುತ್ತಾ ನುಡಿದಳು.

''ಇದುವರೆಗೂ ಯಾರೂ ಆಡದ ಮಾತನ್ನು ಆಡಿಬಿಟ್ಟಿರಲ್ಲ. ನಾನೂ ನಿಮ್ಮ ಮಗಳಂತೆಯೇ ಅಲ್ಲವೇ! ನಾನು ನಿಮ್ಮ ಬಗ್ಗೆ ಎಷ್ಟು ಗೌರವ ಇಟ್ಟುಕೊಂಡಿದ್ದೆ. ನೀವು ಹೀಗೆಲ್ಲಾ ಮಾತಾಡ್ತೀರಿ ಅಂತ ನಾನು ಖಂಡಿತಾ ಅಂದುಕೊಂಡಿರಲಿಲ್ಲ.''

''ಸರಿ ಸರಿ... ನಾನು ಆಡಿದ್ರಲ್ಲಿ ತಪ್ಪೇನು! ಅಂಗೈ ಹುಣ್ಣಿಗೆ ಕನ್ನಡಿ ಯಾಕೆ

ಅನ್ನೋ ಹಾಗೇ... ಅವನೇಕೆ ಇಲ್ಲಿಗೆ ಬರೋಕೆ ತುದಿಗಾಲಲ್ಲಿ ನಿಂತಿರ್ತಾನೆ, ಅಂತ ಯಾರು ಬೇಕಾದ್ರೂ ಊಹಿಸಬಹುದು... ಇಲ್ಲಿ ನಿನ್ನ ಬಿಟ್ಟು ಬೇರೆ ಆಕರ್ಷಣೆ ಏನಿದೆ ಅವನಿಗೆ?'' ಕಲ್ಯಾಣಿ ಕಣ್ಣೊರೆಸಿಕೊಂಡಳು.

''ಸಾಕುಮಾಡಿ. ಇಷ್ಟೇಯಾ ನೀವು ನನ್ನನ್ನು ಅರ್ಥ ಮಾಡಿಕೊಂಡಿರುವುದು? ನಿಜ ಏನೂಂತ ತಿಳಿದ್ರೆ... ನಿಮಗೆ ನೀವೇ ಏನು ಶಿಕ್ಷೆ ವಿಧಿಸಿಕೊಂಡರೂ ಅದು ಸಾಕಾಗುಲ್ಲ...''

''ಹಾಗಾದ್ರೆ ನಿಜ ಏನೂಂತ ಹೇಳಿಬಿಡು. ಅದನ್ನು ಕೇಳಿ ಕೃತಾರ್ಥನಾಗ್ತೀನಿ'' ಎಂದು ಅವರು ನಾಟಕೀಯವಾಗಿ ನುಡಿದಾಗ ಅವಳು ಮತ್ತು ಸಿಟ್ಟಾದಳು.

''ಸಾಕು ನಿಮ್ಮ ವ್ಯಂಗ್ಯ, ಕುಹಕ ಎಲ್ಲಾ. ನಿಮ್ಮ ಬೃಂದಂಗೇ ಯಾರಾದ್ರೂ ಹೀಗೆ ಅಪವಾದ ಹೊರಿಸಿದ್ರೆ ಏನು ಮಾಡ್ತಿದ್ರಿ?''

''ಅವರ ನಾಲಿಗೆ ಕತ್ತರಿಸಿ, ನಾಯಿಗೆ ಹಾಕ್ತಿದ್ದೆ... ಹಾಂ...''

''ಸರಿ. ಹಾಗಾದ್ರೆ... ನಾಳೆ ಪಂಡಿತರ ಹತ್ತಿರ ಅವನು ಹೋದಾಗ ನೀವು ಹೋಗಿ. ಆದರೆ ಬೃಂದನ್ನ ಕರೆದುಕೊಂಡುಹೋಗಬೇಡಿ. ನಾನು ಯಾಕೆ ಹೀಗೆ ಹೇಳಿದೆ ಅಂತ ನಿಮಗೇ ಗೊತ್ತಾಗುತ್ತೆ...''

''ಅದೇನು ಅಂತ ನೀನು ಈಗಲೇ ಹೇಳಬಹುದಲ್ಲ.''

''ನನ್ನ ಮೇಲೇ ನಂಬಿಕೆ ಇಲ್ಲದವರು ನನ್ನ ಮಾತನ್ನು ನಂಬುಲ್ಲ. ನಿಜ ಏನೂಂತ ತಿಳಿದ ಮೇಲೆ ನೀವೇ ನನ್ನ ಕ್ಷಮೆ ಯಾಚಿಸಿ ನನ್ನ ಬಳಿಗೆ ಬರ್ತೀರಿ...'' ಎಂದು ಹೇಳಿ ಅಲ್ಲಿ ನಿಲ್ಲದೇ ತನ್ನ ಮನೆಯೊಳಕ್ಕೆ ಹೊರಟುಹೋದಳು. ದುರ್ದಾನ ತೆಗೆದುಕೊಂಡವರಂತೆ ಅವರೂ ಹಿಂತಿರುಗಿ ಹೊರಟುಹೋದರು. ಅವರು ಅತ್ತ ಹೋದ ಕೆಲವು ನಿಮಿಷಗಳ ನಂತರ ವಾಸು ಮನೆಗೆ ಬಂದ.

ಕಲ್ಯಾಣಿ ಅತ್ತಿತ್ತ ನೋಡಿ, ಗಾಭರಿಯಿಂದ ಬಾಗಿಲು ಮುಚ್ಚಿದಳು.

''ನೀನೇಕೆ ಇಲ್ಲಿಗೆ ಬಂದೆ? ಬರಬೇಡ ಅಂತ ಹೇಳಿರಲಿಲ್ವಾ?''

''ಮನೇಲೇ ಕೂತು ಕೂತು ಬೇಜಾರಾಗಿತ್ತು. ಭೀಮನೂ ಇರಲಿಲ್ಲ. ಹಾಗೇ ಸುತ್ತಾಡೋಣ ಅಂತ ಹೊರಟೆ. ಸೀದಾ ಕಾಲುಗಳು ಈ ದಿಕ್ಕಿಗೇ

ಚಲಿಸಿದವು'' ಎಂದ ನಗುತ್ತಾ.

''ನಗಬೇಡ ವಾಸು... ಬೃಂದಳ ಚಿಕ್ಕಪ್ಪ ಏನೇನ್ನೋ ಅಪಾರ್ಥ ಮಾಡಿಕೊಂಡು, ನನ್ನ ಮೇಲೆ ಅಪವಾದ ಹೊರಿಸಿದಾರೆ. ನಾನು ಅನುಭವಿಸಿರುವ ಕಷ್ಟ ಅವರಿಗೇನು ಗೊತ್ತು? ಈಗ ಮಗಳಿಗೆ ಕಷ್ಟ ಒದಗಿದೆ ಅಂತ ಏನೇನೋ ಆಡಿದ್ರು. ಹೇಳೋಕೆ ಹೀನಾಯವಾಗುತ್ತೆ, ಥೂ...''

''ಇದನ್ನೆಲ್ಲಾ ಎದುರಿಸೋಬದಲು, ನಿಜ ಹೇಳಿಬಿಡೋಣ. ಆಮೇಲೆ ಅವರು ಏನು ಬೇಕಾದ್ರೂ ಮಾಡಿಕೊಳ್ಳಲಿ. ನನಗೂ ಈ ನಾಟಕ ಆಡೋದು ತಪ್ಪುತ್ತೆ... ಅದೇನೇ ಬರಲಿ ಎದುರಿಸ್ತೀನಿ''

''ಆ ಸಮಯ ಈಗ ಬಂದು ಬಿಟ್ಟಿದೆ ವಾಸು. ಪಂಡಿತರು ನಿನ್ನನ್ನು ಕಂಡು ಮಾತನಾಡಬೇಕಂತೆ. ಅವರು ದೇವಿ ಉಪಾಸಕರು. ಅವರ ಎದುರಿಗೆ ನೀನು ನಿಜವನ್ನೇ ಹೇಳಬೇಕಾಗುತ್ತದೆ. ಆಗ ಅವರ ಸಲಹೆಯನ್ನು ಕೇಳೋಣ. ಅವರು ಹೇಗೆ ಹೇಳ್ತಾರೋ ಹಾಗೇ ಮಾಡೋಣ. ಆಗ ಎಲ್ಲಾ ಇತ್ಯರ್ಥವಾಗುತ್ತೆ. ನೀನು ಈಗಲೇ ಆದಷ್ಟು ಬೇಗ ಹೋಗಿ ನಿನ್ನ ಮನೆಯೊಳಕ್ಕೆ ಸೇರಿಕೋ. ನೀನು ಇಲ್ಲಿಗೆ ಬಂದಿದ್ದೆ ಎನ್ನುವ ಸಂಶಯ ಅವರಿಗೆ ಬರಬಾರದು... ಹುಂ. ನಡೀ... ಅವರಿಗಿಂತ ಮುಂಚೆ ಹೋಗಿರಬೇಕು'' ಎನ್ನುತ್ತಾ ಅಟ್ಟಿದಳು. ಅವನು ಗಿಡಮರಗಳ ಸಂದಿನಲ್ಲಿ ನಡೆದು ಕಾಲು ದಾರಿಯಲ್ಲಿ ಓಡಿ, ಮನೆಯನ್ನು ಸೇರಿಕೊಂಡು ರೂಮಿನಲ್ಲಿ ಹಾಯಾಗಿ ಮಲಗಿದ.

ಎಷ್ಟೋ ಹೊತ್ತಿನ ನಂತರ ಮನೆಗೆ ಬಂದ ಚಿಕ್ಕಪ್ಪ ರೂಮಿನಲ್ಲಿ ಇಣುಕಿ ನೋಡಿದರು... ರೂಮಿನ ಸಮೀಪದಲ್ಲಿ ಕುಳಿತಿದ್ದ ಶಾರದಮ್ಮನನ್ನು ಕಂಡು ನೋಡಿಯೂ ನೋದದಂತೆ ಅತ್ತ ನಡೆದರು. ಯಾಕೋ ಮಾತನಾಡಿಸ ಬೇಕೆನಿಸಲಿಲ್ಲ.

''ಬೃಂದಾ, ನಿನ್ನ ಗಂಡನಿಗೆ ಹೇಳಿದೆಯೇನಮ್ಮಾ... ನಾಳೆ ಪಂಡಿತರ ಮನೆಗೆ ತಹೋಗಬೇಕಂತೆ ಅಂತಾ...''

''ಇನ್ನು ಇಲ್ಲ. ಭೀಮ ಅಂಗಡಿಗೆ ಹೋಗಿದಾನೆ. ಅವನು ಬರಲಿ... ಅವನ ಕೈಲಿ ಹೇಳಿಕಳಿಸ್ತೀನಿ''

''ನಿನ್ನ ಗಂಡನಿಗೆ ನೀನೇ ಯಾಕೆ ಹೇಳಬಾರದು! ಭೀಮ ಯಾಕೆ ಬೇಕು!

ಅದೇ ತಪ್ಪು... ನಿನ್ನ ಗಂಡನಿಗೆ ಹೇಳಬೇಕಾದ್ದನ್ನು ನೀನೇ ಹೇಳಬೇಕು. ಅದೇ ಸರಿ.'' ಅನಾವಶ್ಯಕವಾಗಿ ಚಿಕ್ಕಪ್ಪ ಕೂಗಾಡಿದಾಗ ಬೃಂದ ಬೆರಗಾದಳು. ಶಾರದಾ ಅವರನ್ನೇ ನೋಡುತ್ತಿದ್ದಳು. ಅವರ ಕೂಗಾಟ ವಾಸುವಿನ ಕಿವಿಗೆ ಬಿದ್ದಿತ್ತು. ನಗಬೇಕೆನ್ನಿಸಿತ್ತು... ಬೃಂದಾ ರೂಮಿನ ಬಾಗಿಲಲ್ಲಿ ನಿಂತು... ಹೆದರುತ್ತಾ, ''ನಾಳೆ ನೀವು ಪಂಡಿತರ ಮನೆಗೆ ಹೋಗಬೇಕಂತೆ'' ಎಂದಳು.

''ವಾಸು ಮುಸುಕಿ ನೊಳಗಿನಿಂದಲೇ, ''ಹೂಂ... ನೋಡೋಣ'' ಎಂದ. ಅವಳಿಗೆ ಅಷ್ಟು ಸಾಕಾಯಿತು. ಗಂಡ ತನ್ನ ಮಾತಿಗೆ ಉತ್ತರ ಕೊಟ್ಟ ಎಂಬ ಗೆಲುವಿನಿಂದ ಚಿಕ್ಕಪ್ಪನ ಕಡೆ ನೋಡಿದಳು.

''ಏನಂದ?... ಎನ್ನುವಂತೆ ಪ್ರಶ್ನಿಸಿದರು.''

ಹೂಂ ಅಂತ ಅಂದ್ರು ಎಂದಳು...'' ಅವಳತ್ತ ಹೋದಕೂಡಲೇ ಜಗುಲಿಯ ಮೇಲೆ ಕಂಭಕ್ಕೆ ಒರಗಿ ಕುಳಿತರು.

''ನಾಳೆ, ನಿಜ ಏನೂಂತ ತಿಳಿಯುತ್ತೆ... ಆದರೆ ಆ ನಿಜ ಏನೂಂತ ಬೃಂದಳಿಗೆ ತಿಳಿಯಬಾರದು... ಕಲ್ಯಾಣಿಯ ಮಾತಿನಲ್ಲಿ ಸತ್ಯವಿದ್ದು, ಅದರಿಂದ ಬೃಂದಳ ಮನಸ್ಸಿಗೆ ನೋವಾಗುವುದಾದರೆ, ಆ ನಿಜ ಅವಳಿಗೆ ತಿಳಿಯುವುದೇ ಬೇಡ ಎಂದು ಕೊಂಡು, ತಾನು ಅವನಿಗಿಂತ ಮುಂಚೆ ಪಂಡಿತರ ಮನೆಗೆ ಹೋಗಿ ಅವರ ಬಳಿ ಮಾತನಾಡಬೇಕು ಎಂದುಕೊಂಡರು.

''ಪಂಡಿತರಿಗೆ ನಮಸ್ಕಾರ'' ಎಂದು ಕೈ ಮುಗಿದು ತಮ್ಮ ಪರಿಚಯವನ್ನು ಹೇಳಿಕೊಂಡರು ನಂಜುಂಡಯ್ಯ. ''ನಾನು ನಿಮ್ಮ ಹತ್ತಿರ ಸ್ವಲ್ಪ ಮಾತನಾಡಬೇಕು'' ಎಂದು ವಿನಂತಿಸಿಕೊಂಡರು.

''ಕೂತ್ಕೊಳ್ಳಿ'' ಎಂದು ಹೇಳಿ ಚಾಪೆಯ ಕಡೆ ಕೈ ಮಾಡಿದರು. ಅವರು ಕೂತನಂತರ, ''ಹೂಂ. ಈಗ ಹೇಳಿ...'' ಎಂದು ಅಪ್ಪಣೆ ಕೊಡಿಸಿದರು.

''ಬೃಂದಾ ನನ್ನ ಸಾಕು ಮಗಳು... ಚಿಕ್ಕವಯಸ್ಸಿನಲ್ಲೇ ಅಪ್ಪ ಅಮ್ಮನನ್ನು ಕಳೆದುಕೊಂಡ ನತದೃಷ್ಟೆ... ಅವಳದ್ದು ಮೂಲಾ ನಕ್ಷತ್ರ ಅಂತ ತಿಳಿದೂ ಅವಳನ್ನು ತಮ್ಮ ಮಗನಿಗೆ ತಂದುಕೊಂಡರು... ಆದರೆ ನಂತರ ಅವನೇ ಸರಿ ಇಲ್ಲ ಅಂತ ತಿಳೀತು... ಜೈಲು ಶಿಕ್ಷೆ ಅನುಭವಿಸಿ ಬಂದವನು, ಈಗ ಸದಾ ತೋಟದ ಮನೆಯ ಹಂಬಲ... ಕಲ್ಯಾಣಿಯ ಮೇಲೆ ವ್ಯಾಮೋಹ... ನನಗೇಕೋ ಅವರಿಬ್ಬರ ಮೇಲೆ

ಅನುಮಾನ. ಇದಕ್ಕೇನು ಮಾಡಬೇಕೂಂತ ತಿಳೀತಿಲ್ಲ. ಅವನು ನಿಮ್ಮ ಎದುರಿಗೆ ಸುಳ್ಳು ಹೇಳಲಾರ... ಆ ನಿಜ ಏನೂಂತ ತಿಳಿದುಕೊಳ್ಳುವ ಆಸೆಯಿಂದ ನಾನು ಬಂದಿದೀನಿ.''

''ಸರಿ ನಿಮ್ಮ ಆಸೆ ಸಹಜವಾದುದೇ. ಅವನು ಹೇಳುವ ಸತ್ಯ ಕಠೋರವಾಗಿದ್ದರೆ ಏನು ಮಾಡ್ತೀರಿ?''

''ಆಗ, ಈ ದೇವಿ ಸನ್ನಿಧಿಯಲ್ಲಿ ನೀವು ಹೇಗೆ ಅಪ್ಪಣೆ ಕೊಡಿಸಿದರೆ ಹಾಗೆ ನಡೆದುಕೊಳ್ತೀನಿ.'' ನಂಜುಂಡಯ್ಯ ವಿನೀತರಾಗಿ ಕೈ ಮುಗಿದು ಕೇಳಿಕೊಂಡಾಗ ಅವರು ತಲೆ ಆಡಿಸಿದರು.

ಕೆಲವೇ ನಿಮಿಷಗಳ ನಂತರ, ವಾಸು ಅಲ್ಲಿಗೆ ಬಂದ. ದೂರದಿಂದಲೇ ಅಲ್ಲಿ ಕೂತಿದ್ದ ಚಿಕ್ಕಪ್ಪನನ್ನು ಗಮನಿಸಿ ಅವನಿಗೆ ಮುಜುಗರವುಂಟಾಗಿತ್ತು. ಅವರ ಮುಖವನ್ನು ನೋಡಲು ಅಂಜಿದ. ಪಂಡಿತರಿಗೆ ಕೈ ಮುಗಿದು ತನ್ನ ಪರಿಚಯ ಹೇಳಿಕೊಂಡ... ಅವನಿಗೂ ಕೂತ್ಕೋ ಎಂದು ಹೇಳಿ ಮಾತಿಗೆ ಪ್ರಾರಂಭಿಸಿದರು.

''ಮೊನ್ನೆ ದಿನ ಬೃಂದಾ ಇಲ್ಲಿಗೆ ಬಂದಿದ್ದವಳು, ಅವಳ ಹಾಗೂ ಅವಳ ಗಂಡನ ಜಾತಕದ ಪ್ರತಿಗಳನ್ನು ನನಗೆ ಕೊಟ್ಟಿದ್ದಳು. ಅದನ್ನು ನಾನು ಕೂಲಂಕಷವಾಗಿ ಪರಿಶೀಲಿಸಿದ್ದಾಗಿದೆ. ಅದರ ವಿವರವನ್ನು ತಿಳಿಸಿ, ಕೆಲವು ಸಂದೇಹಗಳನ್ನು ನಿವಾರಿಸಿಕೊಳ್ಳಬೇಕಾಗಿತ್ತು... ಆದರೆ ಈಗ ನಿಮ್ಮ ಮಾವನವರೂ ಇಲ್ಲಿದಾರೆ. ಅವರ ಎದುರಿಗೆ ಮಾತನಾಡಲು ಅಭ್ಯಂತರವೇನಿಲ್ಲ ಅಂತ ಭಾವಿಸಲೇ?'' ಅವನು ತಲೆ ಆಡಿಸಿ ನುಡಿದ.

''ನನ್ನದೇನೂ ಅಭ್ಯಂತರವಿಲ್ಲ. ಅವರಿಗೆ ನನ್ನ ಮೇಲೆ ಸಾಕಷ್ಟು ಅನುಮಾನಗಳಿವೆ ಅಂತ ನನಗೂ ಗೊತ್ತು. ಸಮಯ ಬಂದಾಗ ನಾನೇ ಹೇಳಬೇಕೂಂತ ಅಂದುಕೊಂಡಿದ್ದೆ. ಆ ಅವಕಾಶ ಬೇಗನೇ ಬಂದುಬಿಟ್ಟಿದೆ...'' ಎಂದು ಪ್ರಾರಂಭಿಸಲಿದ್ದವನನ್ನು ಪಂಡಿತರು ತಡೆದರು.

''ನಾನು ದೇವಿ ಉಪಾಸಕ. ಇಲ್ಲಿ ನನ್ನ ಮುಂದೆ ನಿಜ ಹೇಳಿದವರಿಗೆ ನನ್ನ ಕೈಲಾದ ಸಹಾಯ ಮಾಡ್ತೀನಿ. ಸುಳ್ಳು ಹೇಳಿದವರನ್ನು ಪೋಲಿಸರಿಗೆ ಹಿಡಿದು ಕೊಡ್ತೀನಿ'' ಎಂದು ಹೆದರಿಸಿದರು. ವಾಸು ನಕ್ಕ.

''ನಾನು ಇಲ್ಲಿಗೆ ಬಂದಿರುವುದೇ ನಿಜ ಹೇಳೋಕ್ಕೆ. ನಿಜ ಹೇಳಿ ನನ್ನ

ಮನಸ್ಸನ್ನು ಹಗುರ ಮಾಡಿಕೊಳ್ಳೋಕೆ. ಆಮೇಲೆ ನೀವು ಹೇಗೆ ಹೇಳ್ತೀರೋ ಹಾಗೇ ಕೇಳ್ತೀನಿ. ಅದು ಖಂಡಿತಾ'' ಎಂದು ಭರವಸೆಯನ್ನಿತ್ತು ತನ್ನ ಕತೆಯನ್ನು ಹೇಳಲು ಪ್ರಾರಂಭಿಸಿದ.

''ನಾನು ವಾಸು... ಕೃಷ್ಣ ಅಲ್ಲ'' ಎಂದು ಪ್ರಾರಂಭಿಸಿ, ಕಲ್ಯಾಣಿ ತನಗೆ ಹೇಳಿದುದನ್ನೆಲ್ಲಾ ಹೇಳಿ ಮುಗಿಸಿ,'' ''ನನಗೂ ಈ ಬೇಡವಾದ ಬಂಧನದಿಂದ ಮುಕ್ತಿ ಬೇಕಾಗಿದೆ. ಇದನ್ನು ಇನ್ನು ಕೆಲವೇ ದಿನಗಳಲ್ಲಿ ಚಿಕ್ಕಪ್ಪನಿಗೆ ತಿಳಿಸಿ ಅವರ ಸಲಹೆ ಕೇಳಬೇಕೆಂದುಕೊಂಡಿದ್ದೆ... ಇವತ್ತು ನನ್ನ ಹೃದಯ ಹಗುರವಾಯ್ತು'' ಅಂತಂದ.

ಪಂಡಿತರು ತಲೆದೂಗುತ್ತಾ ಅವನು ಹೇಳಿದ್ದನ್ನು ಕೇಳಿಸಿಕೊಂಡರೆ, ನಂಜುಂಡಯ್ಯ ದಿಙ್ಮೂಢರಾಗಿ ಅರೆತೆರೆದ ಬಾಯಿ ಬಿಟ್ಟುಕೊಂಡು ಕೂತಿದ್ದರು. ಪಂಡಿತರು ಅವನ ಧೈರ್ಯಕ್ಕೆ ಮೆಚ್ಚಿದ್ದರು. ನಂಜುಂಡಯ್ಯನಿಗೆ ಅದು ಕಟ್ಟು ಕತೆಯಂತೆ ಅನ್ನಿಸಿದ್ದರೂ, ಅವನ ಮಾತನ್ನು ನಂಬಿದರು.

''ನನಗೆ ಮೊದಲದಿನ ಇವನನ್ನು ಕಂಡಾಗಲೇ, ಏನೋ ಅನುಮಾನ ಬಂದಿತ್ತು. ಆದರೆ ದುಡುಕಬಾರದು ಅಂತ ಸುಮ್ಮನಿದ್ದೆ.''

ಏನಯ್ಯಾ ನೀನು ಮಾಡಿದ್ದು ನ್ಯಾಯಾನಾ?''... ಪಂಡಿತರು ಮಧ್ಯೆ ಬಾಯಿ ಹಾಕಿದರು.

''ನ್ಯಾಯ ಅನ್ಯಾಯದ ಪ್ರಶ್ನೆ ಈಗ ಬೇಡ. ನಿಮ್ಮ ಅಳಿಯ ಬದುಕಿಲ್ಲ. ಸತ್ತು ಹೋಗಿದಾನೆ. ಈಗೇನು ಮಾಡ್ತೀರಿ?...''

ನಂಜುಂಡಯ್ಯನ ಮುಖದ ಬಣ್ಣ ಕೆಟ್ಟಿತು. ಎಂಥಾ ಘೋರ ಅನರ್ಥವಾಗಿಹೋಯ್ತು... ಈ ವಿಷಯವನ್ನು ನಾನೇ ಹೇಗೆ ನನ್ನ ಮಗಳಿಗೆ ತಿಳಿಸಲಿ?... ಹೀಗೆ ವಿಧವೆ ಅಂತ ಅನ್ನಿಸಿಕೊಂಡು, ಬಾಳೋದಕ್ಕಿಂತ ನನ್ನ ಮಾತು ಕೇಳಿ ಈ ಹಾಳಾದೋನ್ನ ಬಿಟ್ಟುಬಂದಿದ್ದರೆ, ನಾನು ಅವಳಿಗೆ ಮತ್ತೆ ಮದುವೆ ಮಾಡ್ತಿದ್ದೆ...''

''ಮತ್ತೆ ಮದುವೆ ಮಾಡೋದು ಅಷ್ಟು ಸುಲಭವಲ್ಲ ನಂಜುಂಡಯ್ಯನವರೇ... ನಮ್ಮ ಸಮಾಜದಲ್ಲಿ ಇನ್ನು ಬಳಕೆಗೆ ಬಂದಿಲ್ಲ. ಎಲ್ಲೋ ಅಲ್ಲೊಂದು, ಇಲ್ಲೊಂದು ವಿವೇಕದಿಂದಲೋ, ಅವಿವೇಕದಿಂದಲೋ ಮರು ಮದುವೆ

ನಡೆದರೂ, ಅದೇ ದೊಡ್ಡ ಹಗರಣವಾಗುತ್ತೆ...''

''ಹಾಗಂತ, ಗಂಡನ ಸುಖ ಅಂದರೆ ಏನೂಂತ ಅರಿಯದ ನನ್ನ ಮಗಳು ಜೀವಮಾನವೆಲ್ಲಾ ಬರಡುಬಾಳು ಬಾಳಬೇಕಾ?...''

''ನಾನು ಹಾಗೆಲ್ಲಿ ಹೇಳಿದೆ?... ಕೃಷ್ಣನ ಜಾತಕ ನೋಡಿದ ದಿನವೇ ನನಗೆ ಅನುಮಾನ ಬಂದಿತ್ತು. ಕ್ರೂರ ಗ್ರಹಗತಿಯಿಂದ ಅವನಿಗೆ ಉಳಿಗಾಲವೇ ಇರಲಿಲ್ಲ... ನಿಮ್ಮ ಮಗಳ ಜಾತಕದಲ್ಲೂ ಅಷ್ಟೇ... ವೈಧವ್ಯವೇ ಬರೆದಿದೆ. ಮರುಮದುವೆಯಾಗುವ ಯೋಗವೂ ಇದೆ... ನಾನು ಚೆನ್ನಾಗಿ ಪರಿಶೀಲಿಸಿ ನೋಡಿದೆ. ಆ ಅನುಮಾನ ಬಂದಿದ್ದುದರಿಂದಲೇ ನಾನು ಇವನಿಗೆ ಹೇಳಿ ಕಳಿಸಿದೆ... ಈಗ ನಿಜ ಏನೂಂತ ತಿಳೀತಲ್ಲ... ಈಗೇನು ನಿಮ್ಮ ಆಲೋಚನೆ?''

''ನಿಜ ಏನೂಂತ ತಿಳಿದರೆ ಅವಳು ಖಂಡಿತಾ ಬದುಕೋಲ್ಲ... ತನ್ನ ಗಂಡನಿಗೆ ವಿಪತ್ತು ಒದಗಿದರೆ, ತಾನು ಅವನಿಗಿಂತ ಮುಂಚೆ ಆತ್ಮಹತ್ಯೆ ಮಾಡಿಕೊಳ್ತೀನಿಂತ ಅವತ್ತೇ ಹೇಳಿದ್ದಳು... ಮುತ್ತೈದೆತನದಲ್ಲಿ ಅತೀ ವಿಶ್ವಾಸ...''

''ಅವಳಿಗೆ ನಿಜ ಏನೂಂತ ತಿಳಿಸಲೇಬೇಡಿ... ಅವಳಿಗೆ ತಿಳಿಸದಂತೆ, ಮರು ಮದುವೆಯನ್ನು ಮಾಡಿಬಿಡಿ. ಆಗ ನಿರಾತಂಕ...''

''ಏನು ಪಂಡಿತರೇ... ಇಂಥಾ ಸಲಹೆ ಕೊಡ್ತಿದೀರಲ್ಲ. ಇದು ಸರಿಯಲ್ಲ'' ನಂಜುಂಡಯ್ಯ ಅತ್ತಿಂದಿತ್ತ ತಲೆ ಆಡಿಸಿದರು.

''ಸರಿಯಾದದ್ದು, ತಪ್ಪಾಗಿರುವುದು ಎರಡೂ ಒಂದೇ ತರಹ ಆಗಿದೆ ಈಗ... ಆಗ ನಿಮ್ಮ ಕಣ್ಣಿಗೆ ಸರಿಯಾಗಿ ಕಂಡಿದ್ದು, ಆಗಲೇ ತಪ್ಪಾಗಿತ್ತು... ಈಗ ತಪ್ಪಾಗಿ ಕಾಣ್ತಿರುವುದು ಸರಿಹೋಗುತ್ತೆ. ನನಗೆ ಹಾಗೆನ್ನಿಸುತ್ತಿದೆ.''

''ನಿಮಗೆ ಹೇಗೆ ಅನ್ನಿಸುತ್ತಿದೆಯೋ ಅದನ್ನು ಸರಿಯಾಗಿ ಹೇಳಿ. ಏನು ಸಲಹೆ ಕೊಡ್ತೀರೋ ಅದನ್ನು ಸರಿಯಾಗಿ ತಿಳಿಸಿ'' ಅವಸರಿಸಿದರು.

''ನಿಮಗೆ ದುಡುಕು ಜಾಸ್ತಿ. ಹಿಂದೆ ಮುಂದೆ ಆಲೋಚಿಸದೇ ಮಾತನಾಡಿ ಬಿಡ್ತೀರಿ... ಈಗ ನಿಮ್ಮ ಮಗಳ ಬಾಳು ಹಸನಾಗುವ ಭಾಗ್ಯ ತಾನಾಗಿಯೇ ಒದಗಿದೆ... ಈ ವಾಸುವನ್ನೇ ನಿಮ್ಮ ಅಳಿಯನನ್ನಾಗಿ ಮಾಡಿಕೊಳ್ಳಿ. ಇದಕ್ಕಿಂತ ಉತ್ತಮ ಸಲಹೆ ನಾನೇನು ಕೊಡಬಲ್ಲೆ... ನೀನು ಏನು ಹೇಳ್ತೀಯಾ?'' ಎನ್ನುತ್ತಾ

ವಾಸು ಕಡೆ ತಿರುಗಿದರು.

''ಅವನು ಏನು ಹೇಳ್ತಾನೆ! ಇದುವರೆಗೂ ಕಲ್ಯಾಣಿ ಹೇಳಿದಹಾಗೇ ಕೇಳಿದಾನೆ... ಈಗ ಅವಳಿಲ್ಲದೇ ತಡವರಿಸ್ತಾ ಇದಾನೆ.'' ಹಂಗಿಸಿ ನುಡಿದರು.

''ಹಾಗೇನಿಲ್ಲ... ಕಲ್ಯಾಣಿಯ ಉಪಾಯದ ಪ್ರಕಾರ ನಡೆಯ ಬೇಕಾದ್ದರಿಂದ, ನಾನು ಅವಳು ಹೇಳಿದ ಹಾಗೇ ಕೇಳ್ತಿದ್ದೆ ನಿಜ. ಆದರೆ ಈಗ ನಿಜ ಏನೂಂತ ನಿಮ್ಮಿಬ್ಬರಿಗೂ ತಿಳಿಯಿತಲ್ಲ. ಇನ್ನು ನನಗೇನೂ ಭಯವಿಲ್ಲ.''

''ಹಾಗಾದರೆ, ನಮ್ಮನ್ನು ವಂಚಿಸಿದ ಎಂಬ ಕಾರಣದಿಂದ ನಿನ್ನನ್ನು ಜೈಲಿಗೆ ಕಳಿಸ್ತೀವಿ.'' ಚಿಕ್ಕಪ್ಪ ನಿಷ್ಠುರವಾಗಿ ನುಡಿದರು.

''ನಿಮ್ಮಿಷ್ಟ. ಆದರೆ, ನಾನು ನಿರಪರಾಧಿ... ನನ್ನ ಬಗ್ಗೆ ಸಾಕ್ಷಿ ಹೇಳಲು ಕಲ್ಯಾಣಿ ಇದಾಳೆ. ಪಂಡಿತರಿದಾರೆ...'' ಪಂಡಿತರು ಮಧ್ಯೆ ಬಾಯಿ ಹಾಕಿದರು.

''ಅವನು ನಿರಪರಾಧಿ ಅಂತ ತಿಳಿದೂ ಅವನನ್ನು ಜೈಲಿಗೆ ಹಾಕಿಸುವ ಇಚ್ಛೆ ನಿಮಗೇಕೆ? ಈ ಸಂದರ್ಭದಲ್ಲಿ ಕೃಷ್ಣ ಬದುಕಿಲ್ಲ ಎನ್ನುವ ವಿಚಾರ ಎಲ್ಲರಿಗೂ ತಿಳಿಯುತ್ತೆ... ಈ ವಿಷಯವನ್ನು ಶಾರದಮ್ಮನಿಗೆ ಹೇಗೆ ತಿಳಿಸ್ತೀರಿ? ಸಿಡುಕನೋ, ಕುಡುಕನೋ, ಕಳ್ಳನೋ, ಹುಚ್ಚನೋ... ಒಟ್ಟಿನಲ್ಲಿ ಮಗ ಕಣ್ಣೆದುರಿಗೆ ಇದ್ದರೆ ಸಾಕು ಎಂದು ಹಂಬಲಿಸುವ ಆ ತಾಯಿಗೆ ಏನು ಸಮಾಧಾನ ಹೇಳ್ತೀರಿ? ನಾರಾಯಣಮೂರ್ತಿಗೆ ಆ ಕ್ಷಣದಲ್ಲಿ ಹೃದಯವೇ ನಿಂತುಹೋಗಬಹುದು. ಇನ್ನೂ ನಿಮ್ಮ ಮಗಳು... ಒಂದಲ್ಲ ಒಂದು ದಿನ ಗಂಡ ಸರಿ ಹೋಗ್ತಾನೆ... ಅವನಾಗಿಯೇ ನನ್ನ ಬಳಿಗೆ ಬರ್ತಾನೆ ಎಂದು ನಿಷ್ಠೆಯಿಂದ ಕಾಯುತ್ತಿರುವ ಆ ಹುಡುಗಿಯ ಹೃದಯ ಈ ವಿಷಯ ತಿಳಿದೊಡನೆ ಒಡೆದುಹೋಗುಲ್ಲವೇ? ಅದನ್ನು ನೀವು ನೋಡಿ ಸಹಿಸಲಾಗುತ್ತಾ?... ಇದಕ್ಕೆಲ್ಲಾ ನಾನು ಬೆಲೆ ಕೊಡುಲ್ಲ ಅನ್ನೋ ಧೈರ್ಯ ನಿಮಗಿದ್ದರೆ ಈಗಲೇ ಹೋಗಿ... ನಿಮ್ಮವರಿಗೆಲ್ಲಾ ನಿಜ ಏನೂಂತ ತಿಳಿಸಿಬಿಡಿ.''

''ಏನು ಪಂಡಿತರೇ... ನೀವೂ ಹೀಗೆ ಹೆದರಿಸ್ತೀರಲ್ಲಾ... ಇವನು ಕಾನೂನಿನ ಪ್ರಕಾರ... ಅಪರಾಧಿ... ಅಲ್ವಾ?...''

''ಯಾವ ಕಾನೂನು! ಅದು ನಾವು ನಾವೇ ಮಾಡಿಕೊಂಡಿರುವ ಕಾನೂನು ಈ ದೇವಿಯೇ ಮಾಡಿರುವ ಕಾನೂನು ಬೇರೆ ಇದೆ. ಅದು ವಿಧಿನಿಯಾಮಕ. ಆ

ದೇವಿಯೇ ಈ ಹುಡುಗನನ್ನು ಕೃಷ್ಣನ ಜಾಗಕ್ಕೆ ಕಳಿಸಿದ್ದಾಳೆ. ಇಲ್ಲದಿದ್ದರೆ ಇಷ್ಟೆಲ್ಲಾ ಅನರ್ಥ ಯಾಕೆ ನಡೆಯುತ್ತಿತ್ತು...? ಕೃಷ್ಣ ಸಾಯುವ ದಿನವೇ, ಆ ನಿರ್ಜನ ಪ್ರದೇಶಕ್ಕೆ ಈ ವಾಸು ಹೇಗೆ ಬಂದ?... ಇದೆಲ್ಲಾ ದೈವೇಚ್ಛೆ... ನಾನು ಇದನ್ನು ನಂಬುವವನು... ಅಲ್ಲದೇ... ಈ ಹುಡುಗ ಕೃಷ್ಣನಿಗಿಂತ ಯೋಗ್ಯ, ಅವನಿಗಿಂತ ವಿದ್ಯಾವಂತ, ಉದ್ಯೋಗ ಮಾಡುವ ಆಸಕ್ತಿ ಇರುವವನು, ಇವನಿಗಿಂತ ಯೋಗ್ಯ ಅಳಿಯ ನಿಮಗೆಲ್ಲಿ ಸಿಗ್ತಾನೆ!''

''ಆದರೆ ಇಂಥಾ ವಿಷಯಗಳೆಲ್ಲ ರಹಸ್ಯವಾಗಿ ಹೇಗೆ ಉಳಿಯುತ್ತೆ. ಹೊರಗಿನವರಿಗೆ ಒಬ್ಬರಿಗೆ ತಿಳಿದರೆ ಸಾಕು... ಅಪರಾಧಿಗಳ ಸಾಲಿನಲ್ಲಿ ನಾವೂ ನಿಲ್ಲಬೇಕಾಗುತ್ತೆ... ಆಗ ಕಾನೂನು ವಿಧಿಸುವ ಶಿಕ್ಷೆಗೆ ನಾವು ತಲೆಬಾಗಬೇಡವೆ?''

''ಹಾಗೇನೂ ಆಗುಲ್ಲ. ನಮ್ಮ ನಮ್ಮಲ್ಲಿ ಒಗ್ಗಟ್ಟಿರಬೇಕು. ಆಗ ರಹಸ್ಯ ನಮ್ಮಲ್ಲೇ ಉಳಿಯುತ್ತೆ... ಇಷ್ಟರಮೇಲೆ ಅಂಥಾ ಸಮಯ ಬಂದಾಗ ನೋಡಿಕೊಳ್ಳೋಣ. ಅದರಿಂದ ತಪ್ಪಿಸಿಕೊಳ್ಳುವ ಉಪಾಯ ಹುಡುಕೋಣ... ನೀನೇನು ಹೇಳ್ತೀಯಪ್ಪಾ...?'' ಪಂಡಿತರು ವಾಸು ಕಡೆ ತಿರುಗಿ ಪ್ರಶ್ನಿಸಿದರು.

''ಬರೀ ನೀವು ನೀವೇ ಮಾತಾಡಿಕೊಳ್ತಿದೀರಿ. ನನ್ನದೂ ಕೆಲವು ಕಂಡೀಷನ್‌ಗಳಿವೆ...'' ವಾಸು ನಿಧಾನವಾಗಿ ನುಡಿದ.

''ನೋಡಿ... ನೋಡಿ.. ಇವನಿಗೆ ಕಂಡೀಷನ್‌ಗಳು ಬೇರೆ... ಈಗ ನಾನು ಒಪ್ಪಿಬಿಟ್ಟಿದೀನಾ?...'' ಚಿಕ್ಕಪ್ಪ ಎಗರಾಡಿದರು.

''ನೀವು ಒಪ್ಪೀರೋ ಬಿಡ್ತೀರೋ ಅದು ನಿಮಗೆ ಸೇರಿದ್ದು... ನಾನು ಪಂಡಿತರ ಸಲಹೆಗೆ ಒಪ್ಪೀನಿ ಅಂತ ಹೇಳಿದ್ದು ಅವರ ಮೇಲಿನ ಗೌರವದಿಂದ. ಯಾವ ಹೆದರಿಕೆಯಿಂದಲ್ಲ... ನನ್ನ ಯಾವ ಕಂಡೀಷನ್‌ಗೂ ನೀವು ಯಾವ ಬೆಲೆ ತೆರಬೇಕಾಗಿಲ್ಲ... ನಾನು ಆಗಲೇ ಹೇಳಿದಂತೆ, ನನ್ನ ತಂದೆ ತಾಯಿ ಬದುಕಿದಾರೆ. ಅವರು ಒಪ್ಪದೇ ನಾನು ಈ ಮದುವೆ ಆಗುವುದಿಲ್ಲ.''

''ಅವರ ಭಾಗಕ್ಕೆ ನೀನು ಸತ್ತು ಹೋಗಿದೀಯಲ್ಲಪ್ಪಾ... ಆಗ ಶಾರದಮ್ಮನಿಗೆ ನಿಜ ಏನೂಂತ ತಿಳಿಯುತ್ತಲ್ಲಾ''

''ನನ್ನ ತಾಯಿ ಒಳ್ಳೆಯವಳು. ಅವನಿಗೆ ಈ ವಿಷಯ ತಿಳಿದರೆ, ನಾನು ಹೇಳಿದಂತೆ ಕೇಳ್ತಾಳೆ.'' ಶಾರದಮ್ಮನ ಎದುರಿಗೆ ಬಾಯಿ ತಪ್ಪಿಯೂ ತನ್ನ ಮಗ

ಎಂದು ಹೇಳುವುದಿಲ್ಲ. ನನಗೆ ಆ ನಂಬಿಕೆ ಇದೆ''

''ಹೇಳಿದರೆ ತನಗೇ ನಷ್ಟ ಅಂತ ಅಷ್ಟೂ ತಿಳಿಯುವುದಿಲ್ಲವೇ?...''

''ನೋಡಿ... ನೀವು ಹೀಗೆಲ್ಲಾ ಮಾತನಾಡಬಾರದು... ನೀವು ಹಿರಿಯೋರು ಅಂತ ಮರ್ಯಾದೆ ಕೊಟ್ಟಿದೀನಿ... ನನ್ನದು ಇನ್ನು ಒಂದು ಕಂಡೀಷನ್ ಇದೆ. ಬೃಂದಾ ಒಪ್ಪದೇ ನಾನು ಅವಳನ್ನು ನನ್ನ ಪತ್ನಿ ಅಂತ ಒಪ್ಪಿಕೊಳ್ಳುವುದಿಲ್ಲ.''

''ಬೃಂದಳಿಗೆ ನಿಜ ತಿಳಿಸೋದು ಹೇಗೆ?''

''ಅದು ನಿಮಗೆ ಸೇರಿದ್ದು ಅವಳಿಗೆ ಹೇಗೆ ತಿಳಿಸ್ತೀರೋ ಹಾಗೇ ತಿಳಿಸಿ. ನಾನು ಅವಳನ್ನು ಮರುಮದುವೆಯಾಗ್ತೀನಿ. ಅವಳಿಗೆ ತಾಳಿ ಕಟ್ಟಿದ ನಂತರವೇ ಅವಳನ್ನು ನನ್ನ ಪತ್ನಿ ಅಂತ ಸ್ವೀಕರಿಸುವುದು ಇದಕ್ಕೆಲ್ಲಾ ನೀವುಗಳು ಒಪ್ಪುವುದಾದರೆ ನಾನು ಸಿದ್ಧ... ಇಲ್ಲದಿದ್ದರೆ ನೀವುಂಟು... ನಿಮ್ಮ ದಾರಿ ಉಂಟು...''

ನಂಜುಂಡಯ್ಯ ಪೆಚ್ಚಾದರು... ತಾವು ಇವನನ್ನು ಹೆದರಿಸಲು ನೋಡಿದರೆ, ಈಗ ಇವನೇ ತಮ್ಮನ್ನು ಹೆದರಿಸುತ್ತಿದಾನಲ್ಲ... ನಾನೇ ಜಾಣ ಅಂತ ಅಂದುಕೊಂಡು ಕಲ್ಯಾಣಿಯನ್ನು ಬಾಯಿಗೆ ಬಂದಂತೆ ಬೈದಿದ್ದಾಯಿತು... ಈಗ ನೋಡಿದರೆ, ಅವಳು ಮಾಡಿದ್ದು ಸರಿಯೋ ತಪ್ಪೋ ಅಂತ ಮತ್ತೆ ಮತ್ತೆ ಯೋಚಿಸಬೇಕಾಗಿದೆ... ಕಲ್ಯಾಣಿಗೆ ಇದರಿಂದ ಲಾಭವೂ ಇಲ್ಲ. ನಷ್ಟವೂ ಇಲ್ಲ. ಅವಳು ಬೃಂದಳ ಸುಖಕ್ಕಾಗಿಯೇ ಕೃಷ್ಣನ ಸಾವನ್ನು ಮುಚ್ಚಿಟ್ಟಿರಬಹುದು... ಆದರೂ. ಆದರೂ ಯೋಚಿಸಿ ನುಡಿದರು.

''ಇದು ಸುಲಭವಾಗಿ ಅರಗಿಸಿಕೊಳ್ಳುವ ವಿಷಯವಲ್ಲ. ನಾನು ಯೋಚಿಸಬೇಕು... ನನಗೆ ಸ್ವಲ್ಪ ಸಮಯ ಕೊಡಿ'' ಎಂದು ಕೇಳಿಕೊಂಡರು.

ಪಂಡಿತರು ನಕ್ಕರು. ''ಹೌದು, ಆತುರದಲ್ಲಿ ನಿರ್ಣಯಿಸುವ ವಿಷಯವಲ್ಲ... ಆದರೆ ದುಡುಕಬೇಡಿ... ಆತುರದಲ್ಲಿ ಈ ವಿಷಯವನ್ನು ಬಹಿರಂಗಪಡಿಸಬೇಡಿ. ಆಮೇಲೆ ಪಶ್ಚಾತ್ತಾಪ ಪಡಬೇಕಾದೀತು...''

''ನನಗೇನೂ ಅಷ್ಟೂ ಗೊತ್ತಾಗುಲ್ವೇ...'' ಎಂದು ಮನದಲ್ಲೇ ಅಂದು ಕೊಂಡರು.

"ನಾನು ಸ್ವಲ್ಪ ಕಲ್ಯಾಣಿಯ ಹತ್ತಿರ ಮಾತನಾಡಬೇಕು" ಎಂದರು ಪಂಡಿತರು. "ಈಗ ಹೇಳಿದರೂ, ಅವಳು ತಕ್ಷಣ ಬರುತ್ತಾಳೆ. ಅದಕ್ಕೇನು" ಎಂದ ವಾಸು. ಅವನು ಅವರ ಸೈಕಲನ್ನೇ ಏರಿ, ತೋಟದ ಮನೆಗೆ ಹೋಗಿ, ಅವಳನ್ನು ಮತ್ತೆ ಕರೆತಂದ. ಕಲ್ಯಾಣಿ ಅಲ್ಲಿಯೇ ಇದ್ದ ನಂಜುಂಡಯ್ಯನನ್ನು ಕಂಡಳು. ಅವರ ತಲೆಬಾಗಿತ್ತು. ವಾಸು ನಡೆದ ವಿಷಯಗಳನ್ನು ಸಂಕ್ಷಿಪ್ತವಾಗಿ ಹೇಳಿದ್ದ.

ಪಂಡಿತರು ಅವಳಿಗೆ ಕೂತೊಳ್ಳುವಂತೆ ಹೇಳಿ, ಪ್ರಶ್ನಿಸಿದರು:

"ವಾಸು, ತನ್ನ ವಿಷಯಗಳನ್ನೆಲ್ಲಾ ಹೇಳಿದ. ನೀನು ಮಾಡಿದ್ದು ಸರಿ ಅಲ್ಲ... ಇದು ಅಪರಾಧ ಅಲ್ವಾ?"

"ಹೌದು. ಅಪರಾಧವೇ... ಕಾನೂನಿನ ಪ್ರಕಾರ ನಾನು ಮಾಡಿದ್ದು ಸರಿ ಅಲ್ಲ... ಆದರೆ ಕೃಷ್ಣ ನನಗೆ ಮಾಡಿದ ಅನ್ಯಾಯಗಳನ್ನೆಲ್ಲ ಸರಿ ಅಂತೀರಾ?... ನನ್ನ ಹಿಂದೆ ಆಡಿಕೊಂಡು ನಗುತ್ತಿದ್ದರು..." ಎಂದು ತನಗಾದ ಅವಮಾನ, ಅನ್ಯಾಯಗಳನ್ನೆಲ್ಲಾ ಅವಳು ಚಾಚೂ ತಪ್ಪದೇ ಹೇಳಿಕೊಂಡಾಗ ನಂಜುಂಡಯ್ಯನವರ ಕಣ್ಣಲ್ಲಿ ನೀರಾಡಿತ್ತು.

"ಅವನು ಅಷ್ಟೆ ನೀಚ ಅಂತ ಗೊತ್ತಿದ್ದರೂ, ಪೋಲಿಸ್ ಕಂಪ್ಲೇಂಟ್ ಏಕೆ ಕೊಡಲಿಲ್ಲ? ನೀನು ಹಾಗೇ ಬಿಡಬಾರದಾಗಿತ್ತು."

"ಸತ್ತ ನನ್ನ ತಂದೆ ತಾಯಿಗಳ, ಬದುಕಿರುವ ಚಿಕ್ಕಪ್ಪ ಚಿಕ್ಕಮ್ಮ, ಹಾಗೂ ಗಂಡನೇ ಪರದೈವ ಎಂದು ನಂಬಿದ್ದ ಬೃಂದಳಿಗೆ ಅನ್ಯಾಯವಾಗದಿರಲಿ ಅಂತ ನಾನು ಎಲ್ಲವನ್ನು ಸಹಿಸಿಕೊಂಡೆ, ಇದು ತಪ್ಪಾ? ಹೆಸರಿಗೆ ತಕ್ಕಂತೆ ಇರುವ ನನ್ನ ತಂಗಿ ಕೋಮಲಳಿಗೂ ನನಗೆ ಒದಗಿದ ಗತಿ ಬರದಿರಲಿ ಅಂತ ಎಲ್ಲವನ್ನು ಸಹಿಸಿಕೊಂಡೆ... ಅದು ತಪ್ಪಾ?"

"ಕಾನೂನು ಕೃಷ್ಣನಿಗೆ ಹೆಚ್ಚು ಅಂತಂದ್ರೆ, ಜೀವಾವಧಿ ಶಿಕ್ಷೆಯನ್ನು ನೀಡುತ್ತಿತ್ತೇನೋ... ಆದರೆ ಸಮಾಜದ ಕಣ್ಣಿಗೆ ಕಳಂಕಿನಿಯಾಗುತ್ತಿದ್ದೆ. ಚಿಕ್ಕಮ್ಮನ ಎದುರಿಗೆ ಅಪರಾಧಿಯಾಗುತ್ತಿದ್ದೆ... ಬೃಂದಳ ನಿಟ್ಟುಸಿರು ನನಗೆ ಶಾಪವಾಗುತ್ತಿತ್ತು... ನಾನು ಯಾವ ಅಪರಾಧವನ್ನು ಮಾಡದಿದ್ದರೂ, ಜೀವಮಾನವೆಲ್ಲಾ ಶಿಕ್ಷೆ ಅನುಭವಿಸುತ್ತಿದ್ದೆ. ಈಗ ಒಂದೇ ಒಂದು ನಿರಾಳ, ಕೃಷ್ಣ

ಬದುಕಿಲ್ಲ. ಆದರೆ ಅವನ ಸಾವಿಗೆ ನಾನು ಕಾರಣ ಅಲ್ಲ. ಆ ದಿನ ಅವನು ಬದುಕಿದ್ದಿದ್ದರೆ ಮೊದಲು ಈ ಚಿಕ್ಕಪ್ಪನ್ನ ಖಂಡಿತಾ ಮುಗಿಸಿರುತ್ತಿದ್ದ. ವಿಪರೀತ ಕುಡಿದು ಸತ್ತ. ನನಗೆ ತಿಳಿದಂತೆ, ಅವನ ಸಾವಿನಿಂದ ಯಾರಿಗೂ ನಷ್ಟವಿಲ್ಲ... ಆದರೆ, ನಿಜ ವಿಷಯ ತಿಳಿದರೆ, ಚಿಕ್ಕಮ್ಮ ಜೀವಮಾನವೆಲ್ಲಾ ಕೊರಗಬಹುದು... ಬೃಂದಾ ಆಜೀವ ಪರ್ಯಂತ ವಿಧವೆಯಾಗಿ ಬಾಳಲು ಇಷ್ಟಪಡದೇ ಆತ್ಮಹತ್ಯೆ ಮಾಡಿಕೊಳ್ಳಬಹುದು... ಇದನ್ನು ತಪ್ಪಿಸಲು ನಾನು ಈ ನಾಟಕ ಆಡಬೇಕಾಯ್ತು. ಇದರಿಂದ ನನಗಂತೂ ಏನೂ ಲಾಭ ಇಲ್ಲ. ವಾಸು ನಿಜಕ್ಕೂ ಒಳ್ಳೆ ಹುಡುಗ. ಅವನು ನನ್ನ ಈ ಉಪಾಯಕ್ಕೆ ಖಂಡಿತಾ ಒಪ್ಪಲಿಲ್ಲ. ಈಗಲೂ ಅವನು ಅವರ ತಂದೆ ತಾಯಿಯ ಬಳಿಗೆ ಹೋಗಿ, ತನ್ನ ಪಾಡಿಗೆ ತಾನು ಜೀವನ ನಡೆಸಬಲ್ಲ. ಆದರೆ ಆ ದಿನ ಇವನು ನನ್ನ ಕಣ್ಣಿಗೆ ಕೃಷ್ಣನಂತೆಯೇ ಕಂಡುಬಂದಾಗ, ಇದು ನನಗೆ ಹೊಳೆದ ಉಪಾಯ ಅವನನ್ನು ಒಪ್ಪಿಸಲು, ನಾನು ಕಲಿತ ಬುದ್ಧಿಯನ್ನೆಲ್ಲಾ ಉಪಯೋಗಿಸಬೇಕಾಯ್ತು. ಈಗ ನಿಜಾಂಶ ಏನೂಂತ ಗೊತ್ತಾಯ್ತಲ್ಲ. ಇದನ್ನು ಬಹಿರಂಗಗೊಳಿಸುವುದು ಅಥವಾ ಬಿಡುವುದು ನಿಮ್ಮ ಇಷ್ಟ. ನಾನು ಸ್ವಲ್ಪ ದಿನಗಳ ನಂತರ ಈ ಚಿಕ್ಕಪ್ಪನಿಗೆ ಎಲ್ಲಾ ತಿಳಿಸೋಣ ಅಂತಿದ್ದೆ. ಅವರಿಗೆ ವಾಸು ಮೇಲೆ ಅಲ್ಪಸ್ವಲ್ಪ ಅನುಮಾನ ಇತ್ತು ಅಂತ ಗ್ರಹಿಸಿದ್ದೆ. ಆದರೆ ಅವರ ಅನುಮಾನ ನನ್ನ ಅವನ ಸಂಬಂಧಕ್ಕೆ ಕುರಿತದ್ದು ಅಂತ ನನಗೆ ತಿಳಿದಿರಲಿಲ್ಲ. ವಾಸು ನಿಜಕ್ಕೂ ತುಂಬಾ ಯೋಗ್ಯ... ಕೃಷ್ಣನಿಗಿಂತ ವಯಸ್ಸಿನಲ್ಲಿ ದೊಡ್ಡವನು. ಆದರೆ, ಅವನು ಒಂದು ದಿನವೂ ಬೃಂದಳ ಕಡೆ ಕತ್ತೆತ್ತಿ ನೋಡಿಲ್ಲ. ಅನುಚಿತವಾಗಿ ವರ್ತಿಸಿಲ್ಲ. ನನ್ನ ಬಗ್ಗೆ ನಿಜವಾದ ಸೋದರಿಯ ಭಾವನೆಯೇ ಇದೆ. ಇದೆಲ್ಲ ಉತ್ಪ್ರೇಕ್ಷೆ ಅಲ್ಲ. ಬೇಕಾದರೆ ಬೃಂದನ್ನೇ ಕೇಳಬಹುದು ಎಂದು ನಂಜುಂಡಯ್ಯನ ಕಡೆ ನೋಡಿದಳು. ಅವರು ಮಾತನಾಡಲಿಲ್ಲ. ಪಂಡಿತರು ಪ್ರಶ್ನಿಸಿದರು: ''ವಾಸುವಿನ ಮಾತು ಕತೆ ನಡೆ ನುಡಿಗಳಿಂದ ಅವನು ಯೋಗ್ಯ ಎನ್ನುವುದರಲ್ಲಿ ಸಂಶಯವಿಲ್ಲ. ಆದರೆ ಬೃಂದಳನ್ನು ಮದುವೆಯಾಗದೇ ಅವಳನ್ನು ಪತ್ನಿ ಅಂತ ಒಪ್ಪಿಕೊಳ್ಳಲ್ಲ ಅಂತಾನಲ್ಲ... ಅವನ ತಂದೆ ತಾಯಿಗೆ ಈ ವಿಷಯ ತಿಳಿಸಿ, ಅವರ ಒಪ್ಪಿಗೆ ಪಡೆಯಬೇಕೂಂತಾನಲ್ಲ. ಈಗೇನು ಹೇಳ್ತೀಯ?

''ಅದರಲ್ಲಿ ತಪ್ಪೇನಿದೆ? ಶಾಸ್ತ್ರೋಕ್ತವಾಗಿ ಬೃಂದಳನ್ನು ಮದುವೆ ಆಗ್ತೀನಿ ಅನ್ನೋದರಲ್ಲಿ ತಪ್ಪೇನೂ ಇಲ್ಲ. ತಂದೆ ತಾಯಿಗಳನ್ನು ಕಂಡು, ಅವರಿಗೆ

ತಾನು ಬದುಕಿದ್ದೇನೆಂದು ತಿಳಿಸಿ, ಅವರ ಸಂತೋಷದಲ್ಲಿ ಪಾಲ್ಗೊಳ್ಳುವುದು ಸಹಜತಾನೇ...?''

''ಏನು ಹೇಳ್ತೀರಿ? ನಂಜುಂಡಯ್ಯನವರೇ...?'' ಅವರು ಕಲ್ಯಾಣಿಯ ಕಡೆ ತಿರುಗಿದರು.

''ಏನಮ್ಮಾ... ಏನು ಹೇಳ್ತೀಯ ಕಲ್ಯಾಣೀ...?'' ಒಂದು ಗಳಿಗೆ ಅವರನ್ನೇ ದೀರ್ಘವಾಗಿ ನೋಡಿ ನುಡಿದಳು.

''ಇದುವರೆಗೂ, ನಾನು ಹೇಳಿದ್ದೂ, ಮಾಡಿದ್ದೂ ಎಲ್ಲಾ ಮುಗಿಯಿತು. ಇನ್ನು ನಿಮ್ಮ ನಿಮ್ಮ ಇಷ್ಟ. ವಾಸೂನ ಅಳಿಯ ಅಂತ ಒಪ್ಪಿಕೊಳ್ಳುವುದು ಬಿಡುವುದು ನಿಮಗೆ ಸೇರಿದ್ದು... ನಿಮಗೆ ಇಷ್ಟವಿಲ್ಲದಿದ್ದರೆ, ಅವನ ಪಾಡಿಗೆ ಅವನನ್ನು ಹೋಗಲು ಬಿಟ್ಟುಬಿಡಿ.... ಎಲ್ಲಿಯಾದರೂ ಸುಖವಾಗಿರಲಿ... ಅಷ್ಟೇ ನಾನು ಕೇಳಿಕೊಳ್ಳುವುದು... ''ಕಲ್ಯಾಣಿ ಇಷ್ಟು ಮಾತುಗಳನ್ನಾಡಲೂ ಬಹಳ ಕಷ್ಟ ಪಡಬೇಕಾಯ್ತು.

''ಕಲ್ಯಾಣೀ, ನನ್ನನ್ನ ಕ್ಷಮಿಸಿಬಿಡಮ್ಮಾ... ನಿನ್ನನ್ನ ಏನೇನೋಅಂದು ಬಿಟ್ಟೆ. ನಿನ್ನಂಥಾ ಮಕ್ಕಳು ಎಲ್ಲರಿಗೂ ಹುಟ್ಟಬೇಕು...''

ಕಲ್ಯಾಣಿ ವಿಚಿತ್ರವಾಗಿ ನಕ್ಕಳು... ''ನನ್ನಂಥೋಳು ಹುಟ್ಟದಿರಲಿ ಅಂತ ಹಾರೈಸಿ ಚಿಕ್ಕಪ್ಪಾ... ಯಾಕೆ ಕೃಷ್ಣನಂತಹ ದುಷ್ಟನ ಕೈಗೆ ಸಿಕ್ಕು ಮತ್ತೆ ಮತ್ತೆ ನರಳಬೇಕಾ ಹೆಣ್ಣು ಮಕ್ಕಳು...? ಕೃಷ್ಣನಂಥವರು ಹುಟ್ಟದಿರಲಿ ಅಂತ ಅನ್ನಿ''

''ಹಾಗಲ್ಲಮ್ಮಾ... ನಾನು ಆ ಅರ್ಥದಲ್ಲಿ ಹೇಳಲಿಲ್ಲ...''

''ಅವರವರ ಅರ್ಥದಲ್ಲಿ ಅವರವರು ಮಾತಾಡ್ತಾರೆ. ಹೋಗಲಿ ಬಿಡಮ್ಮಾ... ನಿನ್ನ ಹಿಂಸೆಗಳನ್ನು ಬದಿಗಿಟ್ಟು ಬೃಂದಳ ಒಳಿತನ್ನೇ ಚಿಂತಿಸಿದೆಯಲ್ಲಾ ಅದು ನಿನ್ನ ದೊಡ್ಡ ಗುಣ...'' ಪಂಡಿತರು ನುಡಿದರು.

ಕಲ್ಯಾಣಿ ಮತ್ತೆ ಮಾತು ಬೆಳೆಸಲು ಇಷ್ಟಪಡಲಿಲ್ಲ. ಎಲ್ಲರೂ ಪಂಡಿತರಿಗೆ ನಮಸ್ಕರಿಸಿ ಎದ್ದರು. ಪಂಡಿತರು ವಾಸು ಕಡೆ ತಿರುಗಿ ನುಡಿದರು: ''ನಾನು ನಿನ್ನ ಹತ್ತಿರ ಏಕಾಂತದಲ್ಲಿ ಸ್ವಲ್ಪ ಮಾತನಾಡಬೇಕಾಗಿತ್ತು...'' ಯಾಕೆ ಎನ್ನುವಂತೆ ಎಲ್ಲರೂ ಅವರ ಕಡೆ ನೋಡಿದರು. ಅವರಿಬ್ಬರೂ ಹೊರಟುಹೋದರು.

‘‘ನಾನು ಜಾತಕ ನೋಡಿ ಭವಿಷ್ಯ ಹೇಳುವವನು, ಶಾಸ್ತ್ರಗಳನ್ನು ತಕ್ಕ ಮಟ್ಟಿಗೆ ತಿಳಿದವನು, ಸಂಪ್ರದಾಯ ಆಚಾರ ವಿಚಾರಗಳಲ್ಲಿ ನಂಬಿಕೆ ಉಳ್ಳವನು, ಆದರೂ ನಾನು ನಿನಗೆ ಒಂದು ಉತ್ತಮ ಸಲಹೆಯನ್ನು ನೀಡ್ತೀನಿ...’’

‘‘ಕೃಷ್ಣ ದುಷ್ಟ ಅಂತ ತಿಳಿದಿದ್ದರೂ, ಯಾರೂ ಬಾಯಿಬಿಟ್ಟು ಅದನ್ನು ಹೇಳುತ್ತಿರಲಿಲ್ಲ. ಕಲ್ಯಾಣಿ ಅನುಭವಿಸಿರುವ ಕಷ್ಟಗಳನ್ನು ಕೇಳಿದರೆ, ಕಣ್ಣಲ್ಲಿ ನೀರು ಬರುತ್ತದೆ... ನೀನು ಕೃಷ್ಣನ ಸ್ಥಾನಕ್ಕೆ ಬರಲು ನಿರ್ಧರಿಸಿದರೆ ಒಳ್ಳೆಯದೇ... ಆದರೆ ಒಂದು ಮಾತು.. ನೀನು ಮಾತ್ರ ಆ ಕೃಷ್ಣನಾಗಬಾರದು... ಹೆಂಡತಿಗೆ ತಕ್ಕ ಪತಿಯಾಗಿ, ಆ ತಾಯಿಗೆ ತಕ್ಕ ಮಗನಾಗಿರಬೇಕು... ಶಾರದಮ್ಮ ದುಡಿಕಿಬಿಟ್ಟಳು... ಆದರೆ, ಮಮತೆ ಎನ್ನೋದು ಬಹಳ ಕೆಟ್ಟದು... ಮಗನ ಮದುವೆ, ಮೊಮ್ಮಕ್ಕಳನ್ನು ನೋಡುವ ಆಸೆ, ಎಲ್ಲಾ ಸಹಜವೇ... ಶಾಸ್ತ್ರದಲ್ಲಿ ಸುಳ್ಳು ಹೇಳಬಾರದು ಅಂತಿದೆ... ಆದರೆ, ಅದೇ ಶಾಸ್ತ್ರ , ಅಪ್ರಿಯವಾದ ಸತ್ಯವನ್ನು ಹೇಳುವ ಬದಲು ಸುಳ್ಳು ಹೇಳಬಹುದು, ಅದ್ರೂ ಅದರಿಂದ ಒಳ್ಳೆಯದಾಗುವುದಾದರೆ ಅಂತ ಹೇಳುತ್ತೆ... ಆ ಕಾರಣದಿಂದ ಕೃಷ್ಣನಿಗೆ ಮದುವೆ ಮಾಡಬೇಡಿ ಅಂತ ತಾನು ಹೇಳಲಿಲ್ಲ... ಅವನ ಜಾತಕದಲ್ಲಿ ಮದುವೆ ಯೋಗವಿತ್ತು. ಹಾಗೆ ಅವನಿಗೆ ಗಂಡಾಂತರವಿದೆ, ಅದರಿಂದ ಅವನು ಪಾರಾಗುವುದಿಲ್ಲ ಎನ್ನುವುದೂ ತಿಳಿದಿತ್ತು... ಇನ್ನು ಬೃಂದಳ ಯೋಗದಲ್ಲಿ ವಿಧವೆಯಾಗುವ ಯೋಗ, ಹಾಗೂ ಎರಡನೇ ಮದುವೆಯಾಗುವ ಯೋಗ ಸಹ ಬರೆದಿದೆ. ಇದನ್ನು ನಾನು ಬಲ್ಲೆ. ಇದೆಲ್ಲಾ ದೈವನಿಯಾಮಕ. ನಾನಾಗಲೀ, ನೀನಾಗಲೀ ಮಾಡಿದ್ದಲ್ಲ. ಅದೇ, ಧರ್ಮಕರ್ಮ ಸಂಯೋಗದಿಂದ ಎಲ್ಲಿದ್ದವನೋ, ಈ ಸ್ಥಳಕ್ಕೆ ಅಪರಿಚಿತನಾದ ನೀನು ಬರಲು ಅನುವಾಯಿತು... ಹಿರಿಯವನಾಗಿ ನಾನು ಹೇಳ್ತೀನಿ... ನಿನಗೆ ಯಾವ ಅಳುಕೂ ಬೇಡ. ಬೃಂದಾ, ತುಳಸಿಯಂತೆ ಪವಿತ್ರಳು... ಅವಳ ಕೈ ಹಿಡಿದು ಅವಳ ಬಾಳು ಹಸನಾಗುವಂತೆ ಮಾಡಿದರೆ ಅದರಿಂದ ನಿನಗೂ ಒಳ್ಳೆಯದಾಗುತ್ತದೆ. ತಗೋ ಇದು... ಕೃಷ್ಣನ ಹಾಗೂ ಬೃಂದಳ ಜಾತಕದ ಪ್ರತಿಗಳು. ಇದನ್ನು ಹರಿದು ಚೂರು ಮಾಡಿ ಎಸೆದು ಬಿಡು... ನಿಮ್ಮಿಬ್ಬರ ಬಾಳಿನ ಭವಿಷ್ಯದ ಜಾತಕವನ್ನು ಹೊಸದಾಗಿ ನೀನು ಬರಿ... ನಿಮ್ಮಿಬ್ಬರಿಗೂ ಪುನರ್ಜನ್ಮವಾಗಿದೆ’’ ಎನ್ನುತ್ತಾ ಅವನ ಕೈಗೆ ಆ ಕಾಗದದ ಹಾಳೆಗಳನ್ನು ಕೊಟ್ಟರು.

ವಾಸು, ಅನುಮಾನಿಸುತ್ತಾ ಅವರನ್ನೇ ನೋಡಿದ. ಅವಳು ಮುಗುಳ್ನಗುತ್ತಿದ್ದರು.

''ಯಾಕೆ? ನನ್ನ ಮಾತಿನ ಮೇಲೆ ನಂಬಿಕೆ ಬರ್ತಾ ಇಲ್ವಾ?... ನೀನು ವಿದ್ಯಾವಂತ, ತಿಳುವಳಿಕಸ್ಥ... ಯೋಚಿಸು... ಪರವಾಗಿಲ್ಲ.''

''ಹಾಗಲ್ಲ... ನನಗೂ ದಿಕ್ಕು ತೋಚದ ಹಾಗಾಗಿದೆ. ಆದರೂ ನಾನು, ಒಂದು ಸಾರಿ, ನಮ್ಮ ತಂದೆ ತಾಯಿಯರನ್ನು ಕಂಡು ಮಾತನಾಡಿಸಿ, ಅವರ ಅಭಿಪ್ರಾಯ ತಿಳಿದುಕೊಂಡು ಮುಂದುವರೆಯುವ ಆಸೆ...''

''ಅದೂ ಸರಿಯೇ... ಆದರೂ, ಈ ಬರಹಗಳಿಂದ ಯಾರಿಗೂ ಉಪಯೋಗವಿಲ್ಲ. ನಾನೇ ಹರಿದು ಹಾಕಿಬಿಡುತ್ತೇನೆ.'' ಎನ್ನುತ್ತಾ ಜಾತಕದ ಪ್ರತಿಗಳನ್ನು ಚೂರು ಚೂರಾಗಿ ಹರಿದು, ಅಲ್ಲಿದ್ದ ಕಸದ ಬುಟ್ಟಿ ಎಸೆದರು. ವಾಸುಗೆ ಏನೋ ಒಂದು ರೀತಿಯ ಅಧೀರತೆ. ಸುಮ್ಮನೆ ಅವರಿಗೆ ಕೈ ಮುಗಿದು, ಹೊರಗೆ ಹೋದ. ''ಪಂಡಿತರು ಏನಂದರು'' ಅಂತ ಅವಳೂ ಕೇಳಲಿಲ್ಲ. ಇವನೂ ಹೇಳಲಿಲ್ಲ. ಇಬ್ಬರೂ ಒಟ್ಟಿಗೇ ಹೆಜ್ಜೆ ಹಾಕಿದರು. ಅವರಿಗೇ ತಿಳಿಯದಂತೆ, ಇಬ್ಬರೂ ತೋಟದ ಮನೆಗೆ ಬಂದಿದ್ದರು.

ಬಾಗಿಲಿನಲ್ಲಿ ಕಾದುನಿಂತಿದ್ದ ನಾಲ್ಕಾರು ಜನ ಯುವಕರನ್ನು ಕಂಡು ಕಲ್ಯಾಣಿಯ ಎದೆ ನಡುಗಿತು. ಅವರೆಲ್ಲರೂ ಕಲ್ಯಾಣಿಯನ್ನು ಕಂಡು ಹಾಗೇ ನಿಂತರು. ವಾಸು ಅವರ ಕಡೆ ನೋಡಿದ, ಆದರೆ ಅವರ್ಯಾರೆಂದು ತಿಳಿಯಲಿಲ್ಲ. ಅವನ ಪಾಡಿಗೆ ಅವನು ಮನೆಯ ಒಳಗೆ ಹೋಗುವುದರಲ್ಲಿದ್ದ... ಅವರಲ್ಲಿ ಒಬ್ಬ ವಾಸುವಿನ ಕೈ ಹಿಡಿದ... ''ಏನೋ ಕೃಷ್ಣ... ನಾವ್ಯಾರೂ ಅಂತ ಗೊತ್ತಾಗ್ಲಿಲ್ವಾ?...'' ವಾಸು ಕೈ ಕೊಡವಿಕೊಂಡ.

''ಇಲ್ಲಾ, ನೀವ್ಯಾರೋ ನನಗೆ ಗೊತ್ತಾಗ್ಲಿಲ್ಲ...'' ಅಂತಂದ. ಅವನಿಗೆ ಏನೋ ಭಯ ಪ್ರಾರಂಭವಾಗಿತ್ತು. ಕಲ್ಯಾಣಿ ತಕ್ಷಣ ಎಚ್ಚೆತ್ತುಕೊಂಡಳು.

''ಓ.. ನೀವೆಲ್ಲಾ ಕೃಷ್ಣನ ಸ್ನೇಹಿತರು ಅಂತ ಕಾಣಿಸುತ್ತೆ... ಬನ್ನಿ ಒಳಕ್ಕೆ...'' ಎನ್ನುತ್ತಾ ಬಾಗಿಲನ್ನು ತೆಗೆದಳು. ಅವರುಗಳು ಅನುಮಾನಿಸುತ್ತಾ ಒಳಗೆ ಬಂದರು... ಕುರುಚಲು ಗಡ್ಡ, ಮೀಸೆಯ ವಾಸುವನ್ನೇ ನೋಡುತ್ತಾ

''ಕೃಷ್ಣ ಯಾಕೆ ಹೀಗಾಗಿದಾನೆ?... ತುಂಬಾ ಬದಲಾಗಿದಾನೆ ಅಂತನ್ನಿಸುತ್ತೆ

ಯಾಕೆ? ನಮ್ಮನ್ನೆಲ್ಲಾ ಗುರುತಿಸದಿರುವಂಥಾದ್ದು ಏನಾಯ್ತು!'' ಒಬ್ಬ ಪ್ರಶ್ನಿಸಿದ.

''ಅವನಿಗೆ ಏನಾಯ್ತು ಅಂತ ನಿಮಗೇ ತಿಳಿದಿರಬೇಕು. ಜೈಲಿನಿಂದ ವಾಪಸ್ಸು ಬಂದಾಗ್ನಿಂದ ಹೀಗೇ ಇದಾನೆ. ಅವನಿಗೆ ಹಿಂದಿನ ವಿಷಯಗಳೆಲ್ಲಾ ಮರೆತುಹೋಗಿದೆ...''

''ಸುಳ್ಳು... ಏನೋ ನಾಟಕ ಆಡ್ತಾ ಇದಾನೇಂತ ಅನ್ನಿಸುತ್ತೆ... ಜೈಲಿನಿಂದ ಬಿಡುಗಡೆಯಾದಾಗ ಸರಿಯಾಗೇ ಇದ್ನಲ್ಲ... ಮತ್ತೆ ಇಲ್ಲಿಗೆ ಹೇಗೆ ಬಂದ?''

''ಅವನಾಗಿಯೇ ಇಲ್ಲಿಗೆ ಬರಲಿಲ್ಲ. ಇವನ ಮಾವ ಅವನನ್ನು ಕರೆದುಕೊಂಡು ಬಂದರು... ತಲೆಗೆ ಪೆಟ್ಟು ಬಿದ್ದಿತ್ತು.. ಮೈ ಕೈಯೆಲ್ಲಾ ಗಾಯ... ಮುಖದ ತುಂಬಾ ಕಲೆಗಳು... ನೋಡಿ ಹೇಗಾಗಿದಾನೆ?'' ಎನ್ನುತ್ತಾ ಕಲ್ಯಾಣಿ ವಾಸುವಿನ ತಲೆ ಎತ್ತಿದಳು. ವಾಸು ಸುಮ್ಮನೇ ಅವರುಗಳ ಕಡೆ ನೋಡಿದ. ಅವರುಗಳು ಹೆದರಿದರು. ಅವರಲ್ಲಿ ಒಬ್ಬ ಧೈರ್ಯವಹಿಸಿ ಕೇಳಿದ:

''ಏನಾಗಿದೆ ಇವನಿಗೆ? ಡಾಕ್ಟರಿಗೆ ತೋರಿಸಲಿಲ್ವಾ!''

''ಎಲ್ಲಾ ಆಗಿದೆ, ಡಾಕ್ಟರು ಹಳೇ ವಿಷಯಗಳನ್ನೆಲ್ಲಾ ಕೆದಕಿ ಅವನ ಮನಸ್ಸನ್ನು ಕೆಡಿಸಬಾರದು ಅಂತ ಹೇಳಿದಾರೆ. ನೀವುಗಳು ಇದಕ್ಕೆಲ್ಲ ಒಪ್ಪಿ ಅವನ ಸ್ನೇಹಿತರಾಗಿ ಇರುವುದಾದರೆ,... ಇರಬಹುದು. ಇಲ್ಲದಿದ್ದರೆ ಅವನ ಪಾಡಿಗೆ ಅವನನ್ನು ಬಿಟ್ಟುಬಿಡಿ. ಅವನು ಹೊಸ ಮನುಷ್ಯನಾಗಿರಲು ಬಿಟ್ಟುಬಿಡಿ'' ಅವರುಗಳು ಒಬ್ಬರ ಮುಖ ಒಬ್ಬರು ನೋಡಿಕೊಂಡರು. ಆ ಕ್ಷಣದಲ್ಲಿ ಏನೂ ಹೇಳಲು ತೋಚದೇ ಸುಮ್ಮನೇ ಕೆಲಗಳಿಗೆ ನಿಂತಿದ್ದು, ವಾಸುವಿನ ಬೆನ್ನು ತಟ್ಟಿ ಹೊರಟರು... ಸ್ವಲ್ಪ ದೂರ ಹೋದಮೇಲೆ, ಒಬ್ಬ ಮತ್ತೆ ಹಿಂತಿರುಗಿ ಬಂದು ಕಲ್ಯಾಣಿಯ ಹತ್ತಿರ ಬಂದು ನುಡಿದ. ''ನಮಗೆಲ್ಲಾ ಹಣವಿಲ್ಲದೇ ಬಹಳ ಕಷ್ಟ ಆಗಿದೆ. ಕೃಷ್ಣನ್ನ ಹಣ ಕೇಳೋಣ ಅಂತ ಬಂದಿದ್ವಿ''

''ಅವನಿಗೆ ಸಾಲ ಕೊಟ್ಟಿದ್ರಾ...?''

''ಸಾಲ ಅಂತಲ್ಲ... ನಾವು ಹಣ ಕಾಸನ್ನು ಹಂಚಿಕೊಂಡು ನಮ್ಮ ನಮ್ಮ ಆಸೆಗಳನ್ನು ಪೂರೈಸಿಕೊಳ್ಳುತ್ತಿದ್ದೆವು. ನಿಮಗೂ ಗೊತ್ತಿರಬಹುದು...''

''ಹುಂ. ಗೊತ್ತು. ಎಂಥಾ ಆಸೆ? ಸಿಗರೇಟು, ಕುಡಿತ... ಹೋಟೆಲ್ಲು

ಸಿನಿಮಾ ಇತ್ಯಾದಿ... ಆದರೆ ಅದನ್ನೆಲ್ಲಾ ಎಂಥಾ ಹಣದಿಂದ...? ಕಳ್ಳತನ ಮಾಡಿ, ಸುಳ್ಳುತನ ಹೇಳಿ... ಜೈಲಿನಿಂದ ಬಂದಮೇಲೂ ನಿಮಗೆಲ್ಲಾ ಬುದ್ಧಿ ಬರಲಿಲ್ವಾ! ಇನ್ನಾದರೂ ನೀವುಗಳು ಸ್ವಂತ ಸಂಪಾದನೆ ಮಾಡಬಾರದಾ! ನೀವುಗಳೇನು ಚಿಕ್ಕವರಲ್ಲ...'' ಹೆದರಿದ್ದರೂ ಕಲ್ಯಾಣಿ ಸಲಹೆ ನೀಡಿದ್ದಳು. ''ನಾವುಗಳೂ ಹಾಗೇ ಅಂದುಕೊಂಡೆವು. ಆದರೆ ನಮಗೆ ಕೆಲಸ ಯಾರು ಕೊಡ್ತಾರೆ! ಜೈಲಿನಿಂದ ಹೊರಬಂದ ಖೈದಿಗಳು ಅಂತ ಬೈದು ಅಟ್ಟುತ್ತಾರೆ. ನಮಗೆ ಹೆದರುತ್ತಾರೆ... ನಮ್ಮನ್ನೇ ಹೆದರಿಸ್ತಾರೆ...''

''ಇದು ನೀವಾಗಿಯೇ ನೀವು ನಿಮಗೆ ವಿಧಿಸಿಕೊಂಡ ಶಿಕ್ಷೆ. ತಾನೇ ನಾನು ಕೆಲಸ ಕೊಡ್ತಿಸ್ತೀನಿ... ಆದರೆ ಕಷ್ಟಪಟ್ಟು ಕೆಲಸ ಮಾಡಬೇಕು... ತಿಳೀತಾ!'' ಕಲ್ಯಾಣಿ ನಕ್ಕಳು... ಅವನು ಹೊರಟುಹೋದ. ಕಲ್ಯಾಣಿ ವಾಸು ಕಡೆ ನೋಡಿದಳು. ಅವನೂ ನಕ್ಕ.

''ಮೈ ಮುರಿದು ಕೆಲಸ ಮಾಡಲು ಇಷ್ಟವಿಲ್ಲದ ಸೋಂಭೇರಿಗಳು ಬಿಟ್ಟಿ ಕೊಳ್ಳೆ ಹೊಡೆದ ಹಣದಿಂದ ಮಜಾ ಮಾಡುವ ಮೂರ್ಖರು...''

''ಈಗ ನಾನೂ ಹಾಗೇ ತಾನೇ ಮಾಡ್ತಿದೀನಿ...''

''ನಿನ್ನ ಮಾತು ಬೇರೆ... ಹೋಗಲಿ ಬಿಡು. ಅವರುಗಳು ಮತ್ತೆ ನಿನ್ನನ್ನು ಹಣ ಕೇಳಲು ಖಂಡಿತಾ ಬಂದೇ ಬರುತ್ತಾರೆ. ಅಷ್ಟು ಹೊತ್ತಿಗೆ ನೀನೂ ತೋಟದ ಕೆಲಸಗಳನ್ನು ವ್ಯವಹಾರಗಳನ್ನು ವಹಿಸಿಕೊಂಡಿದ್ದರೆ ನೀನು ಅವರನ್ನು ಒಪ್ಪಿಸಬಹುದು.''

''ಒಪ್ಪಿಸಲು ಆಗದಿದ್ದರೇ...?''

''ಅವರ ಪಾಡು ಅಂತ ಅವರಿಗೇ ಬಿಟ್ಟುಬಿಡೋಣ... ಒಪ್ಪಿದರೆ, ಅವರನ್ನೂ ಈ ತೋಟದ ಕೆಲವು ಕೆಲಸಗಳನ್ನು ವಹಿಸಿಕೊಡೋಣ. ಆಗ ಅವರಿಗೂ ಒಂದು ಉದ್ಯೋಗ ಸಿಕ್ಕಂತಾಗುತ್ತದೆ. ಅವರುಗಳು ಹೇಳುವುದೂ ನಿಜ... ಕಳ್ಳಕಾಕರಿಗೆ ಯಾರಾದರೂ ಕೆಲಸ ಕೊಡಲು ಹೆದರುತ್ತಾರೆ... ನಾವು ಒಂದು ಪ್ರಯತ್ನ ಮಾಡಿ ನೋಡೋಣ... ಕೃಷ್ಣ ಬದುಕಿದ್ದಿದ್ದರೆ, ಈ ಕೆಲಸ ಕಷ್ಟವಾಗುತ್ತಿತ್ತು...''

''ಅವರುಗಳಿಗೆ, ನನ್ನ ಬಗ್ಗೆ ಅನುಮಾನ ಬಂದರೇ... ಅವರು ನನ್ನನ್ನು

ಸುಮ್ಮನೇ ಬಿಡ್ತಾರಾ?''

''ಆದಷ್ಟೂ ಅವರುಗಳಿಂದ ದೂರವೇ ಇದ್ದರಾಯಿತು. ನಿನ್ನಿಂದ ಲಾಭ ಇಲ್ಲ ಅಂತ ತಿಳಿದರೆ, ಅವರುಗಳು ಯಾಕೆ ಬರ್ತಾರೆ?''

''ತೋಟದಲ್ಲಿ ನೋಡಿಕೊಳ್ಳೋಣ. ನಿಜವಾಗಿಯೂ ತಿದ್ದಿಕೊಂಡು, ಕೆಲಸ ಮಾಡುವುದಾದರೆ ಅವರಿಗೆ ಒಂದು ಅವಕಾಶ ಕೊಡೋಣ.... ಅಷ್ಟೆ...''

ವಾಸು ನಿಟ್ಟುಸಿರು ಬಿಟ್ಟ. ''ಅಂತೂ, ದಿನ ದಿನ ಏನೋ ಒಂದು ಆತಂಕ ಛೆ! ವಿಧಿ ಎಂಥಾ ಅಸಹಾಯಕ ಸ್ಥಿತಿಗೆ ತಂದು ಬಿಟ್ಟಿತಲ್ಲ... ನಿಜ ಹೇಳುವಂತಿಲ್ಲ. ಈ ಅಜ್ಞಾತವಾಸದಲ್ಲಿ ಜೀವಮಾನವೆಲ್ಲಾ ಕಳೆಯಬೇಕೇ?''

''ಏನು ವಾಸು? ಇಷ್ಟಕ್ಕೆಲ್ಲಾ ತಲೆ ಯಾಕೆ ಕೆಡಿಸಿಕೊಳ್ಳಬೇಕು?''

''ಇದು ಇಷ್ಟೇ ಅಂತ ಹೇಗೆ ಹೇಳ್ತೀಯಾ ಕಲ್ಯಾಣಿ? ಇನ್ನೂ ಏನೇನನ್ನು ಎದುರಿಸಬೇಕೋ...?''

''ಏನಿಲ್ಲ. ಬೃಂದನ್ನ ನಿನ್ನ ಪತ್ನಿ ಅಂತ ಒಪ್ಪಿಕೊಂಡು, ಅವಳ ಜೊತೆ ಸುಖವಾಗಿರು... ಯಾರೂ ಯಾವ ಪ್ರಶ್ನೆಯನ್ನು ಎತ್ತುವಂತಿಲ್ಲ.''

''ಅದು ಅಷ್ಟು ಸುಲಭವಲ್ಲ. ನಾನು ಮೊದಲು ನನ್ನ ತಂದೆ ತಾಯಿಯನ್ನು ಕಂಡು ಮಾತನಾಡಲೇಬೇಕು. ಅವರುಗಳು ಒಪ್ಪಿದರೆ ಅವರನ್ನು ಇಲ್ಲಿಗೇ ಕರೆದುಕೊಂಡು ಬರ್ತೀನಿ. ನನಗೆ ಆಗಲೇ ನಿಶ್ಚಿಂತೆ.''

ಕಲ್ಯಾಣಿಗೆ ಇವನ ಈ ನಿರ್ಧಾರ ಸರಿ ಎನಿಸಲಿಲ್ಲ. ಆದರೆ ಬೇಡ ಎಂದು ಹೇಳಲಾರಳು. ಎಷ್ಟಾಗಲೀ, ತಂದೆ, ತಾಯಿ, ಮಗನ ಬಾಂಧವ್ಯ ಅದನ್ನು ಅಳಿಸಿ ಹಾಕುವಂತಿಲ್ಲ ಎಂದುಕೊಂಡು,

''ಆದಷ್ಟು ಬೇಗ ನಿಮ್ಮೂರಿಗೆ ಹೋಗಿ ಅವರುಗಳನ್ನು ಕರೆದುಕೊಂಡು ಬಾ. ಬೃಂದಾ ತಾನೇ ಎಷ್ಟು ದಿನಾಂತ ಒಂಟಿ ಜೀವನ ನಡೆಸಬೇಕು?'' ವಾಸು ಕಣ್ಮುಂದೆ ಬೃಂದಳ ರೂಪ ತೇಲಿ ಬಂತು. ಅವಳನ್ನು ಅವನು ಸರಿಯಾಗಿ ನೋಡಿರಲೇ ಇಲ್ಲ. ಆಗೊಮ್ಮೆ ಈಗೊಮ್ಮೆ ಸುಮ್ಮನೇ ಎಂಬಂತೆ ನೋಡಿದ. ನಿಷ್ಕಲ್ಮಶವಾದ ಮುಗ್ಧ ಮುಖವಿರಬಹುದು... ಹಾಗೇ ಮನಸ್ಸು ಸಹ ನಿಷ್ಕಳಂಕವಾಗಿರಬಹುದು... ಅಂತಹವಳಿಗೆ ತಾನು ಮೋಸ

ಮಾಡಿದಂತಾಗುವುದಿಲ್ಲವೇ... ಅಂತನ್ನಿಸಿದಾಗ ಅದೇ ಮಾತನ್ನು ಕಲ್ಯಾಣಿಯೊಡನೆ ಹೇಳಿದ. ಅವಳು ತಕ್ಷಣವೇ ನುಡಿದಳು:

''ಹಾಗೆ ನಿನಗೆ ಅನ್ನಿಸುವುದರಿಂದಲೇ ನೀನು ಸಭ್ಯ ಅನ್ನುವುದು ಅರ್ಥವಾಗುತ್ತದೆ... ನಾವೆಲ್ಲಾ ಮಹಾಭಾರತದ ಕಥೆಯನ್ನು ಓದಿ ತಿಳಿದಿದ್ದೇವೆ ಅಲ್ಲವೇ? ಅದರಲ್ಲಿ ಎಂತೆಂತಹ ಪ್ರಸಂಗಗಳು ಬರುತ್ತವೆ? ಅದರಲ್ಲೂ ಕೌರವ ಪಾಂಡವರ ಯುದ್ಧದ ಪ್ರಸಂಗವನ್ನು ನೆನಪಿಗೆ ತಂದುಕೋ... ಕೌರವರ ಪಕ್ಷದಲ್ಲಿ ಇದ್ದವರಲ್ಲಿ ಎಷ್ಟೋ ಮಂದಿ ಪಾಂಡವರ ಹಿತೈಷಿಗಳೇ... ಆದರೆ ಅವರುಗಳು ಯಾವುದೋ ಒಂದು ಋಣಕ್ಕೆ ಒಳಗಾಗಿ ಪಾಂಡವರ ಮೇಲೆ ಯುದ್ಧ ಮಾಡಬೇಕಾದ ಸ್ಥಿತಿ ಬಂತು... ಹಾಗೇ ಪಾಂಡವರಿಗೆ... ಗುರು ಹಿರಿಯರ ಮೇಲೆ, ಬಾಣ ಬಿಡಬೇಕಾದ ಸ್ಥಿತಿ ಬಂದಾಗ, ತಮಗೆ ರಾಜ್ಯ ಕೋಶ ಏನೂ ಬೇಡ ಅನ್ನುವ ಆಲೋಚನೆ ಬಂದು, ಶಸ್ತ್ರ ಸನ್ಯಾಸ ಮಾಡುತ್ತೇವೆಂದಾಗ, ಕೃಷ್ಣ ಉಪದೇಶ ಮಾಡಿ, ಅವರಿಗೆ, ಧರ್ಮ-ಕರ್ಮ; ಲಾಭ-ನಷ್ಟ; ಸುಖ-ದುಃಖ ಇತ್ಯಾದಿಗಳ ಭೇದವನ್ನು ತಿಳಿಸಿ, ಸೃಷ್ಟಿ, ಸ್ಥಿತಿ, ಲಯಗಳ ಮರ್ಮವನ್ನು ತಿಳಿಸಿ, ಅವರು ಯುದ್ಧ ಮಾಡಿ ಜಯಗಳಿಸಿ, ರಾಜ್ಯಭಾರ ಮಾಡುವುದರಲ್ಲಿ ತಪ್ಪು ಏನೂ ಇಲ್ಲವೆಂದು ಬೋಧಿಸಿದ. ಆ ಗೀತೋಪದೇಶದ ತತ್ವ ಮಾನವ ಜನಾಂಗದ ಪ್ರತಿಯೊಬ್ಬರಿಗೂ ಅನ್ವಯಿಸುತ್ತದೆ.

ಯುದ್ಧ ನಡೆಯುತ್ತಿದ್ದಾಗಲೂ, ಆ ಕೃಷ್ಣ ಪರಮಾತ್ಮ ತನ್ನ ಶಕ್ತಿಯನ್ನು, ಯುಕ್ತಿಯನ್ನಾಗಿ ಪರಿವರ್ತಿಸಿ, ಸತ್ಯಸಂಧನಾದ ಧರ್ಮರಾಯ ಸಹ ಸುಳ್ಳು ಹೇಳುವಂತೆ ಮಾಡಿದ. ಕರ್ಣನಿಗೆ ಮೋಸ ಮಾಡಿದ... ಆದರೆ ಇದನ್ನೆಲ್ಲಾ ಯಾರೂ ಖಂಡಿಸಲಿಲ್ಲ. ಯಾಕೆ? ಅನ್ಯಾಯದ ವಿರುದ್ಧ ಹೋರಾಡಿ, ನ್ಯಾಯಕ್ಕೆ ಜಯ ತಂದುಕೊಡಲು ಈ ಉಪಾಯಗಳ ಒತ್ತಾಳಿಕೆಯನ್ನು ಉಪಯೋಗಿಸಿದ್ದರಿಂದ...''

ವಾಸು ನಕ್ಕ. ''ನನಗೆ ಗೀತೋಪದೇಶ ಮಾಡ್ತಾ ಇದೀಯಲ್ಲ ಕಲ್ಯಾಣೀ... ಕೃಷ್ಣ ನಿನಗೆ ಅಷ್ಟು ಅನ್ಯಾಯ ಮಾಡಿದ... ನೀನೇಕೆ ಅದನ್ನೆಲ್ಲ ಸಹಿಸಿಕೊಂಡೆ?''

''ಕೋಮಲಳಿಗಾಗಿ, ಚಿಕ್ಕಪ್ಪ, ಚಿಕ್ಕಮ್ಮನಿಗಾಗಿ, ನನ್ನ ತಂದೆ ತಾಯಿಯರ

ಮರ್ಯಾದೆಯನ್ನುಳಿಸುವ ಸಲುವಾಗಿ, ಕಡೆಗೆ ಬೃಂದಳ ಸುಖಿ ಜೀವನಕ್ಕಾಗಿ ಎಲ್ಲಾ ಸಹಿಸಿಕೊಂಡೆ.''

''ಇದರಿಂದ ನಿನಗೆ ಸಿಕ್ಕಿದ್ದೇನು!''

''ನನಗೇ ಎಲ್ಲಾ ಸಿಗಲಿ ಎನ್ನುವ ಸ್ವಾರ್ಥನನಗಿಲ್ಲ ವಾಸು... ಆದರೆ ನಿಜ ಹೇಳ್ತೀನಿ... ಈಗ ನನಗೆ ಏನೋ ನೆಮ್ಮದಿ. ದಿನ ದಿನ ಕಾಡುವ ಕೃಷ್ಣನ ಭಯವಿಲ್ಲ... ಎಲ್ಲಕ್ಕಿಂತ ಮುಖ್ಯವಾಗಿ ನನಗೆ ನಿಜವಾದ ಒಬ್ಬ ಸೋದರ ಸಿಕ್ಕಿದಾನೆ. ನನಗೆ ಇನ್ಯಾವ ಚಿಂತೆಯೂ ಇಲ್ಲ.''

ವಾಸುಗೆ ತನ್ನ ಅಕ್ಕನ ನೆನಪಾಯಿತು ಭಾವನಿಗೆ ಹೆದರಿ, ಸ್ವಾರ್ಥಿಯಾದ ಅಕ್ಕ ತಮ್ಮನನ್ನು ಗುರುತಿಸಲೂ ಹೆದರಿದಳು... ಆದರೆ ಇವಳು ತಾನು ಉರಿದು, ಲೋಕಕ್ಕೆ ಬೆಳಕು ಕೊಡುವ ದೀಪದಂತೆ... ಎಂದುಕೊಂಡ.

ವಾಸು ತನ್ನೂರಿಗೆ ಒಬ್ಬನೇ ಹೋಗಿ ಬರುವುದು ಸರಿಯಲ್ಲವೆಂದು ಕೊಂಡು ಕಲ್ಯಾಣಿ ನಂಜುಂಡಯ್ಯನನ್ನು ಅವನ ಜೊತೆ ಹೋಗಿ ಬರಲು ಕೇಳಿ ಕೊಂಡಳು. ಅವರು ಸಂತೋಷದಿಂದ ಒಪ್ಪಿಕೊಂಡರು.

ಸುಮಾರು ಆರು ಗಂಟೆಗಳ ಪ್ರಯಾಣ ಮಾಡಿ ಅವರ ಊರನ್ನು ತಲುಪಿದಾಗ, ಚೆನ್ನಾಗಿ ಕತ್ತಲಾಗಿತ್ತು ಬಸ್‌ಸ್ಟ್ಯಾಂಡ್‌ಗೆ ಸಮೀಪದಲ್ಲೇ ಇದ್ದ ಮನೆಗೆ ಕಾಲು ನಡಿಗೆಯಲ್ಲೇ ನಡೆದರು. ದಾರಿಯಲ್ಲಿ ಪರಿಚಯದವರು ಯಾರೂ ಸಿಗಲಿಲ್ಲ. ವಾಸುವನ್ನು ಯಾರೂ ಗುರುತಿಸಿದಂತೆ ಅನ್ನಿಸಲಿಲ್ಲ.

ಮನೆಯ ಮುಂಬಾಗಿಲಿಗೆ ಹಾಕಿದ್ದ ದೊಡ್ಡ ಬೀಗ ಅವರನ್ನು ಸ್ವಾಗತಿಸಿತು. ಅವನು ಪೆಚ್ಚಾದ. ಎಲ್ಲಿಗೆ ಹೋಗಿರಬಹುದು? ಯಾರನ್ನು ಕೇಳುವುದು? ಅಂತ ಯೋಚಿಸುತ್ತಿದ್ದ. ನಂಜುಂಡಯ್ಯ ನುಡಿದರು:

''ನೀನು ಇಲ್ಲೇ ನಿಂತಿರು... ನಾನು ಪಕ್ಕದ ಮನೇಲಿ ಹೋಗಿ ವಿಚಾರಿಸ್ತೀನಿ.'' ಎಂದು ನುಡಿದು ಪಕ್ಕದ ಮನೆಯ ಬಾಗಿಲು ಬಡಿದರು. ಬಾಗಿಲು ತೆಗೆದ ವ್ಯಕ್ತಿ ಯಾರೆಂದು ವಿಚಾರಿಸಿ, ಹೇಳಿದ ಮಾತುಗಳು ವಾಸುವನ್ನು ಕುಸಿದು ಬೀಳುವಂತೆ ಮಾಡಿತ್ತು.

''ಕೆಲವು ತಿಂಗಳ ಹಿಂದೆ, ಅವರ ಮಗನ ಕೊಲೆ ಆಯ್ತಲ್ಲಾ... ಪೇಪರ್‌ನಲ್ಲೇ

ಬಂದಿತ್ತು... ನೋಡಿ ಆ ಮೇಲೆ... ಅವನ ಲೈಫ್ ಇನ್ಸೂರೆನ್ಸ್ ಹಣ ಬಂತಂತೆ... ಮನೆಯವರೆಲ್ಲಾ ಹರಿದ್ವಾರಕ್ಕೆ ಹೋಗಿ ಅವನ ಶ್ರಾದ್ಧ ಮಾಡಿ ಮುಗಿಸಿ, ವಾಪಸ್ಸು ಬರುವಾಗ ರಸ್ತೆ ಅಪಘಾತದಲ್ಲಿ ಎಲ್ಲರೂ ತೀರಿಹೋದ್ರಂತೆ. ಈಗ ಈ ಮನೇಲಿ ಯಾರೂ ಇಲ್ಲ. ಪಾಳು ಬಿದ್ದಿದೆ. ಆಟೋರಿಕ್ಷಾಕ್ಕೆ ಸಾಲತಗೊಂಡಿದ್ನಂತೆ ಅವರ ಮಗ... ಈಗ ಈ ಮನೆ ಬ್ಯಾಂಕ್‌ನ ಅಧೀನದಲ್ಲಿದೆ. ಅಲ್ಲಿಗೆ ಎಲ್ಲಾ ಮುಗಿಯಿತು... ಎಂದು ಅವರ ಕತೆ ಹೇಳಿದಂತೆ ಹೇಳಿ ಮುಗಿಸಿದಾಗ, ನಂಜುಂಡಯ್ಯ ನಿಧಾನವಾಗಿ ಕಾಲೆಳೆಯುತ್ತಾ ವಾಸು ಬಳಿಗೆ ಬಂದು, ಅವನ ಭುಜದ ಮೇಲೆ ಕೈ ಇಟ್ಟು ಸಾಂತ್ವನ ಹೇಳಿದರು:

''ಈಗೇನು ಮಾಡೋಣ?'' ಅವರು ಕೇಳಿದಾಗ ನುಡಿದ:

''ಇನ್ನು ಇಲ್ಲಿ ಏನುಳಿದಿದೆ? ನನ್ನ ಪಾಡಿಗೆ ನನ್ನನ್ನು ಬಿಟ್ಟು ಬಿಡಿ.... ನಾನು ಎಲ್ಲಿಯಾದರೂ ಹೊರಟುಹೋಗ್ತೀನಿ...''

''ಸಮಾಧಾನ ಮಾಡ್ಕೋ... ನಿನ್ನ ದುಃಖ ನನಗೆ ಅರ್ಥವಾಗುತ್ತೆ. ನಿನ್ನವರು ನಾವೆಲ್ಲಾ ಇದೀವಿ... ನಿನಗಾಗಿ ಕಾಯುತ್ತಿರುವ ಬೃಂದಾ ಇದಾಳೆ. ಕಲ್ಯಾಣಿ ಇದಾಳೆ... ನಿಮ್ಮಮ್ಮ ಇದಾಳೆ... ಅವರಿಗೆಲ್ಲ ನಾನು ಏನು ಉತ್ತರ ಹೇಳಲಿ?''

''ಅಲ್ಲ... ನನಗೇಕೆ ಹೀಗಾಯ್ತು ಅಂತ?''

''ನೀನು ಹೀಗೆ ಅಂತೀಯ... ನಾನು, ನಮ್ಮ ಬೃಂದಂಗೆ ಯಾಕೆ ಹೀಗಾಯ್ತು ಅಂತ ಅಂದುಕೊಳ್ತೀನಿ.... ಹೀಗೇ ಜೀವನದ ಸಾರ ಇರಬಹುದು... ಭಗವಂತ ನಿನಗಾಗಿಯೇ ಬೃಂದಳನ್ನು ಸೃಷ್ಟಿಸಿರಬಹುದು... ಅವಳಿಗಾಗಿಯೇ ನಿನ್ನನ್ನು ಕಳಿಸಿರಬಹುದು... ಅವಳು ಪವಿತ್ರವಾಗಿದಾಳೆ... ಕೃಷ್ಣ ಅವಳ ಕಡೆ ಕಣ್ಣೆತ್ತಿ ಸಹ ನೋಡಿಲ್ಲ ಅನ್ನೋದನ್ನ ನಾನು ಬಲ್ಲೆ...''

ವಾಸು ಮಾತನಾಡದೇ ಮುಂದೆ ಮುಂದೆ ಹೆಜ್ಜೆ ಹಾಕಿದ. ನಂಜುಂಡಯ್ಯ ಅವನ್ನನುಸರಿಸಿದರು. ಬೆಳಗಾಗುವುದರಲ್ಲಿ ಇಬ್ಬರೂ ತಮ್ಮ ಮನೆಗೆ ವಾಪಸ್ಸು ಬಂದಿದ್ದರು. ವರಿಬ್ಬರೂ ಊರಿಗೆ ವಾಪಸ್ಸು ಬಂದ ವಿಷಯ ತಿಳಿದ ಕಲ್ಯಾಣಿ, ತಾನೇ ಅವನನ್ನು ಕಂಡು ಮಾತನಾಡಲೆಂದು ಬಂದಳು. ವಾಸು ರೂಮಿನಿಂದ ಹೊರಗೆ ಬಂದಿರಲಿಲ್ಲ. ಬೃಂದಾ ಬೇಜಾರು ಮಾಡಿಕೊಂಡು ನುಡಿದಳು.

‘‘ದಿನ ದಿನಕ್ಕೂ ಅವರ ವರ್ತನೆ ಹೇಗೆ ಹೇಗೋ ಆಗ್ತಿದೆ. ನಂಗಂತೂ ಅರ್ಥವಾಗ್ತಿಲ್ಲ. ಏನು ಮಾಡಬೇಕೂಂತ ತಿಳೀತಿಲ್ಲ. ಪಂಡಿತರು ಪೂಜಿಸಿ ಕೊಟ್ಟ ಯಂತ್ರವನ್ನೂ ಅವರು ಮಲಗುವ ಹಾಸಿಗೆಯ ದಿಂಬಿನಡಿ ಇಟ್ಟಿದ್ದೇನೆ. ಅದನ್ನು ಅವರು ಕೈಗೆ ಕಟ್ಟಿಕೊಳ್ಳಬೇಕು ಅಂತ ಪಂಡಿತರು ಹೇಳಿದ್ದರು... ಆದರೆ ನಾನೇನು ಮಾಡಲಿ? ಅವರು ನನ್ನ ಕಡೆ ತಿರುಗಿ ಸಹ ನೋಡವಲ್ಲವಲ್ಲ.’’

‘‘ಎಲ್ಲಾ ಸರಿ ಹೋಗುತ್ತೆ ಬೃಂದಾ: ನೀನು ಚಿಂತಿಸಬೇಡ. ಅವನ ಹತ್ತಿರ ನಾನು ಮಾತನಾಡ್ತೀನಿ... ಅವನ ಮನಃಸ್ಥಿತಿ ಏನೇನೂ ಸರಿಯಿಲ್ಲ ಅಂತ ನಮಗೆಲ್ಲಾ ಗೊತ್ತೇ ಇದೆ... ಸ್ವಲ್ಪ ತಾಳ್ಮೆ ತಂದುಕೋ.... ಭೀಮನ ಬದಲು, ನೀನೇ ಅವನ ಕಡೆ ಗಮನ ಕೊಡು... ಅವನ ಹತ್ತಿರ ನೀನೇ ಮಾತನಾಡು... ಹೆದರಬೇಡ.’’

‘‘ಈ ತಾಯಿತವನ್ನು ನೀವೇ ಕಟ್ಟಿಬಿಡಿ.’’ ನನಗೆ ಧೈರ್ಯ ಬರುತ್ತೆ.’’

ಕಲ್ಯಾಣಿ ನಕ್ಕಳು. ನಿನ್ನ ಕೈಲಿ ತಾಯಿತವನ್ನು ಕಟ್ಟಿಸಿಕೊಳ್ಳುವಂತೆ ನಾನು ಅವನಿಗೆ ಹೇಳ್ತೀನಿ. ಆದರೆ ಎಷ್ಟು ದಿನ ಹೀಗೇ ನಡೆಯುತ್ತೆ? ಅವನೇನೋ ಆರೋಗ್ಯ ಸರಿ ಇಲ್ಲದವನು... ನೀನೂ ಹೀಗೇ ದೂರ ದೂರ ಇದ್ದರೆ... ನಿಮ್ಮ ಸಂಸಾರ ಸರಿದಾರಿಗೆ ಬರುವುದು ಹೇಗೆ?’’

‘‘ನನಗೆ ಭಯ ಆಗುತ್ತೆ ಕಲ್ಯಾಣೀ...’’

‘‘ಅವನು ದಿಢೀರನೇ ನಮ್ಮ ಮನೆಗೆ ಬಂದಾಗ ನನಗೂ ಹಾಗೇ ಭಯ ಆಗಿತ್ತು... ಅವನ ಮುಖ ನೋಡೋಕೇ ಹೆದರಿಕೆಯಾಗಿತ್ತು... ಆದರೆ ಕ್ರಮೇಣ... ಅವನು ಹಿಂದಿನ ಕೃಷ್ಣ ಅಲ್ಲ ಅನ್ನುತ್ತು ನನಗೆ ಧೈರ್ಯ ಬಂತು. ಹಾಗೇ ನಿನಗೂ, ಕ್ರಮೇಣ ಎಲ್ಲಾ ಸರಿಹೋಗುತ್ತೆ...’’

‘‘ಇಲ್ಲಿ... ಅವರೆಂದೂ ನನಗೆ ಹತ್ತಿರವಾಗಿರಲೇ ಇಲ್ಲ. ಅದಕ್ಕೇ ನನಗೆ ಭಯ...’’

‘‘ಹೀಗೇ ಭಯ ಪಡ್ತಾ ಇದ್ದರೆ ಪ್ರಯೋಜನವಿಲ್ಲ ಬೃಂದಾ... ನೀನು ಈಗ ಧೈರ್ಯ ತಂದುಕೊಳ್ಳದಿದ್ದರೆ ಅವನು ಸದಾ ಕಾಲಕ್ಕೂ ನಿನ್ನಿಂದ ದೂರವಾಗಿ ಬಿಡ್ತಾನೆ. ಅದು ನಿನಗೆ ಇಷ್ಟಾನಾ?’’

ಇಲ್ಲವೆನ್ನುವಂತೆ ಬೃಂದಾ ತಲೆಯಾಡಿಸಿದಳು.. ‘‘ಸರಿ ಹಾಗಾದ್ರೆ ಈಗಲೇ

ಅವನೆದುರಿಗೆ ನಿಂತ್ಕೋ... ಅವನು ಮಾತನಾಡಿಸುವುದಿಲ್ಲ... ನೀನೇ ಮಾತನಾಡಿಸು... ಅಷ್ಟೇ...''

''ನೀವೂ ಬನ್ನಿ ಕಲ್ಯಾಣೀ...'' ಅವಳು ಕೈ ಹಿಡಿದಳು. ಕಲ್ಯಾಣಿ ಮುಗುಳ್ನಗುತ್ತಾ ಎದ್ದಳು. ಮಲಗಿದ್ದ ವಾಸು ಅವರಿಬ್ಬರನ್ನು ಕಂಡೊಡನೆ ಎದ್ದು ನಿಂತ. ''ಪಂಡಿತರು, ನಿನ್ನ ಆರೋಗ್ಯ ಸುಧಾರಿಸಲಿ ಅಂತ ಒಂದು ತಾಯಿ ಕೊಟ್ಟಿದ್ರಂತೆ. ಅದನ್ನು ನೀನು ಕಟ್ಟಿಸ್ಕೋಬೇಕು.'' ಕಲ್ಯಾಣಿ ಆಜ್ಞೆ ಮಾಡಿದಂತೆ ನುಡಿದಾಗ, ಅವನು ತಲೆ ಆಡಿಸಿದಾಗ, ಬೃಂದ ಅವನ ಹಾಸಿಗೆಯ ದಿಂಬಿನಡಿ ಇದ್ದ ತಾಯಿತವನ್ನು ಕೈಗೆತ್ತಿಕೊಂಡಳು.

''ತಡೀ...'' ಎನ್ನುವಂತೆ ಕೈ ಅಡ್ಡ ಹಿಡಿದು, ನುಡಿದ. ''ನನ್ನದು ಕೆಲವು ಷರತ್ತುಗಳಿವೆ.'' ಅದಕ್ಕೆ ''ಹೂಂ ಎನ್ನು'' ಎನ್ನುವಂತೆ ಸಂಜ್ಞೆ ಮಾಡಿದಳು. ಬೃಂದಾ ತಲೆ ಆಡಿಸಿ, ಕೆಳದನಿಯಲ್ಲಿ ''ಹೂಂ...'' ಎಂದಳು. ವಾಸು ಒಂದು ಗಳಿಗೆ ತಡೆದು ನುಡಿದ:

''ನಾನು ಕೃಷ್ಣ ಅಲ್ಲ... ವಾಸು ಅಂತ... ನಾನು ಇಲ್ಲಿಗೆ ಹೇಗೆ ಬಂದೆನೋ, ಯಾಕೆ ಬಂದೆನೋ ಅದನ್ನೆಲ್ಲ ಕಲ್ಯಾಣಿ ಹೇಳ್ತಾಳೆ. ಕೃಷ್ಣ ಹೇಗಿದ್ರು... ಈಗ ಎಲ್ಲಿದಾರೆ ನನಗೆ ಒಂದೂ ತಿಳೀದು... ಇವರೆಲ್ಲ... ನಿಮ್ಮನ್ನು ನನ್ನ ಪತ್ನಿ ಅಂತ ಹೇಳ್ತಾರೆ. ಆದರೆ ನನಗೆ ಸುಳ್ಳು ಅಂತನ್ನಿಸುತ್ತೆ... ಅದರಿಂದ ನಾವಿಬ್ಬರೂ ಮದುವೆಯಾಗೋಣ... ಆಗ ನಾವು ಪತಿ ಪತ್ನಿ ತರಹ ಇರಬಹುದು...'' ಬೃಂದಾ ಅವನು ಏನು ಹೇಳ್ತಿದಾನೆ... ತನಗೊಂದೂ ಅರ್ಥವಾಗ್ತಿಲ್ಲ ಎನ್ನುವಂತೆ ಕಲ್ಯಾಣಿಯ ಕಡೆ ನೋಡಿದಳು. ಅವಳ ಮುಖ ಕಪ್ಪಿಟ್ಟು ಹೋಗಿತ್ತು... ಬೃಂದಳಿಗೆ ದುಃಖದಿಂದ ಕಣ್ಣು ತುಂಬಿ ಬಂದಿತ್ತು. ಅಲ್ಲಿ ನಿಲ್ಲಲಾಗದೇ, ರೂಮಿನಿಂದ ಓಡಿ ಹೋಗಬೇಕೆನ್ನಿಸಿತ್ತು. ಕಲ್ಯಾಣಿ ಅವಳ ಕೈಹಿಡಿದು ಸಂಜ್ಞೆ ಮಾಡಿದಳು... ಬೃಂದಾ ತನ್ನ ಕೈಯಲ್ಲಿದ್ದ ತಾಯಿತವನ್ನು ವಾಸುವಿನ ಬಲ ತೋಳಿಗೆ ಕಟ್ಟಲೆಂದು ಮುಂದೆ ಬಂದಳು. ವಾಸು ಹಿಂದೆ ಸರಿದ.

''ನನಗೆ ಎಲ್ಲಾ ವಿಷಯವೂ ಗೊತ್ತು. ಕಲ್ಯಾಣಿ ಎಲ್ಲಾ ಹೇಳಿದಾರೆ...'' ಎಂದಳು ಬೃಂದಾ. ವಾಸು ಕಲ್ಯಾಣಿಯ ಕಡೆ ನೋಡಿದ. ಅವಳು ಸುಮ್ಮನಿರು ಎನ್ನುವಂತೆ ಸಂಜ್ಞೆ ಮಾಡಿದಳು.

ಬೃಂದಾ, ಭಯದಿಂದ, ಲಜ್ಜೆಯಿಂದ ಅವನ ತೋಳಿಗೆ ತಾಯಿತವನ್ನು ಕಟ್ಟಿ, ಅಲ್ಲಿ ನಿಲ್ಲಲಾಗದೇ ಹೊರ ಬಂದು ಬಿಟ್ಟಳು. ಕಲ್ಯಾಣಿ ಅವಳ ಹಿಂದೆಯೇ ಬಂದಳು.

''ಯಾಕೆ ಬೃಂದಾ ಬಂದುಬಿಟ್ಟೆ? ಏಕೆ ಅಷ್ಟು ಆತುರ...?''

''ಅವರು ಏನೇನೋ ಮಾತಾಡ್ತಾರೆ... ನನಗೆ ದಿಗಿಲಾಗುತ್ತೆ.''

''ದಿಗಿಲ್ಯಾಕೆ? ಅವನ ಮನಃಸ್ಥಿತಿ ಏನೂಂತ ನಿನಗೆ ಗೊತ್ತಿಲ್ವಾ! ಅವನು ಹೇಳಿದ್ದಕ್ಕೆಲ್ಲಾ ಹೂಂ ಅಂತ ತಲೆ ಆಡಿಸಿ ಬಿಡು... ಎಲ್ಲಾ ಸರಿ ಹೋಗುತ್ತೆ. ಅಷ್ಟೂ ನಿನಗೆ ಭಯವಾದರೆ ಪಂಡಿತರ ಹತ್ತಿರ ಹೋಗಿ ಮಾತನಾಡು, ಅವರ ಮಾತಿನ ಮೇಲೆ ನಿನಗೆ ವಿಶ್ವಾಸ, ಗೌರವ ಅಲ್ವಾ?''

''ಹುಂ.'' ಎಂದು ಕಣ್ಣೊರೆಸಿಕೊಂಡಳು. ಅದೇ ಸಾಯಂಕಾಲ, ಹಣ್ಣು ಹೂವುಗಳೊಂದಿಗೆ ಪಂಡಿತರ ಮನೆಗೆ ಬಂದಳು. ಕಲ್ಯಾಣಿಯೂ ಜತೆಗಿದ್ದಳು.

''ಏನಮ್ಮಾ...'' ನಿನ್ನ ಪತಿಯ ಆರೋಗ್ಯ ಹೇಗಿದೆ?'' ಪಂಡಿತರು ಮುಗುಳ್ನಗುತ್ತಾ ವಿಚಾರಿಸಿದರು. ''ಬೃಂದಾ ಮಾತನಾಡು'' ಎನ್ನುವಂತೆ ಕಲ್ಯಾಣಿ ಸಂಜ್ಞೆ ಮಾಡಿದಳು. ಅವಳು ಉಗುಳು ನುಂಗುತ್ತಾ ನುಡಿದಳು.

''ಅವರು ಏನೇನೋ ಮಾತನಾಡುತ್ತಾರೆ. ನನಗೆ ಭಯವಾಗುತ್ತೆ''

''ಏನು ಮಾತಾಡ್ತಾನೆ?''

''ಅರ್ಥವಿಲ್ಲದ ಮಾತುಗಳನ್ನಾಡುತ್ತಾರೆ. ತಮಗೆ ಮದುವೆ ಆಗಿದೆ ಎನ್ನೋದನ್ನೇ ಮರೆತಂತಿದೆ. ನನ್ನನ್ನು ಹೆಂಡತಿ ಅಂತ ಗುರುತಿಸುವುದಿರಲಿ,... ನಿನಗೆ ಒಪ್ಪಿಗೆ ಆದರೆ ನಿನ್ನನ್ನ ಮದುವೆ ಆಗ್ತೀನಿ ಎಂದರು. ಅದೂ ಅಲ್ಲದೇ ಅವರು ಅವರನ್ನೇ ಮರೆತಂತಿದೆ.... ತಮ್ಮ ಹೆಸರನ್ನೇ ಬೇರೆ ಹೇಳಿಕೊಳ್ತಾರೆ...'' ಕಲ್ಯಾಣಿ, ಬೃಂದಾ ತಡವರಿಸಿದಾಗ ಅವಳ ಸಹಾಯಕ್ಕೆ ಬಂದಳು. ವಾಸು ಆಡಿದ ಮಾತುಗಳನ್ನು ವಿವರಿಸಿದಳು.

''ಓ... ಹಾಗಾ? ಅದಕ್ಯಾಕಮ್ಮ ಚಿಂತಿಸ್ತೀಯ? ಕೃಷ್ಣ ಆದರೇನು! ವಾಸು ಆದರೇನು! ನಿನ್ನ ಪತಿಯೇ ತಾನೇ... ಕೃಷ್ಣ ಈಗ ಬದಲಾಯಿಸಿ ಹೋಗಿದ್ದಾನೆ. ಆದ್ದರಿಂದ ಅವನ ಹೆಸರೂ ಬದಲಾಯಿಸಿಕೊಂಡಿದ್ದಾನೆ... ಅದಕ್ಕೆಲ್ಲಾ ತಲೆ ಏಕೆ

ಕೆಡಿಸಿಕೊಳ್ತೀಯ? ಅವನ ಭಯ, ಸಂಕೋಚ, ಆತಂಕಗಳು ದೂರವಾಗದ ಹೊರತು ಅವನು ನಿನ್ನ ಬಳಿಗೆ ಬರುವುದಿಲ್ಲ. ಹಾಗಾಗಬೇಕಾದರೆ, ಅವನು ಮತ್ತೆ ಮದುವೆಯ ಶಾಸ್ತ್ರವನ್ನು ಮಾಡಿಕೊಳ್ಳಬೇಕೆಂದು ಬಯಸಿರಬಹುದು. ಅದರಿಂದ ತೊಂದರೆ ಏನು! ಒಪ್ಪಿಕೊಂಡರಾಯ್ತು... ಅಲ್ವಾ ಕಲ್ಯಾಣಿ...?''

'ಹೌದು' ಎನ್ನುವಂತೆ ಕಲ್ಯಾಣಿ ತಲೆ ಆಡಿಸಿದಳು.

''ಅವನ ಆಸೆಗೂ ಬೆಲೆ ಕೊಡೋಣ. ಆದರಿಂದ ಅವನಿಗೆ ಸಂತೋಷವಾಗುತ್ತೆ. ನೆಮ್ಮದಿ ಸಿಗುತ್ತೆ.''

''ಜನಕ್ಕೆ ತಿಳಿದರೆ ಏನಂದುಕೊಳ್ತಾರೆ? ನಗುಲ್ವಾ?''

''ಜನ ನಗ್ತಾರೆ ಅಂತ ನಮ್ಮ ನೆಮ್ಮದಿ ನಾವು ಹಾಳು ಮಾಡಿಕೊಳ್ಳಕ್ಕೆ ಆಗುತ್ತೇನಮ್ಮಾ? ಅವನಿಗೀಗ ಮನಸ್ಸಿನ ನೆಮ್ಮದಿ ಮುಖ್ಯ. ಕೃಷ್ಣ ಜೈಲಿನಲ್ಲಿದ್ದಾಗಲೂ, ಜನ ಆಡಿಕೊಂಡಿರಬಹುದು. ಈಗ ಬದಲಾಗಿ ಬಂದ ಅಂತ ಅಂದರೂ ಆಡಿಕೊಳ್ಳುತ್ತಾರೆ. ಆಡಿಕೊಳ್ಳುವ ಜನಕ್ಕೆ ನಾವು ಗಮನ ಕೊಡ್ತಾ ಇದ್ದರೆ ನಾವು ಮುಂದುವರೆಯುವುದು ಹೇಗೆ?... ಯಾವುದಾದರೂ ತೀರ್ಥಕ್ಷೇತ್ರಕ್ಕೆ ಹೋಗಿ ಮದುವೆಯಾಗಿ ಪುಣ್ಯವೂ ಸಿಗುತ್ತೆ... ದೇವರ ಸನ್ನಿಧಿಯಲ್ಲಿ ನಡೆಯುವ ಮಂಗಳ ಕಾರ್ಯಗಳಿಗೆ ಹೆಚ್ಚು ಮನ್ನಣೆ ಇರುತ್ತದೆ.'' ಪಂಡಿತರು ಅಪ್ಪಣೆ ಕೊಡಿಸಿದಂತೆ ನುಡಿದಾಗ, ಅವರಿಬ್ಬರೂ ನಮಸ್ಕರಿಸಿ ಎದ್ದರು.

ಅಲ್ಲಿಗೆ ಒಂದು ಇತ್ಯರ್ಥವಾಗಿತ್ತು. ಆದರೆ ಇದೇ ಮಾತನ್ನು ಶಾರದೆಗೆ ಹೇಳಿದಾಗ, ಅವಳು ತಲೆ ಅತ್ತಿತ್ತ ಆಡಿಸಿದಳು.

''ಇದೆಂತಹ ಹುಚ್ಚುತನ? ನೀನಾದ್ರೂ ಹೇಳಬಾರದಾ ಕಲ್ಯಾಣಿ? ಒಂದು ಸಲದ ಮದುವೆಗೇ ಏಳೂ, ಹನ್ನೊಂದು... ಈಗ ಇವನ ಮಾತಿಗೆ ಒಪ್ಪಿ ಮದುವೆ ಅಂತ ಚಪ್ಪರ ಹಾಕಿಸಿದರೆ, ಜನರು ನಮಗೆಲ್ಲಾ ಹುಚ್ಚು ಅಂತ ಅಂದ್ಕೋತಾರೆ...''

''ನೀವು ಅವನನ್ನು ಅರ್ಥ ಮಾಡಿಕೊಳ್ಳಿ ಚಿಕ್ಕಮ್ಮ... ಏಷ್ಟೆಷ್ಟೋ ಏನೇನೋ ಆಗಿಹೋಯ್ತು... ನಿಮ್ಮ ಮಗ ಸೊಸೆ ಚೆನ್ನಾಗಿ ಸಂಸಾರ ನಡೆಸಿಕೊಂಡಿರಬೇಕೂಂತ ನಿಮಗೆ ಆಸೆ ಇಲ್ಲವಾ?''

''ನನ್ನ ಆಸೆಗಳು ನೂರೆಂಟು ಇವೆ. ಎಲ್ಲಾ ನೆರವೇರುತ್ತಾ? ಅವನು

ಆಡ್ತಿರೋ ಈ ನಾಟಕಕ್ಕೆ ನಾವು ಏಕೆ ತಲೆ ಆಡಿಸಬೇಕು? ಅವನಿಗೆ ಸಮಜಾಯಿಷಿ ಹೇಳಬೇಕು. ಅದು ಬಿಟ್ಟು ಅವನು ಹೇಳಿದ ಹಾಗೆ ಕುಣಿಯುಕ್ಕೆ ಆಗುತ್ತಾ? ಮೊದಲೆಲ್ಲಾ ಹಾರಾಡ್ತಿದ್ದ... ಈಗ ಬದಲಾಗಿದಾನೆ. ಬದಲಾಗಿದಾನೆ ಅಂತ ಅಂದ್ಕೊಂಡ್ರೆ.. ಇದೆಲ್ಲಾ ಏನು? ನನಗೇನೋ ಅನುಮಾನ, ಅವನು ನನ್ನ ಮಗನೇ ಹೌದೋ ಅಲ್ಲವೋ ಅಂತ...'' ಕಲ್ಯಾಣಿ ಸಣ್ಣಗೆ ಬೆವತಳು. ''ಈ ಕುರುಡು ಮೋಹದ ತಾಯಿಗೂ ಅನುಮಾನ... ಬಂತಲ್ಲ...''

''ನೋಡಿದ್ರಾ ಚಿಕ್ಕಮ್ಮ... ಅವನ ಮಾನಸಿಕ ಸ್ಥಿತಿ ಸರಿ ಇಲ್ಲದೇ, ಅವನ ಗುಣ ಬದಲಾದದ್ದಕ್ಕೆ ಅವನು ಕೃಷ್ಣನೇ ಹೌದೋ ಅಲ್ಲವೋ ಎಂಬ ಅನುಮಾನ ನಿಮಗೆ... ಅವನು ಮೊದಲಿನ ಕೃಷ್ಣನೇ ಆಗಿರಲಿ ಅಂತ ಆಸೆ ಪಡ್ತೀರಾ!''

''ಸುಮ್ಮನೇ ನನ್ನ ತಲೆ ಕೆಡಿಸಬೇಡಿ. ಏನು ಬೇಕಾದ್ರೂ ಮಾಡ್ಕೊಳ್ಳಿ. ನಾನಂತೂ ಎಲ್ಲಿಗೂ ಬರುಲ್ಲ. ಅಲ್ಲದೇ ಇವರನ್ನು ನೋಡಿಕೊಳ್ಳೋರು ಯಾರು?'' ಎಂದು ಅವಳು ಖಂಡಿತವಾಗಿ ನುಡಿದಾಗ, ಅವರಿಬ್ಬರನ್ನು ಬಿಟ್ಟು ಉಳಿದವರು ಹೋಗಿಬರುವುದೆಂದು ತೀರ್ಮಾನವಾಯಿತು. ಪಂಡಿತರನ್ನು ಹೊರಡಿಸಿದರು.

ಅವರ ಊರಿಗೆ ಅತಿ ಸಮೀಪವೂ ಅಲ್ಲದ ಅತೀ ಹತ್ತಿರವೂ ಅಲ್ಲದ ರಾಮನಾಥಪುರಕ್ಕೆ ಹೋಗಿ, ರಾಮೇಶ್ವರನ ದೇವಸ್ಥಾನದಲ್ಲಿ ಮದುವೆಯ ಶಾಸ್ತ್ರವನ್ನು ಮುಗಿಸಿಕೊಂಡು ಬರುವುದೆಂದು ನಿರ್ಧರಿಸಿದರು. ಗಾಡಿ ಹೂಡಿಕೊಂಡು ಎಲ್ಲರೂ ಹೆದ್ದಾರಿಗೆ ಬಂದು, ಅಲ್ಲಿಂದ ಬಸ್ಸು ಹತ್ತಿದರು.

ಆ ದಿನ ಆ ಊರಿನಲ್ಲಿ ಏನೋ ವಿಶೇಷ ಪೂಜೆ ಜಾತ್ರೆಗೆ ಸೇರುವಂತೆ ಸುತ್ತ ಮುತ್ತಿನ ಹಳ್ಳಿಯ ಜನರೆಲ್ಲ ಜಮಾಯಿಸಿದ್ದರು. ಯಾಕೋ ಆ ಗದ್ದಲ ಬೇಡವಾಯಿತು, ಬೃಂದಳಿಗೆ ತನ್ನ ಜೊತೆಗೆ ಭೀಮನನ್ನು ಎಳೆದುಕೊಂಡು ನದೀ ತೀರಕ್ಕೆ ಬಂದಳು ಅಲ್ಲಿಯೂ ಕಾಲಿಡಲು ಆಗದಂತೆ ಜನರು, ಓಡಾಡುತ್ತಿದ್ದರು. ಸ್ವಲ್ಪ ದೂರದಲ್ಲಿದ್ದ ಒಂದು ಕಲ್ಲು ಬಂಡೆಯನ್ನು ಆರಿಸಿಕೊಂಡು ಕೂತರು.

''ಅಕ್ಕ, ಈ ಮೀನುಗಳು ಎಷ್ಟು ದೊಡ್ಡ ದೊಡ್ಡವು ಅಲ್ವಾ!'' ಎನ್ನುತ್ತಾ ಭೀಮ ಮೀನುಗಳನ್ನು ನೋಡುವುದರಲ್ಲಿ ಮಗ್ನನಾದ ಅಲ್ಲಿ ಹರಿಯುವ ಕಾವೇರಿ ನದಿಯ ಮೀನುಗಳು ವಿಶಿಷ್ಟವಾದುವು. ನದೀ ದಡದಲ್ಲಿ ಕುಳಿತು. ಮೀನುಗಳಿಗೆ,

ತಿನಿಸನ್ನು ತಿನ್ನಿಸುತ್ತಾ ಅವುಗಳ ಎಗರಾಟ, ಮುಳುಗಾಟ ನೋಡುತ್ತಾ ಕುಳಿತರೆ ಹೊತ್ತು ಸರಿಯುವುದೇ ತಿಳಿಯುವುದಿಲ್ಲ. ಸಂಜೆ ಕತ್ತಲು ಆವರಿಸುತ್ತಾ ಬಂದಿತ್ತು. ಬೃಂದಾ ತನ್ನ ಮನದ ಆದೋಲನದಲ್ಲಿ ಮುಳುಗಿ ಹೋಗಿದ್ದಳು...

''ಯಾರೋ ಬಂದು ಎಚ್ಚರಿಸಿದರು. ''ಕತ್ತಲಾಯ್ತು ಏಳಿ... ತುಂಬಾ ಹೊತ್ತು ಇಲ್ಲಿ ಕೂತಿರಬಾರದು...'' ವಿಧಿ ಇಲ್ಲದೇ ಬೃಂದ ಎದ್ದಳು. ಆದರೆ ಆ ಕತ್ತಲೆಯಲ್ಲಿ ತಾನು ಯಾವ ದಿಕ್ಕಿನಿಂದ ಅಲ್ಲಿಗೆ ಬಂದಿದ್ದೆ ಎನ್ನುವುದನ್ನೇ ಮರೆತಳು. ದಾರಿ ತಪ್ಪಿ ಹೋದಂತಾಯಿತು. ತಾವು ಇಳಿದುಕೊಂಡಿದ್ದ ಧರ್ಮಛತ್ರಕ್ಕೆ ಹೇಗೆ ಹೋಗುವುದೆಂದು ತಿಳಿಯದೇ ಕಂಗಾಲಾದಳು.

ಇದ್ದಕ್ಕಿದ್ದಂತೆ ತಮಗ್ಯಾರಿಗೂ ತಿಳಿಯದಂತೆ ಈ ಬೃಂದ ಎಲ್ಲಿ ನಾಪತ್ತೆಯಾದಳು ಎಂದು ಎಲ್ಲರೂ ಗಾಭರಿಗೊಂಡರು. ಪಂಡಿತರು, ನಂಜುಂಡಯ್ಯನೊಂದಿಗೆ ದೇವಸ್ಥಾನದ ಮುಖ್ಯಸ್ಥರೊಂದಿಗೆ ಮಾತನಾಡಲು ಹೋಗಿದ್ದರು. ಕಲ್ಯಾಣಿ, ಕೋಮಲ ತಮ್ಮ ತಮ್ಮ ಮಾತುಗಳಲ್ಲಿ ಮುಳುಗಿ ಹೋಗಿದ್ದರು. ವಾಸು ತನ್ನ ಪಾಡಿಗೆ ತಾನು ಚಿಂತಿಸುತ್ತಾ ಮಲಗಿದ್ದ ಈ ಸಮಯದಲ್ಲಿ ಬೃಂದಾ, ಭೀಮನೊಡನೆ ಹೋದದ್ದು ಯಾರ ಗಮನಕ್ಕೂ ಬಂದಿರಲಿಲ್ಲ.

ಈ ಜನಗಳ ಮಧ್ಯೆ ಈ ಕತ್ತಲೆಯಲ್ಲಿ ಹುಡುಕುವುದು ಹೇಗೆ! ಆದರೂ ಎಲ್ಲರ ಕೇಂದ್ರವೂ ನದಿಯ ತೀರದ ಕಡೆಗೆ... ಕತ್ತಲೆಯಲ್ಲಿ ನೀರಿನ ಜುಳು ಜುಳು ಸದ್ದು... ಚಂದ್ರನ ಬೆಳಕನ್ನು ಪ್ರತಿಫಲಿಸುವ ಸಣ್ಣ ಸಣ್ಣ ಅಲೆಗಳು... ಅಷ್ಟೇ... ನಿರ್ಜನವಾಗಿದ್ದ ನದೀ ತೀರದಲ್ಲಿ ಬೇರೆ ಯಾರೂ ಇರಲಿಲ್ಲ. ನದೀ ತೀರದಲ್ಲಿಸುತ್ತುವ ಕಾವಲುಗಾರ ಅವರ ಬಳಿಗೆ ಬಂದ.

''ಇಷ್ಟೆ ಹೊತ್ನಲ್ಲಿ ಇಲ್ಲಿ ಏನು ಮಾಡ್ತಿದೀರಿ! ನಡೀರಿ ನಡೀರಿ...'' ಗದರಿಸಿದ.

''ನಮ್ಮ ಪೈಕಿ, ಇಬ್ಬರು ಕಳೆದುಹೋಗಿದಾರೆ... ಹುಡುಕ್ತಾ ಇದೀವಿ ಎಂದರು ನಂಜುಂಡಯ್ಯ.

''ಅಷ್ಟು ಹೊತ್ನಿಂದ ನಾನು ಇಲ್ಲೇ ಇದೀನಿ. ಇತ್ಲಾಗೆ ಯಾರೂ ಬಂದಿಲ್ಲ... ನೀವು ಹೋಗಿ'' ಎಂದ ಒರಟಾಗಿ. ಎಲ್ಲರಿಗೂ ಗಾಭರಿ ಆತಂಕ

ಹೆಚ್ಚಾಯಿತು. ಮೊದಲೇ ತುಂಬಾ ನೊಂದುಹೋಗಿದ್ದಳು. ಈ ನದಿಗೆ ಹಾರಿಕೊಂಡಿದ್ದರೇ ಎಂಬ ಅನುಮಾನ ಬಂದೊಡನೆ ನಂಜುಂಡಯ್ಯ ನಿಂತಲ್ಲೇ ಕುಸಿದರು.

ಪಂಡಿತರು ಅವರ ಬಳಿ ಕುಳಿತು ಸಮಾಧಾನ ಹೇಳತೊಡಗಿದರು. ಅಲ್ಲೇ ನಿಂತಿದ್ದ ವಾಸುಗೆ ಹೇಳಿದರು... ''ಏನಯ್ಯಾ... ನಿನ್ನ ಹೆಂಡತಿ ಕಳೆದು ಹೋಗಿದಾಳೆ. ಗಣೇ ಬೇತಾಳನ ಹಾಗೆ ನಿಂತಿದೀಯಲ್ಲ ಹೋಗಿ ಹುಡುಕು...''

ತನ್ನಿಂದಲೇ ಇಷ್ಟೆಲ್ಲಾ ಆದದ್ದು ಎಂದು ದುಃಖಿಸುತ್ತಾ ನಿಂತಿದ್ದ ಕಲ್ಯಾಣಿ ವಾಸು ಕೈ ಹಿಡಿದು ನುಡಿದಳು.

''ಬೃಂದಂಗೆ ಏನಾದರೂ ಅಪಾಯವಾದರೆ ನಾನು ಖಂಡಿತಾ ಬದುಕಿರೋಲ್ಲ... ನಾನು ಈ ನದಿಗೆ ಬಿದ್ದು ಪ್ರಾಣ ಕಳ್ಕೋತೀನಿ...'' ಕೋಮಲ ಅಳತೊಡಗಿದಳು. ವಾಸು, ಕೈ ಬಿಡಿಸಿಕೊಂಡ. ತನ್ನ ಬಾಯಿ ಬಳಿಗೆ ಕೈಗಳೆರಡನ್ನೂ ತಂದು, ಜೋರಾಗಿ, ''ಬೃಂದಾ... ಬೃಂದಾ...'' ಎಂದು ಕೂಗು ಹಾಕಿದ. ಅವನ ಧ್ವನಿ ನದಿಯ ಆ ತೀರವನ್ನು ದಾಟಿ ಪ್ರತಿಧ್ವನಿಸಿತ್ತು. ಅವನು ಮತ್ತೂ ಒಂದೆರಡು ಬಾರಿ, ಬೃಂದಳ ಹೆಸರನ್ನು ಕೂಗಿ ಕರೆದ. ದೂರದಿಂದ ಯಾರೋ ''ಅಣ್ಣಾ... ಅಣ್ಣಾ... ಎಂದು ಕೂಗಿದ್ದು ಎಲ್ಲರಿಗೂ ಕೇಳಿಸಿತ್ತು. ಅದು ಭೀಮನ ಧ್ವನಿ, ಎಲ್ಲರಿಗೂ ಜೀವ ಬಂದಂತಾಗಿತ್ತು.

ಊರಿನ ಪರಿಚಯವೇ ಇಲ್ಲದ ಬೃಂದಾ ನದಿಯ ಆಡಕ್ಕೆ ಹೇಗೆ ಹೋದಳು? ಯಾತಕ್ಕೆ ಹೋದಳು...?

''ಈಗ ಈ ಕತ್ತಲಲ್ಲಿ ಆ ದಡಕ್ಕೆ ಹೋಗೋಕೆ ದೋಣಿಗಳು ಸಿಗುಲ್ಲ. ನಾಳೆ ಬೆಳಗ್ಗಿನವರೆಗೆ ನೀವು ಕಾಯಲೇಬೇಕು.'' ಕಾವಲುಗಾರ ನುಡಿದಾಗ, ಅವರೆಲ್ಲರ ಆತಂಕ ಹೆಚ್ಚಾಗಿತ್ತು. ಇದ್ದಕ್ಕಿದ್ದಂತೆ, ಎಲ್ಲರೂ ನೋಡುತ್ತಿದ್ದಂತೆಯೇ ವಾಸು ಕತ್ತಲೆಯಲ್ಲಿ ನೀರಿಗೆ ಧುಮುಕಿದ್ದ.

''ಹಿಡ್ಕಳಿ... ಹಿಡ್ಕಳಿ...'' ಎಂದು ಕಾವಲುಗಾರ ಮುಂದೆ ಮೆಟ್ಟಲಿಳಿಯುತ್ತಿದ್ದಂತೆ, ವಾಸು ಈಜಿಕೊಂಡು ಮುಂದೆ ಮುಂದೆ ಸಾಗಿದ್ದ. ಕತ್ತಲಿನಲ್ಲಿ ಒಂದು ಅಂದಾಜಿನ ಮೇಲೆ, ನದಿಯ ಆ ದಡವನ್ನು ಸೇರಿದ. ಒಂದುಗಳಿಗೆ ನಿಂತ ಮೈಯ ನೀರನ್ನೆಲ್ಲ ಕೊಡವಿಕೊಂಡು ''ಬೃಂದಾ...

ಬೃಂದಾ...'' ಎಂದು ಕರೆಯುತ್ತಾ ಅತ್ತ ಇತ್ತ ಓಡಾಡಿದ. ''ಅಣ್ಣಾ... ಅಣ್ಣಾ...'' ಎನ್ನುತ್ತಾ ಭೀಮ ಬಳಿಗೆ ಬಂದ. ''ಭೀಮ... ಅಕ್ಕಾ ಎಲ್ಲಿ?'' ಕೇಳಿದ.

''ಬನ್ನಿ...'' ಎಂದು ಅವನು ಕೈ ಹಿಡಿದು ಕರೆದುಕೊಂಡು ಹೋದ. ಚಳಿಯಲ್ಲಿ ನಡಗುತ್ತಾ ಕೂತಿದ್ದವಳು ಅವನನ್ನು ಕಂಡು ಎದ್ದು ನಿಂತಳು. ಅಪರಾಧಿಯಂತೆ ತಲೆ ತಗ್ಗಿಸಿ ನಿಂತಿದ್ದವಳ ಕತ್ತೆತ್ತಿ ಪ್ರಶ್ನಿಸಿದ.

''ಇಲ್ಲಿಗ್ಯಾಕೆ ಬಂದೆ! ಹೇಗೆ ಬಂದೆ? ಅಲ್ಲಿ ನಾವುಗಳು ಹೆದರಿ ಹುಡುಕಿದ್ದೇ ಹುಡುಕಿದ್ದು... ಭೀಮ, ನಿನಗಾದ್ರೂ ತಿಳೀಬೇಡ್ವಾ! ಹೊಸ ಜಾಗ... ಪರಿಚಯದವರಿಲ್ಲದ ಊರು... ಈ ಕತ್ತಲೇಲಿ ಇಲ್ಲಿ ಏನು ಮಾಡ್ತಿದ್ರಿ?''

''ಕತ್ತಲೇಲಿ, ದಾರಿ ಗೊತ್ತಾಗದೇ ಎತ್ತೆತ್ತಲೋ ತಿರುಗಿ, ಇತ್ಲಾಗೆ ಬಂದ್ವಿ ಆ ಮೇಲೇ ಗೊತ್ತಾದದ್ದು... ನಾವು ತಪ್ಪಿಸಿಕೊಂಡು ಬಿಟ್ಟಿದೀವಿ ಅಂತ...''

''ಅವನನ್ನು ಬೈಯಬೇಡಿ... ತಪ್ಪು ನನ್ನದು'' ಎಂದಳು ಬೃಂದಾ.

''ಯಾಕೆ? ನಮ್ಮನ್ನೆಲ್ಲಾ ಬಿಟ್ಟು ದೂರ ಎಲ್ಲೋ ಬಂದುಬಿಟ್ಟರೆ, ನಾವುಗಳು ಮನುಷ್ಯರೇ...'' ಅಷ್ಟು ಹೇಳಿದ್ದಕ್ಕೆ ಅವನಿಗೇ ಅಚ್ಚರಿ.

''ಅದಲ್ಲ... ಈ ಗಲಾಟೆಯಲ್ಲಿ ನನ್ನ ಮಾಂಗಲ್ಯದ ಸರ ಎಲ್ಲೋ ಬಿದ್ದು ಹೋಗಿದೆ... ಅದಕ್ಕೇ ಭಯವಾಗಿ ಇಲ್ಲೇ ಕೂತುಬಿಟ್ಟೆ...''

''ಒಳ್ಳೇದಾಯ್ತು ಬಿಡು... ಹೋದ್ರೆ ಹೋಯ್ತು...''

''ಛೀ... ಬಿಡ್ತು ಅನ್ನಿ. ಅದು ನನ್ನ ಮಾಂಗಲ್ಯ... ಅದನ್ನು ಕಳೆದುಕೊಂಡು ನಾನು ಹೇಗೆ ಬದುಕಿರಬಲ್ಲೆ...?'' ಅಳುತ್ತಾ ನುಡಿದಳು.

''ಅದಕ್ಯಾಕೆ ವ್ಯಥೆ? ನಾನು ಬೇರೆ ಸರ ಮಾಡಿಸಿಕೊಡ್ತೀನಿ...''

''ಆದರೂ... ಆದರೂ...''

''ಆದರೆ ಗೀದರೆ ಏನಿಲ್ಲ... ಹಳೆ ಸರ ಹೋಯ್ತು ಅಂತ ದುಃಖಿಸಬೇಡ. ಅದಕ್ಕೆ ನಿನ್ನ ಕತ್ತಿನಲ್ಲಿ ಇರುವ ಭಾಗ್ಯ ಇರಲಿಲ್ಲ... ನಾನು ನಿನಗೆ ಹೊಸ ಮಾಂಗಲ್ಯ ಸರವನ್ನು ತಂದಿದೇನೆ... ಅದನ್ನು ನಾಳೆ ಎಲ್ಲರೆದುರಿಗೆ ನಿನ್ನ ಕತ್ತಿಗೆ ಕಟ್ಟುತ್ತೇನೆ...''

''ಆದರೂ ಈ ರಾತ್ರಿ... ನಾನು ನನ್ನ ಕತ್ತಿನಲ್ಲಿ ಮಾಂಗಲ್ಯವಿಲ್ಲದೇ

ಹೇಗಿರಲಿ? ನನಗ್ಯಾಕೋ ಭಯವಾಗುತ್ತೆ... ಮೊದಲ್ನಿಂದ ನೀವು ನನ್ನಿಂದ ದೂರ ದೂರ ಇದ್ದವರೇ... ನೀವಿರದೇ ನಾನು ಹೇಗಿರಲಿ?''

''ಏನೋ ನನ್ನ ಮೂಢತನ... ನಿನ್ನಿಂದ ದೂರ ಇದ್ದೆ. ಇನ್ನೂ ಮುಂದೆ ಹಾಗಾಗುಲ್ಲ. ನಾನು ಸದಾ ನಿನ್ನ ಬಳಿಯೇ ಇರ್ತೀನಿ...''

''ಮಾಂಗಲ್ಯ ಸರ ಕಳೆದುಹೋದರೆ ಅಪಶಕುನ ಅಂತಾರೆ... ಚಿಕ್ಕಪ್ಪ ಏನಂತಾರೋ...? ಅತ್ತೆ ಏನಂತಾರೋ...?'' ಅವಳು ಅಳತೊಡಗಿದಾಗ, ಅವನು ಮೊಟ್ಟ ಮೊದಲ ಬಾರಿಗೆ ಅವಳ ಕೈ ಹಿಡಿದು ಸಮಾಧಾನ ಹೇಳಿದ.

''ಅಳಬೇಡ ಬೃಂದಾ... ನಿನ್ನ ಅಳುವ ದಿನಗಳೆಲ್ಲ ಮುಗಿದುಹೋದವು. ನಾನು ನನ್ನ ಕೈಲಾದಷ್ಟು ನಿನ್ನನ್ನು ಸುಖವಾಗಿಟ್ಟುಕೊಳ್ಳಲು ಪ್ರಯತ್ನಿಸುತ್ತೇನೆ. ತಾನು ನಿನ್ನ ಜತೆಯಲ್ಲಿರುವಾಗ, ನೀನು ಚಿಕ್ಕಪ್ಪನಿಗಾಗಲೇ, ಅತ್ತೆಗಾಗಲೀ ಹೆದರಬೇಕಾಗಿಲ್ಲ.'' ಅವನ ವಿಶ್ವಾಸದ ನುಡಿದಳು ಅವಳಲ್ಲಿ ಚೈತನ್ಯವನ್ನು ತುಂಬಿತು. ಆ ಮಾಂಗಲ್ಯದ ಸರ ನನ್ನ ಕತ್ತಿನಲ್ಲಿ ಇರುವತನಕ, ಇವನು ನನ್ನ ಬಳಿಗೆ ಬಂದಿರಲಿಲ್ಲ. ಈಗ ಅದು ಎಲ್ಲಿಯೋ ಬಿದ್ದು ಹೋಗಿದೆ... ಇವನಾಗಿಯೇ ನನ್ನನ್ನು ಹುಡುಕಿಕೊಂಡು ಬಂದಿದಾನೆ... ಇದೇ ನನ್ನ ಭಾಗ್ಯ ಎಂದುಕೊಂಡು ಅವನ ಕಡೆ ನೋಡಿದಳು. ಕತ್ತಲಲ್ಲಿ ಅವನ ಮುಖ ಸರಿಯಾಗಿ ಕಾಣಲಿಲ್ಲ. ಆದರೂ ಏನೋ ಸಂಕೋಚವೆನಿಸಿತು. ಗಂಡನ ಸಮೀಪದಿಂದ ಮಧುರವಾಗಿ ಸಕಂಪಿಸಿದಳು. ಚಳಿಗೆ ಅವಳು ನಡುಗುತ್ತಿರಬಹುದು ಎಂದು ಭಾವಿಸಿ, ವಾಸು ನಗುತ್ತಾ ನುಡಿದ

''ನಾನೂ ಪೂರಾ ನೆಂದು ಹೋಗಿದೀನಿ... ನನಗೂ ಚಳಿ ಆಗ್ತಿದೆ... ಈಗ ಏನು ಮಾಡೋಣ?'' ಎನ್ನುತ್ತಾ ಭೀಮನನ್ನು ಕೇಳಿದ.

''ನೀವು ಇಲ್ಲಿಗೆ ಬಂದಿದ್ದಾಗ ಬೆಳಕಾಗಿತ್ತಲ್ಲ. ಇಲ್ಲಿ ಹತ್ತಿರ ಛತ್ರ ಯಾವುದಾದರೂ ಕಟ್ಟೆ, ಪಾಳು ಮನೆ ಯಾವುದಾದ್ರೂ ಕಣ್ಣಿಗೆ ಬಿದ್ದಿತ್ತಾ?''

ಭೀಮ ಯೋಚಿಸಿದ... ''ಹೂಂ.. ಇತ್ಲಾಗೆ ಒಂದು ಅರಳೀ ಕಟ್ಟೆ ಇದೆ... ಆದರೆ ಅಲ್ಲಿ ಯಾರೂ ಇಲ್ಲ. ನಾಲ್ಕಾರು ದನಗಳು ಮೇಯುತ್ತಿದ್ದವು.''

''ದನಗಳು ಇವೆ ಅಂದ್ರೆ, ಹತ್ರ ಎಲ್ಲಾದ್ರೂ ಜನರೂ ಇರ್ತಾರೆ... ನಾವು ಈ ರಾತ್ರಿ ಇಲ್ಲಿ ಕಳೆಯೋಣ... ಬೆಳಿಗ್ಗೆ ಆಗುತ್ಲೇ ಹೊರಡೋಣ...''

ಅಷ್ಟರಲ್ಲಿ, ಇನ್ನೊಂದು ದಡದಿಂದ, ''ಬೃಂದಾ... ವಾಸು... ಭೀಮ...'' ಎಂದು ಕೂಗುತ್ತಿರುವ ಧ್ವನಿಗಳು ಕೇಳಿಸಿದವು.

''ಅವರೆಲ್ಲಾ ಹೆದರಿಬಿಟ್ಟಿದಾರೆ... ನಾವು ಏನು ಮಾಡಬೇಕೂಂತ ತಿಳೀತಿಲ್ವಲ್ಲಾ'' ಪೇಚಾಡಿದ. ಅಷ್ಟರಲ್ಲಿ ಪಂಜಿನ ಬೆಳಕಿನಲ್ಲಿ, ನದಿಯಲ್ಲಿ ಒಂದು ದೋಣಿ ತೇಲಿಬರುತ್ತಿರುವುದು ಕಂಡು ಬಂತು... ''ಅವರೆಲ್ಲಾ ನಮ್ಮನ್ನೇ ಹುಡುಕಿಕೊಂಡು ಬರುತ್ತಿದಾರೆ... ಭೀಮ ನೀನು ಒಂದು ಕೂಗು ಹಾಕೋ...''

ಭೀಮ ಎತ್ತರದ ಧ್ವನಿಯಲ್ಲಿ ''ಅಕ್ಕಾ... ಅಕ್ಕಾ... ನಾವು ಇಲ್ಲಿದೀವಿ... ಪಂಡಿತರೇ... ನಾವು ಇಲ್ಲಿದೀವಿ...'' ಎಂದು ಕೂಗು ಹಾಕಿದ.

ಆ ದೋಣಿಯಲ್ಲಿ ನಂಜುಂಡಯ್ಯ, ಕಲ್ಯಾಣಿ ಮಾತ್ರ ಇದ್ದರು. ದೋಣಿಯನ್ನು ನಡೆಸಿಕೊಂಡು ಬಂದ ಆ ಕಾವಲುಗಾರ ಸಿಡುಕಿದ.

''ಇಲ್ಲಿಗ್ಯಾಕ್ರಮ್ಮ ಬಂದ್ರಿ! ಇದು ಮನುಷ್ಯರು ಓಡಾಡೋ ಸ್ಥಳವಲ್ಲ. ಇದು ಸತ್ತೋರನ್ನು ಸುಡೋ ಸ್ಥಳ. ಇಲ್ಲಿಗ್ಯಾಕೆ ಬಂದ್ರಿ?''

ಬೃಂದಾ ಏನೂ ಉತ್ತರಿಸದೇ ಅತ್ತಳು. ''ನಿಮ್ಮಂಥೋರು ನಮ್ಮ ಪ್ರಾಣ ತೆಗೀತೀರಿ... ನಿಮಗೇನಾದ್ರೂ ಆಗಿದ್ದಿದ್ರೆ ನಮ್ಮನ್ನ ಕೆಲಸದಿಂದ ಓಡಿಸ್ತಾರೆ... ಹೇಳಿ ಹೇಳಿ ಸಾಕಾಗ್ತದೆ...'' ವಾಸು ಅವನಿಗೆ ಕೈ ಮುಗಿದು ಹೇಳಿದ:

''ಏನೋ ತಿಳೀಲಿಲ್ಲ. ತಪ್ಪು ಮಾಡಿಬಿಟ್ರು... ಕತ್ತಿನಲ್ಲಿದ್ದ ಮಾಂಗಲ್ಯಸರ ಎಲ್ಲೋ ಬಿದ್ದು ಹೋಗಿದೆ ಅಂತ ಭಯಗೊಂಡು ಇಲ್ಲೇ ಕೂತು ಬಿಟ್ಟಿದಾರೆ...''
''ಅಯೋ... ನಮ್ಮ... ಪ್ರಾಣಕ್ಕಿಂತ ಸರ ಮುಖ್ಯಾನಾ! ಕಳೆದದ್ದು ಸಿಗಲ್ಲ ಅಂತಂದ್ರೆ ಇನ್ನೊಂದು ಮಾಡಿಸಿಕೊಂಡ್ರಾಯ್ತು...''

''ಅದು ಅಷ್ಟು ಸುಲಭವಲ್ಲಪ್ಪಾ... ಅಪಶಕುನ ಅಂತ ಭಾವಿಸ್ತೀವಿ ನಮ್ಮಲ್ಲಿ'' ಎಂದು ನಂಜುಂಡಯ್ಯ ನುಡಿದರು.

''ಸಾಕು... ನಡೀರಿ... ಈ ಹೊತ್ನಲ್ಲಿ ದೋಣಿ ಓಡಿಸಬಾರದು ಅಂತ ಕಾನೂನು ಇದೆ... ಬೇಗ ಹತ್ತಿ... ಆ ದಡಕ್ಕೆ ಹೋಗೋಣ'' ಎಂದು ಕಾವಲುಗಾರ ಅವಸರಿಸಿದ.

ಇವರುಗಳಿಗಾಗಿಯೇ ಕಾಯುತ್ತಾ ನಿಂತಿದ್ದ ಪಂಡಿತರು... ಮುಂದೆ ಬಂದು, ಒಬ್ಬೊಬ್ಬರನ್ನಾಗಿ ಕೈ ಹಿಡಿದು ಇಳಿಸಿಕೊಂಡರು. ಕೋಮಲ ಕಲ್ಯಾಣಿಯ

ಬಗಲಿಗೆ ಬಂದು ನಿಂತಳು.

''ಇದೆಲ್ಲಾ ಏನೇ ಅಕ್ಕಾ... ಸುಮ್ಮನೇ ಒಂದು ಗಲಾಟೆ...''

''ಗಲಾಟೆಯೂ ಇಲ್ಲ; ಏನೂ ಇಲ್ಲ ಸುಮ್ಮನಿರು. ನಿನಗಿದೆಲ್ಲಾ ಅರ್ಥವಾಗುಲ್ಲ...'' ಎನ್ನುತ್ತಾ, ಬೃಂದಾಳ ಮಾಂಗಲ್ಯದ ಸರ ಕಳೆದುಹೋಯಿತು ಎಂದು ವಿವರಿಸಿದಳು. ಪಂಡಿತರು ಅಚ್ಚರಿಪಟ್ಟರು... ವಿಧಿ ವಿಲಾಸ!

ಕೃಷ್ಣ ಕಟ್ಟಿದ ಮಾಂಗಲ್ಯದ ಸರ, ಕಾವೇರಿ ನದಿಯ ಆದಡದಲ್ಲಿ, ಅದೂ, ಅಪರ ಸಂಸ್ಕಾರ ನಡೆಯುವ ಸ್ಥಳದಲ್ಲಿ ಬಿದ್ದು ಕಾಣೆಯಾಗಿದೆ. ಎಂಥಾ ವಿಪರ್ಯಾಸ! ಒಂಥರಕ್ಕೆ ಒಳ್ಳೆಯದೇ ಆಯ್ತು. ನಾಳೆ ಬೆಳಿಗ್ಗೆ ಹೇಗೂ ಸುಮುಹೂರ್ತದಲ್ಲಿ ವಾಸು ಅವಳಿಗೆ ಮತ್ತೆ ತಾಳಿ ಕಟ್ಟುತ್ತಾನಲ್ಲ...

ಎಲ್ಲರೂ ತಾವು ಇಳಿದುಕೊಂಡಿದ್ದ ಛತ್ರಕ್ಕೆ ಬಂದು ಸೇರುವ ಹೊತ್ತಿಗೆ ಬೆಳಗಿನ ಝಾವ ಶುರುವಾಗುವುದರಲ್ಲಿತ್ತು. ಯಾರಿಗೂ ಹನಿವಿಲ್ಲ; ನಿದ್ದೆ ಇಲ್ಲ. ಆದರೆ ಕೋಮಲ ಕಲ್ಯಾಣಿಯನ್ನು ಪೀಡಿಸಿದಳು. ''ನನ್ನ ಪಾಡಿಗೆ ನಾನು ಹಾಸ್ಟೆಲ್ಲಿನಲ್ಲಿರುತ್ತಿದ್ದೆ... ಸಾಯಂಕಾಲದಿಂದ ಏನನ್ನು ತಿಂದಿಲ್ಲ. ಹೊಟ್ಟೆ ಹಸೀತಿದೆ.'' ಕಲ್ಯಾಣಿ ತನ್ನ ಬಳಿಯಿದ್ದ ಮೋಸಂಬಿ ಹಣ್ಣನ್ನು ಬಿಡಿಸಿ, ತಂಗಿಗೂ ಕೊಟ್ಟಳು. ಭೀಮನಿಗೂ ಕೊಟ್ಟಳು. ಭೀಮ ಹಸಿವು ತಾಳಲಾರದೇ ನಾಲ್ಕಾರು ಬಾರಿ ನೀರು ಕುಡಿದಿದ್ದ ವಾಸು ಯೋಚಿಸುತ್ತಿದ್ದ'' ಕೃಷ್ಣ ಕಟ್ಟಿದ ಮಾಂಗಲ್ಯವನ್ನು ಬೃಂದ ತೆಗೆಯುತ್ತಿದ್ದಳೋ ಎಲ್ಲವೋ... ತಾನಾಗಿಯೇ ಕಳೆದು ಹೋದುದು ಒಳ್ಳೆದಾಯ್ತು... ಇದುವರೆಗೂ ತಾನು ಅವಳ ಹತ್ತಿರ ನಿಂತಿದುದೇ ಇಲ್ಲ. ಈ ದಿನ ಅವಳ ಕೈ ಹಿಡಿದಿದ್ದೆ... ಅದೂ ಆ ಮಾಂಗಲ್ಯಸರ ಕಳೆದು ಹೋದ ಮೇಲೆ... ಎಂಥಾ ವಿಚಿತ್ರ! ಅಂತ ಅಂದುಕೊಂಡ.

ಬೃಂದಾಳಿಗೆ ಹೆದರಿಕೆಯಿಂದ ನಿದ್ದೆ ಹಾರಿ ಹೋಗಿತ್ತು. ರಾತ್ರಿಯ ಎಷ್ಟೋ ಹೊತ್ತು, ಯಾವುದೋ ಹೆಣ ಸುಡುವ ಸ್ಥಳದಲ್ಲಿ ಕೂತಿದ್ದೆ ಎಂದು ನೆನೆಸಿಕೊಳ್ಳುವುದೇ ಕಷ್ಟವಾಗುತ್ತಿತ್ತು. ಜತೆಯಲ್ಲಿ ಭೀಮನಿಲ್ಲದೇ ಇದ್ದಿದ್ದರೆ ನೀರಿಗೆ ಹಾರಿಬಿಡುತ್ತಿದ್ದಳೋ ಏನೋ...

ಈ ವಿಚಿತ್ರ ಸನ್ನಿವೇಶಗಳೆಲ್ಲಾ ವಿಧಿಯ ಆಟವೇ... ಎಂದು ನಂಜುಂಡಯ್ಯ ಚಿಂತಿಸುತ್ತಿದ್ದರು. 'ಪುಣ್ಯ ಕ್ಷೇತ್ರದಲ್ಲಿ ನಡೆಯುವುದೆಲ್ಲಾ ಪುಣ್ಯವೇ. ಕೃಷ್ಣನ

ಂಧನವನ್ನು ಕಳಚಿದ ಈ ಕಾವೇರಿ, ನಮಗೆ ಸಹಾಯಕಳಾಗಿದ್ದಾಳೆ. ಇನ್ನು ನನ್ನ ುನಸ್ಸಿನಲ್ಲಿ ಲವಲೇಶವೂ ಅಳುಕಿಲ್ಲ... ಆದದ್ದೆಲ್ಲಾ ಒಳ್ಳೆಯದಕ್ಕೇ ಅಂತ ಂದುಕೊಳ್ತೀನಿ...'

ಅಂತೂ ದೇವಿ ಅನುಮತಿ ಕೊಟ್ಟಳು. ಇಲ್ಲದಿದ್ದರೆ ನಾನು ಮಾಡಿದ್ದು, ೀಳಿದ್ದು ಸರಿಯೋ ತಪ್ಪೋ ಎಂದು ತೊಳಲಾಡಿ, ಪ್ರಾಯಶ್ಚಿತ್ತಕ್ಕಾಗಿ, ತೀರ್ಥ ಬಾತ್ರೆ ಮಾಡಬೇಕಾಗಿತ್ತು. ಈ ಕಾವೇರಿ ತಾಯಿಯೇ ಮಾರ್ಗದರ್ಶನ ೀಡಿದಳು. ಬೃಂದಾ ನಂಬಿದ ಆ ಮಹಾದೇವಿ, ಆಶೀರ್ವದಿಸಿ, ಹೊಸ ಬಾಳಿಗೆ, ನುವು ಮಾಡಿಕೊಟ್ಟಳು ಎಂದು ಪಂಡಿತರು ತಮ್ಮಲ್ಲೇ ಹೇಳಿಕೊಳ್ಳುತ್ತಿದ್ದರು.

ವಾಸೂನ್ನ ಕೃಷ್ಣ ಎಂದು ತಪ್ಪಾಗಿ ತಿಳಿದರೂ, ಕೃಷ್ಣನ ಸ್ಥಾನವನ್ನು ವಾಸು ುಂಬಲಿ ಎಂದು ಆ ಗಳಿಗೆಯಲ್ಲಿ ಯೋಚಿಸಿದ್ದು ತಪ್ಪಾಗಲಿಲ್ಲ. ಏನೂ ಡವಟ್ಟಾಗಲಿಲ್ಲ. ಹೆಜ್ಜೆ ಹೆಜ್ಜೆಗೂ, ಅನುಮಾನ ಸಂಶಯಗಳನ್ನು ಎದುರಿಸಿ, ್ರಂದಳ ಬಾಳು ಸುಗಮವಾಗುವಂತೆ ಮಾಡಿದ್ದು ನಾನು ಅಲ್ಲವೇ ಅಲ್ಲ ಅಂತ ಗ ಅನ್ನಿಸ್ತಿದೆ. ಅವಳ ವಿಧಿಯಲ್ಲಿ ಹೀಗೇ ಬರೆದಿದ್ದು... ಹಾಗೇ ನಡೆದಿದೆ. ದಕ್ಕೆ ಕಾರಣ ನಾನು ಆಗಿರಬಹುದು... ಆದರೆ ಇನ್ನು ಮುಂದೆ ನನಗೆ ಯಾವ ಾರಗೂ ಉಳಿಯುವುದಿಲ್ಲ. ಸಾಕ್ಷಾತ್ ಪರಮೇಶ್ವರಿಯೇ, ವಾಸು, ಬೃಂದಾ ಂದಾಗುವಂತೆ ಹರಸಿದ್ದಾಳೆ. ಇದಕ್ಕೆ, ಕಳಚಿಬಿದ್ದ ಆ ಮಾಂಗಲ್ಯವೇ ಸಾಕ್ಷಿ... ಂದು ಕೊಂಡಳು ಕಲ್ಯಾಣಿ.

ಬೆಳಗಾಗುತ್ತಿದ್ದಂತೇ, ಎಲ್ಲರೂ ನದಿಗೆ ಹೋಗಿ ಸ್ನಾನ ಮಾಡಿ ಬಂದರು. ೂಸಬಟ್ಟೆಗಳನ್ನು ಧರಿಸಿದರು. ಮೊದಲು ದೇವಸ್ಥಾನಕ್ಕೆ ಬಂದು, ಮ್ಮನವರಿಗೆ, ಮಹೇಶ್ವರನಿಗೆ ಪೂಜೆ ಸಲ್ಲಿಸಿ, ಆಶೀರ್ವಾದ ಪಡೆದು, ುದುವೆಗಾಗಿ ಸಿದ್ಧಪಡಿಸಿದ್ದ ಮಂಟಪಕ್ಕೆ ಬಂದರು. ಪಂಡಿತರು ಮಂತ್ರಗಳನ್ನು ಧಿ, ಸರಳವಾಗಿ, ಮದುವೆಯ ಶಾಸ್ತ್ರಗಳನ್ನು ನೆರವೇರಿಸಿದರು. ವಾಸು ತಾನು ರೀದಿಸಿ ತಂದಿದ್ದ ಮಾಂಗಲ್ಯದ ಸರವನ್ನು ಬೃಂದಳ ಕೊರಳಿಗೆ ತೊಡಸಿದ. ನಗೆ ಅತೀ ಸಮೀಪದಲ್ಲಿ ಕುಳಿತಿದ್ದ ಬೃಂದಳ ಮುಖವನ್ನು ನೋಡಿದ. ಷ್ಕಲ್ಮಶವಾದ, ಮುಗ್ಧ ಮುಖದಲ್ಲಿ ಲಜ್ಜೆಯನ್ನು ಕಂಡು ಮುಗುಳ್ನಕ್ಕ.

ಇವಳು ಇನ್ನು ಅರೆ ಬಿರಿದ ಮೊಗ್ಗು... ತನ್ನ ತೋಳ ಶಾಖದಲ್ಲಿ ಇವಳು

ಆರಳಬೇಕು... ಆ ಸಮಯಕ್ಕಾಗಿ ಕಾಯುತ್ತೇನೆ ಎಂದು ತನಗೆ ತಾನೇ ಹೇಳಿಕೊಂಡ.

ಘಮ ಘಮಿಸುವ, ಮಲ್ಲಿಗೆಯ ಹಾರವನ್ನು ಧರಿಸಿ, ನಾಚಿಕೆ, ಸಂತೋಷಗಳಿಂದ ಕೆಂಪಾಗಿದ್ದ ಬೃಂದಳನ್ನು ಬಾಯ್ತುಂಬಾ ಹರಸಿದರು. ನಂಜುಂಡಯ್ಯ.

''ನಿನ್ನ ಕಷ್ಟಗಳು ಇಂದಿಗೆ ತೀರಿತು ತಾಯೀ... ಇನ್ನು ನನಗೆ ನಿಶ್ಚಿಂತೆ'' ಎಂದರು. ವಾಸುವನ್ನು ತಬ್ಬಿಕೊಂಡು, ''ನನ್ನ ಮಗಳನ್ನು ನಿನಗೆ ವಹಿಸಿದ್ದೇನೆ. ಅವಳನ್ನು ಸಂರಕ್ಷಿಸುವುದು ನಿನ್ನ ಕರ್ತವ್ಯ ಎಂದರು.''

ಪಂಡಿತರು, ಎರಡು ಅರಿಶಿನ ಕುಂಕುಮದ ಬೆಳ್ಳಿ ಬಟ್ಟಲನ್ನು ಬೃಂದಳಿಗೆ ಉಡುಗೊರೆಯನ್ನಾಗಿ ನೀಡಿದರು. ''ದೀರ್ಘ ಸುಮಂಗಲಿ''ಯಾಗಿರು ಎಂದು ಆಶೀರ್ವದಿಸಿದರು.

ಕಲ್ಯಾಣಿ, ತನ್ನ ತಂದೆಯಿಂದ ತನಗೆ ಸಿಕ್ಕ ಆಸ್ತಿಯನ್ನೆಲ್ಲಾ ವಾಸುವಿನ ಹೆಸರಿಗೆ ವರ್ಗಾಯಿಸಿ ಪತ್ರ ಬರೆಸಿದ್ದಳು. ಅದನ್ನು ಅವನ ಕೈಗಿತ್ತಳು. ''ಇದೆಲ್ಲವೂ ನಿನ್ನದು ವಾಸು... ಎಲ್ಲವನ್ನು ಊರ್ಜಿತಗೊಳಿಸುವುದು ನಿನ್ನ ಧರ್ಮ. ಚಿಕ್ಕಪ್ಪನಿಗೂ ಸಂತೋಷವಾಗುತ್ತೆ'' ಎಂದಳು.

''ಅಕ್ಕಾ... ಇವನು ಕೃಷ್ಣ ಕಣೇ... ವಾಸು... ಅಂತ ಕರೆದ್ಯಲ್ಲೇ...''

ಕಲ್ಯಾಣಿ ತಡವರಿಸದೇ ಉತ್ತರಿಸಿದಳು. ''ಅವನು ಕೃಷ್ಣನಾಗಿದ್ದ, ಆದರೆ ಇವನು ವಾಸು... ವಾಸು ಅಂತ ಹೆಸರು ಬದಲಾಯಿಸಿಕೊಂಡಿದಾನೆ. ಎಲ್ಲಾ ಹೊಸದಾಗಿರಲಿ ಅಂತ ಇವನ ಆಸೆ... ಅಲ್ವಾ ವಾಸು...?''

ಕೋಮಲಳ ಪ್ರಶ್ನೆಯಿಂದ ಎಲ್ಲರೂ ಒಂದು ಗಳಿಗೆ ಬೆಪ್ಪಾಗಿದ್ದರು. ಆದರೆ ಅದನ್ನು ಕಲ್ಯಾಣಿ ಕ್ಷಣಮಾತ್ರದಲ್ಲಿ ಪರಿಹರಿಸಿದ್ದಳು.

ಊಟದ ನಂತರ, ಎಲ್ಲರೂ ಬಸ್ಸು ಹತ್ತಿದರು. ಈಗ ವಾಸು, ಬೃಂದಾ ಅಕ್ಕಪಕ್ಕದಲ್ಲಿ ಕುಳಿತಿದ್ದರು. ಬರುವಾಗ ಇದ್ದ ಆತಂಕ, ಶಂಕೆ ಅನುಮಾನಗಳು ಈಗ ಅವನನ್ನು ಕಾಡಿಸುತ್ತಿರಲಿಲ್ಲ.

ಮನೆಗೆ ಬಂದವರೇ, ಮೊದಲು ಮನೆಯ ದೇವರಿಗೆ ನಮಸ್ಕರಿಸಿ, ನಂತರ

ಶಾರದೆಗೂ ನಮಸ್ಕರಿಸಿದರು. ಶಾರದಾ ಏನೋ ಅನುಮಾನದಿಂದ ವಾಸು ಕಡೆ ನೋಡಿದಳು. ಅವನು, ಸಿಡುಕದೇ ಮುಗುಳ್ನಕ್ಕ. ಅವಳ ವ್ಯಾಕುಲಗಳೆಲ್ಲಾ ಹಾರಿಹೋದವು.

''ನಿನಗೆ ಎಂಥಾ ಒಳ್ಳೆ ಕಳೆ ಬಂದಿದೆಯಲ್ಲೋ ಕೃಷ್ಣಾ... ಇಷ್ಟು ದಿನ ನನ್ನನ್ಯಾಕೆ ಸತಾಯಿಸಿದೆಯೋ...?

''ಅಮ್ಮಾ... ಇನ್ನೂ ಮೇಲೆ ನಾನು ಕೃಷ್ಣ ಅಲ್ಲ... ವಾಸು... ನಾನು ವಾಸು'' ಅಂತಂದ. ಆದರೂ ಏನೋ ಅಳುಕು.

''ಒಳ್ಳೇದೇ ಮಾಡಿದೆ ಬಿಡು... ಸಾಧ್ಯ... ಕೃಷ್ಣನಾಗಿ ನೀನು ನನಗೆ ಸಾಕಷ್ಟು ಕಷ್ಟ ಕೊಟ್ಟೆ. ಇನ್ನಾವರೂ ನಮಗೆ ನೆಮ್ಮದಿ ಕೊಡು... ಹೋಗು ಅಪ್ಪ ನಿಮಗಾಗೇ ಕಾಯ್ತಾ ಇದಾರೆ... ಅವರನ್ನು ಮಾತನಾಡಿಸಿ ಆಶೀರ್ವಾದ ಪಡೆದು ಬಾ...''

ಒಂದುಗಳಿಗೆ ವಾಸು ಪೆಚ್ಚಾದ. ಆದರೆ ಈಗ ಹೆಜ್ಜೆಯನ್ನು ಮುಂದಿಟ್ಟಾಗಿದೆ. ಹಿಂದಕ್ಕೆ ತೆಗೆದುಕೊಳ್ಳುವಂತಿಲ್ಲ... ಎಂದುಕೊಂಡು ನಾರಾಯಣಮೂರ್ತಿ ಮಲಗಿದ್ದ ರೂಮಿಗೆ ಬಂದ. ಅಸಹಾಯಕನಾಗಿ ಮಲಗಿದ್ದ ವ್ಯಕ್ತಿಯನ್ನು ಕಂಡು ಮನ ಮುದುಡಿತು. ಸ್ವಂತ ಮಗ ನಿಷ್ಪ್ರಯೋಜಕನಾಗಿದ್ದ. ಈಗ ಅವನ ಸ್ಥಾನಕ್ಕೆ ಬಂದಿರುವ ನಾನು ಮಗನಂತೆ ನಾನು ಇವರುಗಳನ್ನು ಆದರಿಸಬೇಕು. ಇಲ್ಲದಿದ್ದರೆ ಎಲ್ಲರಿಗೂ ದ್ರೋಹ ಮಾಡಿದಂತಾಗುತ್ತದೆ ಎಂದುಕೊಂಡು, ಅವರ ಪಾದಗಳನ್ನು ಮುಟ್ಟಿ ಕಣ್ಣಿಗೊತ್ತಿಕೊಂಡ.

ನಾರಾಯಣಮೂರ್ತಿ ಮಗನ ತಲೆಯ ಮೇಲೆ ಕೈ ಇಟ್ಟು ಹರಸಿದರು... ''ಅಂತೂ ಕಡೆಗೂ ನಮ್ಮ ಕೃಷ್ಣ ಬದಲಾದ'' ಎಂದುಕೊಂಡರು... ಮನದ ಆನಂದ, ಕಣ್ಣೀರಿನ ಮೂಲಕ ಹರಿಯಿತು. ಕೃತಜ್ಞತೆಯಿಂದ ಕಲ್ಯಾಣಿಯ ಕಡೆಡಿದರು.

''ನಮ್ಮ ಕಲ್ಯಾಣಿ ಕರ್ಪೂರದಂತೆ... ತಾನು ಉರಿದು ಕರಗಿ ಹೋದರೂ, ಸುಗಂಧವನ್ನು ಹೊರ ಸೂಸುವ ಕರ್ಪೂರ'' ಎಂದುಕೊಂಡರು.

* * *



'ಕಲ್ಯಾಣಿ' ಸಾಮಾನ್ಯ ವರ್ಗಕ್ಕೆ ಸೇರಿದವಳು. ವಯಸ್ಸಿಗೆ ಸಹಜವಾದ ಕನಸುಗಳಿದ್ದರೂ ಅದಕ್ಕಿಂತ ಮಿಗಿಲಾಗಿ ಜವಾಬ್ದಾರಿ ಅರಿತವಳು. ಕಷ್ಟ ಕೋಟಲೆಗಳನ್ನು ಸಹಿಸುತ್ತಾ ವಿಚಲಿತಳಾಗದೇ, ತಾನು ಬೆಳೆದ ಮನೆಗೆ ಉಪಕಾರವನ್ನೇ ಮಾಡುವ ಹಂಬಲವನ್ನಿಟ್ಟುಕೊಂಡು, ಕಲ್ಯಾಣಿಯಾಗಿರುವ ಅಭಿಲಾಷೆ ಉಳ್ಳವಳು.

ತೀರ್ಥಕ್ಷೇತ್ರಗಳಲ್ಲಿ ಕಲ್ಯಾಣಿಯ ತೀರ್ಥವನ್ನು ಪ್ರೋಕ್ಷಿಸಿಕೊಂಡರೂ ಸಾಕು ಪಾವನರಾಗುತ್ತೇವೆ ಎಂಬ ನಂಬಿಕೆ, ಪ್ರತೀತಿ ಇದೆ. ಆದರೆ, ಆ ಕಲ್ಯಾಣಿಯಲ್ಲಿ ಕೈ ಅದ್ದುವವರು ಎಷ್ಟು ಜನ ಪುಣ್ಯವಂತರಿರುತ್ತಾರೆ? ತಮ್ಮ ಪಾಪಗಳನ್ನು ತೊಳೆದುಕೊಳ್ಳಲೆಂದೇ ಕಲ್ಯಾಣಿಯ ತಟಕ್ಕೆ ಬಂದಿರುತ್ತಾರೆ. ಹಾಗೇ ಈ ಕಥಾನಾಯಕಿ ಕಲ್ಯಾಣಿಯೂ, ತನ್ನ ಸಮೀಪಕ್ಕೆ ಬಂದವರಿಗೆ ಒಳ್ಳೆಯದನ್ನೇ ಮಾಡುವ ಹಂಬಲದಲ್ಲಿ, ತನ್ನ ನೋವುಗಳನ್ನು ಅದುಮಿಟ್ಟುಕೊಳ್ಳುತ್ತಾಳೆ. ಕೊನೆಯಲ್ಲಿ ಅವಳ ಜೀವನದ ಗುರಿ ಎಲ್ಲಿ ತಲುಪುತ್ತದೆ?..... ಎನ್ನುವುದೇ ಈ ಕಾದಂಬರಿಯ ಸಾರಾಂಶ.

